


ಮನುಷ್ಯ ಛಲದ ಹೊಸ ರೂಪಕ

ಥೈಲ್ಯಾಂಡ್ ಗುಹೆಯಿಂದ ಜೂನಿಯರ್ ಫುಟ್ಬಾಲ್ ತಂಡವನ್ನು ಪಾರು ಮಾಡಿದ ಯಶೋಗಾಥೆ

ಡಾ. ಎಂ. ವೆಂಕಟಸ್ವಾಮಿ

ಮನುಷ್ಯ ಛಲದ ಹೊಸ ರೂಪಕ

ಥೈಲ್ಯಾಂಡ್ ಗುಹೆಯಿಂದ
ಜೂನಿಯರ್ ಫುಟ್ಬಾಲ್ ತಂಡವನ್ನು
ಪಾರು ಮಾಡಿದ ಯಶೋಗಾಥೆ

ಡಾ. ಎಂ. ವೆಂಕಟಸ್ವಾಮಿ

ಸಾಹಿತ್ಯ ಸುಗ್ಗಿ
ನಂ.40, 1ನೇ ಮುಖ್ಯರಸ್ತೆ,
2ನೇ ಹಂತ, 3ನೇ ಬ್ಲಾಕ್, ನಾಗರಭಾವಿ,
ಬೆಂಗಳೂರು–560 072.

Manushya Chalada Hosa Roopaka
written by
Dr. M. Venkataswamy
No. 4D, 'C' Tower,
Klassik Landmark Apartments,
(Near Amrutha Eng. College)
Kasavanahalli Main Road,
Bangalore - 560 035.
Ph : 9480317732 / 9449041334

Published by :
Geetha on behalf of **Sahitya Suggi**
No.40, 1st Main Road,
2nd Stage, 3rd Block, Nagarabhavi,
Bangalore - 560 072.
Ph: 9740066842

ISBN	:	978-81-941785-7-6
First Impression	:	2019
©	:	Author
Copies	:	1000
Paper used	:	70 GSM N.S. Maplitho
Size	:	1/8 Demy
Pages	:	152 + IV
Price	:	Rs. 150/-
Cover Design	:	D.S. Godavari
Page Design	:	Sri Sai Creation
Printed at	:	Jagruthi Printers 56/1-6, Narasimhaiah Garden, Kottigepalya, Magadi Main Road, Bangalore-560 091. Phone : 9740066842

ಪೀಠಿಕೆ

ಇತಿಹಾಸದಲ್ಲಿ ಇಂತದ್ದೊಂದು ವಿಸ್ಮಯ ಘಟನೆ ಇದುವರೆಗೂ ನಡೆದಿಲ್ಲ

ವಿಶ್ವದಾದ್ಯಂತ ಲಕ್ಷಾಂತರ ಗುಹೆಗಳಿದ್ದು, ಅವು ವೈವಿಧ್ಯಮಯವಾಗಿರುತ್ತವೆ. ಗುಹೆಗಳು ನೆಲಮಟ್ಟದ ಕೆಳಗೆ, ಪರ್ವತಗಳ ಒಳಗೆ ನೂರಾರು ಕಿಲೋಮೀಟರುಗಳ ಉದ್ದ, ಅಗಲ ಮತ್ತು ಆಳವಿದ್ದು ಹಲವು ಪ್ರವೇಶ ದ್ವಾರಗಳೊಂದಿಗೆ ಗುಹೆಸಮೂಹ, ಅಥವಾ ಗುಹೆವ್ಯವಸ್ಥೆ ಬಹಳ ಸಂಕೀರ್ಣವಾದ ಜಾಲಗಳಿಂದ ಕೂಡಿರುತ್ತವೆ. ಒಳಗೆ ಕಿರಿದಾದ ಕಿಂಡಿ, ನದಿ, ಸರೋವರ, ದಂಡೆಗಳು, ಬಣ್ಣಬಣ್ಣದ ಅಲಂಕಾರಿಕ ಕಲ್ಲು ಗೋಡೆಗಳಿಂದ ರಚಿಸಲ್ಪಟ್ಟಿರುತ್ತವೆ. ಆದಿಮಾನವನು ಮೊದಲಿಗೆ ಬಯಲುಬಿಟ್ಟು ಆಶ್ರಯ ಪಡೆದಿದ್ದೆ ಗುಹೆಗಳಲ್ಲಿ. ಥೈಲ್ಯಾಂಡ್ನ ಚಿಯಾಂಗ್ ರೈ ದುರ್ಗಮ ಬೆಟ್ಟಗಳ ಗುಹೆಗಳಲ್ಲಿ 2018 ಜೂನ್ 23ರಂದು 12 ಹುಡುಗರ 'ವೈಲ್ಡ್ ಬೋರ್ಸ್' ಹೆಸರಿನ ಜೂನಿಯರ್ ಫುಟ್ಬಾಲ್ ತಂಡವೊಂದು ತನ್ನ ಸಹಾಯಕ ಕೋಚ್ ಜೊತೆಗೆ ತಮ್ಮ ಹೆಸರುಗಳನ್ನು ಗುಹೆಯ ಗೋಡೆಗಳ ಮೇಲೆ ಬರೆಯಲು ಮತ್ತು ಸಾಹಸ ಮೆರೆಯಲು ಒಳಕ್ಕೆ ಹೋಗಿ ಪ್ರವಾಹದ ಮಧ್ಯೆ ಸಿಕ್ಕಿಕೊಂಡರು. ಮಳೆ ನೀರು ಹೆಚ್ಚಾಗಿ, ಗುಹೆ ಒಳಕ್ಕೆ ಕೆಸರುನೀರು ನುಗ್ಗಿ ಬಂದಂತೆ 13 ಜನರು ಗುಹೆಯ ಒಳಕ್ಕೆ ಹೋಗುತ್ತಾ ಹೋಗುತ್ತಾ ಕೊನೆಗೆ 3.2 ಕಿಲೋಮೀಟರುಗಳ ದೂರ ಸಾಗಿ ಎತ್ತರದ ಒಂದು ಕಲ್ಲು ಬಂಡೆಯ ಮೇಲೆ ಆಶ್ರಯ ಪಡೆದರು.

ಹುಡುಗನ ತಾಯಿಯೊಬ್ಬಳು ಆ ರಾತ್ರಿ ತನ್ನ ಮಗನು ಮನೆಗೆ ಹಿಂದಿರುಗದೇ ಇದ್ದಾಗ ಪೊಲೀಸರಿಗೆ ತಿಳಿಸಿದಳು. ಜೊತೆಗೆ ಫುಟ್ಬಾಲ್ ತಂಡದ ಮುಖ್ಯ ಕೋಚ್ಗೆ ವಿಷಯ ತಿಳಿದು ಆತನೂ

ಬೆಳಿಗ್ಗೆಯೇ ಗುಹೆಯ ಹತ್ತಿರಕ್ಕೆ ದೌಡಾಯಿಸಿದ. ಜೂನ್ 24ರಂದು ಸ್ಥಳೀಯ ಪೊಲೀಸರು ಹುಡಗರನ್ನು ಹುಡುಕಲು ಪ್ರಾರಂಭಿಸಿದಾಗ ಗುಹೆಯ ಬಾಗಿಲಲ್ಲಿ ಸೈಕಲ್ಗಳಿಗೆ ಬೀಗವಾಕಿದ್ದು, ಬೂಟುಗಳ ಹೆಜ್ಜೆಗಳು ಗುಹೆ ಒಳಕ್ಕೆ ಹೋಗಿರುವುದು ಕಾಣಿಸಿತು. ಜೂನ್ 25ರಂದು ಥೈಲ್ಯಾಂಡ್ ನೌಕಾಪಡೆಯ ಡೈವಿಂಗ್ ತಜ್ಞರು (ಈಜುಗಾರರು) ಗುಹೆ ಒಳಗಡೆ ಪ್ರವೇಶಿಸಿದರು. ಹೊರಗೆ ಭಾರೀ ಮಳೆ ಸುರಿಯುತ್ತಿದ್ದು 12 ರಿಂದ 16 ವರ್ಷದ ಒಳಗಿನ 12 ಹುಡುಗರ ಪೋಷಕರು ಗುಹೆಯ ಬಾಗಿಲಲ್ಲಿ ಸೇರಿಕೊಂಡು ಗುಹೆ ದೇವತೆ ಅಥವಾ ಆತ್ಮಕ್ಕೆ ಪ್ರಾರ್ಥನೆ ಸಲ್ಲಿಸತೊಡಗಿದರು. ಥೈಲ್ಯಾಂಡ್ ದೇಶದ ವಿಶಾಲ ಗುಹೆಸಮೂಹ ಇದಾಗಿದ್ದು ಇಡೀ ದೇಶದ ಜನರು ತಲ್ಲಣಗೊಂಡು ಎಲ್ಲಾ ಹುಡುಗರು ಗುಹೆಯಿಂದ ಸುರಕ್ಷಿತವಾಗಿ ಹೊರಕ್ಕೆ ಬರಲು ಪ್ರಾರ್ಥಿಸತೊಡಗಿದರು. ಜೂನ್ 29ರಂದು ಥೈಲ್ಯಾಂಡಿನ ಪ್ರಧಾನ ಮಂತ್ರಿ ಪ್ರಯತ್ ಚಾನ್-ಒ-ಚ ಅವರು ಗುಹೆಯ ಹತ್ತಿರಕ್ಕೆ ಭೇಟಿ ನೀಡಿ ಪೋಷಕರ ಜೊತೆಗೆ ಕುಳಿತು ಧ್ಯಾನ ಮಾಡಿ, ಅವರನ್ನು ನಗಿಸುತ್ತ ಭರವಸೆ ಬಿಡಬೇಡಿ ಎಂದು ಹೇಳಿ ಹೋದರು.

ಈ ಮಧ್ಯೆ ಅಮೇರಿಕಾ ಮತ್ತು ಬ್ರಿಟನ್‌ನ ಡೈವಿಂಗ್ ತಜ್ಞರು, ವೈದ್ಯರು ಮತ್ತು ಇತರ ಅಧಿಕಾರಿಗಳು ಗುಹೆಯ ಹತ್ತಿರಕ್ಕೆ ಧಾವಿಸಿದರು. ಜೂನ್ 26ರಂದು ಈಜುಗಾರರು ಗುಹೆಯ ಒಳಗಿನ ಮೂರು ಕಿಲೋಮೀಟರುಗಳು ದೂರದ ಒಂದು ಕವಲುದಾರಿ (T-Junction) ತಲಪುತ್ತಾರೆ. ಆದರೆ ಭಾರೀ ನೆರೆಯಿಂದ ಕಿರಿದಾದ ಗುಹೆಯ ದಾರಿ ಕೆಸರುಮಣ್ಣಿನಿಂದ ಮುಚ್ಚಿಹೋಗಿ ಒಳಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಕೊನೆಗೆ ಎಂಟು ದಿನಗಳಾದ ಮೇಲೆ ಬ್ರಿಟನ್‌ನ ಡೈವಿಂಗ್ ಸುರಕ್ಷಣಾ ಪಡೆ ಗೆರಿಲ್ಲಾಗಳ ರೀತಿ ಕೆಸರುನೀರಿನಲ್ಲಿ ಆಮ್ಲಜನಕ ಸಿಲಿಂಡರುಗಳನ್ನು ಬೆನ್ನಿಗೆ ಹಾಕಿಕೊಂಡು ನೀರಿನಲ್ಲಿ ಈಜುತ್ತಾ ಹೋಗಿ 13 ಜನರ ಫುಟ್ಬಾಲ್ ತಂಡ ಗುಹೆಯ ಬಾಗಿಲಿಂದ 3.2 ಕಿ.ಮೀ ದೂರದಲ್ಲಿರುವುದನ್ನು ಗುರುತಿಸುತ್ತದೆ. ಅದಾದ ಮೇಲೆ ರಕ್ಷಣಾ ಪಡೆ ಸರಿಯಾದ ಯೋಜನೆಗಳನ್ನು ಮಾಡಿಕೊಂಡು ಕಾರ್ಯರೂಪಕ್ಕೆ ಇಳಿಯುತ್ತದೆ. ಇದೊಂದು ಬಹಳ ಸಂಕೀರ್ಣ ಸಮಸ್ಯೆಯಾಗಿದ್ದು ಮೊದಲಿಗೆ ರಕ್ಷಣಾ ಪಡೆಯಲ್ಲಿದ್ದವರನ್ನು ಕಪ್ಪೆಗಳು, ವೈದ್ಯರು ಮತ್ತು ಈಜುಗಾರರೆಂದು ಮೂರು ಗುಂಪುಗಳಾಗಿ ವಿಭಾಗಿಸಿಕೊಂಡು ರಕ್ಷಣಾ ಕಾರ್ಯವನ್ನು ಪ್ರಾರಂಭಿಸಿದರು.

ಗುಹೆಯಲ್ಲಿ ಸಿಲುಕಿಕೊಂಡಿದ್ದ ಈ ಫುಟ್ಬಾಲ್ ತಂಡವನ್ನು ಪಾರು

ಮಾಡಲು ಅಮೇರಿಕಾ, ಬ್ರಿಟನ್ ಇತರ ದೇಶಗಳ 40 ಡೈವಿಂಗ್ ತಜ್ಞರು ಮತ್ತು ಥೈಲ್ಯಾಂಡಿನ 50 ಡೈವಿಂಗ್ ತಜ್ಞರು ಮತ್ತು ಥೈಲ್ಯಾಂಡಿನ ನೌಕಾ ಪಡೆಯ 800 ಅಧಿಕಾರಿಗಳು ಹಗಲು ರಾತ್ರಿ 13 ದಿಗಳ ಕಾಲ ತಮ್ಮ ಜೀವಗಳವನ್ನು ಪಣಕ್ಕಿಟ್ಟು ಹೋರಾಡಬೇಕಾಯಿತು. ಅಮೇರಿಕಾದ ನುರಿತ ಪ್ಯಾರಾ ಮಿಲಿಟರಿ ತಂಡದೊಂದಿಗೆ ಬ್ರಿಟಿಷ್ ತಜ್ಞರು ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಭಾರೀ ಮಳೆ ಸುರಿಯುತ್ತಿದ್ದ ಕಾರಣ ಗುಹೆಯ ಒಳಗೋಗುವ ಬೇರೆ ಬೇರೆ ದಾರಿಗಳನ್ನು ಮತ್ತು ಹಕ್ಕಿಗೂಡುಗಳ ಸಂಗ್ರಹಗಾರರಿಂದ ಬೆಟ್ಟದ ಮೇಲಿಂದ ಗುಹೆಗೆ ತಲುಪುವ ದಾರಿಗಳೇನಾದರೊ ದೂಂಪುತ್ತವೆಯೇ ಎಂದು ಹುಡುಕಲಾಯಿತು. ಆದರೆ ಅದು ಸಫಲವಾಗಲಿಲ್ಲ. ತುರ್ತಾಗಿ ರಕ್ಷಣಾ ತಂಡ ಗುಹೆಯೊಳಗೆ ಸಿಲುಕಿಕೊಂಡಿದ್ದವರ ಬಗ್ಗೆ ಮೂರು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಹದಿಮೂರು ಜನರ ತಂಡಕ್ಕೆ ಆಹಾರ, ನೀರು ಮತ್ತು ಔಷಧಿಗಳನ್ನು ಒದಗಿಸುವುದು. ಗುಹೆಯ ಒಳಗೆ ಆಮ್ಲಜನಕ ಕಡಿಮೆಯಾಗದಂತೆ ಕಾಯ್ದುಕೊಳ್ಳುವುದು ಮತ್ತು ಅವರ ಆರೋಗ್ಯ ದುರ್ಬಲವಾಗದಂತೆ ನೋಡಿಕೊಳ್ಳುವುದು.

ಜೂಲೈ 3ರಂದು ರಕ್ಷಣಾ ಪಡೆಯಿಂದ ಅವರಿಗೆ ಬೇಕಾದ ಆಹಾರ, ನೀರು ಮತ್ತು ಔಷಧಿಗಳ ಜೊತೆಗೆ ಉಸಿರಾಡುವ ಸಾಧನಗಳನ್ನು ತಲುಪಿಸಲಾಯಿತು. ಇದರ ಜೊತೆಗೆ ಮಳೆ ಜೋರಾಗಿ ಬೀಳುತ್ತಿದ್ದು ಗುಹೆಯಿಂದ ನೀರನ್ನು ಹೊರಕ್ಕೆ ಪಂಪ್ ಮಾಡುತ್ತಲೇ ಇದ್ದರು. ಈ ನಡುವೆ ಜೂಲೈ 6ರಂದು ಥೈಲ್ಯಾಂಡಿನ ಮಾಜಿ ನೌಕಾಪಡೆ ಅಧಿಕಾರಿ ಸಮನ್ ಗುನನ್ ಗುಹೆಯ ದಾರಿಯಲ್ಲಿ ಆಮ್ಲಜನಕ ಕಡಿಮೆಯಾದ ಕಾರಣ ಹುಡುಗರ ತಂಡಕ್ಕೆ ಏರ್ ಟ್ಯಾಂಕರ್‌ಗಳನ್ನು ತಲುಪಿಸಿ ಹಿಂದಿರುಗವಾಗ ಅವರ ಸಿಲಿಂಡರ್‌ನಲ್ಲಿ ಆಮ್ಲಜನಕ-ಗಾಳಿ ಖಾಲಿಯಾಗಿ ಆಯಾಸಗೊಂಡು ಗುಹೆಯ ಒಳಗೆಯೇ ಸಾವನ್ನಪ್ಪಿದರು.

ಗುಹೆಯ ಒಳಗೆ ಆಮ್ಲಜನಕದ ಅಂಶ ಶೇಕಡ 15ರಷ್ಟು ಕಡಿಮೆಯಾದ ವಿಷಯವನ್ನು ಗಮನಿಸಲಾಯಿತು. ಈ ನಡುವೆ ಬೆಟ್ಟದ ಮೇಲಿಂದ ಆಮ್ಲಜನಕ ಹೋಗಲಿ ಎಂಬ ಕಾರಣಕ್ಕೆ 800 ರಿಂದ 1000 ಅಡಿಗಳ ಆಳದ ಸುಮಾರು 100 ಕಡೆ ಡ್ರಿಲ್ ಹೊಲ್ಗಳನ್ನು ಮಾಡಲಾಗಿತ್ತು. ಜುಲೈ 8ರಿಂದ ಜುಲೈ 10ರ ಒಳಗೆ ಮೂರು ದಿನಗಳಲ್ಲಿ ಎಲ್ಲಾ 13 ಜನರನ್ನು ಹಂತಹಂತವಾಗಿ ಗುಹೆಯಿಂದ ಹೊರಕ್ಕೆ ತರಲಾಯಿತು. ಇಬ್ಬರು ಈಜುಗಾರರು ಒಬ್ಬ ಹುಡಗನನ್ನು ತಬ್ಬಿಕೊಂಡು ಈಜುತ್ತಿದ್ದರೆ ಇನ್ನಿಬ್ಬರು ಈಜುಗಾರರು ಅವರನ್ನು ಹಿಂಬಾಲಿಸುತ್ತಿದ್ದರು.

ಕೆಲವೊಮ್ಮೆ ಈಜು ಬರುತ್ತಿದ್ದ ಹುಡುಗರನ್ನು ಮಧ್ಯದಲ್ಲಿ ಬಿಟ್ಟು ಇಬ್ಬರು ಈಜುಗಾರರು ಹಿಂದೆ ಮುಂದೆ ಈಜುತ್ತಾ ಬರುತ್ತಿದ್ದರು. ನೀರಿಲ್ಲದ ಸ್ಥಳಗಳಲ್ಲಿ ಅಮೇರಿಕಾ ತಜ್ಞರು ನಿರ್ಮಿಸಿದ ಕೊಕೊನ್ (ತೊಟ್ಟಿಲಲ್ಲಿ) ಗಳಲ್ಲಿ ಹುಡುಗರನ್ನು ಮಲಗಿಸಿ ಸಾಗಿಸಲಾಯಿತು. ಮುಖಕ್ಕೆ ಆಮ್ಲಜನಕದ ಸಿಲಿಂಡರನ್ನು ಹಾಕಿ, ಹೈಪೋಥರ್ಮಿಯ ಅರವಳಿಕೆ ಮದ್ದನ್ನು ನೀಡಲಾಗಿತ್ತು. ಅಂತೂ ಜೂಲೈ 10ರಂದು ಎಲ್ಲಾ 13 ಜನರ ತಂಡವನ್ನು 18 ದಿನಗಳ ನಂತರ ಈ ಗಹೆ ಪ್ರಮಾದದಿಂದ ಪಾರು ಮಾಡಿ ಥೈಲ್ಯಾಂಡ್ ದೇಶ ನಿಟ್ಟುಸಿರು ಬಿಟ್ಟಿತು.

ಆದರೆ ಈ ಪ್ರಮಾದದಲ್ಲಿ ಥೈಲ್ಯಾಂಡಿನ ಒಬ್ಬ ಉನ್ನತ ಮಾಜಿ ನೌಕಾಪಡೆಯ ಅಧಿಕಾರಿ ಸಮನ್ ಗುನನ್ ಅವರನ್ನು ಕಳೆದುಕೊಂಡಿತು. ಇವರನ್ನು ಯಾರೂ ಕರೆಯದೇ ಅವರೇ ಸ್ವಯಂಸೇವಕರಾಗಿ ಬಂದು ಈ ಕೆಲಸದಲ್ಲಿ ತೊಡಗಿಕೊಂಡಿದ್ದರು. ಥೈಲ್ಯಾಂಡಿನ ಪ್ರಧಾನ ಮಂತ್ರಿ, ಸಮನ್ ಅಂತ್ಯಕ್ರಿಯೆಗೆ ರಾಜ್ಯ ಮರ್ಯಾದೆಯನ್ನು ಏರ್ಪಡಿಸಿದ್ದರು. ಆಧುನಿಕ ಮಾನವನ ಚರಿತ್ರೆಯಲ್ಲಿ 11 ವರ್ಷಗಳಿಂದ 16 ವರ್ಷಗಳ ಒಳಗಿನ ಹುಡುಗರು ಈ ರೀತಿ 18 ದಿನಗಳ ಕಾಲ ಯಾವುದೇ ಇಂತಹ ದುರಂತದಲ್ಲಿ ಸಿಲುಕಿಕೊಂಡು ಪಾರಾದ ಉದಾಹರಣೆಗಳಿಲ್ಲ. ಹಾಗಾಗಿ ಇತಿಹಾಸದಲ್ಲಿ ಇದೊಂದು ಪವಾದ ಸದೃಶ ಮತ್ತು ವಿಸ್ಮಯ ಘಟನೆಯಾಗಿ ದಾಖಲಾಗಿದೆ. 2010ರಲ್ಲಿ ಚಿಲಿ ದೇಶದ ಚಿನ್ನದ ಗಣಿಗಳಲ್ಲಿ 33 ಗಣಿ ಕಾರ್ಮಿಕರು 2300 ಅಡಿಗಳ ಕೆಳಗೆ ಸುರಂಗ ಸ್ಫೋಟದಿಂದ ಸಿಲುಕಿಕೊಂಡಿದ್ದ ದುರಂತವನ್ನು ಜ್ಞಾಪಿಸುತ್ತದೆ. ಎಲ್ಲಾ 33 ಜನರಿಗೆ ಡ್ರಿಲ್ಲಿಂಗ್ ಮಾಡಿದ ಪೈಪ್‌ಗಳ ಮೂಲಕ ಆಹಾರ ನೀರು ಔಷಧಿಗಳನ್ನು ನೀಡಿ 69 ದಿನಗಳ ನಂತರ ರಕ್ಷಿಸಲಾಗಿತ್ತು.

ಈ ಘಟನೆ ವಿಶೇಷವಾದರೂ ಇದರ ಬಗ್ಗೆ ಹತ್ತು ದಿನಗಳಲ್ಲಿ ಒಂದು ಪುಸ್ತಕ ಬರೆಯುವುದು ಸುಲುಭದ ಕೆಲಸವಲ್ಲ. ಇಲ್ಲಿನ ಮಾಹಿತಿಯನ್ನು ಅನೇಕ ಮೂಲಗಳಿಂದ ಸಂಗ್ರಹಿಸಲಾಗಿದೆ. ಒಂದೇ ವಿಷಯ ಬೇರೆಬೇರೆ ಮೂಲಗಳಲ್ಲಿ ಬೇರೆಬೇರೆ ರೀತಿಯಾಗಿ ಪ್ರಕಟವಾಗಿರುವುದು ಕಂಡುಬಂದಿದೆ. ಅದನ್ನೆಲ್ಲ ಕ್ರೋಢೀಕರಿಸಿ ಸಾಧ್ಯವಾದಷ್ಟು ಎಚ್ಚರಿಕೆಯಿಂದ ಒಂದು ಕಥೆಯ ರೂಪದಲ್ಲಿ ಪೋಣಿಸಲಾಗಿದೆ. ಇನ್ನು ಕೃತಿಯಲ್ಲಿರುವ ಚಿತ್ರಗಳನ್ನು ಹಲವು ಮೂಲಗಳಿಂದ ಸಂಗ್ರಹಿಸಿದ್ದು ಎಲ್ಲಾ ಮೂಲ ಲೇಖಕರಿಗೆ, ಮಾಧ್ಯಮಗಳಿಗೆ, ಛಾಯಾಚಿತ್ರ ಗ್ರಾಹಕರಿಗೆ ಮತ್ತು ಕೃತಿಗಳಿಗೆ ಅಭಾರಿಯಾಗಿದ್ದೇನೆ.

ಒಂದು ಸಣ್ಣ ಘಟನೆಗೆ ಎಷ್ಟು ಕವಲುಗಳಿರುತ್ತವೆ? ಅದನ್ನು ಸರಿಯಾಗಿ ನಿವಾರಿಸಬೇಕಾದರೆ ಏನೆಲ್ಲ ದಾರಿಗಳನ್ನು ಹುಡುಕಬೇಕಾಗುತ್ತದೆ. ಆ ದಾರಿಗಳಲ್ಲಿ ಸಾಗಿ ಅದನ್ನು ಜಯಿಸಬೇಕಾದರೆ ಅದಕ್ಕೆ ಎಷ್ಟು ಜನರ ಪರಿಶ್ರಮ, ತಜ್ಞತೆ ಬೇಕಾಗುತ್ತದೆ ಎನ್ನುವುದನ್ನು ತಿಳಿದುಕೊಳ್ಳಬೇಕಾದರೆ ಈ ಘಟನೆ ಒಂದು ಒಳ್ಳೆ ಉದಾಹರಣೆಯಾಗಿದೆ. ಜೊತೆಗೆ ಒಂದು ದೇಶದ ಒಳಗೆ ಒಂದು ಬಿಕ್ಕಟ್ಟು ಕಾಣಿಸಿಕೊಂಡರೆ ಜನರ ಬುದ್ಧಿ, ಶ್ರಮ ಮತ್ತು ಒಗ್ಗಟ್ಟನ್ನು ಒಟ್ಟುಗೂಡಿಸಿ ಕೆಲಸ ಮಾಡಿದರೆ ಇಂತಹ ಫಲಿತಾಂಶಗಳನ್ನು ಪಡೆಯಬಹುದು ಎಂಬುದು ಈ ಘಟನೆಯಿಂದ ಸಾಭೀತಾಗುತ್ತದೆ. ಅಂದರೆ ಇದು ಇಡೀ ವಿಶ್ವಕ್ಕೆ ಒಂದು ಪಾಠ ಎಂದರೂ ತಪ್ಪಾಗಲಾರದು. ಇಂತಹ ಒಂದು ಯಶೋಗಾಥೆಯನ್ನು ನಿಮ್ಮ ಮುಂದೆ ಇಟ್ಟಿದ್ದಕ್ಕೆ ನನಗೂ ಖುಷಿಯಾಗಿದೆ.

ಕೃತಜ್ಞತೆಗಳು :

ಥಾಮ್ ಲುವಾಂಗ್ ಗುಹೆಯ ಘಟನೆಯಲ್ಲಿ ಎಲ್ಲಾ 13 ಜನರ ಜೂನಿಯರ್ ಫುಟ್ಬಾಲ್ ತಂಡ ಪಾರಾದದ್ದು ಜುಲೈ 10ರಂದು. ನಾನು ಅದೇ ದಿನ ಪ್ರಜಾವಾಣಿಯ ಸಿ.ಜಿ.ಮಂಜುಳಾ ಮೇಡಮ್ ಅವರಿಗೆ ಫೋನ್ ಮಾಡಿ ಇದರ ಬಗ್ಗೆ ಒಂದು ಲೇಖನ ಬರೆದು ಕಳಿಸಲೇ ಎಂದು ಕೇಳಿದೆ. ಅವರು ಕಳುಹಿಸಿ ಆದರೆ 500 ಪದಗಳು ಮಾತ್ರ ಇರಲಿ ಎಂದರು. ಆ ಲೇಖನ 'ಸಂಗತ' ಕಾಲ್ಮನಲ್ಲಿ ಜೂಲೈ 11ರಂದು ಪ್ರಕಟವಾಗಿ ಅದಕ್ಕೆ 'ಮನುಷ್ಯ ಛಲದ ಹೊಸ ರೂಪಕ' ಎಂಬ ಒಳ್ಳೆ ಶೀರ್ಷಿಕೆಯನ್ನು ಕೊಟ್ಟಿದ್ದರು. ಅದೇ ಶೀರ್ಷಿಕೆಯನ್ನು ಈ ಪುಸ್ತಕಕ್ಕೆ ಬಳಸಿಕೊಂಡಿದ್ದೇನೆ. ಈ ಲೇಖನ ಪ್ರಕಟವಾದ ಮೇಲೆ ನಾಲ್ಕೈದು ದಿನಗಳನ್ನ ಬಿಟ್ಟು ಪ್ರಖ್ಯಾತ ಕಥೆಗಾರರು, ಪ್ರಬಂಧಕಾರರು ಮತ್ತು ಚಿಂತಕರಾದ ಶ್ರೀ ಕೆ.ಸತ್ಯನಾರಯಣ ಅವರು ನನಗೆ ಫೋನ್ ಮಾಡಿ ಇದರ ಬಗ್ಗೆ ಒಂದು ಪುಸ್ತಕ ಬರೆದುಬಿಡಿ ಎಂದರು. ನಾನು ನಕ್ಕು ಸುಮ್ಮನಾದೆ.

ಮತ್ತೆ ನಾಲ್ಕೈದು ದಿನಗಳು ಬಿಟ್ಟು ನನ್ನ ಫೋನ್ಗೆ ಒಂದು ಮೆಸೇಜ್ ಮಾಡಿದ್ದರು. ಸೌಜನ್ಯಕ್ಕಾಗಿ ನಾನು ಫೋನ್ ಮಾಡಿದೆ. ಈಗಲೂ ಅದೇ ಮಾತು. 'ನಿಮ್ಮ ಭಾಷೆ ಚೆನ್ನಾಗಿದೆ. ಭೂವಿಜ್ಞಾನಿಗಳು ಬೇರೆ, ನೀವೇ ಇದನ್ನ ಬರೆಯಬೇಕು. ಒಂದು ತಿಂಗಳು ಒಳಗೆ ಪುಸ್ತಕ ಬಂದ್ಬಿಡಬೇಕು' ಎಂದರು. ಈಗ ನಾನು ವಿಧಿ ಇಲ್ಲದೆ, 'ಆಯಿತು ಬಿಡಿ ಸರ್, ಬರೆಯುತ್ತೇನೆ' ಎಂದು ಒಪ್ಪಿಗೆ ಕೊಟ್ಟುಬಿಟ್ಟೆ. ಕೆಲವು ಸಾವಿರ ವರ್ಷಗಳ ಹಿಂದೆ ಸತ್ಯ ಹರಿಶ್ಚಂದ್ರ

ನಮ್ಮ ವಂಶದವನೇ ಇರಬೇಕು? ಅದೇ ದಿನ ಜೂಲೈ 19ರ ಸಾಯಂಕಾಲ ಕಂಪ್ಯೂಟರ್ ಮುಂದೆ ಕುಳಿತುಕೊಂಡು ಟೈಪ್ ಮಾಡತೊಡಗಿದೆ. ಅದೇ ತಿಂಗಳು 28ರಂದು ನನ್ನ ಮಗ ಕ್ರಾಂತಿ ಯುರೋಪ್ನಿಂದ ಬರುವವನಿದ್ದು ಅದರೊಳಗೆ ಈ ಪುಸ್ತಕವನ್ನು ಮುಗಿಸಬೇಕೆಂದು ನಾನು ನಿಶ್ಚಿಯಿಸಿಕೊಂಡೆ. ನಿರಂತರವಾಗಿ ಕಂಪ್ಯೂಟರ್ ಮುಂದು ಕುಳಿತುಕೊಳ್ಳುವುದು ಕಷ್ಟದ ಕೆಲಸ. ಜೊತೆಗೆ ನನಗೆ ಕಪಾಳ ಶೂಲೆ (Trigeminal neuralgia) ಎಂಬ ಒಂದು ವಿಶೇಷ ಅನಾರೋಗ್ಯ ಸಮಸ್ಯೆ ಬೇರೆ ಇದೆ. ಚಳಿಯಲ್ಲಿ ಅಥವಾ ಗಾಳಿಗೆ ಎಕ್ಸ್ಪೋಸ್ ಆದರೆ ಬಲಗಡೆಯ ಮುಖದಲ್ಲಿ ನೋವು ಕಾಣಿಸಿಕೊಳ್ಳುವುದು ಇದರ ಲಕ್ಷಣ. ಆದರೂ ನಾನು ಅದರ ಬಗ್ಗೆ ಗಮನ ಕೊಡುವುದಿಲ್ಲ. ಅದು ನನ್ನನ್ನ ಗೆಲ್ಲಬಾರದು, ನಾನೇ ಅದನ್ನ ಗೆಲ್ಲಬೇಕು ಎನ್ನುವುದು ನನ್ನ ದೃಢ ಇಚ್ಛೆ. ಆದರೆ ಕೆಲವೊಮ್ಮೆ ಅದರ ನೋವು ಹೇಗಿರುತ್ತದಂದರೆ ಬಾಯಿ ತೆಗೆಯಲೂ ಸಹ ಆಗುವುದಿಲ್ಲ. ಈಗೀಗ ಹೋಮಿಯೋಪತಿ ಔಷಧಿ ತೆಗೆದುಕೊಳ್ಳುವುದರಿಂದ ಸಾಕಷ್ಟು ಸುಧಾರಿಸಿದೆ. ವೈದ್ಯರು ಇದನ್ನ Serious ಅಲ್ಲ ಆದರೆ severe ಎನ್ನುತ್ತಾರೆ. ಈ ಪುಸ್ತಕವನ್ನು 10 ದಿನಗಳಲ್ಲಿ ಬರೆದು ಮುಗಿಸಿದರೂ ಪ್ರಕಟಗೊಂಡಿದ್ದು ಮಾತ್ರ 2019ರ ಕೊನೆಯಲ್ಲಿ.

ಡಾ. ಎಂ. ವೆಂಕಟಸ್ವಾಮಿ
ಬೆಂಗಳೂರು.

ಪರಿವಿಡಿ

ಭಾಗ - 1

ಭಾಗ - 2

ಭಾಗ - 1

ಅಧ್ಯಾಯ-1

ಈ ಕೃತಿಯನ್ನು ಮುಖ್ಯವಾಗಿ ಥಮ್ ಲುವಾಂಗ್ ಗುಹೆಯಲ್ಲಿ ಸಿಲುಕಿಕೊಂಡಿದ್ದ 13 ಯುವಕರ ಜೂನಿಯರ್ ಫುಟ್ಬಾಲ್ ತಂಡವನ್ನು ಪಾರು ಮಾಡಿದ ವಿಷಯವಾಗಿಯೇ ಹೆಣೆಯಲ್ಪಟ್ಟಿದೆ. ಆದರೆ ಆ ಗುಹೆಗಳ ಬಗ್ಗೆ ನೇರವಾಗಿ ಬರೆದರೆ ಅದೊಂದು ಪುಸ್ತಕವಾಗುವ ಸಾಧ್ಯತೆಗಳು ಇರುವುದಿಲ್ಲ. ಆದರೆ ಆ ಗುಹೆಗಳ ವಿಜ್ಞಾನ, ಗುಹೆಗಳಿರುವ ಬೆಟ್ಟಗುಡ್ಡಗಳ ವಿವರಣೆ, ಥೈಲ್ಯಾಂಡಿನ ಇತಿಹಾಸ, ಸಂಸ್ಕೃತಿ, ಜನರ ಸ್ವಭಾವಗಳು, ಧರ್ಮಗಳು ಇತ್ಯಾದಿಗಳ ಬಗ್ಗೆ ಸ್ವಲ್ಪ ವಿವರಣೆಗಳನ್ನು ತಿಳಿದುಕೊಂಡರೆ ಉಳಿದ ವಿಷಯಗಳನ್ನು ಓದಲು ಸುಲುಭವಾಗುತ್ತದೆ. ಹಾಗೆಂದು, ಮೇಲಿನ ವಿಷಯಗಳನ್ನು ಹೆಚ್ಚೆಚ್ಚು ಬರೆದು ಮುಖ್ಯವಾದ ವಿಷಯವನ್ನು ಗೌಣವಾಗಿಸಿಲ್ಲ ಎನ್ನುವುದು ನನ್ನ ನಂಬಿಕೆ. ಎಲ್ಲಾ ವಿಷಯಗಳನ್ನು ಆದಷ್ಟು ಸಂಕ್ಷಿಪ್ತಗೊಳಿಸಿ ಸಾಧ್ಯವಾದಷ್ಟು ಆಸಕ್ತಿಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಥೈಲ್ಯಾಂಡ್ ಆಗ್ನೇಯ ಏಷ್ಯಾದ ಮಧ್ಯಭಾಗದಲ್ಲಿರುವ ಅಭಿವೃದ್ಧಿ ಹೊಂದುತ್ತಿರುವ ದೇಶವಾಗಿದ್ದು ಒಂದು ಕಡೆ ಮಿಲಿಟರಿ ಕಾನೂನು, ಇನ್ನೊಂದು ಕಡೆ ರಾಜರ ವಂಶಾವಳಿಯನ್ನು ಉಳಿಸಿಕೊಂಡು ಬರುತ್ತಿದೆ. ಥೈಲ್ಯಾಂಡ್ ದೇಶದ ಒಟ್ಟು ಭೂಪ್ರದೇಶ 514,000 ಚದರ ಕಿಲೋಮೀಟರುಗಳು. ಈ ರಾಷ್ಟ್ರದ ಅಕ್ಷೀಯ ಸ್ಥಾನವು ಥೈಲ್ಯಾಂಡ್ ಸಮಾಜ ಮತ್ತು ಸಂಸ್ಕೃತಿಯ ಮೇಲೆ ಅನೇಕ ರೀತಿಯಲ್ಲಿ ಪ್ರಭಾವಿಸಿದೆ ಎನ್ನಬಹುದು. ಥೈಲ್ಯಾಂಡ್ ದೇಶ ತನ್ನ ಸುತ್ತಲೂ ಮ್ಯಾನ್ಮಾರ್, ಲಾವೋಸ್, ಕಾಂಬೋಡಿಯ, ಮಲೇಷಿಯಾ ಮತ್ತು ಸಿಂಗ್ಪುರ್ ದೇಶದ ಗಡಿಗಳನ್ನು ಹೊಂದಿದ್ದು ದಕ್ಷಿಣದಲ್ಲಿ ಗಲ್ಫ್ ಆಫ್ ಥೈಲ್ಯಾಂಡ್ ಮತ್ತು ಹಿಂದೂ ಮಹಾಸಾಗರಗಳನ್ನು ಹೊಂದಿದೆ.



ಥೈಲ್ಯಾಂಡ್ನ ರಾಜಧಾನಿ ಬ್ಯಾಂಕಾಕ್‌ನ ಒಂದು ಚಿತ್ರ

ಚೀನಾ ದೇಶ, ಈ ದೇಶಗಳೆಲ್ಲ ಒಂದು ಕಾಲದಲ್ಲಿ 'ಗ್ರೇಟರ್ ಚೀನಾ' ದೇಶಕ್ಕೆ ಸೇರಿದ್ದವು ಎಂದು ಹೇಳುತ್ತ ಆಗಾಗ ಕಾಲು ಕೆದರಿ ನಿಲ್ಲುತ್ತದೆ. ಅಷ್ಟೇಕೆ ಭಾರತದ ಈಶಾನ್ಯ ರಾಜ್ಯವಾದ ಅರುಣಾಚಲ ಪ್ರದೇಶದಲ್ಲಿರುವ ತವಾಂಗ್ ಪ್ರದೇಶ ನಮ್ಮದೇ ಎಂದು ಹೇಳಿಕೊಳ್ಳುತ್ತಲೇ ಬರುತ್ತಿದೆ.



ಥೈಲ್ಯಾಂಡ್ ನಕ್ಷೆ

ಫಲವತ್ತಾದ ಪ್ರವಾಹದ ನೆಲ ಮತ್ತು ಉಷ್ಣವಲಯದ ಮುಂಗಾರು ವಾತಾವರಣವು ಆರ್ದ್ರ-ಭತ್ತ (ತಮ್-ನಾ) ಕೃಷಿಗೆ ಸೂಕ್ತವಾಗಿ ಹೊಂದಿಕೊಂಡಿದೆ. ಇದರಿಂದ ಈ ಪ್ರದೇಶವು ಕಾಲಾಂತರದಿಂದಲೂ ರೈತರನ್ನು ಆಕರ್ಷಿಸಿ ಈ ಪ್ರದೇಶದಲ್ಲಿ ನೆಲೆಯೂರಲು ಕಾರಣವಾಗಿದೆ. ಕೇಂದ್ರೀಯ ಪ್ರದೇಶವು ಉತ್ತರ ತುದಿಯಲ್ಲಿರುವ ಉತ್ತರದ ಪ್ರದೇಶ ಅಥವಾ ಖೊರತ್ ಮೇಲ್ಮಟ್ಟದಲ್ಲಿರುವ ಪ್ರಸ್ಥಭೂಮಿಯ ಪ್ರದೇಶವಾಗಿದೆ. 11ನೇ ಶತಮಾನದಲ್ಲಿ ಸಡಿಲವಾಗಿ ಸಂಪರ್ಕ ಹೊಂದಿದ್ದ ಭತ್ತ ಬೆಳೆಯುವ ಮತ್ತು ವ್ಯಾಪಾರದ

ರಾಜ್ಯಗಳು ಮೇಲಿನ ಚಾವೊ ಫ್ರಯಾ ಕಣಿವೆಯಲ್ಲಿ ಪ್ರವರ್ಧಮಾನಕ್ಕೆ ಬಂದವು. ಬಂದವರು ಖಮೇರ್ ಸಾಮ್ರಾಜ್ಯದ ಪ್ರಾಬಲ್ಯವನ್ನು ಮುಕ್ತಗೊಳಿಸಿದರು. ಆದರೆ 14ನೇ ಶತಮಾನದ ಮಧ್ಯಭಾಗದಲ್ಲಿ ಥೈಲ್ಯಾಂಡಿನ ದಕ್ಷಿಣ ಭಾಗ ಅಯುತಾಯ ಸಾಮ್ರಾಜ್ಯದ ನಿಯಂತ್ರಣಕ್ಕೆ ಒಳಪಟ್ಟಿತು.

ಚೀನಾ, ಬರ್ಮಾ ದೇಶಗಳಿಂದ ಹರಿದು ಕೆಳಕ್ಕೆ ಬರುವ ನದಿಗಳ ಉದ್ದಕ್ಕೂ ವಿವಿಧ ಹಂತಗಳಲ್ಲಿ ನಿರ್ಮಿತವಾದ ಯಶಸ್ವಿ ರಾಜಧಾನಿಗಳು ಭತ್ತದ ಕೃಷಿ ಮತ್ತು ವಿದೇಶಿ ವಾಣಿಜ್ಯದ ಆಧಾರದ ಮೇಲೆ ಉತ್ತಮ ಥಾಯ್ ಸಾಮ್ರಾಜ್ಯಗಳ ಕೇಂದ್ರವಾಯಿತು. ನೆರೆಹೊರೆಯ ಖಮೇರ್ ಮತ್ತು ಬರ್ಮಾ ದೇಶಗಳಂತಲ್ಲದೆ, ಥೈಲ್ಯಾಂಡ್ ಗಲ್ಫ್ ಆಫ್ ಥೈಲಾಂಡ್ ಮತ್ತು ಅಂಡಮಾನ್ – ನಿಕೋಬಾರ್ ಸಮುದ್ರದ ವಿದೇಶಿ ಬಂದರುಗಳ ಕಡೆಗೆ ಕೈಚಾಚಿ ನಿಂತು–ಕೊಂಡಿತು. ಕ್ರಿ.ಶ.1800ರ ದಶಕದ ಉತ್ತರಾರ್ಧದಲ್ಲಿ ಆಗ್ನೇಯ ಏಷ್ಯಾದ ವಾಣಿಜ್ಯದಲ್ಲಿ ಯುರೋಪಿಯನ್ ಸಾಮ್ರಾಜ್ಯಶಾಹಿ ಹೊಸ ಕಾನೂನುಗಳನ್ನು ತಂದಾಗ ಥೈಲ್ಯಾಂಡ್ (ಮೊದಲು ಸಿಯಮ್ ಎಂದು ಕರೆಯಲಾಗುತ್ತಿತ್ತು) ಬ್ರಿಟಿಷ್–ನಿಯಂತ್ರಿತ ಬರ್ಮಾ ಪಶ್ಚಿಮಕ್ಕೆ ಮತ್ತು ಪೂರ್ವಕ್ಕೆ ಫ್ರೆಂಚ್ ಪ್ರಾಬಲ್ಯದ ಇಂಡೋಚೀನಾ ನಡುವೆ ಬಫರ್ ವಲಯವಾಗಿ ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು. ಆದರೆ ಈ ಪ್ರಕ್ರಿಯೆಯಲ್ಲಿ ಥೈಲ್ಯಾಂಡ್ ತನ್ನ ಅರ್ಧದಷ್ಟು ಪ್ರದೇಶವನ್ನು ಕಳೆದುಕೊಂಡಿತು. ಅದೃಷ್ಟವಶಾತ್ ಅದು ಕಳೆದುಕೊಂಡ ಪ್ರದೇಶವೆಲ್ಲ ಬಹುತೇಕ ಮೂಲ ಥೈ ಅಲ್ಲದ ಜನರಾಗಿದ್ದರು. ಅವರೆಲ್ಲ ಖಮೇರ್, ಲಾವೊ ಅಥವಾ ಶಾನ್ ಜನಾಂಗಗಳಿಗೆ ಸೇರಿದವರಾಗಿದ್ದರು. ಥಾಯ್ ಭಾಷೆ ಮಾತನಾಡುವ ದೇಶದ ಹೃದಯ ಭಾಗ ಯಾವುದೇ ತೊಂದರೆಯಿಲ್ಲದೆ ಉಳಿದುಕೊಂಡಿತು.

ಥೈಲ್ಯಾಂಡ್ ಭೂಪ್ರದೇಶದ ಅತ್ಯಂತ ವಿಶೇಷವಾದ ಭೂಲಕ್ಷಣಗಳೆಂದರೆ ಉನ್ನತ ಪರ್ವತಗಳು, ಕೇಂದ್ರ ಬಯಲು ಪ್ರದೇಶ ಮತ್ತು ಎತ್ತರದ ಪ್ರಸ್ಥಭೂಮಿ. ಉತ್ತರ ಥೈಲ್ಯಾಂಡ್ನ ಹೆಚ್ಚಿನ ಭಾಗವನ್ನು ಪರ್ವತಗಳು ಆವರಿಸಿಕೊಂಡಿದ್ದು ಮ್ಯಾನ್ಮಾರ್ ಭೂದೃಶ್ಯದ ಗಡಿಗಳ ಉದ್ದಕ್ಕೂ ಕ್ರಾ ಇಸ್ತ್ಮಂಡ್ ಮತ್ತು ಮಲಯ ಪೆನಿನ್ಸುಲಾದ ಮೂಲಕ ವಿಸ್ತರಿಸಿದೆ. ಕೇಂದ್ರ ಬಯಲು ಪ್ರದೇಶವು ಚಾವೊ ಫ್ರಯಾ ನದಿ ಮತ್ತು ಅದರ ಉಪನದಿಗಳು ದೇಶದ ಪ್ರಮುಖ ನದಿ ವ್ಯವಸ್ಥೆಯಿಂದ ಹರಿಯುವ ಕೆಳಮಟ್ಟದ ಪ್ರದೇಶವಾಗಿದ್ದು, ಇದು ಬ್ಯಾಂಕಾಕ್ ಕೊಲ್ಲಿಯ ಮುಖ್ಯ ಕರಾವಳಿಗೆ ಸೇರುತ್ತದೆ.

ಚಾವೊ ಫ್ರಯಾ ನದಿ ವ್ಯವಸ್ಥೆಯು ರಾಷ್ಟ್ರದ ಮೂರನೇ ಒಂದು ಭಾಗದಷ್ಟು ಪ್ರದೇಶವನ್ನು ಒಳಗೊಂಡಿದೆ. ದೇಶದ ಈಶಾನ್ಯ ಭಾಗದಲ್ಲಿರುವ ಖೊರತ್ ಪ್ರಸ್ಥಭೂಮಿಯು, ನಿಧಾನವಾಗಿ ಕಡಿಮೆ ಎತ್ತರದ ಬೆಟ್ಟಗಳು ಮತ್ತು ಆಳವಿಲ್ಲದ ಸರೋವರಗಳು ಹರಿಯುವ ಪ್ರದೇಶ, ಇದು ಮುನ್ ನದಿಯ ಮುಖಾಂತರ ಮೆಕಾಂಗ್ ನದಿಗೆ ಸೇರಿಕೊಳ್ಳುತ್ತದೆ. ಮೆಕಾಂಗ್ ನದಿ ವ್ಯವಸ್ಥೆಯು ದಕ್ಷಿಣ ಚೀನಾ ಸಮುದ್ರಕ್ಕೆ ಸೇರಿಕೊಳ್ಳುತ್ತದೆ. ಇದರ ಮೇಲೆ ಅನೇಕ ಸರಣಿ ಕಾಲುವೆಗಳ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಒಟ್ಟಗೆ ಚಾವೊ ಫ್ರಾಯ ಮತ್ತು ಮೆಕಾಂಗ್ ನದಿ ವ್ಯವಸ್ಥೆಗಳು ಆರ್ದ್ರ-ಭತ್ತ ಸಾಗುವಳಿಗೆ ಬೆಂಬಲ ನೀಡುವ ಮೂಲಕ ಥೈಲ್ಯಾಂಡ್ನ ಕೃಷಿ ಆರ್ಥಿಕತೆಯನ್ನು ಉಳಿಸಿಕೊಂಡಿವೆ. ಸರಣಿ ಕಾಲುವೆಗಳು, ಸರಕು ಮತ್ತು ಜನರ ಸಾಗಣಿಗಾಗಿ ಜಲಮಾರ್ಗಗಳನ್ನು ಒದಗಿಸುತ್ತವೆ. ಇದಕ್ಕೆ ತದ್ವಿರುದ್ಧವಾಗಿ ಪೆನಿನ್ಸುಲಾರ್ ಥೈಲ್ಯಾಂಡ್ನ ವಿಶಿಷ್ಟವಾದ ನೈಸರ್ಗಿಕ ಲಕ್ಷಣಗಳಾದ ಕರಾವಳಿ ತೀರಗಳು, ಕಡಲಾಚೆಯ ದ್ವೀಪಗಳು ಮತ್ತು ಮ್ಯಾಂಗ್ರೋವ್ ಜೌಗು ಪ್ರದೇಶಗಳು ಮಾನವ ಚಟುವಟಿಕೆಗಳಿಂದ ಕ್ಷೀಣಿಸುತ್ತಿವೆ.

ಥೈಲ್ಯಾಂಡ್ ಹವಾಮಾನವು ವಿವಿಧ ಋತುಮಾನಗಳ ಮಾರುತಗಳಿಂದ ಪ್ರಭಾವಿತವಾಗಿರುತ್ತದೆ. ನೈಋತ್ಯ ಮತ್ತು ಈಶಾನ್ಯ ಮುಂಗಾರು ಮೇ ತಿಂಗಳಿಂದ ಅಕ್ಟೋಬರ್ ತಿಂಗಳವರೆಗೆ, ನೈಋತ್ಯ ಮುಂಗಾರು ಹಿಂದೂ ಮಹಾಸಾಗರದಿಂದ ಥೈಲ್ಯಾಂಡ್ ಬೆಚ್ಚಗಿ ಆರ್ದ್ರವಾದ ಗಾಳಿಯ ಚಲನೆಯನ್ನು ಹೊಂದಿರುತ್ತದೆ. ಈಶಾನ್ಯ ಮುಂಗಾರು ಅಕ್ಟೋಬರ್ ತಿಂಗಳಿನಿಂದ ಫೆಬ್ರವರಿಯವರೆಗೆ ಥೈಲ್ಯಾಂಡ್ನ ಹೆಚ್ಚಿನ ಭಾಗಗಳಲ್ಲಿ ಚೀನಾದ ಕಡೆಯಿಂದ ಶೀತ ಮತ್ತು ಶುಷ್ಕ ಗಾಳಿಯನ್ನು ಹೊತ್ತು ತರುತ್ತದೆ. ದಕ್ಷಿಣ ಥೈಲ್ಯಾಂಡ್ನಲ್ಲಿ ಈಶಾನ್ಯ ಮುಂಗಾರು ಸೌಮ್ಯ ವಾತಾವರಣ ಮತ್ತು ಹೇರಳ ಮಳೆಯನ್ನು ತರುತ್ತದೆ. ಥೈಲ್ಯಾಂಡಿನ ಬಹುತೇಕ ಭಾಗಗಳು ಉಷ್ಣವಲಯದ ಆರ್ದ್ರ ಮತ್ತು ಶುಷ್ಕ ಅಥವಾ ಹುಲ್ಲುಗಾವಲು ಹವಾಮಾನ ವಿಧಗಳನ್ನು ಹೊಂದಿದೆ. ದಕ್ಷಿಣ ಮತ್ತು ಪೂರ್ವದ ತುದಿಗೆ ಉಷ್ಣವಲಯದ ಮುಂಗಾರು ವಾತಾವರಣವಿದೆ.

ಥೈಲ್ಯಾಂಡ್ ಇತಿಹಾಸ

ನೈಋತ್ಯ ಚೀನಾದಲ್ಲಿ ವಾಸಿಸುತ್ತಿದ್ದ ಮೂಲ ಥಾಯ್ ಜನರು ಅನೇಕ

ಶತಮಾನಗಳ ಅವಧಿಯಲ್ಲಿ ಆಗ್ನೇಯ ಏಷ್ಯಾದ ಮುಖ್ಯ ಭಾಗಕ್ಕೆ ವಲಸೆ ಬಂದರು ಎನ್ನಲಾಗಿದೆ. ಸಿಯಾಮ್ (ಥಾಯ್) ಪದ ಮೂಲವಾಗಿ ಪಾಲಿ ಭಾಷೆ ಅಥವಾ ಸಂಸ್ಕೃತ Suvarna Bhumi (ಸುವರ್ಣಭೂಮಿ) ಯಿಂದ ಬಂದಿದೆ ಎನ್ನಲಾಗಿದೆ. ಅಥವಾ Mon rhmañña, "stranger" ಭಾಷೆಯಿಂದ ಶಾನ್ ಅಥವಾ ಥಾಯ್ ದೇಶದ ಹೆಸರು ಕೂಡ ಮಯಾಂಗ್ ಥಾಯ್ ಆಗಿದೆ.

ಥಾಯ್ ದೇಶದ ಮೂಲ ಸಿಯಾಮ್ ಎಂಬ ಹೆಸರು ಬಹುಶಃ ಪೋರ್ಚುಗೀಸ್ ಬಾಷೆಯಿಂದ ಬಂದಿರಬಹುದು? ಪೋರ್ಚುಗೀಸರ ದಾಖಲೆಗಳಂತೆ ಅಯುತಾಯ ಸಾಮ್ರಾಜ್ಯದ ರಾಜ ಬೊರೊಮಾತ್ರೈ ಲೋಕನಾಟ್ 1455ರಲ್ಲಿ ಮಲಯ ಪೆನಿನ್ಸುಲಾದ ದಕ್ಷಿಣ ತುದಿಯಲ್ಲಿ ಮಲಾಕ ಸುಲ್ತಾನೇಟ್ಗೆ ದಂಡಯಾತ್ರೆಯನ್ನು ಕಳುಹಿಸಿದ್ದು, 1511ರಲ್ಲಿ ಮಲಕ್ಕಾವನ್ನು ವಶಪಡಿಸಿಕೊಂಡ ನಂತರ ಪೋರ್ಚುಗೀಸರು ಅಯುತಾಯಾಗೆ ರಾಜತಾಂತ್ರಿಕ ಕಾರ್ಯಾಚರಣೆಯನ್ನು ಕಳುಹಿಸಿದರು. ಅನಂತರ ಒಂದು ಶತಮಾನದ ನಂತರ 1612ರಲ್ಲಿ ಕಿಂಗ್ ಜೆಮ್ಸ್-1, ಪತ್ರವನ್ನು ಹೊಂದಿರುವ ದಿ ಗ್ಲೋಬ್, ಈಸ್ಟ್ ಇಂಡಿಯಾ ಕಂಪನಿ ವ್ಯಾಪಾರಿ ಸಿಯಾಮ್ ರಸ್ತೆಯಲ್ಲಿ ಬಂದರು. ಕ್ರಿ.ಶ. 19ನೇ ಶತಮಾನದ ಅಂತ್ಯದ ವೇಳೆಗೆ ಸಿಯಾಮ್ ಎಂಬ ಭೌಗೋಳಿಕ ನಾಮಕರಣ ಶಾಸ್ವತ ಹೆಸರಾಗಿ ಮಾರ್ಪಟ್ಟಿತು.

ಮಾನ್, ಖಮೇರ್ ಸಾಮ್ರಾಜ್ಯ ಮತ್ತು ಮಲಯ ಪೆನಿನ್ಸುಲಾ ಮತ್ತು ಸುಮತ್ರಾದ ಮಲಯ ರಾಜ್ಯಗಳು ಈ ಪ್ರದೇಶಗಳನ್ನು ಆಳಿದವು. ಅನಂತರ ಮಾಯ್ ಸಾಮ್ರಾಜ್ಯ. ಲ್ಯಾನ್‌ನಾ ಮತ್ತು ಅಯುತಾಯ ಸಾಮ್ರಜ್ಯಗಳು ಆಳುತ್ತಿದ್ದವು. ಇವು ಎನ್ಗೆನ್ಯಂಗ್, ಸುಖೋತಿ ಸಾಮ್ರಾಜ್ಯ, ಚಿಯಾಂಗ್ ಮಾಯ್ ಸಾಮ್ರಾಜ್ಯ, ಲ್ಯಾನ್ ನಾ ಮತ್ತು ಅಯುತಾಯಾ ಸಾಮ್ರಾಜ್ಯಗಳು. ಅನಂತರ ಥಾಯ್ ತಮ್ಮದೇ ರಾಜ್ಯಗಳನ್ನು ಸ್ಥಾಪಿಸಿತು. ಈ ರಾಜ್ಯಗಳು ಪರಸ್ಪರ ಹೋರಾಟಗಳನ್ನು ನಡೆಸುತ್ತಲೇ ಇದ್ದವು. ಖಮೇರ್, ಬರ್ಮಾ ಮತ್ತು ವಿಯಟ್ನಾಂನಿಂದ ನಿರಂತರ ಬೆದರಿಕೆಗಳನ್ನ ಎದುರಿಸುತ್ತಿದ್ದವು. ಅನಂತರ ಯುರೋಪಿಯನ್ ವಸಾಹತು ಶಕ್ತಿಗಳು 19 ಮತ್ತು 20ನೇ ಶತಮಾನದ ಆರಂಭದಲ್ಲಿ ಬೆದರಿಕೆ ಹಾಕಿದವು, ಆದರೆ ಯುರೋಪಿಯನ್ ವಸಾಹತುಶಾಹಿ ನಿಯಮಗಳನ್ನು ತಪ್ಪಿಸಿಕೊಂಡ ಥೈಲ್ಯಾಂಡ್ ಏಕೈಕ ಆಗ್ನೇಯ ಏಷ್ಯಾದ ದೇಶವಾಗಿ ಉಳಿದುಕೊಂಡಿತು. ಕಾರಣ ಫ್ರೆಂಚ್ ಮತ್ತು ಬ್ರಿಟಿಷರು ತಮ್ಮ ವಸಾಹತುಗಳ ನಡುವಿನ ಘರ್ಷಣೆಯನ್ನು ತಪ್ಪಿಸಲು ತಟಸ್ಥ ಪ್ರದೇಶವೆಂದು

ನಿರ್ಧರಿಸಿದವು. ಕ್ರಿ.ಶ. 1932ರಲ್ಲಿ ಸಂಪೂರ್ಣ ಪ್ರಜಾಪ್ರಭುತ್ವದ ಅಂತ್ಯದ ನಂತರ ಥೈಲ್ಯಾಂಡ್ ಪ್ರಜಾಸತ್ತಾತ್ಮಕವಾಗಿ ಚುನಾಯಿತ-ಸರ್ಕಾರದ ವ್ಯವಸ್ಥೆಯನ್ನು ಸ್ಥಾಪಿಸುವ ಮುನ್ನ 60 ವರ್ಷಗಳ ಕಾಲ ಶಾಶ್ವತ ಮಿಲಿಟರಿ ಆಳ್ವಿಕೆಯಲ್ಲಿ ನರಳಿತ್ತು.

ಥೈಲ್ಯಾಂಡ್ ಸಂಸ್ಕೃತಿ

ಸುಖೋತಿ ಕಾಲದಲ್ಲಿ ದೇಶ ಪೂರ್ವ ಜಾಗತೀಕರಣದ ಕಾಲದಿಂದ ಅದರ ಸಮಕಾಲಿನ ಅಯುತಾಯ ಕಾಲದವರೆಗೂ ಏಷ್ಯಾದ ಎಲ್ಲಾ ಸಂಸ್ಕೃತಿ ಪ್ರಭಾವಗಳಿಂದಾಗಿ ಹೀರಿಕೊಳ್ಳಲ್ಪಟ್ಟ ಥೈಲ್ಯಾಂಡಿನ ಸಂಸ್ಕೃತಿ ಕಾಲಾಂತರದಲ್ಲಿ ಹೆಚ್ಚು ವಿಕಸನಗೊಂಡಿತು. ಭಾರತೀಯ ಸಾಂಪ್ರದಾಯ, ಚೀನಿ ಮತ್ತು ಇತರ ಆಗ್ನೇಯ ಏಷ್ಯಾ ದೇಶಗಳ ಪ್ರಭಾವಗಳು – ಸಾಂಪ್ರದಾಯಿಕ ಥಾಯ್ ಸಂಸ್ಕೃತಿಯಲ್ಲಿ ಇನ್ನೂ ಸ್ಪಷ್ಟವಾಗಿ ಕಾಣಿಸುತ್ತವೆ. ಬೌದ್ಧಧರ್ಮ ಅನಿಮಿಸಂ ಮತ್ತು ಪಾಶ್ಚಾಮಾತ್ಯೀಕರಣವು ಥಾಯ್ ಸಂಸ್ಕೃತಿಯನ್ನು ರೂಪಿಸುವಲ್ಲಿ ಗಮನಾರ್ಹ ಪಾತ್ರವನ್ನು ವಹಿಸಿದೆ.



ಬ್ಯಾಂಕಾಕ್‌ನ ವ್ಯಾಟ್ ಫ್ರಾ ಕಾವ್‌ನಲ್ಲಿರುವ ಪೌರಾಣಿಕ 'ಕಿನ್ನನ್' ಪ್ರತಿಮೆ.

ಥೈಲ್ಯಾಂಡ್ ದೇಶದಲ್ಲಿ ಸುಮಾರು 94 ಪ್ರತಿ ಶತಕದಷ್ಟು ಭೌದ್ಧರು, ಮುಖ್ಯವಾಗಿ ಥೇರವಾಡಾ ಶಾಲೆ, ಥಾಯ್ ಅರಣ್ಯ ಸಂಪ್ರದಾಯ ಮತ್ತು ಧಮಮತ್ತಿಕ ನಿಕಾಯಾ ಮತ್ತು ಸಂಥಿ ಅಶೋಕೆಕ್ಸ್ಟ್ಸ ಅನ್ನು ಒಳಗೊಂಡಿದೆ. ಉಳಿದ ಅಜ್ಞಾತ ಅಲ್ಪಸಂಖ್ಯಾತರು ಮಹಾಯಾನ ಶಾಲೆಯನ್ನು ಸೇರಿದ್ದಾರೆ. ಇದಲ್ಲದೆ ಥೈಲ್ಯಾಂಡ್ನಲ್ಲಿ ಅಲ್ಪಸಂಖ್ಯಾತರ ಸಂಖ್ಯೆ 5 ರಿಂದ 6 ಪ್ರತಿ ಶತಕದಷ್ಟು ಕ್ರೈಸ್ತರು ಮತ್ತು ಇತರ ಧರ್ಮಗಳ ಜನರಿದ್ದಾರೆ. ಥಾಯ್ ಥೇರವಾಡಾ ಬುದ್ಧಿಸಂ ಅನ್ನು ಸರ್ಕಾರವು ಬೆಂಬಲಿಸುತ್ತದೆ ಮತ್ತು ಮೇಲ್ವಿಚಾರಣೆ ಮಾಡುತ್ತದೆ. ಈ ಸನ್ಯಾಸಿಗಳು ಸರ್ಕಾರದಿಂದ ಹಲವು ಪ್ರಯೋಜನೆಗಳನ್ನು ಪಡೆಯುತ್ತಾರೆ. ಥೈಲ್ಯಾಂಡಿನ ಬೌದ್ಧ ಧರ್ಮವು ಪೂರ್ವಿಕ ಮತ್ತು ನೈಸರ್ಗಿಕ ಆತ್ಮಗಳಿಗೆ ಸಂಬಂಧಿಸಿದ ಸಾಂಪ್ರದಾಯಿಕ ನಂಬಿಕೆಗಳಿಂದ ಬಲವಾಗಿ ಪ್ರಭಾವಿತವಾಗಿದೆ.

ಇದನ್ನ ಬೌದ್ಧ ವಿಶ್ವ ವಿಜ್ಞಾನದಲ್ಲಿ ಸಂಯೋಜಿಸಲಾಗಿದೆ.



ಥಾಯ್ ಶುಭಾಶಯಃ ಮುಗುಳುನಗೆ ಥಾಯ್ ಸಂಸ್ಕೃತಿಯಲ್ಲ ಪರಿಷ್ಕರಣದ ಪ್ರಮುಖ ಸಂಕೇತವಾಗಿದೆ.

ಹೆಚ್ಚಿನ ಥಾಯ್ ಜನರು ಆತ್ಮಮನೆಗಳನ್ನು (Thai:; RTGS: san phra phum), ತಮ್ಮ ವಾಸಸ್ಥಾನದ ಹೊರಗೆ (ಚಿಕಣಿ ಮನೆಗಳನ್ನು) ಸ್ಥಾಪಿಸಿ ಅಲ್ಲಿ ಮನೆಯ ಶಕ್ತಿಗಳು ಬದುಕುತ್ತವೆ ಎಂದು ಅವರು ನಂಬಿದ್ದಾರೆ. ಅವರು ಸಂತೋಷವನ್ನು ಉಳಿಸಿಕೊಳ್ಳಲು ಆತ್ಮಗಳಿಗೆ ಆಹಾರ ಮತ್ತು ಪಾನಿಯಗಳನ್ನು ಅರ್ಪಿಸುತ್ತಾರೆ. ಈ ಶಕ್ತಿಗಳು ಸಂತೋಷವಾಗಿರದಿದ್ದರೆ ಅವು, ಮನೆಯಲ್ಲೇ ಸೇರಿಕೊಂಡು ಮತ್ತು ತೊಂದರೆಗಳಿಗೆ ಕಾರಣರಾಗುತ್ತವೆ ಎಂದು ನಂಬುತ್ತಾರೆ. ಚಿಕಣಿ ಮನೆಗಳು ನಮ್ಮ ದೇವಾಲಯಗಳಂತೆ ಸಾರ್ವಜನಿಕ ಸ್ಥಳಗಳಲ್ಲೂ ಇದ್ದು ಅಲ್ಲಿ ದೇವತೆಗಳಿಗೆ ಹಣ್ಣು, ಫಲಹಾರ, ಪಾನಿಯಗಳನ್ನು ಅರ್ಪಿಸುತ್ತಾರೆ.

ಥೇರವಾಡಾ ಬೌದ್ಧ ಧರ್ಮದ ಬೆಳವಣಿಗೆಗೆ ಮುಂಚೆಯೇ ಭಾರತೀಯ ಬ್ರಾಹ್ಮಣ ಧರ್ಮ ಮತ್ತು ಮಹಾಯಾನ ಬೌದ್ಧ ಧರ್ಮವು ತೈಲ್ಯಾಂಡ್ನಲ್ಲಿದ್ದವು ಎನ್ನಲಾಗಿದೆ. ಈ ಎರಡೂ ಸಂಪ್ರದಾಯಗಳ ಪ್ರಭಾವವು ಇಂದಿನ ಥಾಯ್ ಜಾನಪದ ಸಾಹಿತ್ಯದಲ್ಲಿ ಇನ್ನೂ ಕಾಣಬಹುದಾಗಿದೆ. ಥಾಯ್ ಬ್ರಾಹ್ಮಣ ಧರ್ಮದಲ್ಲಿ ಬ್ರಾಹ್ಮಣ ಪವಿತ್ರ ಮಂದಿರಗಳು ಪ್ರಮುಖ ಪಾತ್ರ ವಹಿಸುತ್ತವೆ. ಮಹಾಯಾನ ಬೌದ್ಧ ಧರ್ಮದ ಪ್ರಭಾವವು ಲೋಕೇಶ್ವರನಂತಹ ವ್ಯಕ್ತಿಗಳ ಉಪಸ್ಥಿತಿಯಲ್ಲಿ ಪ್ರತಿಫಲಿಸುತ್ತವೆ. ಇದು ಬೋಧಿಸತ್ವ ಅವಲೋಕೈಟ್ಸ್ವರ ಎಂಬ ಒಂದು ರೂಪವನ್ನು ಕೆಲವೊಮ್ಮೆ ಥೈಲ್ಯಾಂಡಿನ ಪ್ರತಿಮಾ ಶಾಸ್ತ್ರದಲ್ಲಿ ಸಂಯೋಜನೆಗೊಂಡಿದೆ.

ಅತ್ಯಂತ ವಿಶಿಷ್ಟ ಥಾಯ್ ಪದ್ಧತಿ ಎಂದರೆ ವಾಯ್. ಶುಭಾಷಯಗಳನ್ನು ಬಿಟ್ಟುಹೋಗುವುದು, ಅಥವಾ ಅಂಗೀಕಾರವಾಗಿ ಬಳಸಿಕೊಳ್ಳುವುದು. ಇದು ಅನೇಕ ರೂಪಗಳಲ್ಲಿ ಬರುತ್ತದೆ. ಇದರಲ್ಲಿ ಒಳಗೊಂಡಿರುವವರ ಸಂಬಂಧಿತ ಸ್ಥಾನಮಾನವನ್ನು ಪ್ರತಿಬಿಂಬಿಸುತ್ತದೆ. ಸಾಮಾನ್ಯವಾಗಿ ವಂದನೆ ಮಾಡುವುದು

ಭಾರತೀಯ ಉಪಖಂಡದ ಅಂಜಲಿಮುದ್ರೆಯಿಂದ ಪಡೆದ ಕೈಗಳಿಂದ ಪ್ರಾರ್ಥನೆ-ತರಹದ ಭಾವಸೂಚಕವನ್ನು ಒಳಗೊಂಡಿದ್ದು ತಲೆಯನ್ನು ಸ್ವಲ್ಪ ಬಾಗಿದಂತೆ ಮಾಡುತ್ತಾರೆ. ಈ ರೀತಿಯ ವಂದನೆ ಆಹ್ಲಾದಕರ ಮುಗುಳು ನಗೆಯೊಂದಿಗೆ ಸ್ವಾಗತಾರ್ಹ ಸ್ವಭಾವ ಮತ್ತು ಆಹ್ಲಾದಕರ ಮನೋಭಾವವನ್ನು ಸಂಕೇತಿಸುತ್ತದೆ. ಥೈಲ್ಯಾಂಡ್ ಪ್ರವಾಸಿ ಬ್ರೋಷರ್ಗಳಲ್ಲಿ 'Land of Smiles' ಎಂದು ಉಲ್ಲೇಖಿಸಿರುತ್ತದೆ.

ಸಂಘರ್ಷ ಮತ್ತು ಕೋಪದ ಹಠಾತ್ ಪ್ರದರ್ಶನಗಳು ಪ್ರಶಾಂತದಿಂದ ಇತ್ಯರ್ಥವಾಗಬೇಕು ಎಂಬುದು ಥಾಯ್ ಸಂಸ್ಕೃತಿಯಲ್ಲಿನ ಸಂಪ್ರದಾಯ. ಈ ಕಾರಣಗಳಿಂದಾಗಿ ಪ್ರವಾಸಿಗರು ಸಂಘರ್ಷವನ್ನು ಸೃಷ್ಟಿಸಬಾರದು. ಭಿನ್ನಾಭಿಪ್ರಾಯಗಳನ್ನು ಅಥವಾ ವಿವಾಧಗಳನ್ನು ಮುಗುಳು ನಗೆಯೊಂದಿಗೆ ನಿಭಾಯಿಸಬೇಕು ಮತ್ತು ಇನ್ನೊಬ್ಬರನ್ನು ದೂಷಿಸಲು ಯಾವುದೇ ಪ್ರಯತ್ನವನ್ನು ಮಾಡಬಾರದು. ಥೈಲ್ಯಾಂಡಿನ ದೈನಂದಿನ ಜೀವನದಲ್ಲಿ ಸ್ಯಾನುಕ್ ಪರಿಕಲ್ಪನೆಯ ಬಗ್ಗೆ ಬಲವಾದ ನಂಬಿಕೆ ಇದಾಗಿದೆ. ಇದರ ಉದ್ದೇಶ ಜೀವನವು ವಿನೋದಮಯದಿಂದ ತುಂಬಿಕೊಂಡಿರಬೇಕು. ಹಾಗಾಗಿ ಥಾಯ್ ಜನರ ದೈನಂದಿನ ಕೆಲಸಗಳಲ್ಲಿ ಸಾಕಷ್ಟು ತಮಾಷೆ ತುಂಬಿಕೊಂಡಿರುತ್ತದೆ. ಅಂದರೆ ಸಾಮಾಜಿಕ ಸಂವಹನಗಳಲ್ಲಿ ಧನಾತ್ಮಕ ಭಾವನೆಗಳನ್ನು ಪ್ರದರ್ಶಿಸುವುದು ಥಾಯ್ ಸಂಸ್ಕೃತಿಯಲ್ಲಿ ಮುಖ್ಯವಾದ ವಿಷಯ.

ಕಿರಿಯರು, ಹಿರಿಯರಿಗೆ ಕ್ರಮಾನುಗತವಾಗಿ ಗೌರವ ತೋರಿಸುವುದು ಥಾಯ್ ಜನರಲ್ಲಿ ಮಹತ್ವದ ಕೆಲಸವಾಗಿದೆ. ಬನ್ ಖುನ್ ಸಂಸ್ಕೃತಿಯ ಪ್ರಕಾರ ವಿದ್ಯಾರ್ಥಿಗಳು, ಮಕ್ಕಳು, ಕಿರಿಯರು; ಪೋಷಕರು, ಶಿಕ್ಷಕರು, ಮತ್ತು ಪಾಲನೆದಾರರಿಗೆ ಗೌರವ ತೋರಿಸಬೇಕು. ಸಾಮಾನ್ಯವಾದ ಪರಸ್ಪರ ಸಂಬಂಧದ ಸುತ್ತಲೂ ಸಂಘಟಿಸಲ್ಪಟ್ಟ ಸಂಬಂಧಗಳಲ್ಲಿ ಭಾಗಿಯಾದ ಭಾವನೆಗಳನ್ನು ಮತ್ತು ಆಚರಣೆಗಳನ್ನು ಇದು ವಿವರಿಸುತ್ತದೆ. ಥಾಯ್ ಸಮಾಜದಲ್ಲಿ ಬೌದ್ಧ ಸನ್ಯಾಸಿಗಳಿಗೆ ವಿಶೇಷ ಸ್ಥಾನಮಾನಗಳನ್ನು ಕಲ್ಪಿಸಲಾಗಿದೆ. ಸನ್ಯಾಸಿಗಳ ಜೊತೆಗೆ ಮಹಿಳೆಯರ ದೈಹಿಕ ಸಂಪರ್ಕವನ್ನು ನಿಷೇಧಿಸಲಾಗಿದೆ. ಮಹಿಳೆಯರು ಸನ್ಯಾಸಿಗಳಿಗೆ ಕಾಣಿಕೆಗಳನ್ನು ಅವರ ಪಾದಗಳ ಮುಂದೆ ಅರ್ಪಿಸಬೇಕು, ಇಲ್ಲ ಮುಂದೆ ಹಾಸಿದ ಬಟ್ಟೆಯ ಮೇಲೆ ಇಡಬೇಕು.

ಬೌದ್ಧರ ಮದುವೆಗಳನ್ನು ಎರಡು ಭಾಗಗಳಾಗಿ ವಿಭಾಗಿಸಲಾಗಿದೆ:

ಪ್ರಾರ್ಥನೆಗಳ ಪಠಣ, ಆಹಾರ ಮತ್ತು ಸನ್ಯಾಸಿಗಳು ಮತ್ತು ಬುದ್ಧನ ಚಿತ್ರಗಳಿಗೆ ನೀಡುವ ಇತರ ಕೊಡುಗೆಗಳನ್ನು ಒಳಗೊಂಡಿರುವ ಬೌದ್ಧ ಘಟಕ. ಎರಡನೆಯದು ಮೂಲವಾಗಿ ಬೌದ್ಧರಲ್ಲದವರು ಜಾನಪದ ಸಂಪ್ರದಾಯಗಳಲ್ಲಿ ಬೇರೂರಿದ ರೀತಿಯಲ್ಲಿ ಮದುವೆಗಳನ್ನು ನಡೆಸುವುದು.

ಕಲೆ ನೃತ್ಯ ಸಂಗೀತ

ಥಾಯ್ ದೃಶ್ಯ ಕಲೆಗಳು ಸಾಂಪ್ರದಾಯಿಕವಾಗಿ ಬೌದ್ಧ ಧರ್ಮಕ್ಕೆ ಸೀಮಿತಗೊಂಡಿವೆ. ಬೇರೆಬೇರೆ ಕಾಲ ಘಟ್ಟಗಳಲ್ಲಿ ಥಾಯ್ ಬುದ್ಧನ ಚಿತ್ರಗಳು ಹಲವಾರು ವಿಶಿಷ್ಟ ಶೈಲಿಗಳನ್ನು ಹೊಂದಿವೆ. ಥಾಯ್ ದೇವಾಲಯಗಳ ಕಲೆ ಮತ್ತು ವಾಸ್ತುಶೈಲಿಯ ಪ್ರಾಚೀನ ಸಯಾಮಿ ವಾಸ್ತುಶೈಲಿಯಿಂದ ಪಡೆದ ಅಂಶಗಳು ಒಂದು ಅನನ್ಯ ಸಂಯೋಜನೆಯನ್ನು ರೂಪಿಸಿಕೊಂಡಿವೆ. ಥಾಯ್ ಸಾಹಿತ್ಯವು ಭಾರತೀಯ ಹಿಂದೂ ಸಂಸ್ಕೃತದಿಂದ ಭಾರೀ ಪ್ರಭಾವಿತವಾಗಿದೆ. ಥಾಯ್ ಸಾಹಿತ್ಯದ ಅತ್ಯಂತ ಗಮನಾರ್ಹ ಕೃತಿಗಳೆಂದರೆ ರಾಮಾಯಣ. ಇದು ರಾಮಕಿಯನ್ ಎಂದು ಕರೆಯುವ ಹಿಂದೂ ಧಾರ್ಮಿಕ ಮಹಾಕಾವ್ಯವಾದ ಕಿಂಗ್ ರಾಮ–I ಮತ್ತು ರಾಮಾ–II ಎಂದು ಎರಡು ಸಂಚಿಕೆಗಳಲ್ಲಿ ಬರೆಯಲಾಗಿದೆ. ಮತ್ತು ಸನ್ಥಾರ್ನ್ ಘೂನ ಕಾವ್ಯವೂ ಇದೆ.

ಸಾಂಪ್ರದಾಯಿಕ ಥಾಯ್ ವರ್ಣ ಚಿತ್ರಗಳನ್ನು ಎರಡು ಆಯಾಮಗಳಲ್ಲಿ ಚಿತ್ರಿಸಲಾಗಿದೆ. ಚಿತ್ರದಲ್ಲಿನ ಪ್ರತಿ ಅಂಶದ ಗಾತ್ರವು ಅದರ ಪ್ರಾಮುಖ್ಯತೆಯ ಮಟ್ಟವನ್ನು ಪ್ರತಿಫಲಿಸುತ್ತದೆ. ಸಂಯೋಜನೆಯ ಪ್ರಾಥಮಿಕ ವಿಧಾನವೆಂದರೆ ಅಪ್ಪೋರ್ಟಿಂಗ್ ಪ್ರದೇಶಗಳಲ್ಲಿ: ಮುಖ್ಯ ಅಂಶಗಳನ್ನು ಬಾಹ್ಯಾಕಾಶ ಟ್ರಾನ್ಸ್ಫಾರ್ಮರ್ಗಳ ಮೂಲಕ ಪರಸ್ಪರ ಪ್ರತ್ಯೇಕಿಸಲಾಗುತ್ತದೆ. ಥೈಲ್ಯಾಂಡ್ನಲ್ಲಿ ಮಾತನಾಡುವ ನಾಟಕದ ಸಂಪ್ರದಾಯವಿಲ್ಲ, ಬದಲಾಗಿ ಥಾಯ್ ನೃತ್ಯದಿಂದ ತುಂಬಿರುವ ಪಾತ್ರಗಳಿಂದ ನಾಟಕ ತುಂಬಿರುತ್ತದೆ. ಇದರಲ್ಲಿ ಮೂರು ವಿಧಗಳಿವೆ. ಖೋನ್, ಲಖೋನ್, ಮತ್ತು ಲೈಖೆ. ಖೋನ್ ಅತ್ಯಂತ ವಿಸ್ತಾರವಾದ ಮತ್ತು ಹೆಚ್ಚು



ಖೋನ್ ನೃತ್ಯದ ಒಂದು ದೃಶ್ಯ.

ಜನಪ್ರಿಯವಾಗಿದೆ. ನಾಂಗ್ ನಾಟಕ, ಒಂದು ರೂಪದ ನೆರಳು ನಾಟಕವಾಗಿದ್ದು, ದಕ್ಷಿಣದಲ್ಲಿ ಕಂಡುಬರುತ್ತದೆ. ಥಾಯ್ ದಂತಕಥೆ, ಶ್ರೀ ಥಾನೊನ್ಚೈ ಒಂದು ಉದಾಹರಣೆಯಾಗಿದೆ.

ಅಯುತಾಯ ಸಾಮ್ರಾಜ್ಯದ ಅವಧಿಯಲ್ಲಿ ಖೋನ್ ಮತ್ತು ಇತರ ಶಾಸ್ತ್ರೀಯ ಸಯಾಮಿ ನೃತ್ಯಗಳ ಬಗ್ಗೆ ಮೊದಲ ವಿವರಗಳನ್ನು ಯುರೋಪಿಯನ್ ದಾಖಲೆಗಳಲ್ಲಿ ಕಾಣಬಹುದು. ದಾಖಲೆಗಳಲ್ಲಿ ಈಗ ನೋಡುತ್ತಿರುವ ಥಾಯ್ ಸಂಪ್ರದಾಯಗಳಿಗೆ ಹೋಲಿಸುವ ನಾಟಕೀಯ ಸಂಪ್ರದಾಯ ಮತ್ತು ಶೈಲಿಯನ್ನು ವರ್ಣಿಸಿದೆ. ಕ್ರಿ.ಶ. 17ನೇ ಶತಮಾನದಲ್ಲಿ ಥಾಯ್ ಕಲೆಯ ನಾಟಕಗಳು ಪರಿಪೂರ್ಣವಾಗಿ ಪ್ರದರ್ಶಿನಗೊಳ್ಳುತ್ತಿದ್ದ ಸಂಗತಿ ದೃಢಪಟ್ಟಿದೆ. 14ನೇ ರಾಜ ಲೂಯಿಸ್, ಫ್ರಾನ್ಸ್‌ನ ಸನ್ ಕಿಂಗ್ ಅವರುಗಳು ಅಯುತಾಯ ರಾಜ ನಾರಾಯಿಯೊಂದಿಗೆ ಔಪಚಾರಿಕ ರಾಜತಾಂತ್ರಿಕ ಸಂಬಂಧವನ್ನು ಹೊಂದಿದ್ದುದಾಗಿ ತಿಳಿದುಬರುತ್ತದೆ. ಕ್ರಿ.ಶ. 1687ರಲ್ಲಿ ಫ್ರಾನ್ಸ್‌ನ ರಾಜ ತನ್ನ ರಾಯಭಾರಿ ಸೈಮನ್ ಡೆ ಲಾ ಲುಬೆರನ್ನು ಸಿಯಾಮೀಸ್ ರಾಜ್ಯ ಮತ್ತು ಅದರ ಸಾಂಸ್ಕೃತಿಕ ಕಲೆಗಳನ್ನು ದಾಖಲೆ ಮಾಡಿಕೊಂಡು ಬರುವಂತೆ ಕಳುಹಿಸಿದ್ದನು.

ಪ್ರಸ್ತುತ ಥಾಯ್ ಪ್ರದರ್ಶನಗಳು ಹಿಂದಿನಂತೆ ರೋಮಾಂಚನವನ್ನು ಉಂಟು ಮಾಡಲು ಸೋಲುತ್ತಿವೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಪಾಶ್ಚಾತ್ಯ ಮನರಂಜನೆ ಮತ್ತು ಇತರ ಅಭಿರುಚಿಗಳಿಂದ ಥಾಯ್ ಕಲೆಗಳು ನೇಪಥ್ಯಕ್ಕೆ ಸರಿಯುತ್ತಿವೆ ಎಂಬ ಕೊರಗು ಕಾಣಿಸಿಕೊಂಡಿದೆ. ಆದರೂ ಥಾಯ್ ನೃತ್ಯ ಉಳಿದುಕೊಂಡು ಬರುತ್ತಿದೆ. ಶತಶತಮಾನಗಳಿಂದಲೂ ಸಂಸ್ಕರಿಸಿದ ಕಲಾ ರಚನೆಗಳು ಸೊಬಗನ್ನು ಉಳಿಸಿಕೊಂಡು ಬರುತ್ತಿವೆ ಎನ್ನುವುದು ಸಮಾಧಾನದ ಸಂಗತಿಯಾಗಿದೆ. ಜಾನಪದ ಮತ್ತು ಪ್ರಾದೇಶಿಕ ನೃತ್ಯಗಳ ಹೊರತಾಗಿ ಥಾಯ್ ಶಾಸ್ತ್ರೀಯ ನೃತ್ಯ ನಾಟಕದ ಎರಡು ಪ್ರಮುಖ ರೂಪಗಳು ಮುಂದುವರಿದುಕೊಂಡು ಬರುತ್ತಿವೆ. ಇವು ಖೋನ್ ಮತ್ತು ಲಖೋನ್ ನಾಯ್ ಎನ್ನುವ ಎರಡು ಪ್ರಕಾರಗಳು. ಪ್ರಾರಂಭದಲ್ಲಿ ಈ ಎರಡೂ ಪ್ರಕಾರಗಳು ಪ್ರತ್ಯೇಕವಾಗಿ ರಾಜರ ಆಸ್ಥಾನಗಳಲ್ಲಿ ಮಾತ್ರ ನಡೆ-ಯುತ್ತಿದ್ದ ನಾಟಕಗಳು. ಕಾಲಾಂತರದಲ್ಲಿ ನಿಧಾನವಾಗಿ ಜನರ ಮುಂದೆ ಪ್ರದರ್ಶನಗೊಂಡವು. ಲಖೋನ್ ಚಾಟ್ರಿ ಸಹ ಪ್ರಮುಖವಾದ ಥಾಯ್ ನೃತ್ಯಗಳಲ್ಲಿ ಒಂದಾಗಿದೆ.

ಥೈಲ್ಯಾಂಡ್ ಸಂಗೀತ ಶಾಸ್ತ್ರೀಯ ಮತ್ತು ಜಾನಪದ ಸಂಗೀತ ಸಂಪ್ರದಾಯಗಳನ್ನು ಒಳಗೊಂಡಿದೆ. ಉದಾಃ ಪಿಪಾಟ್ ಮತ್ತು ಮೊರ್ ಲ್ಯಾಮ್ ಕ್ರಮಾವಾಗಿ; ಜೊತೆಗೆ ಥಾಯ್ ಪಾಪ್ ಸಂಗೀತ. ಉದಾಃ ಸ್ಟ್ರಿಂಗ್. ಥೈಲ್ಯಾಂಡ್ ಶಾಸ್ತ್ರೀಯ ಸಂಗೀತವು ಸುಮಾರು 800 ವರ್ಷಗಳ ಹಿಂದೆ ಸೆಂಟ್ರಲ್ ಥೈಲ್ಯಾಂಡ್ನ ರಾಜರ ಆಸ್ಥಾನಗಳಲ್ಲಿ ಅದರ ಪ್ರಸ್ತುತ ರೂಪದಲ್ಲಿ ಶೈಲೀಕೃತವಾಗಿ ರಾಯಲ್ ಕೇಂದ್ರಗಳಲ್ಲಿ ಸಮಾನಾರ್ಥವಾಗಿ ಪ್ರದರ್ಶನೆಗೊಳ್ಳುತ್ತಿದ್ದವು. ಈ ಮೇಳಗಳು, ಹಳೆಯ ಸಂಸ್ಕರಣೆಗಳು ಭಾರತದಿಂದ ಸಂಗ್ರಹವಾದವುಗಳಿಂದ ಸ್ವಲ್ಪಮಟ್ಟಿಗೆ ಪ್ರಭಾವಿತವಾಗಿದ್ದವು. ಮತ್ತು ಇಂದಿನ ಅನನ್ಯ ಥಾಯ್ ಅಭಿವ್ಯಕ್ತಗಳಾಗಿ ಬೆಳೆದು ನಿಂತಿವೆ. ಇವುಗಳಲ್ಲಿ ಮೂರು ಪ್ರಾಥಮಿಕ ತಂಡಗಳೆಂದರೆ ಪಿಪಾಟ್, ಖಿಯಯಾಂಗ್ ಮತ್ತು ಮಯೋರಿ ಗಮನಾರ್ಹವಾದ ರೀತಿಯಲ್ಲಿ ಭಿನ್ನವಾಗಿರುತ್ತವೆ. ಈ ಎಲ್ಲಾ ವಿಧಗಳಲ್ಲೂ ಮೂಲ ಉಪಕರಣಗಳು ಮತ್ತು ಸೈದ್ಧಾಂತಿಕ ವಿಧಾನಗಳನ್ನು ಹಂಚಿಕೊಳ್ಳಲಾಗಿದೆ. ಪ್ರತಿಯೊಬ್ಬರೂ ತಮ್ಮ ಕೈ ಚಿನ್ಹೆಗಳನ್ನು ಮತ್ತು ಪ್ರಾಥಮಿಕ ಬೀಟ್ ರೆಫೆರೆನ್ಸ್ ಅನ್ನು ಗುರುತಿಸಲು ಕ್ರಾಪ್ ಮರದ ತುಂಡುಗಳನ್ನು ಬಳಸುತ್ತಾರೆ.

ಹಲವಾರು ಬಗೆಯ ಸಣ್ಣ ಡ್ರಮ್ಸ್ (ಕ್ಲೋಂಗ್)ಗಳನ್ನು ಈ ಮೇಳಗಳಲ್ಲಿ ಬಳಸುತ್ತ ಸಂಗೀತ ರೂಪವನ್ನು ನಿರೂಪಿಸಲಾಗುತ್ತದೆ. ಮೂಲವಾಗಿ ಲಯಬದ್ಧ ರಚನೆಯನ್ನು (ನಾಟಾಬ್) ಸ್ಥೂಲವಾಗಿ ಸ್ಥಗಿತಗೊಳಿಸುತ್ತ ಕೊನೆಗೆ ಗಾಂಗ್ (ಮೊಂಗ್) ಹೊಡೆಯುವುದರ ಮೂಲಕ ಸ್ಥಗಿತಗೊಳ್ಳುತ್ತದೆ. ಅದರ ಮೂಲಭೂತ ಸೂತ್ರೀಕರಣದಲ್ಲಿ ನೋಡಿದ ಶಾಸ್ತ್ರೀಯ ಥಾಯ್ ಅರ್ಕೆಸ್ಟ್ರಾಗಳು, ಕಾಂಬೋಡಿಯನ್ (ಖಮೇರ್) ಪಿನ್ಪೆಟ್ ಮತ್ತು ಮಹೋರಿ ಮೇಳಗಳಿಗೆ ಹೋಲುತ್ತವೆ ಮತ್ತು ವ್ಯಾಪಕವಾಗಿ ಆಗ್ನೇಯ ಏಷ್ಯಾದ ಗಾಂಗ್-ಸಿಮ್ಸಂಗೀತ ಸಂಸ್ಕೃತಿಯೊಳಗೆ ಕಂಡುಬರುವ ಇತರ ವಾದ್ಯಗೋಷ್ಠಿಗಳಿಗೆ ರಚನಾತ್ಮಕವಾಗಿ ಹೋಲುತ್ತವೆ. ಉದಾಃ ಬಲಿಯಾದ ದೊಡ್ಡ ಗಾಮೆಲಾನ್ ಆಫ್ ಬಾಲಿ ಮತ್ತು ಜಾವಾ, ಇದು ವಿಯೆಟ್ನಾಮೀಸ್ ಡಾಂಗ್-ಸನ್ ಕಂಚಿನ ಡ್ರಮ್ಮಗಳ ಪ್ರಸರಣದಲ್ಲಿ ಮೊದಲ ಶತಮಾನದಲ್ಲಿ ಪ್ರಾರಂಭವಾಗುವ ಬಹುತೇಕ ಸಾಮಾನ್ಯ ಮೂಲಗಳನ್ನು ಹೊಂದಿರುತ್ತದೆ.

ಸಂಪ್ರಾದಾಯಿಕವಾದಿ ಥಾಯ್ ಕ್ಲಾಸಿಕಲ್ ಭಂಡಾರವು ಅನಾಮದೇಯವಾಗಿದ್ದು, ಸಂಯೋಜಕರ ಹೆಸರುಗಳನ್ನು (ವಾಸ್ತವವಾಗಿ, ತುಣುಕುಗಳನ್ನು ಐತಿಹಾಸಿಕವಾಗಿ

ಒಬ್ಬರೇ ಲೇಖಕರು ರಚಿಸಿದರು) ಪ್ರದರ್ಶನದ ಮೌಖಿಕ ಸಂಪ್ರದಾಯದ ಮೂಲಕ ಹಸ್ತಾಂತರಿಸಲಾಗಿದೆ. ಆದಾಗ್ಯೂ, ಆಧುನಿಕ ಬ್ಯಾಂಕಾಕ್ ಅವಧಿಯ ಆರಂಭದಿಂದಲೂ ಸಂಯೋಜಕರ ಹೆಸರುಗಳು ತಿಳಿದುಬಂದಿದೆ ಮತ್ತು ಶತಮಾನದ ತಿರುವಿನಿಂದಲೂ, ಅನೇಕ ಪ್ರಮುಖ ಸಂಯೋಜಕರು ತಮ್ಮ ಕೃತಿಗಳನ್ನು ಸಂಕೇತಿಕವಾಗಿ ದಾಖಲಿಸಿದ್ದಾರೆ. ಸಂಗೀತಗಾರರು ಸಂಯೋಜನೆಗಳು ಮತ್ತು ಸಂಕೇತಗಳನ್ನು ಸಾರ್ವತ್ರಿಕ ರೂಪಕಗಳಾಗಿ ಊಹಿಸಿ, ಕಾರ್ಯವೈಖರಿಯ ಸಂದರ್ಭದಲ್ಲಿ ವಿಲಕ್ಷಣವಾದ ವ್ಯತ್ಯಾಸಗಳು ಮತ್ತು ಸುಧಾರಣೆಗಳು ಪೂರ್ಣವಾಗಿ ಮೇಳೈಸಿವೆ.

❑

ಥೈಲ್ಯಾಂಡ್ ಪರ್ವತ ಪ್ರದೇಶಗಳು ಮತ್ತು ಪ್ರಸ್ಥಭೂಮಿ

ಅಧ್ಯಾಯ-2

ಥೈಲ್ಯಾಂಡ್ನ ಭೂಪ್ರದೇಶದ ಅತ್ಯಂತ ವಿಶೇಷ ಲಕ್ಷಣಗಳೆಂದರೆ ಪರ್ವತಗಳು; ಮುಖ್ಯವಾದ ಕೇಂದ್ರ ಬಯಲು ಪ್ರದೇಶ ಮತ್ತು ಎತ್ತರದ ಪ್ರಸ್ಥಭೂಮಿ. ಉತ್ತರ ಥೈಲ್ಯಾಂಡಿನ ಹೆಚ್ಚು ಭಾಗಗಳನ್ನು ಪರ್ವತ ಶ್ರೇಣಿಗಳು ಆವರಿಸಿಕೊಂಡಿದ್ದು ಮ್ಯಾನ್ಮಾರ್ ಗಡಿಯುದ್ದಕ್ಕೂ, ಕೆಳಗೆ ಕ್ರಾ ಇಸ್ತ್ಮಂಡ್ ಮತ್ತು ಮಲಯ ಪೆನಿನ್ಸುಲಾದ ಮೂಲಕ ಹಾದುಹೋಗಿದೆ. ಮಧ್ಯ ಬಯಲು ಪ್ರದೇಶವು ಚಾವೊ ಫ್ರಯಾ ಪ್ರಮುಖ ನದಿ ವ್ಯವಸ್ಥೆಯಿಂದ ಹರಿಯುವ ಕೆಳಮಟ್ಟದ ಪ್ರದೇಶವಾಗಿದ್ದು, ಇದು ಬ್ಯಾಂಕಾಕ್ ಕೊಲ್ಲಿಯ ತಲೆಯ ದಂಡಯಲ್ಲಿದೆ. ಚಾವೊ ಫ್ರಯಾ ನದಿ ವ್ಯವಸ್ಥೆಯು ದೇಶದ ಮೂರನೇ ಒಂದು ಭಾಗದಷ್ಟು ಪ್ರದೇಶದಲ್ಲಿ ಹರಿಯುತ್ತದೆ.

ದೇಶದ ಈಶಾನ್ಯ ಭಾಗದಲ್ಲಿರುವ ಖೊರತ್ ಪ್ರಸ್ಥಭೂಮಿ, ಮಧ್ಯಮ ಎತ್ತರದ ಬೆಟ್ಟಗಳು ಮತ್ತು ಆಳವಿಲ್ಲದ ಸರೋವರಗಳು ಹರಿಯುವ ಪ್ರದೇಶವಾಗಿದ್ದು ಮುನ್ ನದಿಯ ಮುಖಾಂತರ

ಮೆಕಾಂಗ್ ನದಿಗೆ ಸೇರಿಕೊಳ್ಳುತ್ತದೆ. ಮೆಕಾಂಗ್ ನದಿ ವ್ಯವಸ್ಥೆಯು ದಕ್ಷಿಣ ಚೀನಾ ಸಮುದ್ರಕ್ಕೆ ಸೇರಿಕೊಳ್ಳುತ್ತದೆ ಮತ್ತು ಈ ನದಿಯ ಮೇಲೆ ಕಾಲುವೆಗಳೂ ಮತ್ತು ಅಣೆಕಟ್ಟುಗಳ ಸರಣಿಯೇ ಇದೆ. ಒಟ್ಟಿಗೆ, ಚಾವೊ ಫ್ರಯಾ ಮತ್ತು ಮೆಕಾಂಗ್ ನದಿ ವ್ಯವಸ್ಥೆಗಳು ಆರ್ದ್ರ-ಭತ್ತ ಬೆಳೆ ಬೆಳೆಯುವುದಕ್ಕೆ ಬೆಂಬಲ ನೀಡುವ ಮೂಲಕ ಥೈಲ್ಯಾಂಡಿನ ಕೃಷಿ ಆರ್ಥಿಕತೆಯನ್ನು ಉಳಿಸಿಕೊಂಡಿದೆ. ಜಲಮಾರ್ಗಗಳು, ಸರಕು ಮತ್ತು ಜನರ ಸಾಗಣೆಗಾಗಿ ಸಹಾಯಕವಾಗಿವೆ.

ಇದಕ್ಕೆ ತದ್ವಿರುದ್ಧವಾಗಿ, ಪೆನಿನ್ಸುಲಾರ್ ಥೈಲ್ಯಾಂಡಿನ ವಿಶಿಷ್ಟವಾದ ನೈಸರ್ಗಿಕ ಲಕ್ಷಣಗಳಾದ ದೀರ್ಘ ಕರಾವಳಿ ತೀರಗಳು, ಕಡಲಾಚೆಯ ದೀಪಗಳು, ಮತ್ತು ಕ್ಷೀಣಿಸುತ್ತಿರುವ ಮ್ಯಾಂಗ್ರೋವ್ ಜೌಗು ಪ್ರದೇಶಗಳನ್ನು ಒಳಗೊಂಡಿದೆ. ಥೈಲ್ಯಾಂಡಿನ ಒಟ್ಟು 513,120 ಚ.ಕಿ. ಮೀಟರುಗಳು ಭೂಪ್ರದೇಶದಲ್ಲಿ ಕೃಷಿಗೆ ಒಳಪಟ್ಟಿರುವ ಭೂಪ್ರದೇಶ 75,000 ಚ.ಕಿ.ಮೀಗಳು.



ಡೋಯಿ ಇಂಥಾನಾನ್ ಪರ್ವತದ ಒಂದು ನೋಟ.

ಥೈಲ್ಯಾಂಡಿನ ಒಂದೇ ಒಂದು ಅತಿ ಮುಖ್ಯ ಪರ್ವತ ಏರಬೇಕಾದರೆ ಅದು 'ಡೋಯಿ ಇಂಥಾನಾನ್' ಪರ್ವತ ಆಗಿರಲಿ ಎಂದು ಥೈಲ್ಯಾಂಡ್ ಹೇಳುತ್ತದೆ. ಈ ಪರ್ವತ ಚಿಯಾಂಗ್ ಮೇಯಿಂದ ಎರಡು ಗಂಟೆಗಳ ಪ್ರಯಾಣವಾಗಿರುತ್ತದೆ. ಇದು ಸಮುದ್ರ ಮಟ್ಟದಿಂದ 2,565 ಮೀಟರುಗಳ ಎತ್ತರದ ದೇಶದ ಉನ್ನತ ಶಿಖರವಾಗಿದೆ. ಜೊತೆಗೆ ಜನಪ್ರಿಯ ಪ್ರವಾಸ ತಾಣವಾಗಿದ್ದು ಇದರ ಅಲ್ಪಾ - ಪ್ರಮುಖ ಶೃಂಗಸಭೆಗೆ ಇದು ಹೆಸರುವಾಸಿಯಾಗಿದೆ. ಈ ಶೃಂಗಸಭೆಗೆ ಏರಲು ರಸ್ತೆ ಇಲ್ಲದಿದ್ದರೂ ನಡೆದು-ಕೊಂಡು ಹೋಗಲು ದಾರಿಯನ್ನು ಮಾಡಲಾಗಿದೆ. ಶಿಖರದ ಸುತ್ತಲೂ ಅದ್ಭುತವಾದ ರಮಣೀಯ ದೃಶ್ಯಗಳು ಎದುರುಗೊಳ್ಳುತ್ತವೆ.



ಖಾವೊ ಮೊಕೊಜು ಮಾ ವಾಂಗ್ ರಾಷ್ಟ್ರೀಯ ಉದ್ಯಾನವನದ ಒಂದು ನೋಟ.

ಸಮುದ್ರಮಟ್ಟದಿಂದ 1,964 ಕಿ.ಮೀ.ಗಳ ಎತ್ತರ ಇರುವ ಖಾವೊ ಮೊಕೊಜು (ಅಥವಾ ಖಾವೊ ಮೊ ಕೋಚು) ಮಾ ವಾಂಗ್ ರಾಷ್ಟ್ರೀಯ ಉದ್ಯಾನವನದ ಅತ್ಯುನ್ನತ ಪರ್ವತವಾಗಿದೆ. ಇಲ್ಲಿಗೆ ಹೋಗಿಬರಲು ಐದು ದಿನಗಳ ಕಾಲ ಟ್ರೆಕ್ಕಿಂಗ್ ಮಾಡಬೇಕಾಗುತ್ತದೆ. ಈ ಪ್ರದೇಶದಲ್ಲಿ ಓಡಾಡಬೇಕಾದರೆ ಗೈಡ್ ಜೊತೆಗಿರಬೇಕು. ದಾರಿಯಲ್ಲಿ ಲಾರ್ ಗಿಬ್ಬನ್ಸ್, ಮಲಯನ್ ಟ್ಯಾಪಿರ್, ಫ್ರಾಯೆ ಎಲೆ ಮಂಕಿ ಮತ್ತು ಹುಲಿಗಳನ್ನು ನೋಡಬಹುದು. ಥೈಲ್ಯಾಂಡ್ ದೇಶ, ಪರ್ವತ ಕಣಿವೆಗಳ ಸುಂದರ ಪ್ರದೇಶವಾಗಿದ್ದು ನೂರಾರು ಸುಂದರ ಬೆಟ್ಟಗುಡ್ಡಗಳು, ಗಿರಿಧಾಮಗಳು, ಕಣಿವೆಗಳು, ನದಿಗಳು ಮತ್ತು ದಟ್ಟ ಅರಣ್ಯಗಳಿಂದ ಕೂಡಿದೆ.

ಥಮ್ ಲುವಾಂಗ್ ಗುಹೆಗಳು ಮತ್ತು ಗುಹೆ ಸಮೂಹ

ಥಮ್ ಲುವಾಂಗ್ ಗುಹೆ ಸಮೂಹ ಥೈಲ್ಯಾಂಡ್ - ಮ್ಯಾನ್ಮಾರ್ ದೇಶಗಳ ಗಡಿಯಲ್ಲಿ ಡೊಯಿ ನಾಂಗ್ ಪರ್ವತ ಶ್ರೇಣಿಯ ಅಡಿಯಲ್ಲಿದೆ. ಈ ಪರ್ವತಗಳು ಥೈಲ್ಯಾಂಡ್ನ ಉತ್ತರ ಭಾಗದಲ್ಲಿವೆ. ಈ ಪರ್ವತಗಳು ಸುಣ್ಣದ ಶಿಲೆಗಳು (Lime Stone), ಡಾಲಮೈಟ್ ಮತ್ತು ಜಿಪ್ಸಮ್ಗಳಂತಹ ಕರಗುವ ಶಿಲೆಗಳ ವ್ಯಾಪ್ತಿಯ ವಿಘಟನೆಯಿಂದ ರೂಪುಗೊಂಡಿವೆ. ಈ ಗುಹೆ ಸಮೂಹ 10 ಕಿ.ಮೀ. ಪ್ರದೇಶದಲ್ಲಿ ಹರಡಿಕೊಂಡಿದ್ದು ಥಮ್ ಲುವಾಂಗ್ ಎಂದು ಕರೆಯಲಾಗುತ್ತದೆ. (ಥಮ್ ಖಾವೊ ಲ್ವಾಂಗ್ ಗುಹೆಗಳೊಂದಿಗೆ ಗೊಂದಲಕ್ಕಿಡಾಗಬಾರದು, ಇದು ದೇಶದ ಪೂರ್ವ ಭಾಗದಲ್ಲಿರುವ ಪೆಚೆಚಬರಿ ಪ್ರದೇಶದಲ್ಲಿದೆ). ಥಮ್ ಲುವಾಂಗ್ ಗುಹೆ ಸಮೂಹ ಹಲವಾರು ಸಣ್ಣಸಣ್ಣ ಗುಹೆಗಳು, ಗುಹೆ ಚೇಂಬರುಗಳು ಮತ್ತು ಚೇಂಬರುಗಳ ಮುಂಚೆ ಹಲವು ಸಣ್ಣಮಟ್ಟ ಕೋಣೆಗಳನ್ನು ಹೊಂದಿರುವ ಗುಹೆಗಳ ಸಮೂಹ. ಇವೆಲ್ಲವೂ ಸಾಮಾನ್ಯವಾಗಿ ಒಳಗೆ ಸಂಪರ್ಕ ಹೊಂದಿರುವ ಗಣಿ ಸುರಂಗಗಳ ಜಾಲದಂತೆ ಹರಡಿಕೊಂಡು ಹಲವು ಕಡೆ ಪ್ರವೇಶಗಳನ್ನು ಹೊಂದಿವೆ.

ಥಮ್ ಲುವಾಂಗ್ ಗುಹೆಗಳನ್ನು, ಥಮ್ ಖಾವೊ ಲ್ವಾಂಗ್ ಗುಹೆಗಳಿಗೆ ಹೋಲಿಸಿದರೆ ಅಂತರರಾಷ್ಟ್ರೀಯ ಹೆಸರನ್ನು ಪಡೆದುಕೊಂಡ ಗುಹೆಗಳಲ್ಲ. ಥಮ್ ಖಾವೊ ಲ್ವಾಂಗ್ ಗುಹೆಗಳು ಥೈಲ್ಯಾಂಡಿನ ನಗರ ಪ್ರದೇಶಗಳಿಂದ ಬಹಳ ದೂರ ದಕ್ಷಿಣದ ತುದಿಯಲ್ಲಿವೆ. ಉಳಿದ ಪ್ರಖ್ಯಾತ ಥೈಲ್ಯಾಂಡ್ ಗುಹೆಗಳು ದೇಶದ ದಕ್ಷಿಣ, ಆಗ್ನೇಯ ಮತ್ತು ಪೂರ್ವ ಭಾಗಗಳಲ್ಲಿವೆ. ಆದರೂ ಥಮ್

ಲುವಾಂಗ್ ಗುಹೆಗಳು; ಸ್ಥಳೀಯರು, ಪರ್ವತಗಳ ಚಾರಣಿಗರು, ಮತ್ತು ಉತ್ತರದ ಪರ್ವತ ಪ್ರದೇಶಗಳಲ್ಲಿ ಅತ್ಯಂತ ಜನಪ್ರಿಯ ಗುಹೆಗಳಾಗಿವೆ.

ಸಾಮಾನ್ಯ ದಿನಗಳಲ್ಲಿ ಗುಹೆಯನ್ನು ಅನ್ವೇಷಿಸುವುದು ತುಂಬಾ ಸುಲಭ. ಥಮ್ ಲುವಾಂಗ್ ಗುಹೆಯ ಪ್ರವೇಶ ಪೂರ್ವದ ಕಡೆ ಇದ್ದು ಅಲ್ಲಿಂದ ಒಳಗೆ ಪ್ರವೇಶಿಸಿ 1.5 ಕಿ.ಮೀ. ದೂರ ನಡೆದರೆ ಅಲ್ಲೊಂದು ಟ-ಜಂಕ್ಷನ್ ದೊರಕುತ್ತದೆ. ಅದನ್ನು ಸ್ಯಾಮ್ ಯಾಕ್ ಜಂಕ್ಷನ್ ಎಂದು ಕರೆಯುತ್ತಾರೆ. ಅಲ್ಲಿಂದ ಉತ್ತರದ ಕಡೆಗೆ ನಡೆದರೆ ಅದು ಮ್ಯಾನ್ಮಾರ್ ಗಡಿಯ ಕಡೆಗೆ ಸಾಗುತ್ತದೆ. ದಕ್ಷಿಣದ ಕಡೆಗೆ ಹತ್ತಿ ಇಳಿದು ಜಾರಿಕೊಂಡು ತಿರುವುಗಳಲ್ಲಿ ಸಾಗಿದರೆ 1.5 ಕಿ.ಮೀ. ದೂರದಲ್ಲಿ ಪಟ್ಟಾಯಾ ಬೀಚ್ ದೊರಕುತ್ತದೆ. ಥೈಲ್ಯಾಂಡಿನ ದಕ್ಷಿಣ ಭಾಗದಲ್ಲಿರುವ ವಿಶ್ವ ಪ್ರಸಿದ್ಧ ಬೀಚ್‌ನ ಹೆಸರನ್ನು ಇದಕ್ಕೆ ಇಡಲಾಗಿದೆ. ಕಾರಣ ಈ ಗುಹೆಯ ಒಳಗಿನ ಪ್ರದೇಶ ಅತ್ಯಂತ ವಿಶಾಲವಾಗಿ ದೊಡ್ಡದಾದ ಕಾರಣ ಪಟ್ಟಾಯಾ ಬೀಚ್ನ ಹೆಸರಿನಿಂದ ಕರೆಲಾಗುತ್ತದೆ. ಈ ಹುಡುಗರ ತಂಡ ಅದಕ್ಕಿಂತ 400 ಮೀಟರುಗಳ ದೂರದಲ್ಲಿ ಸಿಲುಕಿಕೊಂಡಿತ್ತು.



ಹುಡುಗರು ಸಿಕ್ಕಿಕೊಂಡಿದ್ದ ಗುಹೆಯ ಒಂದು ಸೀಳುನೋಟ.

ಮೇಲಿನ ಗ್ರಾಫಿಕ್ ಚಿತ್ರ ಕಿರಿದಾದ ಮತ್ತು ಅಂಕುಡೊಂಕಾದ ಗುಹೆ ವ್ಯವಸ್ಥೆ ಅಸಾಮಾನ್ಯ ಮಾರ್ಗವನ್ನು ತೋರಿಸುತ್ತದೆ. ಚಿಯಾಂಗ್ ರೈ ಪ್ರಾಂತ್ಯದಲ್ಲಿ ಬೃಹತ್ ಥಮ್ ಲುವಾಂಗ್ ನಂಗ್ ನಾನ್ ಗುಹೆ ಪರ್ವತದ ಅಡಿಯಲ್ಲಿ 10 ಕಿ.ಮೀ. ಗಳವರೆಗೂ ವಿಸ್ತರಿಸಿದೆ. ಪ್ರವಾಹದ ದಾರಿಯುದ್ದಕ್ಕೂ ಹೆಚ್ಚಿನ ದಾರಿಗಳು ವಿಶಾಲವಾದ ಕೋಣೆಗಳಿಗೆ ದಾರಿ ಮಾಡಿಕೊಡುತ್ತವೆ. ಅನಂತರ ಮತ್ತೆ ಗುಹೆಯ ಮುಖ್ಯ ಹಾದಿಗೆ ಸೇರಿಕೊಂಡು ಕಲ್ಲು ಮತ್ತು ಮಣ್ಣಿನ ನೆಲ ದಾರಿಯುದ್ದಕ್ಕೂ ಹಲವಾರು ಬದಲಾವಣೆಗಳಿಂದ ಕೂಡಿದೆ. ಮೊದಲಿಗೆ ಬ್ರಿಟಿಷ್ ರಕ್ಷಣಾಕಾರರು ಗುಹೆಯ ನಕ್ಷೆಯನ್ನು ನೋಡಿದ ಮೇಲೆ ಹುಡುಗರ ತಂಡ 1.2 ಮೈಲಿಗಳ ದೂರದಲ್ಲಿ ಇರಬಹುದು ಎಂದು ಲೆಕ್ಕಾಚಾರ ಮಾಡಿದರು.

ಅನಂತರ ಇತರ ಅಂದಾಜುಗಳ ಮೇಲೆ 2.5 ಮೈಲಿಗಳ ದೂರದಲ್ಲಿ ಇದ್ದರೆ ಇರಬಹುದು ಎಂದು ಲಕ್ಕಾಚಾರ ಮಾಡಿಕೊಂಡರು.

ಗುಹೆಗಳ ಒಳಗೆ ಅಗಾಧ ನೀರು ಹೇಗೆ ಸಂಗ್ರಹವಾಗುತ್ತದೆ?

ವಿಶ್ವದಲ್ಲಿ ಹೆಚ್ಚು ಗುಹೆಗಳು, ಬೆಟ್ಟಗಳ ಮೇಲಿಂದ ಹಲವಾರು ಕಡೆಯಿಂದ ನೀರು ಹರಿದು ಬರುವ ಕಡೆಗಳಲ್ಲಿ ಗುಹೆಗಳು ನಿರ್ಮಾಣವಾಗಿರುತ್ತವೆ. ಥಮ್ ಲುವಾಂಗ್ ಗುಹೆಗಳು ಇದಕ್ಕೆ ಒರತಲ್ಲ. ಕಾಲಾಂತರದಲ್ಲಿ ಮಿಲಿಯಾಂತರ ವರ್ಷಗಳಲ್ಲಿ ಹೀಗೆ ಬೆಟ್ಟಗಳ ಮೇಲಿಂದ ಸುರಿದ ನೀರು ನಿಧಾನವಾಗಿ ಸುಣ್ಣದ ಶಿಲೆಗಳನ್ನು ಕರಗಿಸುತ್ತ ಸುರಂಗಗಳನ್ನು ಮಾಡುತ್ತಾ ಬೆಟ್ಟಗಳ ಒಳಗೆ ತೂತುಗಳನ್ನು ಮಾಡುತ್ತ ಹೋಗುತ್ತದೆ. ಮಳೆಗಾಲ ಬಂದರೆ ಹೀಗೆ ಅಗಾಧವಾಗಿ ಸುರಿಯುವ ಮಳೆ ನೀರು ಪರ್ವತದೊಳಗೆ ಹರಡಿರುವ ಗುಹಾವ್ಯವಸ್ಥೆ ಗುಹೆ ಸಮೂಹದ ಒಳಕ್ಕೆ ಹರಿದು ತುಂಬಿಕೊಳ್ಳುತ್ತದೆ. ಕೆಳಮಟ್ಟದ ಗುಹೆಗಳಂತೂ ಹೆಚ್ಚು ನೀರಿನ ಪ್ರವಾಹಕ್ಕೆ ಒಳಗಾಗುತ್ತವೆ.

ಈ ಪ್ರಕ್ರಿಯೆಯಿಂದ ಗುಹೆಗಳ ಒಳಗೆ ಎರಡು ರೀತಿಯ ಶಿಲೆಗಳು ಬೆಳಯುತ್ತವೆ. ಒಂದು stalactites ಇನ್ನೊಂದು stalgmites. ಮೊದಲನೇಯದು ಗುಹೆಯ ಮೇಲ್ಛಾವಣೆಯಿಂದು ನೀರಿನ ಜೊತೆಗೆ ಕರಗುವ ಕಲ್ಲುಗಳಲ್ಲಿರುವ ಧಾತುಗಳಿಂದ ರೂಪುಗೊಳ್ಳುವ (ನೇತಾಕಿದಂತೆ ತೋರುವ) ಶಿಲಾರಚನೆ. ಎರಡನೇಯದು ಕೂಡ ಗುಹೆಯ ನೆಲದ ಮೇಲೆ ಅದೇ ರೀತಿಯಾಗಿ ಎತ್ತರ-ಕ್ಕೆ ಬೆಳೆಯುವ ಶಿಲಾರಚನೆ. ಇದು ಕೂಡ ನೀರಿನ ಜೊತೆಗೆ ಮೇಲಿನಿಂದ ತೊಟ್ಟಿಕ್ಕಿತ್ತ ಶಿಲೆಗಳಲ್ಲಿರುವ ಧಾತುಗಳು ಬಿಡುಗಡೆಗೊಂಡು ರೂಪುಗೊಳ್ಳುವ ಕೋನಾಕಾರದ ಶಿಲೆಗಳು. ಶಿಲೆಗಳಲ್ಲಿ ಹಲವು ರೀತಿಯ ಧಾತುಗಳು ಅಥವಾ ಖನಿಜಗಳು ಇರುವುದರಿಂದ stalactits ಮತ್ತು stalgmites ಅತ್ಯಾಕರ್ಷಕ ಬಣ್ಣಗಳಿಂದು ತುಂಬಿಕೊಂಡಿರುತ್ತವೆ. ಯಾವುದೇ ಪ್ರಾಖ್ಯಾತ ಗುಹೆ ಸಮೂಹಗಳ ಒಳಗೆ ಹೋದಾಗ ನಿಮ್ಮನ್ನು ಬೆರಗು ಹುಟ್ಟಿಸುವಂತಹ ಬಣ್ಣಬಣ್ಣದ ಶಿಲೆಗಳು ಕಾಣಿಸಿಕೊಳ್ಳುತ್ತವೆ. stalactites ಮತ್ತು stalg-mites ಎಷ್ಟು ಚೂಪಾಗಿರುತ್ತವೆಂದರೆ ಕೈ ಸೋಕಿದರೆ ಸಾಕು ಚುಚ್ಚಿಕೊಂಡು ರಕ್ತ ಸುರಿದುಬಿಡುತ್ತದೆ.

ಪ್ರಸ್ತುತ ಗುಹೆಗಳ ವೀಕ್ಷಣೆ ವಿಶ್ವದಾದ್ಯಂತ ಬಹುದೊಡ್ಡ ಯಾತ್ರಿಕರ

ಪ್ರವಾಸೋದ್ಯಮವಾಗಿ ಬೆಳೆದು ನಿಂತಿದೆ. ಜರ್ಮನ್, ಚೀನಾ, ಮೆಕ್ಸಿಕೊ, ಫಿಲಿಫೀನ್ಸ್, ನ್ಯೂಜಿಲ್ಯಾಂಡ್, ಅಮೇರಿಕಾ, ಫ್ರಾನ್ಸ್, ಇಟಲಿ, ಸ್ಪೈನ್, ಆಸ್ಟ್ರೇಲಿಯಾ ಹೀಗೆ ಅನೇಕ ದೇಶಗಳಲ್ಲಿ ಅದ್ಭುತವಾದ ಗುಹೆಗಳನ್ನು ಪ್ರವಾಸೋದ್ಯಮ ಸ್ಥಳಗಳನ್ನಾಗಿ ಮಾರ್ಪಡಿಸಲಾಗಿದೆ.



ಜೀತಾ ಗ್ರೊಟ್ಟೊ ಗುಹೆ: ಡಾಗ್ ನದಿಯ ಕಣಿವೆ, ಕೇಸರ್ವಾನ್, ಬೇರುಟ್, ಲೆಬನಾನ್.

ಗುಹೆಗಳ ಪರಿಸರ ಮತ್ತು ಪ್ರಾಣಿಗಳು

ಗವಿ, ಗುಹೆ, ಗುಹೆಸಮೂಹ ಅಥವಾ ಗುಹೆವ್ಯವಸ್ಥೆ ಎಂದರೆ ನೆಲದ ಕೆಳಗೆ ಅಥವಾ ಬೆಟ್ಟಗಳ ಕೆಳಗೆ ಟೊಳ್ಳಾದ ಸ್ಥಳ. ಸಾಮಾನ್ಯವಾಗಿ ಮನಷ್ಯನು ನಿರ್ಧಿಷ್ಟವಾಗಿ ಒಳಕ್ಕೆ ಪ್ರವೇಶ ಮಾಡುವಂತಹ ನೈಸರ್ಗಿಕ ಸ್ಥಳ. ಗುಹೆಗಳು ನೈಸರ್ಗಿಕವಾಗಿ ಶಿಲೆಗಳ ನಗ್ನೀಕರಣದಿಂದ ಅಥವಾ ಶಿಥಿಲೀಕರಣದಿಂದ ರೂಪುಗೊಳ್ಳುವಂತವು. ಇವು ಆಳವಾದ ಸುರಂಗಗಳ ರೂಪದಲ್ಲಿ ನೆಲದಲ್ಲಿ ನಿರ್ಮಾಣವಾಗುತ್ತವೆ. ಇವು ಮಿಲಿಯಾಂತರ ವರ್ಷಗಳ ಕಾಲದಲ್ಲಿ ನೈಸರ್ಗಿಕವಾಗಿ ರೂಪುಗೊಳ್ಳುವಂತವು. ಕಡಲ ಗುಹೆಗಳು, ಕಲ್ಲಿನ ಆಶ್ರಯಗಳು ಮತ್ತು ಸಣ್ಣದಾದ ತೆರೆದುಕೊಂಡ ಸ್ಥಳಗಳನ್ನು ಗುಹೆಗಳೆಂದು ಉಲ್ಲೇಖಿಸಲಾಗುತ್ತದೆ.

ಕಟ್ಟುನಿಟ್ಟಾಗಿ ಗುಹೆಯ ಬಗ್ಗೆ ಹೇಳಬೇಕಾದರೆ ಅದು ಆರಂಭದಲ್ಲಿ ಬಾಗಿಲುಗಿಂತ ಕಿರಿದಾದ ದಾರಿಯೊಂದಿಗೆ ಒಳಗೆ ಅಗಲವಿರುತ್ತದೆ. ಗುಹೆಗಳು ಸಾಮಾನ್ಯವಾಗಿ ಕರಗುವ ಅಗಾಧ ಬಂಡೆಕಲ್ಲುಗಳಲ್ಲಿ, ಬೆಟ್ಟಗಳಲ್ಲಿ ರೂಪುಗೊಳ್ಳುತ್ತವೆ. ಗುಹೆಗಳ ಬಗ್ಗೆ ಸಂಶೋಧನೆ, ಅವುಗಳ ವಾತಾವರಣ ಅಥವಾ ಗುಹೆಗಳ ಬಗ್ಗೆ ನಡೆಸುವ ಸಂಪೂರ್ಣ ಅಧ್ಯಯನವನ್ನು Speleology ಎಂದು ಕರೆಯಲಾಗುತ್ತದೆ. ಕೆಲವೊಂದು ಸಲ Vague ಆಗಿ Caving ಎನ್ನಲಾಗುತ್ತದೆ.



ಒಂದು ಗುಹೆಯ ಸುಂದರ ನೋಟ.

ಗುಹೆಗಳು ರಚನೆಗೊಳ್ಳಲು ಲಕ್ಷಾಂತರ ವರ್ಷಗಳು ತೆಗೆದುಕೊಳ್ಳುತ್ತದೆ. ವಿವಿಧ ರೀತಿಯ ಭೂವೈಜ್ಞಾನಿಕ ಪ್ರಕ್ರಿಯೆಗಳಿಂದ ಗುಹೆಗಳು ರಚನೆಯಾಗುತ್ತವೆ ಮತ್ತು ಅವುಗಳ ಆಕಾರ, ಗಾತ್ರಗಳಲ್ಲಿ ಹಲವು ರೀತಿಯ ವ್ಯತ್ಯಾಸಗಳಿರುತ್ತವೆ. ಇವುಗಳು ರಾಸಾಯನಿಕ ಪ್ರಕ್ರಿಯೆಗಳ ಸಂಯೋಜನೆ, ನೀರಿನಿಂದ ಸವೆತ, tectonic (ಭೂಫಲಕಗಳು ಅಲೆದಾಟ) ಒತ್ತಡಗಳು, ಸೂಕ್ಷ್ಮಜೀವಿಗಳು, ಒತ್ತಡ ಮತ್ತು ವಾತಾವರಣ ಪ್ರಭಾವಗಳಿಂದ ಕೂಡಿರುತ್ತವೆ. ಗುಹೆಯಲ್ಲಿ ದೊರಕುವ ಸಂಚಯನಗಳಿಂದ (ಗಸಿ ಮಣ್ಣು) ಐಸೋಟೋಪಿಕ್ ಡೇಟಿಂಗ್ ತಂತ್ರವನ್ನು ನಡೆಸಿ ಅವುಗಳ ವಯಸ್ಸನ್ನು ತಿಳಿದುಕೊಳ್ಳಬಹುದು. ಮತ್ತು ಅವು ರೂಪುಗೊಂಡ ಕಾಲದ ಪರಿಸ್ಥಿತಿ ಮತ್ತು ಭೂವೈಜ್ಞಾನಿಕ ಘಟನೆಗಳನ್ನೂ ತಿಳಿಯಬಹುದು. ಗುಹೆಯ ಮೇಲಿನ ಶಿಲೆಗಳ ಒತ್ತಡದಿಂದ ಗುಹೆಗಳ ಆಳ ಸಾಧಾರಣವಾಗಿ 10,000 ಅಡಿಗಳಿಂತ ಹೆಚ್ಚು ಇರಲು ಸಾಧ್ಯವಿಲ್ಲ ಎನ್ನಲಾಗಿದೆ. ಗುಹೆಗಳನ್ನು ಹಲವು ವಿಧಗಳಲ್ಲಿ ವಿಭಾಗಿಸಲಾಗಿದೆ.

ಸುಣ್ಣದ ಶಿಲೆಗಳಲ್ಲಿ ಹೆಚ್ಚು ಗುಹೆಗಳು ನಿರ್ಮಾಣವಾಗುತ್ತವೆ. ಕೆಲವು ಕಡೆ ಚಾಕ್, ಡಾಲಮೈಟ್, ಅಮೃತಶಿಲೆ, ಉಪ್ಪು ಮತ್ತು ಜಿಪ್ಸಮ್ ಸೇರಿದಂತೆ ಇತರ ಶಿಲೆಗಳಲ್ಲೂ ಗುಹೆಗಳು ರೂಪುಗೊಳ್ಳುತ್ತವೆ. ನೈಸರ್ಗಿಕ ಆಮ್ಲ ಅಂತರ್ಜಲದ ಮೂಲಕ ಶಿಲೆಗಳ ನೆರಿಕೆ ಬಿರುಕುಗಳ ಮೂಲಕ ಹಾದುಹೋಗುವಾಗ ಕರಗಿ ಬಿರುಕುಗಳು ಮೂಡುತ್ತವೆ. ಅವು ಕಾಲಾಂತರದಲ್ಲಿ ಅದೇ ರೀತಿಯ ನೈಸರ್ಗಿಕ ಕ್ರಿಯೆಗೆ ಒಳಗಾಗಿ ಗುಹೆಗಳಾಗಿ ಪರಿವರ್ತನೆಗೊಳ್ಳುತ್ತವೆ. ಆದರೆ ವಿಶ್ವದಾದ್ಯಂತ ದೊಡ್ಡದಾದ ಗುಹೆಗಳು ಇರುವುದು ಸುಣ್ಣದ ಶಿಲೆಗಳಲ್ಲಿಯೆ. ಮಳೆ ನೀರು + H2CO3 (carbonic acid) ಎರಡೂ ಸೇರಿ ನೈಸರ್ಗಿಕವಾಗಿ ಸಾವಯವ ಆಮ್ಲವನ್ನು ಉತ್ಪತ್ತಿ ಮಾಡುತ್ತವೆ. ಈ ಪ್ರಕ್ರಿಯೆಯಿಂದ ಗುಹೆಗಳ ಒಳಗೆ ಸ್ಟೆಲಾಕ್ಟೈಟ್ಗಳು, ಸ್ಟೆಲಾಗ್ಮೈಟ್ಸ್, ಹೆಲ್ಟೈಟೈಟ್ಗಳು, ಸೋಡಾ ಸ್ಟ್ರಾಗಳು ಮತ್ತು ಕಾಲಮ್ಮುಗಳು ಸೃಷ್ಟಿಯಾಗುತ್ತವೆ.



ಸ್ಟೆಲಾಕ್ಟೈಟ್ಗಳು ಮತ್ತು ಸ್ಟೆಲಾಗ್ಮೈಟ್ಸ್ ಇರುವ ಚಿತ್ರ.

ಗುಹೆಗಳಲ್ಲಿ ಮುಖ್ಯವಾಗಿ ಪ್ರಾಥಮಿಕ ಗುಹೆಗಳು, ಸಮುದ್ರ/ತೀರದ ಗುಹೆಗಳು, ಹಿಮನದಿ ಗುಹೆಗಳು, ಮುರಿತ ಗುಹೆಗಳು, ತಾಲಸ್ ಸೀವ್ ಮತ್ತು ಅಂಚಿಯಾಲಿನ್ ಗುಹೆ ಇತ್ಯಾದಿ ಇರುತ್ತವೆ. ಗುಹೆಗಳು ಪ್ರಪಂಚದಾದ್ಯಂತ ಕಂಡುಬರುತ್ತವೆ. ಆದರೆ ಇದುವರೆಗೂ ಒಟ್ಟಾರೆ ಗುಹೆಗಳ ಒಂದು ಸಣ್ಣ ಭಾಗವನ್ನು ಮಾತ್ರ ಗುಹಾತಜ್ಞರು ಅನ್ವೇಷಿಸಿ ದಾಖಲು ಮಾಡಿದ್ದಾರೆ. ಗುಹೆಗಳ ಬಗ್ಗೆ ಹೆಚ್ಚು ಸಂಶೋಧನೆ ನಡೆಸಿರುವ ದೇಶಗಳೆಂದರೆ ಫ್ರಾನ್ಸ್, ಇಟಲಿ, ಆಸ್ಟ್ರೇಲಿಯಾ, ಯು.ಕೆ, ಯುನೈಟೆಡ್ ಸ್ಟೇಟ್ಸ್ ದೇಶಗಳು. ಇತ್ತೀಚೆಗೆ ಯುರೋಪ್, ಏಷ್ಯಾ, ಉತ್ತರ ಅಮೇರಿಕಾ ಮತ್ತು ಓಷಿಯಾನಿಯಾ ದೇಶಗಳಲ್ಲಿ ಗುಹೆಗಳ ಸಂಶೋಧನೆ ವ್ಯಾಪಕವಾಗಿ ನಡೆಯುತ್ತಿದೆ. ಆದರೆ ದಕ್ಷಿಣ ಅಮೇರಿಕಾ, ಆಫ್ರಿಕಾ ಮತ್ತು ಅಂಟಾರ್ಟಿಕಾದಲ್ಲಿ ತೀರಾ ವಿರಳ ಸಂಶೋಧನೆಗಳು ನಡೆದಿವೆ.

ಉತ್ತರ ಅಮೇರಿಕಾ ಮತ್ತು ಏಷ್ಯಾದಲ್ಲಿ ಗುಹೆಗಳ ಬಗ್ಗೆ ಹೆಚ್ಚಾದ ಸಾಕ್ಷ್ಯಚಿತ್ರಗನ್ನು ಮಾಡಿಲ್ಲ. ಆದರೆ ಮಡಗಾಸ್ಕರ್ ಒಣ ಕಾಡುಗಳು ಮತ್ತು ಬ್ರಜಿಲ್ನ ಭಾಗಗಳಲ್ಲಿ ಅನೇಕ ಸಾಕ್ಷ್ಯಚಿತ್ರಗಳನ್ನು ಮಾಡಿದ ಗುಹೆಗಳು ದೊರಕುತ್ತವೆ. ಚೀನಾದಲ್ಲಿ ವಿಶ್ವದ ಅರ್ಧದಷ್ಟು ಗುಹೆಗಳನ್ನು ಸಂಶೋಧನೆ ನಡೆಸಿದ್ದರೂ (1,000,000 ಚದರ ಕಿಲೋಮೀಟರುಗಳು) ಸಾಕ್ಷ್ಯಚಿತ್ರಗಳನ್ನು ಮಾಡಿರುವ ಗುಹೆಗಳು ತೀರಾ ಕಡಿಮೆ.

❑

ಅಧ್ಯಾಯ-3

- ಯು.ಎಸ್.ನ ಕೆಂಟುಕಿಯಲ್ಲಿರುವ ಮ್ಯಾಮತ್ ಗುಹೆಗಳು ಅತ್ಯಂತ ಹೆಚ್ಚಿನ ಉದ್ದದ ಸಂಕೀರ್ಣವಾದ ಗುಹೆಗಳು. ಸಂಶೋಧನೆ ಮಾಡಿದ ಇವುಗಳ ಒಟ್ಟು ಉದ್ದ 652 ಕಿಲೋಮೀಟರುಗಳು.
- ನೀರಿನ ಕೆಳಗೆ ಸಂಶೋಧನೆ ಮಾಡಿರುವ ಎರಡನೇ ಅತ್ಯಂತ ಉದ್ದದ ಗುಹೆಗಳೆಂದರೆ ಮೆಕ್ಸಿಕೋದ ಯುಕಾಟಾನ್‌ನಲ್ಲಿರುವ ಸಿಸ್ಟೆಮಾ ಸ್ಯಾಕ್ ಆಕ್ಷುನ್ ಗುಹೆಗಳು. ಇವುಗಳ ಒಟ್ಟು ಉದ್ದ 335 ಕಿಲೋಮೀಟರುಗಳು.
- ಅತ್ಯಂತ ಆಳವಾದ – ಅತಿ ಎತ್ತರದ ಪ್ರವೇಶ ದ್ವಾರದಿಂದ ಕೆಳಮಟ್ಟದವರೆಗೆ 2,197 ಮೀಟರುಗಳ ಕೆಳಗಿರುವ ಗುಹೆ ಎಂದರೆ ಜಾರ್ಜಿಯಾದ ಕ್ರುಬೆರಾ ಗುಹೆ. ಎರಡು ಕಿ.ಮೀ.ಗಳ ದೂರದವರಗೂ ಅನ್ವೇಷಣೆ ಮಾಡಿದ ಮೊದಲ ಗುಹೆ

ಇದಾಗಿದೆ. ಒಂದು ಕಿಲೋಮೀಟರ್ ಆಳದವರೆಗೂ ಸಂಶೋಧನೆ ನಡೆಸಿದ ಗುಹೆ ಎಂದರೆ ಫ್ರಾನ್ಸ್‌ನ ಗೌಫ್ರೆ ಬರ್ಗರ್. ಅದೇ ಜಾರ್ಜಿಯಾದಲ್ಲಿರುವ ಇಲ್ಯೂಖಿಯಾ–ಮೆರ್ಖೂನೊಗೊ–ಸ್ನೆಜ್ನ್ಯಾ ಗುಹೆಗಳು, ಮೊದಲ (1,830 ಮೀ) ಮತ್ತು ಎರಡನೇ (5,751 ಮೀ) ಆಳವಾದ ಗುಹೆಗಳಾಗಿವೆ.

- ಜಾರ್ಜಿಯಾದ ಹೊರಗಿರುವ ಆಳವಾದ ಗುಹೆಗಳೆಂದರೆ ಆಸ್ಟ್ರಿಯಾದ ಲ್ಯಾಂಪ್ರೆಚ್ಟೋಫೆನ್ ವೋಗೆಲ್ಸ್‌ಚ್ಟ್ ವೆಗ್ ಷಾಚ್ಟ್. ಇವು 1,623 ಮೀಟರುಗಳ ಆಳ ಇವೆ.

- ಆಳವಾದ ಮತ್ತು ಲಂಬವಾದ ಗುಹೆ ಎಂದರೆ ಸ್ಲೊವೆನಿಯಾದಲ್ಲಿನ Vrtoglavica 603 ಮೀಟರುಗಳು. ಎರಡನೇ ಆಳವಾದ ಮತ್ತು ಲಂಬವಾದ ಗುಹೆಗಳೆಂದರೆ ಇರಾನ್‌ನ ಕೆರ್ಮನ್ಷಾ ಮಸಿಪ್ತ್ನಲ್ಲಿನ ಘರ್–ಎ–ಘಲಾ ಎಂಬ ಗುಹೆಗಳು. ಇವುಗಳ ಆಳ ಮತ್ತು ಲಂಬ 562 ಮೀಟರುಗಳು.

- ನೀರಿನ ಒಳಗಿರುವ ಆಳವಾದ ಮತ್ತು ಸಂಶೋಧನೆ ಮಾಡಿರುವ ಗುಹೆಗಳೆಂದರೆ ಝೆಕ್ ರಿಪಬ್ಲಿಕ್ ಹರಾನಿಸ್ ಅಬಿಸ್ ಗುಹೆಗಳು. ಇವುಗಳ ಆಳ 404 ಮೀಟರುಗಳು.

- ಸುಮಾರು 700 ರಿಂದ 400 ಮೀಟರುಗಳ ಸುತ್ತಳತೆಯೊಂದಿಗೆ 80 ಮೀಟರುಗಳ ಎತ್ತರ ಇರುವ ಚೇಂಬರ್ ಮೇಲೆ ಅಗಾಧ ಬಂಡೆ ಕುಳಿತುಕೊಂಡಿದೆ. ಈ ಚೇಂಬರ್ ಇರುವುದು ಗುನಂಗ್ ಮುಲು ರಾಷ್ಟ್ರೀಯ ಉದ್ಯಾನವನದಲ್ಲಿ. ಇದು ಮಿರಿ, ಸರ್‌ವಾಕ್, ಬೋರ್ನಿಯಾ, ಮಲೇಶಿಯಾದಲ್ಲಿದೆ. ಇದರ ಹತ್ತಿರ ಇರುವ ಸ್ವಚ್ಛ ನೀರಿನ ಗಹೆ ಸಂಕೀರ್ಣದಲ್ಲಿ ಅತಿ ಹೆಚ್ಚು ನೀರು ಹಿಡಿಯುತ್ತದೆ ಎಂದು ಹೇಳಲಾಗುತ್ತದೆ. ಇದರಲ್ಲಿ ಹಿಡಿಯುವ ಒಟ್ಟು ನೀರು 3,800,000 ಘನ ಮೀಟರುಗಳು. ಈ ಗುಹೆಗಳ ಒಳಗಿರುವ ದೊಡ್ಡ ಕೋಣೆ ಫ್ರೆಂಚ್ ಪೈರನೀಸ್ನಲ್ಲಿರುವ ಸಾಲ್ಲೆ ಡೆ ಲಾ ವೆರ್ನಾ ಹಾಲ್ನಷ್ಟು ದೊಡ್ಡದು ಎನ್ನಲಾಗಿದೆ.

- ವಿಯೆಟ್ನಾಮ್ನ ಕ್ವಾಂಗ್ ಬಿನ್ ಪ್ರಾಂತ್ಯದ ನಹಾ–ಕೋ ಬಾಂಗ್ ರಾಷ್ಟ್ರೀಯ ಉದ್ಯಾನವನದಲ್ಲಿರುವ ಸನ್ ಡೊಂಗ್ ಗುಹೆಯಲ್ಲಿ ಹಿಂದೆಂದೂ ಪತ್ತೆಯಾಗಿರದ ಅತಿದೊಡ್ಡ ಹೆದ್ದಾರಿಯಂತಹ ಗುಹೆದಾರಿ ಪತ್ತೆಯಾಗಿದೆ.

ಇದರ ಉದ್ದ 4.6 ಕಿ.ಮೀ.ಗಳು, 80 ಮೀ. ಎತ್ತರ ಮತ್ತು ಅಗಲ; ಕೆಲವು ಕಡೆ 140 ಮೀಟರುಗಳ ಎತ್ತರ ಮತ್ತು ಅಗಲದ ಹೆದ್ದಾರಿ ಇದೆ.

ಗುಹೆಗಳ ಪರಿಸರ ವಿಜ್ಞಾನ



ಗುಹೆಯ ಒಳಗೆ ಶಿಲೆಗಳಿಗೆ ಅಂಟಿಕೊಂಡಿರುವ ಒಂದು ಜಾತಿಯ ಬಾವಲಿಗಳು.

ಗುಹೆಗಳ ಒಳಗೆ ಆಳದ ಕತ್ತಲಲ್ಲಿ ಹೆಚ್ಚು ಜೀವಿಗಳು ಬದುಕಲು ಸಾಧ್ಯವಿಲ್ಲದ ಕಾರಣದಿಂದ ಕೇವಲ ಕೆಲವು ಜಾತಿಯ ಜೀವಿಗಳು ಮಾತ್ರ ಬದುಕಿ ಉಳಿಯುತ್ತವೆ. ಗುಹೆಗಳ ಒಳಗೆ ವಾಸಿಸುವ ಜಾತಿಗೆ ಸೇರಿದ ಜೀವಿಗಳನ್ನು troglobites ಎಂದು ಕರೆಯಲಾಗುತ್ತದೆ. ಇವು ಸಂಪೂರ್ಣವಾಗಿ ಗುಹೆಗಳ ಒಳಗೆಯೇ ಬದುಕುತ್ತವೆ. ಆದರೆ ಮೇಲಿನ ಗುಂಪಿನ ಜೀವಿಗಳು ಇತರೆ ಪರಿಸರಗಳಲ್ಲೂ ಬದುಕುತ್ತವೆ. troglobites ಅಪರೂಪ ಮತ್ತು ಅತ್ಯಂತ ಅಸಾಮಾನ್ಯ ಜೀವಿಗಳು. ಇವುಗಳ ಹೆಚ್ಚು ಜೀವಿಗಳು ಕತ್ತಲಲ್ಲಿ ಇದ್ದೂಇದ್ದು ಕಣ್ಣು ನೋಟವನ್ನು ಕಳೆದುಕೊಂಡಿರುತ್ತವೆ.

ಅಳಿವಿನ ಅಂಚಿನಲ್ಲಿರುವ ಅಲಬಾಮಾ ಗುಹೆಗಳಲ್ಲಿ ಸೀಗಡಿಗಳಂತಹ troglobites ಜೀವಿಗಳು ನೀರಿನ ಒಳಗೆ ಬದುಕು ನಡೆಸುತ್ತಿರುತ್ತವೆ. ಗುಹೆಗಳ ನೀರಿನಲ್ಲಿ ಬದುಕುವ ಜೀವಿಗಳು ಪೌಷ್ಟಿಕ ದ್ರವ್ಯಗಳನ್ನು ಗುಹೆಗಳಲ್ಲಿ ಬದುಕುವ ಬಾವಲಿಗಳು ಮತ್ತು ಇತರೆ ಜೀವಿಗಳಿಂದ ಬೀಳುವ ಮಲದಿಂದ ಪಡೆಯುತ್ತವೆ. ಗುಹೆಗಳ ಒಳಗೆ ನೀರಿನಲ್ಲಿ ಬದುಕುವ ಇತರೆ troglobites ಜೀವಿಗಳೆಂದರೆ ಗುಹೆ ಮೀನುಗಳು, ಮತ್ತು ಸಲಾಮಂಡರ್ ಜಾತಿಗೆ ಸೇರಿದ ಕೆಲವು ಜೀವಿಗಳು.

ಗುಹೆಗಳಲ್ಲಿ troglophiles ಗುಂಪಿಗೆ ಸೇರಿದ ಕೀಟಗಳಾದ ಒಲಿಗಘೋರಾರಾ ಸ್ಕೋಟೆಟಿಗಳಂತಹವು ವಾಸಿಸುತ್ತವೆ. ಇವು ಕೇವಲ 1.7 ಮಿಲಿಮೀಟರ್ ಉದ್ದವಿದ್ದು ಕೆಲವು ಗುಹೆಗಳಲ್ಲಿ ಹೆಚ್ಚಾಗಿ ಕಾಣಿಸುತ್ತವೆ. ಬೂದು ಬಾವಲಿಗಳು, ಮೆಕ್ಸಿಕನ್ (ಬಾಲಗಳುಳ್ಳ) ಬಾವಲಿಗಳು trogloxenes ಜಾತಿಗೆ ಸೇರಿದವು. ಇವು ಗುಹೆಗಳ ಹೊರಗೆ ರಾತ್ರಿ ಹೊತ್ತು ತಿಂದು ಬರುತ್ತವೆ. ಕೆಲವು ಜಾತಿಯ ಕ್ರಿಮಿಕೀಟಗಳನ್ನು trogloxenes ಸೇರಿಸಲಾಗಿದೆ. ಕಾರಣ ಅವು ಹಗಲು

ಗುಹೆಗಳಲ್ಲಿ ಕಾಲ ಕಳೆದರೆ ರಾತ್ರಿ ಹೊತ್ತು ಹೊರಗೆ ಕಾಲ ಕಳೆಯುತ್ತವೆ.



ಗುಹೆಗಳ ಒಳಗೆ ಬಿಸಲೇ ಕಾಣದೆ ಬಿಳಚಿಕೊಂಡಿರುವ ಜೀವಿಗಳು.

ಗುಹೆಗಳ ಪರಿಸರ ವ್ಯವಸ್ಥೆ ದುರ್ಬಲವಾದ ಕಾರಣ ಮತ್ತು ಗುಹೆಗಳು ಪರಸ್ಪರ ಬೇರ್ಪಟ್ಟಿರುವುದರಿಂದ ಗುಹೆ ಜೀವಿಗಳು ಅಳಿವಿನ ಅಂಚಿಗೆ ನೂಕಲ್ಪಟ್ಟಿವೆ. ಇವುಗಳಲ್ಲಿ ಮುಖ್ಯವಾಗಿ ಟೂತ್ ಕೇವ್ ಸ್ಪೈಡರ್, ಲಿಪ್ಪಿಸ್ಟಿಯಸ್ ಟ್ರಾಪ್ಡೋರ್ ಜೇಡ ಮತ್ತು ಬೂದ ಬಣ್ಣದ ಬಾವಲಿಗಳು ಸೇರಿವೆ. ಮನುಷ್ಯನು ಸೇರಿದಂತೆ ನೆಲದ ಮೇಲೆ ಬದುಕುವ ಅನೇಕ ಪ್ರಾಣಿಗಳು ಗುಹೆಗಳನ್ನು ಪ್ರವೇಶಿಸುತ್ತವೆ. ಇದೆಲ್ಲ ಕೇವಲ ಕಡಿಮೆ ಅವಧಿಯ ಪ್ರವೇಶವಾಗಿರುತ್ತದೆ. ಗುಹೆಗಳ ದ್ವಾರಗಳಲ್ಲಿ ಸಾಮಾನ್ಯವಾಗಿ ಕೆಲವು ಸಸ್ಯಗಳು ಬೆಳೆದು ನಿಂತಿರುತ್ತವೆ. ಉದಾಃ ಪೂರ್ವ ಸಮಶೀತೋಷ್ಣ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಗುಹೆಗಳ ದ್ವಾರಗಳಲ್ಲಿ ಬುಲ್ಲೆಟ್ ಫೆರ್ನ್, ಸಿಸ್ಟೋಪ್ಟೆರಿಸ್ ಬಲ್ಬಿಫೆರಾ ಬೆಳೆದಿರುತ್ತದೆ.

❑

ಪುರಾತತ್ವ ಮತ್ತು ಸಾಂಸ್ಕೃತಿಕ ಬೆಳವಣಿಗೆಗಳು

ಅಧ್ಯಾಯ-4

ಇತಿಹಾಸದ ಉದ್ದಕ್ಕೂ ಪ್ರಾಚೀನ ಜನರು ತಮ್ಮ ರಕ್ಷಣೆಗಾಗಿ ಗುಹೆಗಳನ್ನು ಬಳಸಿಕೊಂಡಿದ್ದಾರೆ. ದಕ್ಷಿಣ ಆಫ್ರಿಕಾದ ಕ್ರುಗೆರ್ಸ್ಡಾರ್ಪ್ ಮತ್ತು ಮೊಕೊಪೇನ್ ಬಳಿಯ ಸರಣಿ ಗುಹೆಗಳಲ್ಲಿ ಮೊಟ್ಟಮೊದಲ ಮಾನವನ ಪಳಯುಳಿಕೆಗಳು ದೊರಕಿವೆ. ಸ್ಟರ್ಕ್ಫೋಂಟೈನ್, ಸ್ವಾರ್ಟ್ರಾನ್ಸ್, ಕ್ರೊಮ್ಡ್ರಾಯ್ ಬಿ, ಡ್ರೈಲೊನೆನ್, ಮಲಾಪಾ ಕೋಪರ್ಸ್ ಡಿ, ಗ್ಲಾಡಿಸ್ವಾಲ್, ಗೊಂಡೋಲಿನ್, ಮತ್ತು ಮಕಾಪನ್ಸ್ಗಟ್ನ ಗುಹೆಗಳಲ್ಲಿ 3 ರಿಂದ 1 ದಶಲಕ್ಷ ವರ್ಷಗಳ ಮಧ್ಯದ ಮಾನವ ಪಳಯುಳಿಕೆಗಳು ದೊರಕಿವೆ. ಇವುಗಳಲ್ಲಿ ಆಸ್ಟ್ರೇಲಿಪಿಥೆಕಸ್ ಆಫ್ರಿಕಾನಸ್, ಆಸ್ಟ್ರೇಲಿಪಿಥೆಕಸ್ ಸೆಡಿಬಾ, ಪ್ಯಾರಾನ್ಥ್ರೋಪಸ್ ರೋಬಸ್ಟಸ್ ಜಾತಿಗೆ ಸೇರಿದವು. ಈ ಪ್ರಾಚೀನ ಜನರು ಮೂಲವಾಗಿ ಇಲ್ಲಿಯೇ ಇದ್ದರೆ ಅಥವಾ ಮನುಷ್ಯನನ್ನು ತಿನ್ನುತ್ತಿದ್ದ ಪ್ರಾಣಿಗಳು ಇವರನ್ನು ಗುಹೆಗಳ ಒಳಕ್ಕೆ ತಂದು ತಿನ್ನುತ್ತಿದ್ದವೇ



ಆಫ್ರಿಕಾ ಖಂಡದ ಚಾಡ್ ದೇಶದ ಎನ್ನಡಿ ಮರುಭೂಮಿಯ ಗುಹೆಯಲ್ಲಿನ ಚಿತ್ರಕಲೆ.

ಎನ್ನುವ ಅನುಮಾನಗಳನ್ನು ತಜ್ಞರು ಎಬ್ಬಿಸಿದರು.

ಆಫ್ರಿಕಾದಲ್ಲಿ ಕಂಡುಬಂದ ಮೊದಲ ಮಾನವ ವಿಶ್ವಸನೀಯ ಟೌಂಗ್ ಚೈಲ್ಡ್ ಕ್ರಿ.ಶ. 1924ರಲ್ಲಿ ಸಿಕ್ಕಿದಾಗ ಅದು ಅದೇ ಗುಹೆಯಲ್ಲಿ ವಾಸಿಸುತ್ತಿದ್ದ ಮಾನವನ ಪಳಯುಳಿಕೆ ಎಂದು ಬಹಳ ವರ್ಷಗಳ ಕಾಲದವರೆಗೂ ತಿಳಿಯಲಾಯಿತು. ಆದರೆ ಇತ್ತೀಚೆಗೆ ಅದು ಒಂದು ರಣ ಹದ್ದು ಗುಹೆಯ ಒಳಗೆ ತಂದು ಹಾಕಿರುವುದಾಗಿ ನಿರ್ಧಾರ ಮಾಡಲಾಗಿದೆ. ಆದರೆ ವಿಷಯ ಇನ್ನೂ ಚರ್ಚೆಯಲ್ಲೇ ಮುಂದುವರಿದಿದೆ. ಒಂದು ದಶಲಕ್ಷ ವರ್ಷಗಳ ಹಿಂದಿನಿಂದಲೇ ವಿಶ್ವದ ನಾನಾ ಭಾಗಗಳ ಗುಹೆಗಳಲ್ಲಿ ಆದಿಮಾನವನು ಜೀವಿಸಿರುವ ಸಾಕ್ಷ್ಯಾಧಾರಗಳು ದೊರಕಿವೆ. ಚೀನಾದ ಝೌಕೌಡಿನ್ನಲ್ಲಿ ದೊರಕಿದ ಹೋಮೋ ಎರೆಕ್ಟಸ್, ದಕ್ಷಿಣ ಆಫ್ರಿಕಾದ ಗುಹೆ ಹೆರ್ಥ್ಸ್‌ನಲ್ಲಿ ದೊರಕಿದ ಹೋಮೋ ರೋಡಿಯೆನ್ಸಿಸ್, ಯುರೋಪಿನ ಅಟೊಪುರ್ಕಾದ ಸ್ಥಳದಲ್ಲಿ ಪುರಾತತ್ತ್ವ ಶಾಸ್ತ್ರ ನಡೆಸಿದ ಉತ್ಖನನದಲ್ಲಿ ಹೋಮೋ ನೆಂಡರ್ಟೆಲೆನ್ಸಿಸ್ ಮತ್ತು ಹೋಮೋ ಹೈಡೆಲ್ಬರ್ಗ್ನೆಸಿಸ್ ಮಾನವ ಪ್ರಬೇಧಗಳು ದೊರಕಿವೆ. ಇಂಡೊನೇಷ್ಯಾದಲ್ಲಿ ಹೋಮೋ ಫ್ಲೋರೋಸಿನ್ಸಿಸ್ ಮತ್ತು ಸೈಬಿರಿಯಾದಲ್ಲಿ ಡೆನಿಸ್ವನ್ಸ್ ಪ್ರಬೇಧಗಳ ಪಳಯುಳಿಕೆಗಳು ದೊರಕಿವೆ.

ದಕ್ಷಿಣ ಆಫ್ರಿಕಾದಲ್ಲಿ ಆರಂಭಿಕ ಆಧುನಿಕ ಮಾನವನು ನಿಯಮಿತವಾಗಿ 180,000 ವರ್ಷಗಳ ಹಿಂದೆ ಮೊದಲ ಬಾರಿಗೆ ಸಮುದ್ರದ ಮೇಲೆ ಈಜಲು ಕಲಿತಾಗ ಸಮುದ್ರ ಪಕ್ಕದಲ್ಲಿರುವ ಗುಹೆಗಳನ್ನು ಆಶ್ರಯವಾಗಿ ಪಡೆದಿದ್ದನು (Marean et al., 2007; Nature). ಪಿನ್ನಿಕಲ್ ಪಾಯಿಂಟ್ನಲ್ಲಿ ಪಿಪಿ13ಬಿ ಎನ್ನುವುದು ಅತ್ಯಂತ ಹಳೆಯ ಮನುಷ್ಯನಿದ್ದ ಸ್ಥಳವಾಗಿದೆ. ಇದು ದಕ್ಷಿಣ ಆಫ್ರಿಕಾದ, ದಕ್ಷಿಣ ಕರಾವಳಿಯ ಮೊಸ್ಸೆಲ್ ಬೇ ಯಲ್ಲಿರುವ 2000 ಸರಣಿ ಗುಹೆಗಳ ಉತ್ಖನನದಲ್ಲಿ ಮಧ್ಯ ಸ್ಟೋನ್ ಏಜ್ (1,70,000 ರಿಂದ 40,000 ವರ್ಷಗಳ ನಡುವೆ) ಮನುಷ್ಯನ ವಾಸಸ್ಥಳವಾಗಿದೆ.

ಇಲ್ಲಿಂದ ಆದಿಮಾನವನು ಅತ್ಯಂತ ತ್ವರಿತ ವೇಗದಲ್ಲಿ 60,000 ದಿಂದ 50,000 ವರ್ಷಗಳ ಮಧ್ಯೆ ಆಫ್ರಿಕಾ ಪ್ರದೇಶದಿಂದ ಭೂಮಿಯ ಇತರ ಭಾಗಗಳಿಗೆ ವಿಶೇಷವಾಗಿ ಆಸ್ಟ್ರೇಲಿಯಾ ಕಡೆಗೆ ವಲಸೆಹೋಗಿ ವಸಾಹತೀಕರಣವನ್ನು ಸ್ಥಾಪಿಸಿಕೊಂಡನು. ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ ಮತ್ತು ಯುರೋಪಿನಾದ್ಯಂತ ಆರಂಭಿಕ ಆಧುನಿಕ ಮಾನವನು, ಗುಹೆಗಳು ಮತ್ತು ಕಲ್ಲಿನ ಶಿಬಿರಗಳನ್ನು (ರಾಕ್ ಆಟ್ರ್ಗಗಿ) ವಸತಿಗಳನ್ನಾಗಿ ನಿರ್ಮಾಣ ಮಾಡಿಕೊಂಡನು. ಉದಾಃ Giants Castle ಕಟ್ಟಿಕೊಂಡನು. ಚೀನಾದ ಯಾಡೋಂಗ್ನಂತಹ ಗುಹೆಗಳನ್ನು ಆಶ್ರಯಕ್ಕಾಗಿ ಬಳಸಿಕೊಂಡನು. ಇತರ ಗುಹೆಗಳನ್ನು ರಾಕ್ ಕಟ್ ಸಮಾಧಿಗಳಿಗಾಗಿ ಉಪಯೋಗಿಸಿಕೊಳ್ಳಲಾಯಿತು. ಬೌದ್ಧರು ನಿರ್ಮಿಸಿದ ಗುಹೆಗಳಾದ ಅಜಂತಾ ಎಲ್ಲೋರಾ ಗುಹೆಗಳನ್ನು ಇಲ್ಲಿ ಉದಾಹರಿಸಬಹುದು. ಈ ಗುಹೆಗಳಲ್ಲಿ ಆದಿಮಾನವನು ಇದ್ದನೋ ಇಲ್ಲವೋ ತಿಳಿದುಬಂದಿಲ್ಲ. ಇನ್ನೊಂದು ಉದಾಹರಣೆ ಎಂದರೆ ಚೀನಾದ ಪರಿಚಿತ ಪವಿತ್ರ ಗುಹೆಗಳಾದ China's Cave of a Thousand Buddhas ಮತ್ತು ಗ್ರೀಸ್‌ನ the sacred caves of Crete.


ಗುಹೆ ಮಾನವನನ್ನು ಪೇಲಿಯೋಲಿಥಿಕ್ ಯುಗದಲ್ಲಿ ಸ್ಟಾಕ್ ಕ್ಯಾರೆಕ್ಟರ್ ಪ್ರತಿನಿಧಿ ಎನ್ನಲಾಯಿತು. 20ನೇ ಶತಮಾನದ ಆರಂಭದಲ್ಲಿ ನಿಯಾಂಡರ್ತಾಲ್ ಮಾನವನನ್ನು ಸಿಮಿಯಾನ್ ಅಥವಾ ಏಪ್ ರೀತಿಯ ಮಾನವನೆಂದು ಹೇಳಲಾಯಿತು. ಪ್ಲಿಸ್ಟೋಸೀನ್ನಲ್ಲಿ ಮಾನವ ವಿಕಾಸದ ಜ್ಞಾನವು ಹೆಚ್ಚು ವಿವರವಾದದ್ದಾಗಿದ್ದರೂ, ಇದು ಪ್ರಾಚೀನ ಮಾನವ ಮತ್ತು ಪ್ರಾಚೀನ ಆಧುನಿಕ ಮಾನವನ ಗುಣಲಕ್ಷಣಗಳನ್ನು ಆಕರ್ಷನೀಯವಾಗಿ ಸಂಯೋಜಿಸುತ್ತದೆಯಾದರೂ ಸ್ಟಾಕ್ ಪಾತ್ರವು ಮುಂದುವರಿದಿತ್ತು. ಕೇವ್ ಮ್ಯಾನ್ ಅಥವಾ ಗುಹಾನಿವಾಸಿ ಎಂಬ ಪದವು ಈಗ ಬಳಕೆಯಲ್ಲಿಲ್ಲದ ಹೋಮೋ ಟ್ರೋಗ್ಲೋಡೈಟ್ಸ್ನಲ್ಲಿ ಅದರ ವರ್ಗೀಕರಣದ ಸಮಾನತೆಯನ್ನು ಹೊಂದಿದೆ (cave-dwelling man, Linnaeus 1758).

ಗುಹೆಗಳಲ್ಲಿ ಮಾನವನ ಇತಿಹಾಸ ಮತ್ತು ಚಟುವಟಿಕೆಗಳು

ಗುಹೆ ಮಾನವನು ಶಾಗ್ಗಿ ಪ್ರಾಣಿಗಳ ತೊಗಲುಗಳನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಮತ್ತು ಕೊನೆಯ ಗ್ಲೇಶಿಯಲ್ ಅವಧಿಯಲ್ಲಿ ಆಧುನಿಕ ಮನುಷ್ಯರಂತೆ

ಗುಹೆ ಚಿತ್ರಕಲೆಯನ್ನು ಚಿತ್ರಿಸಿರುವುದು ಕಾಣಿಸುತ್ತದೆ. ಅನುವಂಶಿಕರಾಗಿ ಅವರು ಏಕಕಾಲದಲ್ಲಿ ಶಿಲಾ ಆಯುಧಗಳು ಅಥವಾ ಜಾನುವಾರುಗಳ ಮೂಳೆಗಳನ್ನು ಬುದ್ಧಿವಂತಿಕೆ ಇಲ್ಲದ, ಆದರೆ ಆಕ್ರಮಣಕಾರಿಯಾಗಿ ಶಸ್ತ್ರಸಜ್ಜಿತರಾಗಿರುವುದನ್ನು ತೋರಿಸುತ್ತದೆ. ಹೋಮೋಸೇಪಿಯನ್ಸ್ ಪ್ರಭೇದಗಳು ಹೊರಹೊಮ್ಮುವ ಮುಂಚೆ 66 ದಶಲಕ್ಷ ವರ್ಷಗಳ ಹಿಂದೆ ಕ್ರಿಟೇಷಿಯಸ್ ಅವಧಿಯ ಅಂತ್ಯದಲ್ಲಿ ಏವಿಯನ್ (ಹಾರಾಡುವ) ಡೈನೋಸಾರುಗಳು ಭೂಮಿಯಿಂದ ಅಳಿಸಿಹೋದವು.

ಗುಹೆಗಳಲ್ಲಿ ಗುಹೆ ಮಾನವರು ರಚಿಸಿದ ಚಿತ್ರಗಳು ಯುರೋಪ್ನ ಸ್ಟೋನ್ ಏಜ್ ಸಂಸ್ಕೃತಿಯಾಗಿ ಇಂದಿಗೂ ಗುಹೆಗಳಲ್ಲಿ ಉಳಿದುಕೊಂಡಿವೆ. ಈ ಚಿತ್ರಕಲೆ ಗುಹೆ ಮಾನವರ ಆಶ್ರಯದ ಸೂಚನೆಯ ಜೊತೆಗೆ ಸಾವಿರಾರು ವರ್ಷಗಳು ಕಾಲ ಸಂರಕ್ಷಣೆಯಾಗಿ ಉಳಿದುಕೊಂಡಿದೆ. ಭೂಮಿಯ ಮೇಲೆ ಕೊನೆಯದಾಗಿ ಕಾಣಿಸಿಕೊಂಡ ಗ್ಲೇಶಿಯಲ್ (ಹಿಮಪಾತ) ಅವಧಿಯವರೆಗೂ ಬಹುತೇಕ ಹೋಮಿನಿನ್ಗಳು ಗುಹೆಗಳಲ್ಲಿ ವಾಸವಾಗಿರಲಿಲ್ಲ ಎನ್ನಲಾಗಿದೆ. ಅನಂತರ ಗುಹೆ ಮಾನವನು ಅಲೆಮಾರಿ ಬೇಟೆಗಾರನಾಗಿ ಡೇರೆಗಳು ಮತ್ತು ಮರದ ಗುಡಿಸಿಲುಗಳಲ್ಲಿ ಕಾಲ ಕಳೆಯುತ್ತಿದ್ದನು. ಅಂದಿನ ಸಮಾಜಗಳು ಅನೇಕ ಆಧುನಿಕ ಸ್ಥಳೀಯ ಬುಡಕಟ್ಟು ಜನಾಂಗಗಳಿಗೆ ಹೋಲುತ್ತಿದ್ದವು. ಇಸ್ರೇಲ್ನ ಮೌಂಟ್ ಕಾರ್ಮೆಲ್ನಲ್ಲಿ ಕೆಲವು ಗುಹೆ ನಿವಾಸಿಗಳಿದ್ದರು ಎನ್ನಲಾಗಿದೆ.



ಆದಿಮಾನವ ಗುಹೆಗಳ ಒಳಗೆ ಪ್ರಾಣಿಗಳನ್ನು ಬೇಟೆಯಾಡುತ್ತಿರುವುದನ್ನು ಚಿತ್ರಿಸಿರುವುದು.

ರೂಢಿ ಮಾದರಿಯ ಗುಹೆ ಮಾನವನು ಸಾಂಪ್ರದಾಯಿಕವಾಗಿ ಪ್ರಾಣಿಗಳ ಚರ್ಮದಿಂದ ತಯಾರಿಸಿದ ಹೊಗೆ ಬಣ್ಣದ ಉಡುಪನ್ನು ಒಂದು ಕಡೆ ಭುಜದ ಮೇಲೆ ಪಟ್ಟಿಯಾಗಿ ಧರಿಸಿರುತ್ತಿದ್ದನು. ಇನ್ನೊಂದು ಭುಜದ ಮೇಲೆ ದೊಡ್ಡ ಗಾತ್ರದ ಕ್ಲಬ್ಬು (ಆಯಧ) ಗಳನ್ನು ಶಂಕುವಿನಾಕಾರದಲ್ಲಿ ಹೊತ್ತುಕೊಂಡಿರುವ ಹಾಗೆ ಚಿತ್ರಿಸಲಾಗಿದೆ. ಅವು ಉಗ್ ಮತ್ತು ಝೊಗ್ನಂತಹ (Ugg and Zog)



1992ರಲ್ಲಿ ನೈಋತ್ಯ ಫ್ರಾನ್ಸ್‌ನಲ್ಲಿ ಒಂದು ಗುಹೆಯಲ್ಲಿ ಈ ರೀತಿಯ ರಚನೆಗಳು ಪತ್ತೆಯಾದವು.

ಗುರುಗುಟ್ಟುವ ಹೆಸರುಗಳನ್ನು ಹೊಂದಿವೆ.

ಗುಹೆ ಮಾನವನಂತೆ ಹೆರಾಲ್ಡಿಕ್ ಕಾಡು ಮನುಷ್ಯನು ನೂರಾರು ವರ್ಷಗಳ ಕಾಲ ಯುರೋಪ್ ಮತ್ತು ಆಫ್ರಿಕನ್ ಪ್ರತಿಮಾ ಶಾಸ್ತ್ರದಲ್ಲಿ ಕಂಡು ಬಂದಿದ್ದಾನೆ. ಮಧ್ಯಕಾಲೀನ ಯುಗದಲ್ಲಿ ಈ ಜೀವಿಗಳನ್ನು ಸಾಮಾನ್ಯವಾಗಿ ಕಲೆ ಮತ್ತು ಸಾಹಿತ್ಯದಲ್ಲಿ, ಮುಖದಲ್ಲಿ ಗಡ್ಡ ಮತ್ತು ಮೈತುಂಬಾ ಕೂದಲೊಂದಿಗೆ ಕೈಗಳಲ್ಲಿ ಆಯುಧಗಳನ್ನು ಹಿಡಿದುಕೊಂಡಂತೆ ಚಿತ್ರಿಸಲಾಗಿದೆ. ಇವರೆಲ್ಲ ಗುಹೆಗಳಲ್ಲಿ ವಾಸಿಸುತ್ತಿರುವುದಾಗಿ ಈ ಚಿತ್ರಗಳು ತೋರಿಸುತ್ತವೆ. ಕಾಡುಮನುಷ್ಯನು ನಾಗರಿಕತೆಯ ಹೊರಗೆ ವಾಸಿಸುತ್ತಿರುವಂತೆ ತೋರಿಸಲಾಗಿದೆ. ಈ ಕಾರಣದಿಂದ ಇವರು ಪ್ರಾಣಿಗಳೇ ಅಥವಾ ಮನುಷ್ಯರೇ ಎಂಬ ಚರ್ಚೆ ನಡೆಯುತ್ತಲೇ ಇದೆ.

ಸರ್ ಆರ್ಥರ್ ಕೊನನ್ ಡೋಯ್ಲರರ ದಿ ಲಾಸ್ಟ್ ವರ್ಲ್ಡ್ (1912)ನಲ್ಲಿ ಏಪ್-ಮೆನ್ ಆಧುನಿಕ ಮಾನವರ ಜೊತೆಗೆ ಹೋರಾಟ ನಡೆಸಿದಂತೆ ಚಿತ್ರಿಸಲಾಗಿದೆ. ಎಡ್ಗರ್ ರೈಸ್ ಬರೋಸ್‌ರ ದಿ ಲ್ಯಾಂಡ್ ದಟ್ ಟೈಮ್ ಫಾರ್ಗಾಟ್ (1918) ಕೃತಿಯಲ್ಲಿ ಇದನ್ನೇ ಅಳವಡಿಸಿಕೊಂಡಿದ್ದಾರೆ. ಗುಹೆ ಮಾನವನ ಬಗ್ಗೆ ಅನೇಕ ಪ್ರಕಾರದ ಸಿನಿಮಾಗಳು ಬಂದಿವೆ. ಡಿ.ಡಬ್ಲೂ. ಗ್ರಿಫಿತ್‌ರ ಮ್ಯಾನ್ಸ್ ಜೆನೆಸಿಸ್ (1912) ವಿಶಿಷ್ಟವಾದದ್ದು; ಚಾರ್ಲ್ಸ್ ಚಾಪ್ಲಿನ್ ಅವರ ವಿಡಂಬನಾತ್ಮಕ ಟೇಕ್ ಹಿಸ್ ಪ್ರಿಹಿಸ್ಟರಿಕ್ ಪಾಸ್ಟ್ (1914), ಬ್ರೂಟ್ ಫೋರ್ಸ್ (1914), ದಿ ಕೇವ್ ಮ್ಯಾನ್ (1912), ಮತ್ತು ಕೇವ್ ಮ್ಯಾನ್ (1934). ಗ್ರಿಫಿತ್ನ ಪಾತ್ರಗಳು ವಿವರಣೆಗಳಿಂದ ಮಾತಾಡುವುದಿಲ್ಲ, ಆದರೆ ಶಸ್ತ್ರಾಸ್ತ್ರಗಳನ್ನು ಮತ್ತು ಬಡಿಗೆಗಳನ್ನು ಹಿಡಿದು ಹೊಡೆದಾಡುತ್ತವೆ. ಗುಹೆ ಮಾನವನು ಡೈನೋಸಾರ್ಗಳೊಂದಿಗೆ ಹೋರಾಡುವ ಟಾರ್ಜಾನ್ ಮನುಷ್ಯನಂತೆ ಕಾಣಿಸಿಕೊಳ್ಳುತ್ತಾನೆ.

ಡಿ.ಡಬ್ಲ್ಯು. ಗ್ರಿಫಿತ್ಸ್ ಬ್ರೂಟ್ ಫೋರ್ಸ್‌ರ ಮೂಕ ಚಿತ್ರ 1914ರಲ್ಲಿ

ಬಿಡುಗಡೆಯಾದ ಗುಹೆಮಾನವ ಮತ್ತು ಡೈನೋಸಾರ್ಗಳಿರುವ ಮೊದಲ ಚಿತ್ರ. ಇತ್ತೀಚಿನ ಉದಾಹರಣೆಗಳೆಂದರೆ ಕಾಮಿಕ್ ಸ್ಟ್ರಿಪ್ ಬಿ.ಸಿ ಮತ್ತು ಫ್ಲಿಂಟ್ಸ್ಟೋನ್ ಅವರ ದೂರದರ್ಶನದ ಸರಣಿ. ಡೈನೋಸಾರ್ಗಳೊಂದಿನ ಗುಹೆಮಾನವ ಜೊತೆಗಿನ ಚಿತ್ರಗಳು ಅನದಿಕೃತ ಸಂಯೋಜನೆಯ ಹಾಸ್ಯಮಯ ಚಿತ್ರಗಳಂತೆ ತೋರುತ್ತವೆ. ಈಗೀಗಂತು ಅಧಿವೇಷನ ತಾಂತ್ರಿಕತೆ ಬಂದ ಮೇಲೆ ಊಹಿಸಲಾರದ ಪ್ರಾಣಿಗಳು – ರೋಬೋಟ್ಗಳು ಭೂಮಿ–ಆಕಾಶ, ಅನ್ಯಗ್ರಹ ಜೀವಿಗಳ ಚಿತ್ರಗಳು ಬರುತ್ತಿವೆ.

❑

ಗುಹೆ ಮಾನವನ ವೈಜ್ಞಾನಿಕ ಹೆಜ್ಜೆಗಳು - ಪೆಕ್ಕಿಂಗ್ ಮ್ಯಾನ್ ಗುಹೆಗಳು

ಅಧ್ಯಾಯ-5

ಈ ಲೇಖನದ ಶೀರ್ಷಿಕೆ ನೋಡುವ ನಿಮಗೆ ಸ್ವಲ್ಪ ಆಶ್ಚರ್ಯವಾದರೂ ಆಗಬಹುದು. ಈ ಲೇಖನದಿಂದ ನಿಮಗೆ ಗುಹೆಗಳ ಬಗ್ಗೆ ಇನ್ನಷ್ಟು ಅರ್ಥ ಮಾಡಿಕೊಳ್ಳಲು ಸಹಾಯಕವಾಗುತ್ತದೆ. ಗುಹೆಗಳು ಮತ್ತು ಮಾನವನ ಮಧ್ಯದ ಸಂಬಂಧಗಳು ಮಾನವನ ವಿಕಾಸದಲ್ಲಿ ಅತಿ ಮುಖ್ಯ ಘಟ್ಟವಾಗಿದೆ. ನೈಸರ್ಗಿಕ ಗುಹೆಗಳ ಜೊತೆಗೆ ಪ್ರಾಚೀನ ಅಥವಾ ಆದಿಮಾನವನ ಬದುಕು ಹೇಗೆ ವಿಕಾಸಗೊಳ್ಳುತ್ತಾ ಹೋಯಿತು ಎನ್ನುವುದನ್ನು ನೀವು ಇಲ್ಲಿ ಕಾಣಬಹುದು.

ಇದಕ್ಕೆ ಉದಾಹರಣೆ ಎಂದರೆ ಚೀನಾದ ಪೆಕ್ಕಿಂಗ್ ಮ್ಯಾನ್ ಗುಹೆಗಳು. ಈ ಗುಹೆಗಳನ್ನು ನೋಡುವ ಅವಕಾಶ ನನಗೆ ದೊರಕಿದ್ದು 2008ರಲ್ಲಿ. ಭಾರತ ಸರ್ಕಾರ ನನ್ನನ್ನ ನಮ್ಮ ಇಲಾಖೆಯ ಮೂಲಕ ಚೀನಾ ದೇಶಕ್ಕೆ ಒಂದು ತಿಂಗಳು ಕಾಲ ರಾಸಾಯನಿಕ ಧಾತುಗಳ ತರಬೇತಿಗಾಗಿ ಕಳುಹಿಸಿಕೊಟ್ಟಿತ್ತು. ಬೀಜಿಂಗ್

ಇನ್ಸ್ಟಿಟ್ಯೂಟ್‌ನಿಂದ 26.12.2008 ಬೆಳಿಗ್ಗೆ ನಮ್ಮ ತಂಡವನ್ನು ಪೆಕ್ಕಿಂಗ್ ಮ್ಯಾನ್ ಗುಹೆಗಳ ಕಡೆಗೆ ಕರೆದುಕೊಂಡು ಹೊರಟಿತ್ತು. ಥಾಯ್ ಗುಹೆಗಳನ್ನು ತಿಳಿದುಕೊಳ್ಳುವುದಕ್ಕಿಂತ ಮುಂಚೆ ಗುಹೆಗಳು ಮನುಷ್ಯನಿಗೆ ಯಾವಯಾವ ರೀತಿಯಲ್ಲಿ ಸಹಾಯಕವಾಗಿದ್ದವು? ಮನುಷ್ಯನ ಸಾಂಸ್ಕೃತಿಗೆ ಬೆಳವಣಿಗೆಗೆ ಗುಹೆಗಳ ಕೊಡುಗೆ ಏನು ಎನ್ನುವುದನ್ನು ಈ ಚೀನಾ ಗುಹೆಗಳ ಮೂಲಕ ತಿಳಿದುಕೊಳ್ಳುವ ಸಾಧ್ಯತೆಗಳಿರುವುದರಿಂದ ಈ ವಿಚಾರವನ್ನು ಇಲ್ಲಿ ಸೇರಿಸಲಾಗಿದೆ. ಇದರಿಂದ ಗುಹೆಗಳ ಬಗ್ಗೆ ನಿಮಗೊಂದು ನಿಜವಾದ ವೈಜ್ಞಾನಿಕ ಚಿತ್ರಣ ದೊರಕುತ್ತದೆ.



ಪೆಕ್ಕಿಂಗ್ ಮ್ಯಾನ್ ಗುಹೆಗಳ ಮುಂದೆ ಇರುವ ಪೆಕ್ಕಿಂಗ್ ಮ್ಯಾನ್ ಪ್ರತಿಮೆಯ ಮುಂದೆ ಲೇಖಕ.

ಆ ದಿನ ನಾವು ಬೀಜಿಂಗ್ನ ನೈಋತ್ಯಕ್ಕೆ 50 ಕಿ.ಮೀ.ಗಳ ದೂರದಲ್ಲಿರುವ ಪೆಕ್ಕಿಂಗ್ ಮ್ಯಾನ್ ಎಂಬ ಗುಹೆ ಮಾನವರು ಜೀವಿಸುತ್ತಿದ್ದ ಜೊಕೌಡಾನ್ಗೆ ಹೊರಟೆವು. ಸುಮಾರು 6 ರಿಂದ 2.5 ಲಕ್ಷ ವರ್ಷಗಳ ಹಿಂದೆ ಟೈಯಾಂಗ್ ಪರ್ವತಗಳಲ್ಲಿ ಆಧಿಮಾನವರು ಸುಣ್ಣದ ಶಿಲೆಗಳ ಗುಹೆಗಳಲ್ಲಿ ಗುಂಪುಗುಂಪಾಗಿ ಜೀವಿಸುತ್ತಿದ್ದನ್ನು ಭೂವಿಜ್ಞಾನಿಗಳು ಕ್ರಿ.ಶ.1921ರಲ್ಲಿ ಈ ಭಾಗಗಳಲ್ಲಿ ಗುರುತಿಸಿದರು. ಈ ಸುಣ್ಣದ ಶಿಲೆಗಳು ಮಧ್ಯ ಪ್ಲಿಯೋಸೀನ್ ಯುಗಕ್ಕೆ (5.333 ರಿಂದ 2.5800 ದಶಲಕ್ಷ ವರ್ಷಗಳು) ಸೇರಿದವು. ಈ ಪ್ರದೇಶದಲ್ಲಿ 26 ದೊಡ್ಡದೊಡ್ಡ ಗುಹೆಗಳನ್ನು ಗುರುತಿಸಲಾಗಿದ್ದು ಒಂದೊಂದು ಗುಹೆಯೂ ನೂರಾರು ಸಾವಿರಾರು ಮೀಟರುಗಳ ಉದ್ದ ಮತ್ತು ಅಗಲದಿಂದ ಕೂಡಿವೆ. ಕ್ರಿ.ಶ.1921ರಿಂದ ಇದುವರೆಗೆ ಸಾವಿರಾರು ಆಧಿಮಾನವನ ಎಲುಬುಗಳನ್ನು ಈ ಗುಹೆಗಳಲ್ಲಿ ಹೆಕ್ಕಿ ತೆಗೆಯಲಾಗಿದೆ.

ಮಂಗೋಲಾಯ್ಡ್ ಮೂಲಸ್ಥ ಪೆಕ್ಕಿಂಗ್ ಮ್ಯಾನ್, ಇಂಡಿಯಾ–ಆಸ್ಟ್ರೇಲಿಯಾ ಮೂಲಸ್ಥ ಜಾವಾಮ್ಯಾನ್, ಆರ್ಯರ ಮೂಲಸ್ಥ ಹೆಡಲ್‌ಬರ್ಗ್, ಆಫ್ರಿಕಾದ ಮೂಲಸ್ಥ ನೀಗ್ರೋಲಾಯ್ಡ್, ರಾಮಾಪಿತೀಕಸ್, ಜೈಗಾಂಟಿಕೊಪಿತೀಕಸ್ ಹೀಗೆ ವಲವಾರು ಗುಹೆಮಾನವರು ಒಂದು ಕಾಲದಲ್ಲಿ ಭೂಮಿಯ ಮೇಲೆ ಬೇರೆ ಬೇರೆ ಪ್ರದೇಶಗಳಲ್ಲಿ ಕಾಣಿಸಿಕೊಂಡಿದ್ದರು. ಈಗ ನಾವು ಪೆಕ್ಕಿಂಗ್ ಮ್ಯಾನ್ ಗುಹೆಗಳ ಹತ್ತಿರ ಇದ್ದೆವು. ಅಲ್ಲಿ ನಮ್ಮ ದೇಶದ ಜಮ್ಮು ಕಾಶ್ಮೀರ, ಡಾರ್ಜಿಲಿಂಗ್, ಸಿಮ್ಲಾಗೆ ಹೋಗುವ ದಾರಿಯಲ್ಲಿರುವಂತಹ ಹೆಂಚು ಮತ್ತು ಸಿಮೆಂಟ್ ಮನೆಗಳ

ಮುಂದೆ ಫುಟ್ ಪಾಥ್ ವ್ಯಾಪಾರಿಗಳು ಹಲವು ರೀತಿಯ ಹಣ್ಣು, ತರಕಾರಿಗಳು ಮತ್ತು ಕರಕುಶಲ ವಸ್ತುಗಳನ್ನ ಇಟ್ಟುಕೊಂಡು ಮಾರುತ್ತಿದ್ದರು.

ಪೆಕ್ಕಿಂಗ್ ಮ್ಯಾನ್ ಗುಹೆಗಳು ಪರ್ವತಗಳ ಒಳಗಿರುವ ಒಂದು ದೊಡ್ಡ ಬಹುಮಹಡಿಯಂತಹ ಗುಹೆಗಳ ಸಮೂಹವಾಗಿದ್ದು, ಆ ಗುಹೆಯಲ್ಲಿ 7 ಅಂತಸ್ತುಗಳಿದ್ದು ಅದರ ಒಟ್ಟು ಉದ್ದ 500 ಮೀಟರುಗಳಾದರೆ ಎತ್ತರ 150 ಮೀಟರುಗಳು. ಜೊತೆಗೆ ಸಾವಿರಾರು ಸಂದಿಗೊಂದಿಗಳು, ಹಳ್ಳಕೊಳ್ಳಗಳು. ಒಬ್ಬ ಮಹಿಳಾ ಮಾರ್ಗದರ್ಶಿ ನಮ್ಮ ಮುಂದೆ ಗುಹೆಗಳ ಬಗ್ಗೆ ವಿವರಿಸುತ್ತಾ ಹೋಗುತ್ತಿದ್ದರೆ ನಾವೆಲ್ಲ ಅವರ ಹಿಂದೆ ರೈಲು ಬೋಗಿಗಳಂತೆ ಹೋಗುತ್ತಿದ್ದೆವು. ಸುತ್ತಿಬಳಸಿ, ಹತ್ತಿ ಇಳಿದು ಹೋಗುತ್ತಿದ್ದರೆ ಕೆಲವು ಕಡೆ ಒಬ್ಬರು ಮಾತ್ರ ನುಸಿಳಿ ಹೋಗುವಷ್ಟು ಕಿರಿದಾದ ದಾರಿಗಳು ಇದ್ದರೆ ಕೆಲವು ಕಡೆ ಪಾತಾಳದಂತಹ ಕೊರಕಲುಗಳು, ಆಳವಾದ ಗಣಿ ಸುರಂಗಗಳಲ್ಲಿ ಇಳಿಯುವಂತಹ ಕಬ್ಬಿಣದ ಮೆಟ್ಟಿಲುಗಳು, ಮರದ ಸೇತುವೆಗಳು. ಕೆಲವೊಂದು ಸಲ ಮೇಲಿಂದ ಕೆಳಕ್ಕೆ ನೋಡಿದರೆ ಭಯ ಹುಟ್ಟಿಸುವ ಆಳ ಪಾತಾಳ ಕೊರಕಲುಗಳು. ತಲೆ ಮೇಲೆ ನೂರಾರು ಮೀಟರುಗಳ ಉದ್ದದ ಶಿಲಾ ಛಾವಣಿಗಳು.

ಇದೆಲ್ಲ ಒಂದು ಕಡೆಯಾದರೆ ಮೇಲಿಂದ ಕೆಳಕ್ಕೆ, ಕೆಳಗಿಂದ ಮೇಲಕ್ಕೆ ಮಧ್ಯೆಮಧ್ಯೆ ಆಕಾಶದಲ್ಲಿ ತೇಲಾಡುವಂತಹ ಚಿತ್ರವಿಚಿತ್ರ ಆಕಾರದ ಬಣ್ಣಬಣ್ಣಗಳ ಸ್ಟಾಲಗ್ಮೈಟ್ ಶಿಲೆಗಳು. ಮನುಷ್ಯನು ಕಂಡರಿಯದ ಸಾವಿರಾರು ಬಣ್ಣಗಳ ಶಿಲಾಹೂವುಗಳನ್ನು ನೋಡಿದ ನಾವೆಲ್ಲ ವಿಸ್ಮಯಗೊಂಡಿದ್ದೆವು. ಮೇಲಿಂದ ಕೆಳಕ್ಕೆ ಐದು ಅಂತಸ್ತುಗಳ ಕೆಳಗೆ ಇಳಿದುಹೋಗಿ ಅಲ್ಲಿಂದ ಕೆಳಗೆ ನೀರು ತುಂಬಿಕೊಂಡಿದ್ದ ಕಾರಣ ಹಿಂದಕ್ಕೆ ಬಂದೆವು.



ಪೆಕ್ಕಿಂಗ್ ಮ್ಯಾನ್ ಗುಹೆಯ ಒಳಗೆ ಬಣ್ಣಬಣ್ಣದ ದೀಪಗಳನ್ನು ಅಳವಡಿಸಿರುವುದು.

ಮೊದಲಿಗೆ ಇಲ್ಲಿನ ಪ್ರದೇಶಗಳಲ್ಲಿ ಹಳ್ಳಿಗರು ತಮ್ಮ ಮನೆಗಳಿಗೆ ಬಳಿಯಲು ಸುಣ್ಣವನ್ನು ತೆಗೆದುಕೊಳ್ಳುತ್ತಿರುವಾಗ ಕೆಲವು ಮೂಳೆಗಳು ಸಿಕ್ಕಿ ಅವುಗಳನ್ನು ಡ್ರ್ಯಾಗನ್ ಮೂಳೆಗಳೆಂದು ಕರೆಯಲಾಯಿತು. ಆದರೆ ಅವೆಲ್ಲ ಲಕ್ಷಾಂತರ ವರ್ಷಗಳ ಹಿಂದೆ ಈ ಪ್ರದೇಶಗಳಲ್ಲಿ ಜೀವಿಸುತ್ತಿದ್ದ ಪ್ರಾಣಿಗಳ ಪಳಯುಳಿಕೆಗಳಾಗಿದ್ದವು.

ಕ್ರಿ.ಶ. 1918ರಲ್ಲಿ ಈ ವಿಷಯ ಸ್ವೀಡನ್ ಭೂವಿಜ್ಞಾನಿ ಅಂಡರ್‌ಸನ್ನಗೆ ತಿಳದಿದ್ದ ಆತ ಕ್ಷೇತ್ರ ಸಮೀಕ್ಷೆ ನಡೆಸಲು ಹೊರಟು ಬಂದನು. ಆದರೆ ಅಲ್ಲಿ ದೊರಕಿದ ಮೂಳೆಗಳೆಲ್ಲ ಇಲಿಗಳ ಮೂಳೆಗಳಾಗಿದ್ದವು. ಕ್ರಿ.ಶ 1921ರಲ್ಲಿ ಇನ್ನೊಂದು ಗುಹೆಯಲ್ಲಿ ಸಮೀಕ್ಷೆ ನಡೆಸಿ ಅಲ್ಲಿ ಪ್ರಾಚೀನ ಮಾನವನ ಹಲ್ಲುಗಳು ದೊರಕಿ ಅವು ಅದುವರೆಗೂ ಚೀನಾದಲ್ಲಾಗಲಿ, ಅಥವಾ ಏಷ್ಯಾದ ಯಾವುದೇ ದೇಶದ ಗುಹೆಗಳಲ್ಲಿ ದೊರಕಿರಲಿಲ್ಲ.

ಕೆನಡಾದ ಡಾ.ಡೇವಿಡ್ಸನ್ ಸಂಶೋಧನೆ ನಡೆಸಿ ಹಲ್ಲುಗಳನ್ನು ಮೊದಲಬಾರಿಗೆ ದೊರಕಿದ ಗಹೆಮಾನವನ ಹಲ್ಲುಗಳೆಂದು ಮತ್ತು ಅವುಗಳಿಗೆ ಸಿನಾನ್‌ತ್ರೋಪಸ್ ಪೆಕ್ಕಿನ್‌ಸಿಸ್ ಎಂಬ ಹೆಸರು ನೀಡಿದರು. ಇವು ಸುಮಾರು 2.5 ಮಿಲಿಯನ್ ವರ್ಷಗಳ ಹಿಂದಿನ ಗುಹೆಮಾನವನದು ಎಂದು ಹೇಳಲಾಯಿತು. ಅಮೇರಿಕಾದ ಭೂವಿಜ್ಞಾನಿ ವಿಯಮ್ಸ್ ಅಂತಿಮವಾಗಿ ಪೆಕ್ಕಿಂಗ್ ಮ್ಯಾನ್ ಎಂದು ಹೆಸರಿಸಿದರು. ಇದಕ್ಕೆ ಕಾರಣ ಈ ಗುಹೆಗಳು ಪೆಕ್ಕಿಂಗ್ (ಇಂದಿನ ಬೀಜಿಂಗ್) ನಗರಕ್ಕೆ ಹತ್ತಿರ ಇದ್ದವು. ಪೆಕ್ಕಿಂಗ್ ಎಂಬ ಹೆಸರು ಮುಂದೆ ಚೀನಿ ಭಾಷೆಯಲ್ಲಿ ಬೀಜಿಂಗ್ ಆಯಿತು ಎಂದು ಹೇಳಲಾಗುತ್ತದೆ.

ಕ್ರಿ.ಶ.1926ರಲ್ಲಿ ಒಂದು ಗುಹೆಯನ್ನು ಆಯ್ಕೆ ಮಾಡಿಕೊಂಡು ಗುಹೆಯಲ್ಲಿ ತುಂಬಿದ್ದ ಗಸಿಮಣ್ಣನ್ನು 10 ಪದರುಗಳಾಗಿ ವಿಭಾಗಿಸಿಕೊಂಡು ವಿವರವಾಗಿ ಸಂಶೋಧನೆಯನ್ನು ನಡೆಸಲಾಯಿತು. ಕೆಂಪು ಉಸುಗಿನಲ್ಲಿ ಮನುಷ್ಯನ ಒಂದು ತಲೆಬುರಡೆ ಸಿಕ್ಕಿ ಆ ತಲೆಬುರಡೆ ಮುಂದೆ ಗುಹೆಮಾನವ ಮತ್ತು ಆದಿಮಾನವನ ನಡುವಿನ ವಿಕಾಶಕ್ಕೆ ಒಂದು ಕೊಂಡಿಯಾಗಿ ಪೆಕ್ಕಿಂಗ್ ಮ್ಯಾನ್ ಹೆಸರಿನಲ್ಲಿ ವಿಶ್ವದಾದ್ಯಂತ ಹೆಸರುವಾಸಿಯಾಯಿತು.

ಕ್ರಿ.ಶ. 1991–1992ರಲ್ಲಿ ಡಚ್ ವಿಜ್ಞಾನಿ ಡುಬಿಯಸ್, ಜಾವಾ ಮತ್ತು ಇಂಡೋನೀಶಿಯಾದಲ್ಲಿ ಓಮಿನಿಡ್ ಆದಿಮಾನವನ ಪಳೆಯುಳಿಕೆಗಳನ್ನು ಕಂಡಿಡಿದಿದ್ದನು. ಡುಬಿಯಸ್ ಇದನ್ನ ಪಿತೆಕ್ಯಾಂತ್ರೋಪಸ್ ಎರೆಕ್ಟಸ್ ಎಂದು ಕರೆದು, ಇವನು ಭೂಮಿಯ ಮೇಲೆ ಮೊದಲ ಬಾರಿಗೆ ನಿಂತು ನಡೆದ ಆದಿಮಾನವನೆಂದು ಹೇಳಿದ. ಈ ಪಳೆಯುಳಿಕೆಯ ಬಗ್ಗೆ ಆ ಕಾಲಕ್ಕೆ ಜಗತ್ತಿನಾದ್ಯಂತ ದೊಡ್ಡ ಚರ್ಚೆ ನಡೆದು ಅಂತಿಮವಾಗಿ ಇವು ಮಂಗಮಾನವ (ಏಪ್) ಮತ್ತು ನಿಂತು ನಡೆಯುವ ಆದಿಮಾನವನ ಕೊಂಡಿ ಎಂದು ಒಪ್ಪಿಕೊಳ್ಳಬೇಕಾಯಿತು.

ಎರಡು ಪ್ರದೇಶಗಳಲ್ಲಿ ದೊರಕಿದ ಗುಹೆಮಾನವರ ಪಳೆಯುಳಿಕೆಗಳು ಪ್ರಪಂಚದಾದ್ಯಂತ ಮಾನವ ವಿಕಾಸದ ಬಗ್ಗೆ ಹಲವು ವಿಸ್ಮಯಗಳನ್ನು ಹೊರಚೆಲ್ಲಿದವು. ಪೆಕ್ಕಿಂಗ್ ಮ್ಯಾನ್ ಬೆಂಕಿ ಉಪಯೋಗಿಸುತ್ತಿದ್ದುದ್ದನ್ನು, ಪ್ರಾಣಿಗಳನ್ನು ಬೇಟೆಯಾಡುವುದನ್ನು, ಮತ್ತು ಬೇಟೆಯಾಡಲು ಉಪಯೋಗಿಸುತ್ತಿದ್ದ ಆಯುಧಗಳನ್ನು ರಾಶಿರಾಶಿಯಾಗಿ ಕೂಡಿಯಾಕಿಕೊಂಡಿರುವುದನ್ನು ಜಗತ್ತಿಗೆ ತೋರಿಸಿಕೊಟ್ಟ. ಪೆಕ್ಕಿಂಗ್ ಮ್ಯಾನ್ ತಿಂದು ತೇಗಿದ ಅನೇಕ ರೀತಿಯ ಪ್ರಾಣಿಗಳ ಎಲುಬುಗಳು, ಕೂದಲು ಮತ್ತು ಬೂದಿಯ ಗುಡ್ಡೆಗಳು ದೊರಕಿದ್ದವು. ಇವೆಲ್ಲವೂ ಆದಿಮಾನವನ ವಿಕಾಸವನ್ನು ವಿವರವಾಗಿ ಹೇಳುತ್ತಿದ್ದವು.

ಮಂಗಮಾನವ ಮತ್ತು ಆದಿಮಾನವನ ನಡುವಿನ ವಿಕಾಸ ಪೆಕ್ಕಿಂಗ್ ಮ್ಯಾನ್ ಪಳಯುಳಿಕೆಗಳು ದೊರಕುವವರೆಗೂ ವಿಜ್ಞಾನ ಜಗತ್ತಿಗೆ ದೊಡ್ಡ ಪ್ರಶ್ನೆಯಾಗಿಯೆ ಕಾಡಿತ್ತು. ಆದರೆ ಪೆಕ್ಕಿಂಗ್ ಮ್ಯಾನ್ ದೊರಕಿದ ನಂತರ ಮಾನವ ವಿಕಾಸದ ನಕ್ಷೆಯಲ್ಲಿ ತನಗೆ ತಾನೇ ಉತ್ತರ ಕಂಡುಕೊಂಡಿತ್ತು. ಜೊತೆಗೆ ಅಂದಿನ ಪರಿಸರ ಜ್ಞಾನ ಮತ್ತು ಆದಿಮಾನವನ ಚಟುವಟಿಕೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ವಿಜ್ಞಾನ ಸಫಲವಾಗಿತ್ತು. ಮುಂದಿನ ದಿನಗಳಲ್ಲಿ ಸುತ್ತಮುತ್ತಲಿನ ಇನ್ನಿತರ ಗುಹೆಗಳಲ್ಲಿ ಪೆಕ್ಕಿಂಗ್ ಮ್ಯಾನ್‌ನ ಹಲವು ಹಲ್ಲುಗಳು, ಎಲುಬುಗಳು, ತಲೆಬುರುಡೆಗಳು ದೊರಕಿದವು.

ಮಧ್ಯ ಪ್ಲಿಸ್ಟೋಸೀನ್ ಯುಗದ ಪೆಕ್ಕಿಂಗ್ ಮ್ಯಾನ್‌ನ ಸರಾಸರಿ ಎತ್ತರ 156 ಸೆ.ಮೀ. ಇದ್ದರೆ ಮಹಿಳೆಯ ಸರಾಸರಿ ಎತ್ತರ 144 ಸೆ.ಮೀ. ಇತ್ತು. ತಲೆಬುರುಡೆ ಇಂದಿನ ಮನುಷ್ಯನಿಗಿಂತ ದೃಢವಾಗಿರುವುದು ಕಂಡುಬಂದಿತ್ತು. ಹಣೆ ಹಗಲವಾಗಿದ್ದು ಕಣ್ಣುಬ್ಬುಗಳ ಎಲುಬುಗಳು ಮುಂದಕ್ಕೆ ಬಾಗಿಕೊಂಡಿದ್ದವು. ಮೆದುಳು ಚಿಪ್ಪು ದಕ್ಷಿಣ ಆಫ್ರಿಕಾ ಮತ್ತು ಜಾವಾ ಮಾನವನಿಗಿಂತ ತುಸು ಚಿಕ್ಕದಾಗಿದ್ದು ಆಧುನಿಕ ಮಾನವನಿಗಿಂತಲೂ ತುಸು ಚಿಕ್ಕದಾಗಿತ್ತು. ಪೆಕ್ಕಿಂಗ್ ಮ್ಯಾನ್‌ನ ಸರಾಸರಿ ಮೆದುಳು ತೂಕ 1056 ಮಿ.ಲೀ. ಈ ಪ್ರದೇಶದಲ್ಲಿ ಒಟ್ಟು 1873 ದಿನಗಳ ಕಾಲ 100 ಜನರ ಸಹಾಯದಿಂದ ಸಂಶೋಧನೆ ನಡೆಸಲಾಗಿತ್ತು. ಒಟ್ಟು 24000 ಚ.ಕಿ.ಮೀ.ಗಳ ವಿಸ್ತೀರ್ಣದಲ್ಲಿ ಗುಹೆಗಳಲ್ಲಿ ಗಸಿಯನ್ನು ತೋಡಿ ತೆಗೆದುಕೊಳ್ಳಲಾಗಿತ್ತು. ಒಟ್ಟು 1221 ಪೆಟ್ಟಿಗೆಗಳಲ್ಲಿ (375) ಆದಿಮಾನವನ ಎಲುಬುಗಳನ್ನು ಸಂಗ್ರಹಿಸಲಾಯಿತು. ಸುಮಾರು

1 ಲಕ್ಷ ಸಂಖ್ಯೆಯ ಚೂರುಗಳಲ್ಲಿ 17000 ಚೂರುಗಳನ್ನು ಸಂಶೋಧನೆಗೆ ಒಳಪಡಿಸಲಾಯಿತು.

ಪೆಕ್ಕಿಂಗ್ ಮ್ಯಾನ್, ಬೆಣಚು ಶಿಲೆ, ಹರಳು ಶಿಲೆ, ಫ್ಲಿಂಟ್ ಶಿಲೆ ಮತ್ತು ಮರಳು ಶಿಲೆಗಳಲ್ಲಿ ಆಯುಧಗಳನ್ನು ಮಾಡಿಕೊಂಡು ಉಪಯೋಗಿಸುವುದನ್ನು ಕಲಿತುಕೊಂಡಿದ್ದನು. ಬೆಂಕಿ ಹೊತ್ತಿಸುವುದರ ಜೊತೆಗೆ ಆರಿಸುವುದನ್ನು ಪೆಕ್ಕಿಂಗ್ ಮ್ಯಾನ್ ಕಲಿತುಕೊಂಡಿರುವುದು ದೃಢಪಟ್ಟಿದೆ. ಹಲವು ಗುಹೆಗಳಲ್ಲಿ 10 ಮೀಟರುಗಳ ದಪ್ಪದ ಬೂದಿ ಗುಡ್ಡೆಗಳು ಕಂಡುಬಂದವು. ಪೆಕ್ಕಿಂಗ್ ಮ್ಯಾನ್ ಮೊದಲಿಗೆ ಬೆಂಕಿಯನ್ನು ಹೇಗೆ ಕಂಡುಕೊಂಡ ಎನ್ನುವುದಕ್ಕೆ ಸರಿಯಾದ ಉತ್ತರ ದೊರಕದಿದ್ದರೂ ಕಾಡಿನಲ್ಲಿ ಬೇಸಿಗೆ ದಿನಗಳಲ್ಲಿ ಬೆಂಕಿ ಬೀಳುವುದನ್ನು ಮೊದಲಿಗೆ ನೋಡಿರಬೇಕು. ಇಲ್ಲ ಸಿಡಿಲಿನಿಂದ ಬೆಂಕಿ ಹೊತ್ತಿಕೊಂಡಿದ್ದನ್ನು ನೋಡಿರಬಹುದು. ಒಟ್ಟಿನಲ್ಲಿ ಉರಿಯುತ್ತಿರುವ ಕಟ್ಟಿಗೆಯನ್ನು ಮೊದಲಿಗೆ ಗುಹೆ ಒಳಕ್ಕೆ ತಂದಿರಬಹುದು. ಅನಂತರ ಗುಹೆಯಲ್ಲಿ ಉರಿಯುವ ಬೆಂಕಿಗೆ ನಿರಂತರ ಸೌದೆಯನ್ನು ಹಾಕುತ್ತ ಬೆಂಕಿಯನ್ನು ಉಳಿಸಿಕೊಂಡಿರಬೇಕು.

ಗುಹೆಯ ಮುಂದೆ ಬಾಗಿಲಲ್ಲಿ ಬೆಂಕಿಯಾಕಿಕೊಂಡು ಕಾಡಿನ ಮೃಗಗಳಿಂದ ರಕ್ಷಣೆಯನ್ನು ಪಡೆಯುವುದನ್ನು ಪೆಕ್ಕಿಂಗ್ ಮ್ಯಾನ್ ಕಂಡುಕೊಂಡಿದ್ದನು. ರಾತ್ರಿ ಹೊತ್ತು ಅದು ಅವನಿಗೆ ದೀಪವಾಗಿ ಮತ್ತೆ ರಕ್ಷಣೆಯಾಗಿ ಇರುತ್ತಿತ್ತು. ಮಾಂಸವನ್ನು ಬೆಂಕಿಯಲ್ಲಿ ಬೇಯಿಸಿ ತಿನ್ನುವುದು, ಚಳಿಗಾಲದಲ್ಲಿ ಮೈ ಕಾಯಿಸಿಕೊಳ್ಳುವುದು, ಹೀಗೆ ಬೆಂಕಿಯನ್ನು ಹಲವು ವಿಧಗಳಲ್ಲಿ ಉಪಯೋಗಿಸಿಕೊಳ್ಳಲಾಗುತ್ತಿತ್ತು. ಗುಹೆಗಳ ಗಸಿಯಲ್ಲಿ ದೊರಕಿದ ಹೂವು, ಕಾಯಿ, ಬೀಜ ಮತ್ತು ಹಣ್ಣುಗಳಿಂದ ಆ ಕಾಲದಲ್ಲಿ ಸುತ್ತಲಿನ ಪ್ರದೇಶಗಳಲ್ಲಿ ಯಾವಯಾವ ರೀತಿಯ ಮರಗಿಡಗಳು ಇದ್ದವು ಎನ್ನುವುದನ್ನು ತಿಳಿದುಕೊಳ್ಳಲು ಸಹಾಯವಾಗಿದ್ದವು. ಒಟ್ಟಿನಲ್ಲಿ ನೈಸರ್ಗಿಕ ಪರಿಸರದ ಅನೇಕ ವಿವರಣೆಗಳು ಈ ಗುಹೆಗಳಲ್ಲಿ ದೊರಕಿದ್ದವು.

ಗುಹೆಗಳಲ್ಲಿ 100ಕ್ಕಿಂತ ಹೆಚ್ಚು ಪ್ರಾಣಿಗಳ ಎಲುಬುಗಳು ದೊರಕಿದ್ದವು. ಅವೆಲ್ಲವನ್ನು ಪೆಕ್ಕಿಂಗ್ ಮ್ಯಾನ್ ಬೇಟೆಯಾಡಿ ತಂದು ಗುಹೆಗಳ ಒಳಗೆ ಕುಳಿತು ತಿಂದು ಮುಗಿಸಿದ್ದನು. ಮಹಿಳೆ ಗರ್ಭಿಣಿಯಾದಾಗ ಮಕ್ಕಳನ್ನು ಸಾಕುತ್ತ ಗುಹೆಯಲ್ಲಿ ಕಾಲ ಕಳೆದರೆ ಗಂಡಸರು ಹೊರಗೆ ಹೋಗಿ ಪ್ರಾಣಿಗಳನ್ನು ಬೇಟೆಯಾಡಿ ಬರುತ್ತಿದ್ದರು. ಒಟ್ಟು 300 ಸಾವಿರ ವರ್ಷಗಳಲ್ಲಿ ಪೆಕ್ಕಿಂಗ್ ಮ್ಯಾನ್ ಇತಿಹಾಸದಲ್ಲಿ ಶಿಲಾ ಆಯುಧಗಳು ಕಾಲಕಾಲಕ್ಕೆ ಆಧುನಿಕಗೊಳ್ಳುತ್ತಲೇ

ಹೋಗುತ್ತಿದ್ದವು. ಪೆಕ್ಕಿಂಗ್ ಮ್ಯಾನ್ ಮಾನವರಲ್ಲಿ ಸರಾಸರಿ 14 ವರ್ಷಗಳ ವಯಸ್ಸಿಗೆ 68.2ರಷ್ಟು ಜನರು ಸತ್ತರೆ, ಶೇಕಡ 4.5ರಷ್ಟು ಜನರು 50 ವರ್ಷಗಳು ಮಾತ್ರ ಬದುಕುತ್ತಿದ್ದರು. ಪೆಕ್ಕಿಂಗ್ ಮ್ಯಾನ್ ಅನೇಕ ರೀತಿಯ ನೈಸರ್ಗಿಕ ತೊಂದರೆಗಳಿಗೆ ಸಿಕ್ಕಿ ಸಾಯುತ್ತಿದ್ದನು. ಇದು ಗುಹೆಗಳು ಮತ್ತು ಮನುಷ್ಯರ ಮಧ್ಯದ ಒಂದು ಸಣ್ಣ ಚಿತ್ರಣ.

ಮೇಘಾಲಯ – ಗುಹೆಗಳ ಮಾಯಾಲೋಕ

ಈಗ ನಮ್ಮ ದೇಶದಲ್ಲೇ ಇರುವ ಗುಹೆಗಳ ಮಾಯಾಲೋಕ ಎಂದು ಕರೆಯುವ ಮೇಘಾಲಯದ ಬಗ್ಗೆ ಸ್ವಲ್ಪ ತಿಳಿದುಕೊಳ್ಳೋಣ. ದೇಶದ ಈಶಾನ್ಯ ರಾಜ್ಯಗಳು ಹಲವು ವಿಸ್ಮಯಗಳು ಮತ್ತು ರಮಣೀಯತೆಗೆ ಪ್ರಸಿದ್ಧಿ. ಸುಂದರವಾದ ಕಾಡು ಕಣಿವೆ ಪರ್ವತ ಶ್ರೇಣಿಗಳು ಮತ್ತು ಭೋರ್ಗರೆಯುವ ಜಲಪಾತಗಳ ಪುಟ್ಟ ರಾಜ್ಯ ಮೇಘಾಲಯ. ಮುಂಗಾರು ಮಳೆಯ ಕಾಲದಲ್ಲಿ ಮೂರು ನಾಲ್ಕು ತಿಂಗಳು ಕಾಲ ದಟ್ಟ ಮೇಘಗಳು ಇಲ್ಲಿ ಆಲಯ ಕಟ್ಟಿಕೊಂಡು ಧಾರಕಾರವಾಗಿ ಮಳೆ ಸುರಿಯುವುದರಿಂದ ಮೇಘಾಲಯ ಎನ್ನುವ ಹೆಸರು ಬಂದಿದೆ. ಇಂತಹ ಪರ್ವತಗಳ ಒಳಗೆ ಮತ್ತು ಹೊರಗೆ ಸಾವಿರಾರು ನದಿ, ತೊರೆ, ಝರಿಗಳು ಜುಳುಜುಳು ಹರಿಯುತ್ತವೆ, ಜಲಪಾತಗಳು ಧುಮುಕುತ್ತವೆ, ನೆಲದೊಳಗೆ ನೂರಾರು ಸರೋವರಗಳು ಅಡಗಿ ಕುಳಿತಿವೆ. ಇಲ್ಲಿನ ಸುಣ್ಣದ ಶಿಲೆಗಳು ಮತ್ತು ಮರಳು ಶಿಲೆಗಳಲ್ಲಿ ಹತ್ತಾರು ಕಿಲೋಮೀಟರುಗಳ ದೂರದ ನೂರಾರು ಗುಹೆಗಳು ನಿರ್ಮಾಣಗೊಂಡಿವೆ. ವರ್ಷಕ್ಕೆ ಸರಾಸರಿ 26,461 ಮಿ.ಮೀ. ಮಳೆ ಬೀಳುವ ಚಿರಾಪುಂಜಿ (ಸೋಫ಼ರಾ) ಮತ್ತು ಮಯ್‌ಸಿನ್ರಾಮ್ ಇರುವುದು ಇದೇ ಮೇಘಾಲಯ ರಾಜ್ಯದ ಪರ್ವತಗಳಲ್ಲಿ.

22,500 ಚದರ ಕಿ.ಮೀ. ವಿಸ್ತೀರ್ಣದ ಈ ಪುಟ್ಟ ರಾಜ್ಯದಲ್ಲಿ ಎಲ್ಲೆಲ್ಲೂ ಕಡಿದಾದ ಕಣಿವೆ, ತಪ್ಪಲು, ಪರ್ವತ ಶಿಖರಗಳು ಮತ್ತು ಜಲಪಾತಗಳೇ ತುಂಬಿಕೊಂಡಿವೆ. ಪ್ರಪಂಚದ ಅತ್ಯದ್ಭುತ ರಮಣೀಯ ಗುಹೆಗಳ ಪಟ್ಟಿಗೆ ಸೇರಿರುವ ನೂರಾರು ಗುಹೆಗಳು ಮೇಘಾಲಯ ರಾಜ್ಯದಲ್ಲಿದ್ದು ಪ್ರಪಂಚದ ಗುಹಾ ನಕ್ಷೆಯಲ್ಲಿ ಹೆಸರು ಪಡೆದಿವೆ. ಇದುವರೆಗೂ ಮೇಘಾಲಯದಲ್ಲಿ 1000ಕ್ಕಿಂತ ಹೆಚ್ಚು ಗುಹೆಗಳನ್ನು ಗುರುತಿಸಿ ಅವುಗಳಲ್ಲಿ ಸುಮಾರು 600 ಗುಹೆಗಳಲ್ಲಿ ಗುಹಾ ಸಂಶೋಧಕರು/ವಿಜ್ಞಾನಿಗಳು ಸಂಶೋಧನೆ ನಡೆಸಿ ಗುಹಾ ನಕ್ಷೆಗಳು ಮತ್ತು ಇನ್ನಿತರ ವಿವರಗಳನ್ನು ಸಂಗ್ರಹಿಸಿದ್ದಾರೆ. ದೇಶದಲ್ಲಿಯೆ ಉದ್ದವಾದ ಮೊದಲ 20 ಗುಹೆಗಳಲ್ಲಿ (18ನೇ ಗುಹೆ ಆಂಧ್ರಪ್ರದೇಶ) 19 ಗುಹೆಗಳು



ಮೇಘಾಲಯದ ಒಂದು ಗುಹೆ ಒಳಗಿನ ನೋಟ.

ಮೇಘಾಲಯದಲ್ಲಿವೆ. ಅವುಗಳ ಉದ್ದ 20.20 ಕಿ.ಮೀ. ನಿಂದ 3.40 ಕಿ.ಮೀ. ಗಳವರೆಗೂ ಚಾಚಿಕೊಂಡಿವೆ. ಅತಿ ಆಳವಾದ ಮೊದಲ 20 ಗುಹೆಗಳಲ್ಲಿ (7ನೇ ಗುಹೆ ಮಿಜೋರಾಂ) 19 ಗುಹೆಗಳು ಮೇಘಾಲಯದಲ್ಲಿವೆ. ಇವುಗಳ ಆಳ 317 ಮೀಟರ್‌ನಿಂದ 111 ಮೀಟರ್‌ಗಳು.

ಗುಹೆಗಳು ಮಾನವನ ಮೊದಲ ನಾಗರಿಕ ತೊಟ್ಟಿಲುಗಳು. ಮಂಗನಿಂದ ಮಾನವ ರೂಪ ಪಡೆದ ಆದಿಮಾನವ 50 ಲಕ್ಷ ವರ್ಷಗಳ ಹಿಂದೆ ಮರಗಳಿಂದ ಕೆಳಗಿಳಿದು ಬಂದು ಮೊದಲು ಆಶ್ರಯ ಪಡೆದಿದ್ದು ಗುಹೆಗಳಲ್ಲೇ. ಅವನ ಬುದ್ಧಿ ಹಂತಹಂತವಾಗಿ ಬೆಳೆಯಲು ಪ್ರಾರಂಭವಾಗಿದ್ದು ಗುಹೆಗಳಲ್ಲೇ. ಚಿತ್ರ ಕಲೆ ಅರಳಿದ್ದು, ಪ್ರಾಣಿಗಳನ್ನು ಬೇಟೆಯಾಡಲು ಕಲಿತಿದ್ದು, ಬೆಂಕಿ ಕಂಡು-ಕೊಂಡಿದ್ದು ಗುಹೆಗಳಲ್ಲಿದ್ದಾಗಲೇ. ತೀರ ಇತ್ತೀಚಿನವರೆಗೂ ಅಂದರೆ ಸುಮಾರು 20 ಸಾವಿರ ವರ್ಷಗಳ ಹಿಂದಿನವರೆಗೂ ಮನುಷ್ಯ ಗುಹೆಗಳಲ್ಲೇ ಆಶ್ರಯ ಪಡೆದಿದ್ದ. ಅನಂತರ ಬಯಲಿಗೆ ಬಂದು ಗುಡಿಸಿಲು ಕಟ್ಟಿಕೊಳ್ಳಲು ಪ್ರಾರಂಭಿಸಿ, ನದಿ ದಡಗಳು ನಾಗರಿಕ ತೊಟ್ಟಿಲುಗಳಾದವು. ವಿಶೇಷವೆಂದರೆ ಇದುವರೆಗೂ ಮೇಘಾಲಯದ ಯಾವ ಗುಹೆಯಲ್ಲೂ ಆಧಿಮಾನವ ಜೀವಿಸಿದ ಕುರುಹಗಳು ದೊರಕಿಲ್ಲ. ಕಾರಣ, ಬಹುಶ: ಮಾನವ ಗುಹೆಗಳಲ್ಲಿ ಜೀವಿಸುವ ಹಂತವನ್ನು ದಾಟಿದ ಮೇಲೆ ಬುಡಕಟ್ಟು ಜನರು ಈ ಪ್ರದೇಶಕ್ಕೆ ವಲಸೆ ಬಂದಿರಬೇಕು? ಅದು ಕೇವಲ ನಾಲ್ಕೈದು ಸಾವಿರ ವರ್ಷಗಳ ಇತ್ತೀಚೆಗೆ. ಮೇಘಾಲಯದಲ್ಲಿ ಜನರು ಯಾವ ಕಾಲದಿಂದ ಜೀವಿಸುತ್ತಿದ್ದರು? ಎನ್ನುವ ಪ್ರಶ್ನೆಗೂ ನಿಖರವಾದ ಉತ್ತರ ಇನ್ನೂ ದೊರಕಿಲ್ಲ.

ಗುಹೆಗಳು ಮುಖ್ಯವಾಗಿ ಮೃದುವಾದ ಜಲಜ ಮತ್ತು ಸುಣ್ಣದ ಶಿಲೆಗಳಲ್ಲಿ ರೂಪುಗೊಳ್ಳುತ್ತವೆ. ಮೇಘಾಲಯದ ಮಧ್ಯ ಪ್ರಾಂತ್ಯದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ 300 ಕಿ.ಮೀ. ಉದ್ದಕ್ಕೂ ಕಾಶಿ, ಜಯಂತಿಯಾ ಮತ್ತು ಘಾರೋ ಪರ್ವತಗಳಲ್ಲಿ (ಕಾಶಿ, ಜಯಂತಿಯಾ ಮತ್ತು ಘಾರೋ ಬುಡಕಟ್ಟುಗಳ ಹೆಸರುಗಳು) ಈ ಗುಹೆಗಳು ಹರಡಿವೆ. ಈ ಭಾಗದ ಇಂದಿನ ಪರ್ವತಗಳು ಬಹಳಷ್ಟು ಕಾಲ ಸಮುದ್ರದ ಅಂಚು ಅಥವಾ ಒಳಗಿದ್ದ ಪ್ರದೇಶವಾಗಿತ್ತು. ಸ್ಥಳೀಯರು ಬಹಳಷ್ಟು ಗುಹೆಗಳ ಜೊತೆಗೆ ಸಾಂಸ್ಕೃತಿಕ ಸಂಬಂಧಗಳನ್ನು

ಬೆಳೆಸಿಕೊಂಡಿದ್ದು ಹಲವು ಗುಹೆಗಳು ನಂಬಿಕೆಯ ತಾಣಗಳಾಗಿ ಇಂದಿಗೂ ಉಳಿದುಕೊಂಡು ಬಂದಿವೆ. ಆರೋಗ್ಯ ಕೆಟ್ಟಾಗ ಕೋಳಿ ಮತ್ತು ಆಡುಗಳನ್ನು ಬಲಿಕೊಟ್ಟು ಪೂಜೆ ಮಾಡಿಕೊಂಡು ಬರುವ, ಜಾತ್ರೆ ನಡೆಸುವ ಸ್ಥಳಗಳು ಸೇರಿವೆ. ಮಳೆಗಾಲದಲ್ಲಿ ಹಸು, ಕುರಿ, ಮೇಕೆಗಳ ತಂಗುದಾಣಗಳನ್ನಾಗಿ ಉಪಯೋಗಿಸಿಕೊಳ್ಳಲಾಗುತ್ತದೆ. ಗುಹೆಗಳಿಗೆ ಸಂಬಂಧಿಸಿದಂತೆ ಕೆಲವು ಅದ್ಭುತ ಜನಪದ ಕಥೆಗಳು ಜನಜನಿತವಾಗಿವೆ.

ಬ್ರಿಟಿಷರು ಮತ್ತು ಜಯಂತಿಯಾ ರಾಜರ ಮಧ್ಯೆ ಯುದ್ಧ ನಡೆದಾಗ ಜಯಂತಿಯಾ ರಾಜರು ಸಿಂಡಯ್ ಗುಹೆಗಳಲ್ಲಿ ಅಡಗಿಕೊಳ್ಳುತ್ತಿದ್ದರೆಂದು ಕ್ರಿ.ಶ. 1820ರಲ್ಲಿ ವಾಲ್ಟರ್ ದಾಖಲಿಸಿದ್ದಾರೆ. ಕ್ರಿ.ಶ. 1827ರಲ್ಲಿ ಕ್ಯಾಪ್ಟನ್ ಜೇಮ್ಸ್ ಭುಬನ್, ಕ್ರಿ.ಶ. 1828ರಲ್ಲಿ ವಾಲ್ಟರ್ ಭುವನ್ ಗುಹೆಗಳನ್ನು ಸಂಶೋಧಿಸಿದ್ದರು. ಇದರಲ್ಲಿ ಇಂದಿಗೂ ಸ್ಥಳೀಯರು ಎರಡು ವರ್ಷಕ್ಕೊಮ್ಮೆ ಬುಡಕಟ್ಟು ಸಂಪ್ರದಾಯದ ಹಬ್ಬಗಳನ್ನು ಆಚರಿಸುತ್ತಾರೆ. ಕ್ರಿ.ಶ. 1830–1850ರ ಮಧ್ಯ ಚಿರಾಪುಂಜಿಯ ಸುತ್ತಲಿರುವ ಅನೇಕ ಗುಹೆಗಳನ್ನು ಬ್ರಿಟಿಷರು ಶೋಧಿಸಿದ್ದರು. ಇದೇ ಕಾಲದಲ್ಲಿ ಚಿರಾಪುಂಜಿ ಪ್ರದೇಶದಲ್ಲಿ ಧುಮುಕುವ ಕೆಲವು ಜಲಪಾತಗಳು ದಟ್ಟ ಕಾಡು/ಪರ್ವತಗಳ ನಡುವೆ ಕಣ್ಣಿಗೆ ಕಾಣದೆ ಅಂತರ್‌ಗಾಮಿಯಾಗುವುದನ್ನು ಗಮನಿಸಿ ಸಂಶೋಧನೆ ನಡೆಸಿದ್ದರು.



ಮೇಘಾಲಯದ ಒಂದು ಕಿರಿದಾದ ಗುಹೆ ಒಳಗಿಂದ ಹೊರಕ್ಕೆ ಬರುತ್ತಿರುವ ಗುಹೆ ಅನ್ವೇಷಕ.

ಆ ನದಿಗಳು ಸುಣ್ಣದ ಶಿಲೆಗಳ ಒಳಗಿನ ಗುಹೆಗಳ ಮೂಲಕ ಭೂಗರ್ಭದಲ್ಲಿ ಹರಿದು ಬಾಂಗ್ಲಾ ದೇಶದ ಬಯಲುಗಳನ್ನು ತಲಪುವುದು ತಿಳಿಯಿತು. ಭೂವಿಜ್ಞಾನಿ ಥಾಮಸ್ ಒಲ್ಡ್‌ಹ್ಯಾಮ್ ಇಂತಹ ಅನೇಕ ಜಲಪಾತಗಳು ಮತ್ತು ಗುಹೆಗಳ ನಡುವಿನ ಸಂಬಂಧಗಳನ್ನು ತೋರಿಸಿಕೊಟ್ಟರು. ಕ್ರಿ.ಶ. 1867ರಲ್ಲಿ ಗಾಡ್ವಿನ್ ಆಸ್ಟಿನ್, ಘಾರೋ ಪರ್ವತಗಳ ಮಧ್ಯ ಚಿಬಕ್ ಎಂಬ ದೊಡ್ಡ ನದಿ ಭೂಮಿಯ ಒಳಗಿಂದ ಹೊರಗಡೆಗೆ ಚಿಮ್ಮಿ ಹರಿಯುತ್ತಿರುವುದನ್ನು ನೋಡಿದರು. ಕ್ರಿ.ಶ. 1875ರಲ್ಲಿ ಮಿ.ಸುಂಡರ್ಸನ್ ಆನೆಗಳನ್ನು ಸರ್ಕಾರದ ಕೆಡ್ಡಕ್ಕೆ ಬೀಳಿಸುವ ಕೆಲಸದಲ್ಲಿ ತೊಡಗಿದ್ದಾಗ ಡೊಬೋಕೊಲ್ ಎಂಬ ಸ್ಥಳದಲ್ಲಿ ಒಂದು ಗುಹೆಯ ಬಾಯಿ ಹತ್ತಿರಕ್ಕೆ ತಲುಪಿದರು. ಆ ಗುಹೆಯಲ್ಲಿ ಇಡೀ ದಿನ ಕಾಲ ಕಳೆದು 1190 ಮೀ. ದೂರ ಹೋಗಿ ಅಲ್ಲೊಂದು ಬೀರು ಬಾಟಲಿನ ಮೇಲೆ ತಾನು

ತಲುಪಿದ ವಿಷಯ ಬರೆದಿಟ್ಟು ಬಂದಿದ್ದರು. ಅದನ್ನು 1917ರಲ್ಲಿ ಸ್ಪಾನ್ಲೆ ಕೆಂಪ್ ಮತ್ತು ಮೋಪು ಗುಹೆ ನಕ್ಷೆ ಮಾಡುವಾಗ ಅದೇ ಬೀರು ಬಾಟಲನ್ನು 42 ವರ್ಷಗಳ ನಂತರ ತೆಗದುಕೊಂಡು ಬಂದಿದ್ದರು.

ಇಲ್ಲಿನ ಗುಹೆಗಳಲ್ಲಿ ತಲೆಮಾರುಗಳಿಂದ ಜೀವಿಸುವ ಬಹಳಷ್ಟು ಪ್ರಾಣಿಗಳು ಬಿಸಿಲು ಕಾಣದೆ ತೆಳ್ಳಗೆ ಬಿಳುಪಾಗಿ ಕೂದಲು, ರೆಕ್ಕೆ, ಕಣ್ಣುಗಳಿಲ್ಲದಾಗಿವೆ. ಜೇಡ, ಚೇಳು, ಬಸವನ ಹುಳು, ಕ್ರಿಕೆಟ್ಸ್, ಜಿರಳೆ, ಜೀರುಂಡೆ, ಇರುವೆ, ಏಡಿ, ಕಪ್ಪೆ, ಮೀನು, ಹಲ್ಲಿ ಇತ್ಯಾದಿ ಪ್ರಾಣಿಗಳಿವೆ. ಕಣ್ಣು ಕಾಣದ ಬಾವಲಿಗಳಂತೂ ಮಿಲಿಯಗಟ್ಟಲೆ ಇವೆ. ಹುಲಿ, ಸಿಂಹ, ಚಿರತೆ, ತೋಳ, ಕರಡಿ, ಆನೆ ಇನ್ನಿತರ ಪ್ರಾಣಿಗಳು ಕೆಲವು ಗುಹೆಗಳಲ್ಲಿ ಮನೆ ಮಾಡಿಕೊಂಡಿವೆ. ಆಳವಾದ ಗುಹೆಗಳ ಒಳಕ್ಕೆ ಬಿದ್ದು ಸತ್ತ ಪ್ರಾಣಿಗಳೆಷ್ಟೋ? ರಸ್ತೆ ಪಕ್ಕದಲ್ಲಿದ್ದ ಒಂದು ಗುಹೆಗೆ ಒಂದು ಟ್ರಕ್ಕು ಬಿದ್ದು ಅದರಲ್ಲಿದ್ದವರೆಲ್ಲ ಪ್ರಾಣ ಕಳೆದುಕೊಂಡಿದ್ದರು. ಅಮೇರಿಕಾ ಮತ್ತು ಯುರೋಪ್ ದೇಶಗಳ ಗುಹಾ ಸಂಶೋಧಕರು Caving in the abode of the clouds ಎಂಬ ಸಂಸ್ಥೆಯನ್ನು ಶಿಲ್ಲಾಂಗ್ನಲ್ಲಿ ಸ್ಥಾಪಿಸಿ 1992ರಿಂದ ಪ್ರತಿವರ್ಷವೂ ಇಲ್ಲಿಗೆ ಬಂದು ಫೆಬ್ರವರಿ-ಮಾರ್ಚ್‌ನಲ್ಲಿ ಸಂಶೋಧನೆ ನಡೆಸಿ ಹೋಗುತ್ತಾರೆ. ಮೇಘಾಲಯದ ಬ್ರಿಯನ್ ಕೆರ್‌ಪ್ರನ್ ಡೆಲಿ ಎಂಬವರು Adventure associationನ ಕಾರ್ಯದರ್ಶಿಯಾಗಿ ಕಾರ್ಯ ನಿರ್ಹವಹಿಸುತ್ತಿದ್ದಾರೆ.

ಮೇಘಾಲಯ ಗುಹೆಗಳ ಅಪಾರ ಸೌಂದರ್ಯ

ಮೇಘಾಲಯದ ಮರಗಟ್ಟುವ ಚಳಿ ಮತ್ತು ತೇವ ತುಂಬಿದ ಗುಹೆಗಳಲ್ಲಿ ಎಲ್ಲಾ ರೀತಿಯ ಸಾಹಸಗಳನ್ನು ಮಾಡಬೇಕಾಗುತ್ತದೆ. ನಡೆದುಕೊಂಡು, ತೆವಳಿಕೊಂಡು, ಹತ್ತಿ ಇಳಿದು, ಸುತ್ತಿಬಳಸಿ, ನೀರಿನಲ್ಲಿ ನಡೆದು-ಈಜಾಡಿ, ಬಗ್ಗಿ ಬಾಗಿ ದೇಹಗಳನ್ನು ಸಣ್ಣದಾಗಿಸಿಕೊಂಡು ಹೋಗಬೇಕಾಗುತ್ತದೆ. ಇಲ್ಲಿನ ಬಹಳಷ್ಟು ನದಿಗಳು ಅಡ್ಡ ಬರುವ ಬೆಟ್ಟಗಳನ್ನು ಸುತ್ತಿ ಬಳಸಿ ಹರಿಯುವುದರ ಬದಲು ಬೆಟ್ಟಗಳನ್ನೇ ಕೊರೆದು ಇಲ್ಲ ಶಿಲೆಗಳನ್ನು ಕರಗಿಸಿ ಒಳಕ್ಕೆ ನುಗ್ಗಿ ಹರಿಯುತ್ತವೆ. ಹಾಗಾಗಿ ಪರ್ವತಗಳು ನದಿಗಳಿಗೆ ದಾರಿಮಾಡಿಕೊಟ್ಟು ಮೈಯೆಲ್ಲ ತೂತುಗಳನ್ನು ಮಾಡಿಕೊಂಡು ನಿಂತಿವೆ. ಕೆಲವು ಕಡೆ ಪರ್ವತಗಳ ಅಂತರಾಳದಲ್ಲಿ ಐದಾರು ಕಿ.ಮೀ. ಉದ್ದದ ವಿಶಾಲ ಸರೋವರಗಳೆ ಅಡಗಿ ಕುಳಿತಿವೆ. ಮಧ್ಯೆ ಹತ್ತಾರು ಅಣೆಕಟ್ಟೆಗಳಿವೆ. ಕೆಲವು ಕಡೆ ಗುಹೆಗಳಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸೂರ್ಯನ ಬೆಳಕು ಬೀಳುವುದನ್ನು ನೋಡಬಹುದು.

ಬಹಳಷ್ಟು ಗುಹೆಗಳಲ್ಲಿ ಯಾವಾಗಲು ನೀರು ತುಂಬಿರುವುದರಿಂದ ಅವುಗಳ ಅಂತರಾಳವನ್ನು ಇದುವರೆಗೂ ಯಾರೂ ನೋಡಿಲ್ಲ. ನೂರಾರು ಗುಹೆಗಳು ಕೋಲಾರ ಚಿನ್ನದ ಗಣಿಗಳ ಸುರಂಗಗಳ ಜಾಲದಂತೆ ಈ ಪರ್ವತಗಳ ಕೆಳಗೆ ಬಿಚ್ಚಿಕೊಂಡಿವೆ.

ಕ್ರೆಮ್ ಲಿಮ್‌ಪುಟ್ ಹೆಸರಿನ ಗುಹೆಯಲ್ಲಿ 25 ಮೀಟರುಗಳ ಅಗಲ, 25 ಮೀಟರುಗಳ ಎತ್ತರ ಮತ್ತು 75 ಮೀಟರುಗಳ ಉದ್ದದ ಗ್ಯಾಲರಿ ಇದ್ದು ಅದನ್ನು ಮೊಘಲ್‌ರೂಂ ಎಂದು ಹೆಸರಿಸಲಾಗಿದೆ. ಬಾಂಗ್ಲಾ ದೇಶದ ಬಯಲುಗಳಿಂದ ಮೇಘಾಲಯ ಪರ್ವತಗಳು ಕಡಿಮೆಯೆಂದರೆ 1500 ಮೀ. ಎತ್ತರದಲ್ಲಿ ಕೇಕ್ ಕತ್ತರಿಸಿದಂತೆ ಮೇಲೆ ಕುಳಿತಿವೆ. ಈ ವಲಯದಲ್ಲಿ ನೂರಾರು ಗುಹೆಗಳಿವೆ. ಈ ಪರ್ವತಗಳು ಮುರಿದು ಬೀಳುವುದಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ. ಒಂದು ಪ್ರಪಂಚದಲ್ಲಿಯೇ ಹೆಚ್ಚು ಧಾರಾಕಾರವಾಗಿ ಸುರಿಯುವ ಮಳೆ. ಇನ್ನೊಂದು ಮಳೆಯಿಂದ ಕರಗುವ ಸುಣ್ಣ ಮತ್ತು ಜಲಜ ಶಿಲೆಗಳ ಬೆಟ್ಟಗಳಿಂದ ರೂಪುಗೊಂಡಿರುವುದು.

ಕ್ರೆಮ್ ಡಿಯಂಗ್ನ್‌ಯ್ ಎನ್ನುವ ಗುಹೆ ಕೇವಲ 116 ಮೀ. ಉದ್ದವಿದ್ದು ಅದರ ಒಳಕ್ಕೆ ಬೆಳಕು ಬಿದ್ದಾಗ ನೂರಾರು ಕ್ಯಾಂಡಲ್ ಹಚ್ಚಿದ ಚರ್ಚ್‌ನಂತೆ ಕಂಗೊಳಿಸುತ್ತದೆ. ಬ್ರಿಟಿಷರು ಮತ್ತು ಕಾಶಿಗಳ ನಡುವೆ ಯುದ್ಧ ನಡೆದಾಗ ಅನೇಕ ಕಾಶಿ ರಾಜರು ಗುಹೆಗಳಲ್ಲಿ ಅಡಗಿಕೊಂಡು ಬ್ರಿಟಿಷರ ಮೇಲೆ ಧಾಳಿ ಮಾಡಿದುದಾಗಿ ತಿಳಿಯುತ್ತದೆ. ಅದೇ ಕಾಲದಲ್ಲಿ ಜಯಂತಿಯ ರಾಜನ ಇಡೀ ಕುಟುಂಬ ಗುಹೆಯೊಂದರಲ್ಲಿ ಆಶ್ರಯ ಪಡೆದಿತ್ತು. ಕ್ರೆಮ್‌ಕುಟ್ ಸ್ಯುಟಂಗ್ ಗುಹೆಯಲ್ಲಿ ಅವಿತುಕೊಂಡ ಸ್ಥಳೀಯರು ಬ್ರಿಟಿಷರ ಮೇಲೆ ವಿಷ ಬಾಣಗಳ ಮಳೆಗರೆದು ನೂರಾರು ಬ್ರಿಟಿಷ್ ಯೋಧರನ್ನು ಸಾಯಿಸಿದ್ದರು. ಆದರೆ ಯಾವ ಕಡೆಯಿಂದ ಬಾಣಗಳು ಬರುತ್ತಿದ್ದವೆಂದು ಬ್ರಿಟಿಷರಿಗೆ ತಿಳಿಯಲಿಲ್ಲವಂತೆ. ಬ್ರಿಟಿಷರು ಸ್ಥಳೀಯರ ಮನೆಗಳ ಮೇಲೆ ಕಂದಾಯ ಏರಿದ ಕಾರಣದಿಂದ ಈ ಯುದ್ಧ ನಡೆದಿತ್ತು.

ಮೇಘಾಲಯದ ಗುಹೆಗಳ ಉದ್ದ, ಆಳ, ಅಗಲ ಮತ್ತು ಅವುಗಳ ಒಳಗೆ ಸ್ಟಾಲಗ್‌ಮೈಟ್ ಮತ್ತು ಸ್ಟಾಲಕ್‌ಟೈಟ್ (ಕಲ್ಲುಹೂವುಗಳು) ರೂಪುಗೊಂಡಿವೆ. ಈ ಶಿಲೆಗಳು ವೈವಿಧ್ಯಮಯ. ಇನ್ನು ಶಿಲೆಗಳ ಕಲೆ ಬಣ್ಣಿಸಲಾರದಷ್ಟು ವೈವಿಧ್ಯಮಯ. ಇದೆಲ್ಲ ಮಿಲಿಯಾಂತರ ವರ್ಷಗಳ ನೈಸರ್ಗಿಕ ಕುಸುರಿ ಕಲೆ. ಗುಹೆಗಳು ಅಗಾಧವಾಗಿ ಆಕಾರವಿಲ್ಲದ ಬಾವಿಗಳಂತೆ, ನೀಟಾಗಿ ಕತ್ತರಿಸಿದ ಆಕಾಶ

ಕಾಣುವ ಭಾವಣಿ ಇಲ್ಲದ ಬಾವಿಗಳಂತೆ, ಆಳಕ್ಕೆ ಇಳಿದ ಗಣಿ ಶ್ಯಾಫ್ಟ್‌ಗಳಂತೆ, ಮೇಲೆ ಗುಮ್ಮಟಗಳಂತೆ, ಹತ್ತಾರು ಬಾಗಿಲುಗಳಿರುವ ಸಂಕೀರ್ಣ ಗುಹೆ ಸಮೂಹಗಳು ಇರುತ್ತವೆ. ಗೋಳಾಕಾರದ ಆಳ ಪಾತಾಳ ಕೊರಕಲುಗಳು, ಹಳ್ಳ ಕೊಳ್ಳ ನದಿ ಸರೋವರಗಳು, ನೀರಿನ ಸಂಪುಗಳು, ಮರಳು ರಾಶಿಗಳು, ಕಡಿದಾದ ಸ್ತಂಭಗಳು, ಗೋಡೆಗಳಲ್ಲಿ ಮುತ್ತು ಹವಳಗಳನ್ನು ಪೋಣಿಸಿರುವಂತೆ ಕಾಣಿಸುವ ಜಿಪ್ಸಮ್ ಖನಿಜಗಳಿಂದ ರೂಪುಗೊಂಡಿರುವ ಕಾಮನಬಿಲ್ಲು ಬಣ್ಣಗಳ ಕಲ್ಲುಹೂವುಗಳು, ಸೂರ್ಯನ ಬೆಳಕಿನ ಕಿಟಿಕಿಗಳನ್ನು ಹೊಂದಿರುವ ಗುಹೆಗಳು ಹೀಗೆ ಒಂದೇ ಎರಡೇ? ಜೊತೆಗೆ ಬಸ್ಸು, ಮೆಟ್ರೋ ರೈಲು ನಿಲ್ದಾಣಗಳು, ಹೆದ್ದಾರಿಗಳು, ಜರ್ಮನ್‌ನ ಬರ್ಲಿನ್ ಗೋಡೆ, ತಾರಾಲಯಗಳು, ಗ್ಯಾಲರಿಗಳು, ಬಾಲ್ಕನಿಗಳು, ಸಿನಿಮಾ ಹಾಲುಗಳು, ಮೆಟ್ಟಲು, ಮಾಡುಗಳು, ದೇವಾಲಯ ಗೋಪುರಗಳು, ಈಗರ್ಜಿ, ಮಸೀದಿಗಳು ಹೀಗೆ ಎಲ್ಲವನ್ನು ಗುಹೆಗಳಲ್ಲಿ ಕಾಣಬಹುದು.

ಸಿನ್ರಂಗ್ ಪಮಿಯಂಗ್ ಎಂಬ ಗುಹೆಯ ಬಾಗಿಲಿನಿಂದ ಒಳಕ್ಕೆ 500 ಮೀಟರುಗಳ ದೂರ ನಡೆದ ಮೇಲೆ 7630 ಮೀಟರುಗಳ ಉದ್ದದ ಅಂಕುಡೊಂಕು ದಾರಿ ಸಾಗುತ್ತದೆ. ಇಡೀ ಗುಹೆಯ ನೆಲ ಮತ್ತು ಗೋಡೆಗಳು ಕೆಂಪು ಕಪ್ಪು ಬೂದು ನೀಲಿ ಹಸಿರು ಬಿಳಿ ಬಣ್ಣಗಳ ಜೊತೆಗೆ ಕಂಪ್ಯೂಟರ್ ಸೃಷ್ಟಿಸುವ ಎಲ್ಲಾ ಬಣ್ಣಗಳು ಶಿಲೆಗಳಿಂದ ಪ್ರಜ್ವಲಿಸುತ್ತವೆ. ಇದರ ಮಧ್ಯ ದೊರಕುವ ಟೈಟಾನಿಕ್ ಹಾಲ್ ಪ್ರಪಂಚದ ಗುಹೆಗಳಲ್ಲೇ ಅತಿ ಸುಂದರವಾದುದು. ಈ ಹಾಲಿನ ಮೇಣದ ನೆಲವೆಲ್ಲ ಮುತ್ತುಗಳಂತಹ ಖನಿಜಗಳಿಂದ ಬೆಳಗುತ್ತದೆ. ಒಟ್ಟಿನಲ್ಲಿ ಮೇಘಾಲಯ ಗುಹೆಗಳ ಮಾಯಲೋಕ ಎನ್ನುವುದು ಸತ್ಯ.

ಮೇಘಾಲಯದ ಈ ಗುಹೆಗಳಿಗೆ ಬಣ್ಣಬಣ್ಣದ ಬೆಳಕಿನ ದೀಪಗಳನ್ನು ಅಳವಡಿಸಿ ಒಳ್ಳೆ ರಸ್ತೆಗಳನ್ನು ಮಾಡಿ ಪ್ರವಾಸಿಗರನ್ನು ಆಕರ್ಷಿಸಿದರೆ ದೇಶದ ಪ್ರವಾಸೋದ್ಯಮದಲ್ಲಿ ದೊಡ್ಡ ಪವಾಡವನ್ನೇ ಮಾಡಬಹುದು. ಪ್ರಪಂಚದ ಅನೇಕ ದೇಶಗಳಲ್ಲಿ ಗುಹೆಗಳನ್ನು ಪ್ರವಾಸೋದ್ಯಮದ ಆಕರ್ಷಣೀಯ ಸ್ಥಳಗಳನ್ನಾಗಿ ಮಾರ್ಪಡಿಸಲಾಗಿದೆ. ಪ್ರಸ್ತುತ ಗುಹೆಗಳು ಅನೇಕ ದೇಶಗಳ ಮುಖ್ಯ ಆದಾಯವಾಗಿವೆ. ಆದರೆ ನಮ್ಮ ದೇಶ ಮಾತ್ರ ಎಲ್ಲದರಲ್ಲೂ ಹಿಂದೆ ಉಳಿದುಕೊಂಡಂತೆ ಇಲ್ಲಿಯೂ ಹಿಂದೆಯೇ ಉಳಿದುಕೊಂಡಿವೆ.

❑

ಲ್ಯಾಂಡ್ ಆಫ್ ಸ್ಮೈಲ್ - ಥೈಲ್ಯಾಂಡ್

ಭಾಗ - 2

ಅಧ್ಯಾಯ-6

ಥೈಲ್ಯಾಂಡಿನ ರಾಜಧಾನಿ ಬ್ಯಾಂಕಾಕ್ ಆಗಿದ್ದು ಮುಖ್ಯ ಭಾಷೆ ಥಾಯ್. ಜೊತೆಗೆ ಜನರು ಮಾತನಾಡುವ ಇತರ ಭಾಷೆಗಳೆಂದರೆ ಇಸಾನ್, ಕಾಮ್ ಮ್ಯುಯಾಂಗ್ಸ್ಯಕ್ ಮತ್ತು ಪಾಕ್ ಥೈ. ಜನಾಂಗೀಯ ಗುಂಪುಗಳೆಂದರೆ ಸೆಂಟ್ರಲ್ ಥಾಯ್ 34.1%, ಖೋನ್ ಇಸಾನ್ 24.9%, ಖೋನ್ ಮೌಂಗ್ 9.9%, ದಕ್ಷಿಣ ಥಾಯ್ 7.5%, ಥಾಯ್ ಚೈನೀಸ್ 14% ಮತ್ತು ಇತರ ಗುಂಪುಗಳು 12% (ಕರೆನ್ ಮಲಯ, ಮಾನ್, ಖಮೇರ್ - ಬೆಟ್ಟಗಳಲ್ಲಿ ವಾಸಿಸುವವರು).



ಧರ್ಮಗಳು :



ಮುಖ್ಯ ನಗರ ಪಟ್ಟಣಗಳ ಹೆಸರುಗಳಿರುವ ಥೈಲ್ಯಾಂಡಿನ ನಕ್ಷೆ

ಬೌದ್ಧಧರ್ಮ 94.50%, ಇಸ್ಲಾಂ 4.29%, ಕ್ರಿಶ್ಚಿಯನ್ 1.17%, ಹಿಂದೂ 0.03% ಮತ್ತು ಅಫಿಲಿಯೇಟೆಡ್ 0.01%. ಜನಸಂಖ್ಯೆ 2016ರ ಜನಗಣತಿಯಂತೆ 68,863,514.

ಗುಹೆಯ ಹೆಸರು :

1. ಥಮ್ ಲುವಾಂಗ್ ನಾಂಗ್ ನಾನ್
2. ಜಿಲ್ಲೆ ಮೇ ಸಾಯಿ
3. ಚಿಯಾಂಗ್ ರೈ ಪ್ರಾವಿನ್ಸ್ ಅಥವಾ ರಾಜ್ಯ
4. ಥೈಲ್ಯಾಂಡ್ ದೇಶ.

ಸ್ಥಳ ನಿರ್ದೇಶಾಂಶಗಳು :

20^0 22' 54" ಉತ್ತರ ರೇಖಾಂಶ.

99^0 52' 06" ಪೂರ್ವ ಅಕ್ಷಾಂಶ.

ಥೈಲ್ಯಾಂಡ್ ದೇಶ ಮತ್ತು ಮಿಲಿಟರಿ ಕಾನೂನು

ಮೇ 22, 2014ರವರೆಗೂ ಥೈಲ್ಯಾಂಡ್ ರಾಜಕೀಯವನ್ನು ಸಂವಿಧಾನಾತ್ಮಕ ರಾಜಪ್ರಭುತ್ವದ ಚೌಕಟ್ಟಿನೊಳಗೆ ನಡೆಸಲಾಗುತ್ತಿತ್ತು. ಇದರಲ್ಲಿ ಪ್ರಧಾನ ಮಂತ್ರಿ ಸರ್ಕಾರದ ಮುಖ್ಯಸ್ಥರಾದರೆ, ಆನುವಂಶಿಕ ಅರಸನು ದೇಶದ ಮುಖ್ಯಸ್ಥನಾಗಿರುತ್ತಾನೆ. ನ್ಯಾಯಾಂಗವು ಕಾರ್ಯಕಾರಿ ಮತ್ತು ಶಾಸಕಾಂಗ ಶಾಖೆಗಳಿಂದ ಕೂಡಿರುತ್ತದೆ. 22 ಮೇ, 2014ರ ದಂಗೆಯಿಂದ, 2007ರ ಸಂವಿಧಾನವನ್ನು ಹಿಂತೆಗೆದುಕೊಳ್ಳಲಾಯಿತು, ಥೈಲ್ಯಾಂಡ್ ರಾಷ್ಟ್ರೀಯ ಆಡಳಿತ ಮಂಡಳಿಯ ನಿಯಂತ್ರಣಕ್ಕೆ ತೆಗದುಕೊಂಡಿರುವ ರಾಷ್ಟ್ರೀಯ ಕೌನ್ಸಿಲ್ ಪಾರ್

ಫೀಸ್ ಆಂಡ್ ಆರ್ಡರ್ (ಎ.ಎನ್.ಸಿ.ಪಿ.ಒ) ಎಂಬ ಮಿಲಿಟರಿ ಸಂಘಟನೆಯ ಆಡಳಿತದಲ್ಲಿದೆ. ಎ.ಎನ್.ಸಿ.ಪಿ.ಒ ಮುಖ್ಯಸ್ಥನು ರಾಷ್ಟ್ರೀಯ ವಿಧಾನಸಭೆಯನ್ನು ರದ್ದುಪಡಿಸಿದನು ಮತ್ತು ಶಾಸಕಾಂಗ ಶಾಕೆಯ ಜವಾಬ್ದಾರಿಗಳನ್ನು ವಹಿಸಿಕೊಂಡನು. ಮಿಲಿಟರಿ ನ್ಯಾಯಾಲಯಗಳು ಸಾಮಾನ್ಯವಾಗಿ ನಾಗರಿಕ ನ್ಯಾಯಾಲಯಗಳ ಅಡಿಯಲ್ಲಿ ಕೆಲವು ಪ್ರಕರಣಗಳಿಗೆ ಜವಾಬ್ದಾರಿಯನ್ನು ವಹಿಸಿಕೊಂಡಿವೆ. ಆದಾಗ್ಯೂ, ಸಂವಿಧಾನಿಕ ನ್ಯಾಯಾಲಯ ಸೇರಿದಂತೆ ನ್ಯಾಯಾಲಯದ ವ್ಯವಸ್ಥೆಯು ಇನ್ನೂ ಅಸ್ತಿತ್ವದಲ್ಲಿದೆ, ಸಂವಿಧಾನವಿಲ್ಲದೆಯೂ ಉಳಿದಿದೆ.

ಥಾಯ್ ಸಾಮ್ರಾಜ್ಯಗಳು ಮತ್ತು ಸಿಯಾಮ್ನ ಕೊನೆಯ ಸಾಮ್ರಾಜ್ಯವು ಸಂಪೂರ್ಣವಾಗಿ ರಾಜರ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಿ.ಶ. 1932ರ ಪ್ರಜಾಪ್ರಭುತ್ವದ ಕ್ರಾಂತಿಯ ನಂತರ ಪಾಶ್ಚಾತ್ಯ ಅಧಿಕಾರಿಗಳು ಮತ್ತು ಸಂಪ್ರದಾಯ-ಆಧಾರಿತ ಮಿಲಿಟರಿ ನೇತೃತ್ವದಲ್ಲಿ, ರಾಷ್ಟ್ರದ ಅಧಿಕೃತ ರಾಜಕಾರಣವು ಸರ್ಕಾರದ ಮುಖ್ಯಸ್ಥನ ಮೂಲಕ ಪ್ರಧಾನವಾಗಿ ರೂಪುಗೊಂಡಿತು. ಮೊದಲ ಲಿಖಿತ ಸಂವಿಧಾನವನ್ನು ಅಳವಡಿಸಲಾಯಿತು. ಹಳೆಯ ಮತ್ತು ಹೊಸ ರಾಜಕೀಯ ಗಣ್ಯರು, ಅಧಿಕಾರಿಗಳು ಮತ್ತು ಜನರುಗಳ ನಡುವಿನ ಹೋರಾಟ ಮುಂದುವರಿದಿತ್ತು. ಕಾಲಕಾಲಕ್ಕೆ ದಂಗೆಗಳು ನಡೆದವು, ಆಗಾಗ್ಗೆ ಆಡಳಿತಾವಧಿಯ ಆಳ್ವಿಕೆಯಲ್ಲಿ ದೇಶ ಸಿಕ್ಕಿಕೊಳ್ಳುತ್ತಿತ್ತು. ಇಲ್ಲಿಯವರೆಗೂ ಥೈಲ್ಯಾಂಡ್ 17 ಹಕ್ಕುಪತ್ರಗಳ ಮಂಡನೆಯ ಜೊತೆಗೆ ಸಂವಿಧಾನಗಳನ್ನು ಹೊಂದಿದೆ. ಇದು ಉನ್ನತ ಮಟ್ಟದ ರಾಜಕೀಯ ಅಸ್ಥಿರತೆಯನ್ನು ಪ್ರತಿಫಲಿಸುತ್ತದೆ.



ಥೈಲ್ಯಾಂಡಿನ ಕೆಲವು ಮುಖ್ಯವಾದ ಯಾತ್ರಾ ಸ್ಥಳಗಳನ್ನು ತೋರಿಸುವ ನಕ್ಷೆ.

ಪ್ರತಿ ಯಶಸ್ವಿ ದಂಗೆಗಳ ನಂತರ, ಮಿಲಿಟರಿ ಆಳ್ವಿಕೆ ಅಸ್ತಿತ್ವದಲ್ಲಿರುವ ಸಂವಿಧಾನಗಳನ್ನು ಮತ್ತು ಘೋಷಿತ ಮಧ್ಯಂತರ ಹಕ್ಕುಗಳನ್ನು ರದ್ದುಪಡಿಸಿದೆ.

ರಾಜಕಾರಣಿಗಳು, ಪ್ರಭಾವದ ಅಧಿಕಾರಿಗಳು ಮತ್ತು ಜನರುಗಳ ನಡುವಿನ ಮಾತುಕತೆಗಳು ತಾತ್ಕಾಲಿಕ ರಾಜಕೀಯ ಸ್ಥಿರತೆಯನ್ನು ಪುನಃಸ್ಥಾಪಿಸಲು ಪ್ರೇರಕ ಶಕ್ತಿಯಾಗಿ ಮಾರ್ಪಟ್ಟಿದೆ. ಎಕನಾಮಿಸ್ಟ್ ಇಂಟೆಲಿಜೆನ್ಸ್ ಯುನಿಟ್ ಥೈಲ್ಯಾಂಡನ್ನು 2016ರಲ್ಲಿ ಹೈಬ್ರಿಡ್ ಆಡಳಿತ ಎಂದು ಗುರುತಿಸಿದೆ. ಥೈಲ್ಯಾಂಡ್ನಲ್ಲಿನ ಕಮ್ಯುನಿಸ್ಟ್ ದಂಗೆಯು 1965ರಿಂದ 1983ರವರೆಗೂ ಮುಂದುವರೆದು ಬಂದು ಗೆರಿಲ್ಲಾ ಯುದ್ಧಗಳಾಗಿ, ಮುಖ್ಯವಾಗಿ ಥೈಲ್ಯಾಂಡ್ ಕಮ್ಯುನಿಸ್ಟ್ ಪಕ್ಷ (ಟಿ.ಸಿ.ಪಿ) ಮತ್ತು ಥೈಲ್ಯಾಂಡ್ ಸರ್ಕಾರ ಹೊರಾಡಿತ್ತು. ಕ್ಷಮಾಧಾನ ಘೋಷಣೆಯ ನಂತರ 1980ರಲ್ಲಿ ಯುದ್ಧ ನಿರಾಕರಿಸಿತು ಮತ್ತು 1983ರ ವೇಳೆಗೆ ಟಿ.ಸಿ.ಪಿ ಬಂಡಾಯವನ್ನು ಕೈಬಿಟ್ಟಿತು. ಈಗ ಥೈಲ್ಯಾಂಡ್ ಅಭಿವೃದ್ಧಿ ಹೊಂದುತ್ತಿರುವ ದೇಶವಾಗಿದೆ. ವಿಶೇಷವಾಗಿ ಪ್ರವಾಸೋಧ್ಯಮದ ಕಡೆಗೆ ಸಾಕಷ್ಟು ಗಮನ ಹರಿಸಿ ಅಭಿವೃದ್ಧಿಪಡಿಸಿದೆ.

❑

ಥಮ್ ಲುವಾಂಗ್ ಗುಹೆಯ ಶಿಲೆಗಳ ಭೂವಿಜ್ಞಾನ

ಅಧ್ಯಾಯ–7

ಗುಹೆಗಳು ಸುಣ್ಣದ ಶಿಲೆಗಳಿಂದ ಕೂಡಿದ್ದು 10 ಕಿಲೋಮೀಟರುಗಳ ದೂರದವರೆಗೂ ಹರಿಡಿರುವ ಈ ಪರ್ವತ ಶ್ರೇಣಿಗಳು ಥೈಲ್ಯಾಂಡ್ ಮತ್ತು ಮ್ಯಾನ್ಮಾರ್ ದೇಶಗಳ ಗಡಿಗಳಲ್ಲಿ ಹರಡಿಕೊಂಡಿದೆ. ಈ ಪರ್ವತ ಪ್ರದೇಶದಲ್ಲಿ ಬೆಟ್ಟಗಳ ಒಳಗೆ ಆಳವಾದ ಹಿನ್ಸರಿತಗಳು, ಕಿರಿದಾದ ಹಾದಿಗಳು ಮತ್ತು ಗುಹೆಗಳ ಸುರಂಗಗಳು ನೂರಾರು ಮೀಟರುಗಳ ದೂರದವರೆಗೂ ಸಂಕೀರ್ಣವಾಗಿ ಹೆಣೆದುಕೊಂಡಿವೆ. ಮಳೆಗಾಲದಲ್ಲಿ ಈ ಸುರಂಗಗಳಲ್ಲಿ ನೀರು ನುಗ್ಗಿ ಗುಹೆಗಳು ತುಂಬಿಕೊಳ್ಳುತ್ತವೆ. ಪ್ರತಿ ಗುಹೆಯ ಬಾಗಿಲಲ್ಲಿ ಜೂಲೈಯಿಂದ ನವೆಂಬರ್‌ವರೆಗೂ ಗುಹೆಗಳ ಒಳಗೆ ಜನರ ಪ್ರವೇಶಿಸಬಾರದು ಎಂದು ಫಲಕಗಳನ್ನು ಹಾಕಲಾಗಿರುತ್ತದೆ.

○○○

ಅನುಭವಿ ಗುಹೆ ತಜ್ಞ ವರ್ನ್ ಅನ್ಸ್ವರ್ತ್ ಎಂಬಾತ ಇದೇ

ಥಮ್ ಲುವಾಂಗ್ ಗುಹೆಯ ಒಳಗೆ ಸಂಶೋಧನೆ ನಡೆಸಿ ಗುಹೆ ನಕ್ಷೆಯನ್ನು ಸಿದ್ಧಪಡಿಸಿದ್ದು, ಆತ ಗುಹೆಯ ಹತ್ತಿರದಲ್ಲೇ ವಾಸವಾಗಿದ್ದನು. ಈತ ಹುಡುಗರು ನಾಪತ್ತೆಯಾದ ದಿನದಿಂದಲೇ ಗುಹೆ ಬಾಗಿಲಲ್ಲಿ ಕಾಣಿಸಿಕೊಂಡನು. ಮೊದಲಿಗೆ ಈತನೆ ಥಾಯ್ ಸರ್ಕಾರಕ್ಕೆ ಬೇರೆ ದೇಶಗಳಿಂದ ಗುಹೆಯ ಒಳಗೆ ಈಜುವ ತಜ್ಞರನ್ನು ಸಹಾಯಕ್ಕೆ ಕರೆಸಬೇಕೆಂದು ಸಲಹೆ ನೀಡಿದ್ದು.

ಈ ಗುಹೆಗಳ ಬಗ್ಗೆ ಮಾತನಾಡುವಾಗ ಮೊದಲಿಗೆ ಗುಹೆಗಳ ಭೂವಿಜ್ಞಾನವನ್ನು ಮೂಲವಾಗಿ ತಿಳಿದುಕೊಳ್ಳಬೇಕಾಗಿದೆ. ಭೂವಿಜ್ಞಾನ ಮತ್ತು ಜಲಶಾಸ್ತ್ರಗಳು ಗುಹೆಗಳ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಜೊತೆಗೆ ಮಳೆಗಾಲದಲ್ಲಿ ಗುಹೆಗಳು ಹೇಗೆ ವರ್ತಿಸುತ್ತವೆ? ಆಮ್ಲಜನಕ ಹೊರಗಿನಿಂದ ಗುಹೆಗಳ ಒಳಕ್ಕೆ ಹೇಗೆ ತಲುಪುತ್ತದೆ ಎನ್ನುವುದನ್ನು ವಿಜ್ಞಾನಿಗಳು ಅತ್ಯಂತ ಕುತೂಹಲವಾಗಿ ಗಮನಿಸುತ್ತಿದ್ದರು. ರಕ್ಷಕರು ಹುಡುಗರನ್ನು ಹೊರಕ್ಕೆ ತರಲು ಹೆಣಗಾಡುತ್ತಿದ್ದರೆ ಭೂವಿಜ್ಞಾನಿಗಳು ಮತ್ತು ಜಲಶಾಸ್ತ್ರಜ್ಞರು ಗುಹೆಯ ಬಗ್ಗೆ ಅಧ್ಯಯನ ನಡೆಸುತ್ತಿದ್ದರು. ಹುಡುಗರನ್ನು ಪಾರು ಮಾಡುವ ಪ್ರಯತ್ನ ಬಹುಶಿಕ್ಷಣೀಯ ಮತ್ತು ಅಂತರರಾಷ್ಟ್ರೀಯ ವಿವಿಧ ಹಿನ್ನೆಲೆಗಳುಳ್ಳ ಮತ್ತು ಅನುಭವಗಳನ್ನು ಪಡೆದಿರುವ ಜನರೊಂದಿಗೆ ಕೆಲಸ ಮಾಡುವುದು ಮತ್ತು ಸಂಪೂರ್ಣವಾಗಿ ಇಂತಹ ಪರಿಸ್ಥಿತಿಗಳಲ್ಲಿ ಕೆಲಸವನ್ನು ನಿಭಾಯಿಸುವುದು ಮತ್ತು ಅರ್ಥ ಮಾಡಿಕೊಳ್ಳುವುದು ಹೇಗೆ ಎಂಬುದು ಇಲ್ಲಿನ ಗುಹೆಗಳ ಅಧ್ಯಯನ ಬಹು ದೊಡ್ಡ ಉದಾಹರಣೆಯಾಗಿತ್ತು.

ಥಮ್ ಲುವಾಂಗ್ ಗುಹೆ ಮತ್ತು ಸುತ್ತಮುತ್ತಲಿನ ಭೂವಿಜ್ಞಾನ ಮತ್ತು ಜಲವಿಜ್ಞಾನ ವಿಶಿಷ್ಟ ಮತ್ತು ಅಪಾಯಕರವಾಗಿದೆ. ಗುಹೆಯ ಒಳಗಿನ ಶಿಲಾರಚನೆಗಳು ಒಂದು ರೀತಿಯಲ್ಲಿ ಈಗಿನ ಪರಿಸ್ಥಿತಿಗೆ ಅಪಾಯವಾದರೆ ಇನ್ನೊಂದು ರೂಪದಲ್ಲಿ ಒಳ್ಳೆಯದಾಗಿದ್ದವು. ಡೊಯಿ ನಾಂಗ್ ನಾನ್ ಪರ್ವತಗಳ ಒಳಗೆ ಥಮ್ ಲುವಾಂಗ್ ಗುಹೆ 10 ಕಿ.ಮೀ.ಗಳ ಸುತ್ತಳತೆಯ ಗುಹೆಸಮೂಹವನ್ನು ಹೊಂದಿದೆ. ಗುಹೆಯ ಒಳಗೆ ಮತ್ತು ಸುತ್ತಮುತ್ತಲಿನ ಮುಖ್ಯ ಶಿಲೆಗಳೆಂದರೆ ಸುಣ್ಣ ಮತ್ತು ಸೆಡಿಮೆಂಟರಿ ಅಥವಾ ಇತರ ಮರಳು ಶಿಲೆಗಳಿಂದ ಕೂಡಿದ ಮಿಶ್ರಣ ಸಂಚಿತ ಶಿಲೆಗಳಾಗಿವೆ. ಈ ಶಿಲೆಗಳ ಜೊತೆಗೆ ಚೆರ್ಟ್ ಮತ್ತು ಶೇಲ್ ಶಿಲೆಗಳು ಸೇರಿವೆ. ವಾಸ್ತವವಾಗಿ ಥೈಲ್ಯಾಂಡಿನ ಹೆಚ್ಚು ಭಾಗ ಸುಣ್ಣದ ಶಿಲೆಗಳಿಂದ ಕೂಡಿದೆ. ಇದರ ಕಾರಣದಿಂದ ಥೈಲ್ಯಾಂಡಿನ

ಪ್ರಸಿದ್ಧ ಕಡಲ ತೀರಗಳು ಉದ್ದಕ್ಕೂ ಅದ್ಭುತ ಕಾಲಮ್ಗಳು (ಸ್ತಂಭಾಕೃತಿಯ) ಮತ್ತು ಕಡಿದಾದ ಇಳಿಜಾರು (ಕ್ಲಿಫ್ಸ್) ಬಂಡೆಗಳಿಂದ ಕೂಡಿವೆ.

ಥೈಲ್ಯಾಂಡಿನ ರೇಯ್ಲೆ ತೀರದಲ್ಲಿ ಸುಣ್ಣದ ಕಲ್ಲುಗಳ ಅದ್ಭುತವಾದ ಮತ್ತು ಕಡಿದಾದ ಕಲ್ಲುಬಂಡೆಗಳನ್ನು ನೋಡಬಹುದು. ಇವು ಯಾವುದೇ ಭೂಕಂಪ, ಸ್ತರಭಂಗ ಅಥವಾ ಶಿಲಾಪದರುಗಳ ಮುರಿತಗಳೆಂಬ ಭೂಪ್ರಕ್ರಿಯೆಗಳಿಂದ ರೂಪುಗೊಂಡಿಲ್ಲ. ಇದೆಲ್ಲ ಸುಣ್ಣದ ಶಿಲೆಗಳ ಜೊತೆಗೆ ನೀರಿನೊಂದಿಗೆ ನಡೆಯುವ ರಾಸಾಯನಿಕ ಪ್ರಕ್ರಿಯೆಗಳಿಂದ ಸೃಷ್ಟಿಯಾದ ಶಿಲಾ ವೈಶಿಷ್ಟ್ಯಗಳು. ಈ ರೀತಿಯ ಶಿಲೆಗಳ ಕುಸರಿಯನ್ನು ಉತ್ತರ ಥೈಲ್ಯಾಂಡಿನ ಕರಾವಳಿ ಮತ್ತು ಸಂಕೀರ್ಣ ಗುಹೆ ಸಮೂಹಗಳ ವ್ಯವಸ್ಥೆಯಲ್ಲಿ ನೋಡಬಹುದು. ಈ ನೈಸರ್ಗಿಕ ವಿನ್ಯಾಸಗಳು ಬೆರಗುಗೊಳಿಸುವ ರೀತಿಯಲ್ಲಿ ಕಂಗೊಳಿಸುತ್ತಿವೆ.

ನೈಸರ್ಗಿಕವಾಗಿ ಮಳೆ ನೀರಿನಲ್ಲಿ ಸ್ವಲ್ಪ ಆಮ್ಲೀಯ ಅಂಶ ಇರುತ್ತದೆ. ಈ ಕಾರಣದಿಂದ ಮಳೆ ಹನಿಗಳು ನೆಲಕ್ಕೆ ಬೀಳುವ ಮುನ್ನ ವಾತಾವರಣದಲ್ಲಿರುವ ಕಾರ್ಬನ್ ಡೈಆಕ್ಸೈಡ್ ಜೊತೆಗೆ ಬೆರೆತು ಕಾರ್ಬೋನಿಕ್ ಆಮ್ಲ ಉತ್ಪತ್ತಿಯಾಗುತ್ತದೆ: H2O + CO2 = H2CO3. ಈ ಪ್ರಕ್ರಿಯೆಯಿಂದ ಸರಾಸರಿ ಮಳೆ ನೀರು pH ಗೆ ಅಂದರೆ 5.6ಕ್ಕೆ (pH 7ಕ್ಕೆ ತಟಸ್ಥವಾಗಿರುತ್ತದೆ) ಪರಿವರ್ತನೆಗೊಳ್ಳುತ್ತದೆ. ಹೀಗೆ ಉತ್ಪತ್ತಿಯಾದ ಆಮ್ಲೀಯ ಮಳೆ ನೀರು ಸುಣ್ಣದ ಶಿಲೆಗಳೊಂದಿಗೆ ಪ್ರತಿಕ್ರಿಯಿಸುತ್ತದೆ. ಇದು ಕ್ಯಾಲ್ಸಿಯಂ ಕಾರ್ಬೋನೇಟ್ನಿಂದ ಕೂಡಿದ್ದು ಇದರಿಂದ ಚಾಕ್ ಪೀಸ್ ತಯಾರಿಸಲಾಗುತ್ತದೆ. ಸ್ವಲ್ಪ ಆಮ್ಲೀಯ ಮಳೆ ಸುಣ್ಣದ ಶಿಲೆಗಳ (CaCO3) ಮೇಲೆ ಬಿದ್ದರೆ ಕಾರ್ಬೋನಿಕ್ ಆಮ್ಲ (H2CO3) ಕ್ಯಾಲ್ಸಿಯಂ ಮತ್ತು ಕಾರ್ಬೋನೇಟನ್ನು ಉತ್ಪತ್ತಿ ಮಾಡುತ್ತದೆ. (pH expressing the acidity or alkalinity of a solution on which 7 is neutral, lower values are more acid and higher values are more alkaline).

ಇದೇ ರೀತಿಯ ನೈಸರ್ಗಿಕ ಪ್ರಕ್ರಿಯೆಯಿಂದ 10 ಕಿ.ಮೀ.ಗಳು ಉದ್ದದ ಥಮ್ ಲುವಾಂಗ್ ಗುಹೆಗಳ ಸಮೂಹ ಸೃಷ್ಟಿಯಾಗಿರುವುದು. ಈ ಗುಹೆ ಸಮೂಹದ ಒಳಗೆ ಚಾನಲ್ಗಳು ಮತ್ತು ಸುರಂಗ ಮಾರ್ಗಗಳ ಜಾಲ ಬಿಚ್ಚಿ-ಕೊಂಡಿದೆ. ಇದರಿಂದ 13 ಹುಡುಗರು ಸಿಕ್ಕಿಕೊಂಡಿರುವ ಈ ಗುಹೆಗಳ ಸಮೂಹ ಧನಾತ್ಮಕ ಮತ್ತು ನಕರಾತ್ಮಕದಿಂದ ಕೂಡಿತ್ತು. ಮಳೆ ನೀರಿನಿಂದ ಗುಹೆ ಒಳಗಿನ

ನೀರು ಕೊಚ್ಚಿಕೊಂಡೋದರೆ ಬೆಟ್ಟಗಳ ಮೇಲಿನ ಸಾವಿರಾರು ಬಿರುಕು ನೆರಿಕೆಗಳ ಮೂಲಕವೂ ನೀರು ಗುಹೆಗಳ ಒಳಕ್ಕೆ ಇಳಿಯುತ್ತಿತ್ತು. ಇದರ ಕಾರಣದಿಂದಲೇ ಹುಡುಗರ ತಂಡ ಗುಹೆಯ ಆಳದೊಳಕ್ಕೆ ಹೋಗಿ ಸಿಕ್ಕಿಕೊಂಡಿದ್ದು. ಮತ್ತೊಂದು ರೀತಿಯಲ್ಲಿ ಈ ಬಿರುಕು ನೆರಿಕೆಗಳಿಂದಲೇ ಗಾಳಿಯ ಮೂಲಕ ಆಮ್ಲಜನಕ ಸೋರಿ ಅವರು ಉಸಿರಾಡಲು ಸಾಧ್ಯವಾಗಿದ್ದು. ಇಲ್ಲವೆಂದರೆ ಒಂದೆರಡು ದಿನಗಳಲ್ಲಿಯೇ ಅವರ ಪ್ರಾಣಪಕ್ಷಿಗಳು ಹಾರಿಹೋಗುತ್ತಿದ್ದವು.

ದುರದೃಷ್ಟವಶಾತ್, ಬಿರುಕುಗಳ ಮೂಲಕ ಗಾಳಿಯಾಡುವ ವೇಗಕ್ಕಿಂತ ನೀರು ಹರಿಯುವ ವೇಗ ಹೆಚ್ಚಾಗಿಬಿಟ್ಟಿತ್ತು. ಇದರ ಕಾರಣದಿಂದ ಆಗಾಗ ಗಾಳಿಯಲ್ಲಿ ಆಮ್ಲಜನಕದ ಮಟ್ಟ ತೀರಾ ಕಡಿಮೆಯಾಗಿಬಿಡುತ್ತಿತ್ತು. ಹಾಗಾಗಿ ಆಮ್ಲಜನಕವನ್ನು ಗಾಳಿಯನ್ನು ಗುಹೆಗಳ ಒಳಗೆ ಏರ್ (ಸಿಲೆಂಡರ್ಗಳು) ಟ್ಯಾಂಕರ್ಗಳ ಮೂಲಕ ತುಂಬುತ್ತಲೇ ಇರಬೇಕಾಗಿತ್ತು. ಕಾರ್ಯಕರ್ತರಿಗೆ ಇದೊಂದು ದೊಡ್ಡ ತಲೆನೋವಾಗಿತ್ತು.

❑

ಹನ್ನೆರಡು ಜನ ಬುದ್ಧಿವಂತರು ಮತ್ತು ಒಬ್ಬ ಬೌದ್ಧ ಸನ್ಯಾಸಿ

ಅಧ್ಯಾಯ-೮

2018, ಜೂನ್ 23ರಂದು ಜ್ಯೂನಿಯರ್ ಫುಟ್ಬಾಲ್ ತಂಡದ 13 ಯುವಕರು ಗುಹೆಯೊಳಗೆ ಗೋಡೆಗಳ ಮೇಲೆ ತಮ್ಮ ಹೆಸರುಗಳನ್ನು ಬರೆಯಲು ಮತ್ತು ಒಬ್ಬ ಯುವಕನ ಹುಟ್ಟು ದಿನ ಆಚರಿಸಿಕೊಳ್ಳಲು ಉತ್ಸಾಹದಿಂದ ಗುಹೆ ಒಳಕ್ಕೆ ಹೋದರು. ಕೆಲವು ಕಡೆ ಅವರು ತಮ್ಮ ಹೆಸರುಗಳನ್ನು ಮುಂಚೆಯೂ ಗೋಡೆಗಳ ಮೇಲೆ ಬರೆದು ಬಂದಿದ್ದರು. ಅವರು ಗುಹೆ ಒಳಗೆ ಹೋಗಿದ್ದೆ ಹೊರಗಡೆ ಮಳೆ 'ಧೋ...' ಎಂದು ಸುರಿಯತೊಡಗಿತು. ಸಾಕಷ್ಟು ಒಳಕ್ಕೆ ಹೋಗಿದ್ದ ಅವರೆಲ್ಲ ಹಿಂದಕ್ಕೆ ಬರುವು ಮುಂಚೆಯೆ ಗುಹೆಯ ಬಾಗಿಲು ಪ್ರವಾಸದಿಂದ ಹರಿಯುತ್ತಿದ್ದು ಹೊರಗಿನ ದಾರಿ ಕತ್ತರಿಸಿಕೊಂಡಿತ್ತು. ಈಗ ಅವರಿಗೆ ಬೇರೆ ದಾರಿ ಇಲ್ಲದೆ ಗುಹೆ ಒಳಗೆ ಹಿಂದಕ್ಕೆ ಹಿಂದಕ್ಕೆ ಹೋಗಬೇಕಾಯಿತು.

ಅವರಿಗೆ ಕತ್ತಲಲ್ಲಿ ದಾರಿ ಕಾಣಲಿಲ್ಲ. ಈಗ ವಿಧಿ ಇಲ್ಲದೆ ಒಳಕ್ಕೆ ನುಗ್ಗಿಬರುತ್ತಿದ್ದ ಪ್ರಹಾಹದ ನೀರಿನಿಂದ ತಪ್ಪಿಸಿಕೊಳ್ಳಲು

ಗುಹೆಯ ಒಳಗೆ ಕಲ್ಲುಬಂಡೆಗಳನ್ನು ಹತ್ತಿ ಇಳಿದು ಜಾರುತ್ತ ಹಾದುಹೋದರು. ಕೊನೆಗೆ ಸ್ವಲ್ಪ ಎತ್ತರದ ಒಣಗಿದ ಭಾಗ 4 ಕಿಲೋಮೀಟರಗಳ ದೂರದಲ್ಲಿ ದೊರೆಯಿತು. ಅಲ್ಲಿ ಕತ್ತಲಲ್ಲಿ ಅವರಿಗೆ ಏನೂ ತೋಚದೆ ಅಲ್ಲಿಯೇ ನೆಲೆ ಕಂಡುಕೊಂಡು ಯಾರಾದರು ಬಂದು ರಕ್ಷಣೆ ಮಾಡುತ್ತಾರೆಂದು ಎದುರು ನೋಡುತ್ತ ಕಾಯತೊಡಗಿದರು. ಈ ಹುಡುಗರು ಮತ್ತು ಅವರ ತರಬೇತುದಾರ ಆಗಾಗ ಜಲಪಾತಗಳಲ್ಲಿ ಈಜುವುದು, ಪರ್ವತಗಳ ದಾರಿಗಳಲ್ಲಿ ಸೈಕ್ಲಿಂಗ್ ಮಾಡುವುದು, ರಿವರ್ ರ್‍ಯಾಫ್ಟಿಂಗ್ ಮತ್ತು ಗುಹೆಗಳ ಅನ್ವೇಷಣೆ ಇತ್ಯಾದಿ ಸಾಹಸ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಿದ್ದರು.

ಹುಡುಗರು ಗುಹೆಯ ಒಳಗೆ ಸಿಕ್ಕಿಕೊಂಡ ವಿಷಯ ಆಧುನಿಕ ಮಾಧ್ಯಮದ ಮೂಲಕ ಪ್ರಪಂಚವೆಲ್ಲ ಹರಡಿ ವಿಷಯ ಕೇಳಿದ ಜನರು ತಲ್ಲಣಗೊಂಡರು. ಗುಹೆಯ ಒಳಗೆ ಸಿಲುಕಿಕೊಂಡ ಈ 13 ಜನ ಯುವಕರನ್ನು ಹೊರಕ್ಕೆ ತೆಗೆಯಲು ನಡೆಸಿದ ಆಧುನಿಕ ತಂತ್ರಜ್ಞಾನ, ಡೈವರ್ಸ್ ಅಥವಾ ಈಜುಗಾರರ ಸಾಹಸ ಮತ್ತು ಗುಹಾತಜ್ಞರ ಕಠಿಣ ಕೆಲಸದಿಂದ 18 ದಿನಗಳಾದ ಮೇಲೆ ಎಲ್ಲರನ್ನು ಹೊರಕ್ಕೆ ಕರೆದು ತರಲಾಯಿತು. ಒಳಗೆ 9 ದಿನಗಳ ಕಾಲ ಅನ್ನ ಆಹಾರ ಬೆಳಕು ಗಾಳಿ ಬದುಕುಳಿಯಲು ಬೇಕಾಗಿರುವ ಆಮ್ಲಜನಕದ ಕೊರೆತೆಯಲ್ಲೂ 11 ರಿಂದ 16 ವರ್ಷಗಳ ವಯಸ್ಸಿನ ಯುವಕರು ಬದುಕಿ ಉಳಿದಿದ್ದೆ ಒಂದು ಪವಾಡ. ಪ್ರತಿ ಕ್ಷಣವೂ ಅವರನ್ನ ಸಾವು ಹಿಂಬಾಲಿಸುತ್ತಲೇ ಇತ್ತು. ಇದೊಂದು ಮನುಷ್ಯ ಛಲದ ಹೊಸ ರೂಪಕವಾಗಿದ್ದು ಮುಂದಿನ ದಿನಗಳಲ್ಲಿ ಇತಿಹಾಸದಲ್ಲಿ ದಾಖಲಾಗಿ ಉಳಿದುಹೋಗುವ ಘಟನೆಯಾಯಿತು.


ಭೂಮಿಯ ಮೇಲಿನ ಅತ್ಯಂತ ಜನಪ್ರಿಯ ಫುಟ್ಬಾಲ್ ಆಟದ ಒಂದು ನೋಟ.

2018, ಜೂನ್ 23ರಿಂದ ಜುಲೈ 10ರ ಮಧ್ಯದ 18 ದಿನಗಳ ಕಾಲದ ಈ ಪವಾಡವನ್ನು ಇಡೀ ವಿಶ್ವ ಬೆರಗುಗಣ್ಣುಗಳಿಂದ ನೋಡುವಂತಾಗಿತ್ತು. ಇನ್ನು ಥೈಲ್ಯಾಂಡಿನವರಿಗಂತು ಇದೊಂದು ರೋಚಕ, ರೋಮಾಂಚನ ಅನುಭವವಾಗಿ ಉಳಿದುಹೋಯಿತು. ಮತ್ತು ಮನುಷ್ಯ ಮನುಷ್ಯರ ಮಧ್ಯೆ ಸ್ನೇಹಕ್ಕಾಗಿ, ಮಾನವ ಸಹಿಷ್ಣುತೆಯ ಗಮನಾರ್ಹ ಕಥನವಾಗಿ ಸುವರ್ಣದ ಅಕ್ಷರಗಳಲ್ಲಿ ಬರೆಯಲ್ಪಟ್ಟಿತು. ಇದೆಲ್ಲವೂ ಜೂನ್

23ರ ಶನಿವಾರ ಒಬ್ಬ ಯುವಕನ ಹುಟ್ಟು ಹಬ್ಬದಿಂದ ಪ್ರಾರಂಭವಾಗಿತ್ತು. ಆ ದಿನ ಪೀರಾಪತ್ ಎಂಬ ಹುಡುಗನ ಹುಟ್ಟು ದಿನವಾಗಿದ್ದು ಅವನಿಗೆ 16 ವರ್ಷ ತುಂಬಿ 17ನೇ ವರ್ಷಕ್ಕೆ ಕಾಲಿಟ್ಟಿದ್ದನು. ಎಲ್ಲರಿಗೂ ಹುಟ್ಟು ಹಬ್ಬ ಆಚರಿಸಿಕೊಳ್ಳುವುದೆಂದರೆ ಎಲ್ಲಿಲ್ಲದ ಸಂಭ್ರಮ. ಅವನೂ ತನ್ನದೇ ಪ್ರತ್ಯೇಕ ರೀತಿಯಲ್ಲಿ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳಲು ತನ್ನ ಗೆಳೆಯರ ಜೊತೆಗೆ ಗುಹೆ ಒಳಕ್ಕೆ ಹೋಗಿ ಎಲ್ಲರೂ ಸಿಕ್ಕಿಕೊಂಡಿದ್ದನು.

ಅವನ ಕುಟುಂಬ ಸದಸ್ಯರು ಪ್ರಕಾಶಮಾನವಾದ ಹಳದಿ ಬಣ್ಣದ ಸ್ಪಾಂಗೆಬಾಬ್ ಸ್ಕ್ವೇರ್ಪ್ಯಾಂಟ್ ಹೆಸರಿನ ಹುಟ್ಟು ಹಬ್ಬದ ವಿಶೇಷ ಕೇಕ್ ಮತ್ತು ಹಲವು ಬಣ್ಣಬಣ್ಣದ ಸುನಾರಿ ಕಾಗದಗಳಲ್ಲಿ ಸುತ್ತಿದ ಉಡುಗೊರೆಗಳನ್ನು ಮನೆಗೆ ತಂದು ಹಬ್ಬಕ್ಕೆ ತಯಾರಿ ಮಾಡಿಕೊಂಡಿದ್ದರು. ಅವನ ಹಳ್ಳಿ ಥೈಲ್ಯಾಂಡಿನ ಗ್ರಾಮೀಣ ಪ್ರದೇಶ ಸಾಯಿ ಮೇ ಜಿಲ್ಲೆಗೆ ಸೇರಿದ್ದಾಗಿತ್ತು. ಆದರೆ ಅವನು ಆ ರಾತ್ರಿ ಮನೆಗೆ ಹಿಂದಿರುಗಲಿಲ್ಲ. ಅವನು ತನ್ನ ಫುಟ್ಬಾಲ್ ತಂಡ 'ವೈಲ್ಡ್ ಬೋರ್ಸ್' (ಕಾಡು ಹಂದಿಗಳು) ಗೆಳೆಯರ ಜೊತೆಗೆ ಹೊರಗೆ ಹೋಗಿದ್ದನು. ಅವರ ಜೊತೆಗೆ ತಂಡದ ತರಬೇತುದಾರ ಏಕಾಫೋಲ್ ಚಂತವಾನ್ ಕೂಡ ಇದ್ದನು. ಫುಟ್ಬಾಲ್ ಅಭ್ಯಾಸ ಮುಗಿದ ಮೇಲೆ ಅವರು ಭತ್ತದ ಗದ್ದೆಗಳ ದಾರಿಯಲ್ಲಿ ಅರಣ್ಯದ ಮಧ್ಯೆ ಬೆಟ್ಟಗಳ ಕಡೆಗೆ ಸೈಕಲ್‌ಗಳಲ್ಲಿ ಸವಾರಿ ಹೊರಟರು. ಅವರು ದಾರಿಯಲ್ಲಿ ಹೋಗುತ್ತಿದ್ದಂತೆ ಎಚ್ಚರಿಕೆ ಎಂಬಂತೆ ಮಳೆ ಶುರುವಾಗಿತ್ತು. ಆದರೆ ಅದ್ಯಾವುದನ್ನು ಅವರು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ.



ವೈಲ್ಡ್ ಬೋರ್ಸ್ ಜೂನಿಯರ್ ಫುಟ್ಬಾಲ್ ತಂಡದ ಯುವಕರು.

ಥಮ್ ಲುವಾಂಗ್ ಗುಹೆಗಳು ಅವರ ನೆಚ್ಚಿನ ಸ್ಥಳವಾಗಿತ್ತು. ಮೇ ಸಾಯಿಯ ಆ ಪರ್ವತ ಪ್ರದೇಶಗಳ ಪ್ರತಿಯೊಂದು ಮೂಲೆ, ಕಣಿವೆ, ಎತ್ತರದ ಬೆಟ್ಟಗಳು ಅವರಿಗೆ ಇಷ್ಟವಾದ ಪ್ರದೇಶಗಳಾಗಿದ್ದವು. ಅವರು ತಲುಪಬೇಕಾಗಿದ್ದ ಸ್ಥಳ ಥಮ್ ಲುವಾಂಗ್ ನಾಂಗ್ ನಾನ್ ಗುಹೆಯಾಗಿದ್ದು ಅವರೆಲ್ಲ ಥಮ್ ಲುವಾಂಗ್ ಗುಹೆ ಬಾಯಿಯ ಮುಂದೆ ಸೈಕಲ್ಗಳಿಗೆ ಬೀಗ ಹಾಕಿ ನಿಲ್ಲಿಸಿ ತಮ್ಮ ಚೀಲಗಳನ್ನು ಭದ್ರಪಡಿಸಿದರು. ಎಲ್ಲರೂ ಆ ರಾತ್ರಿ ಪೀರಾಪತ್ ಹುಟ್ಟುಹಬ್ಬವನ್ನು

ಆಚರಿಸಲು ಆ ಗುಹೆಯೊಳಗೆ ಹೊರಟರು. ಅಲ್ಲಿಗೆ ಹೋದಾಗಲೆಲ್ಲ ಅವರೆಲ್ಲ ಆ ಗುಹೆಯ ಆಳದೊಳಕ್ಕೆ ಹೋಗಿ ತಮ್ಮ ತಮ್ಮ ಹೆಸರುಗಳನ್ನು ಕೆತ್ತಿ ಆಟವಾಡುತ್ತ ನಕ್ಕು ನಲಿದಾಡುತ್ತ ಹಿಂದಕ್ಕೆ ಬರುತ್ತಿದ್ದರು.

ಈ ಸಲ ಹೆಚ್ಚಿನ ಉತ್ಸಾಹದಲ್ಲಿ ಗುಹೆಯೊಳಗೆ ಹೋಗುವಾಗ ಕೇವಲ ಮೂರು ಟಾರ್ಚ್‌ಗಳು ಮಾತ್ರ ಅವರ ಕೈಗಳಲ್ಲಿ ಇದ್ದವು. ಅದಕ್ಕಿಂತ ಹೆಚ್ಚಾಗಿ ಅವರ ಜೊತೆಗೆ ಏನೂ ಇರಲಿಲ್ಲ. ಪೀರಾಪತ್ ಹುಟ್ಟು ಹಬ್ಬವನ್ನು ಸಾಯಂಕಾಲ ಮನೆಗೆ ಹೋಗಿ ಮತ್ತೆ ಗೆಳೆಯರ ಜೊತೆಗೆ ಆಚರಣೆ ಮಾಡಿಕೊಳ್ಳುವುದು ಅವನ ಯೋಜನೆಯಾಗಿತ್ತು. ಕೇವಲ ಒಂದು ಗಂಟೆ ಸಮಯ ಮಾತ್ರ ಗುಹೆಯ ಒಳಗೆ ಕಾಲ ಕಳೆದು ಬರುವುದಾಗಿ ಅವರೆಲ್ಲ ಮಾತನಾಡಿಕೊಂಡಿದ್ದರು. ಆದರೆ ಪಾಪ! ಒಳಗೆ ಹೋದವರು 18 ದಿನಗಳ ದೀರ್ಘ ಕಾಲ ಗುಬ್ಬಚ್ಚಿಗಳಂತೆ ಪ್ರಾಣ ಹಿಡಿದುಕೊಂಡು ಹೊರಕ್ಕೆ ಬಂದರು. ರಾತ್ರಿ ಕಳೆಯುತ್ತಿದ್ದಂತೆ ಪೀರಾಪತ್ ಅವರ ಮನೆಯಲ್ಲಿ ಕಳವಳ ಪ್ರಾರಂಭವಾಗಿತ್ತು. ಅವನ ಹುಟ್ಟು ಹಬ್ಬದ ಕೇಕನ್ನು ಯಾರೂ ಮುಟ್ಟಲಿಲ್ಲ. 'ಈ ವೈಲ್ಡ್ ಬೋರ್ಸ್ ಅನ್ನ ಆಹಾರ ಇಲ್ಲದೆ ರಾತ್ರಿ ಹೊತ್ತಿನಲ್ಲಿ ಎಲ್ಲಿಗೆ ಹೋದವು?' ಎನ್ನುತ್ತ ಒಬ್ಬರನ್ನೊಬ್ಬರು ಕೇಳಿಕೊಳ್ಳುತ್ತಿದ್ದರು.



ವೈಲ್ಡ್ ಬೋರ್ಸ್ ಹೊರಟಿದ್ದ ಥಮ್ ಲುವಾಂಗ್ ಗುಹೆಯ ಹಿನ್ನೆಲೆ ದೃಶ್ಯ.

ಥೈಲ್ಯಾಂಡ್ ಮತ್ತು ಮ್ಯಾನ್ಮಾರ್ ದೇಶಗಳ ಗಡಿಗಳನ್ನು ಅಂಚಿಕೊಂಡಿರುವ ಥಮ್ ಲುವಾಂಗ್ ಗುಹೆಗಳಿರುವ ಪರ್ವತಗಳು ದಟ್ಟ ಮೋಡಗಳ ಕೆಳಗೆ ಕಿಲೋಮೀಟರುಗಳು ದೂರು ಚಾಚಿಕೊಂಡಿರುವ ಪರ್ವತ ಮಾಲೆಗಳು. ಥಮ್ ಲುವಾಂಗ್ ಗುಹೆಗಳು ಥೈಲ್ಯಾಂಡ್‌ನಲ್ಲಿ ನಾಲ್ಕನೇ ದೊಡ್ಡದಾದ ಸಂಕೀರ್ಣ ಗುಹೆಗಳ ಸಮೂಹ. ಮಹಿಳೆಯೊಬ್ಬಳು ಒರಗಿಕೊಂಡಂತೆ ಕಾಣುವ ಈ ಪರ್ವತಕ್ಕೆ 'ಥಮ್ ಲುವಾಂಗ್ ಖುನ್ ನಾಮ್ ನಾಂಗ್ ನಾನ್' ಎನ್ನುವುದು ಪೂರ್ಣ ಹೆಸರು. ಈ ದೊಡ್ಡದಾದ ಗುಹೆ ಮತ್ತು ನೀರಿನ ಮೂಲ ಇರುವ ಇದಕ್ಕೆ ನಿದ್ರಿಸುವ ಮಹಿಳೆ ಎಂಬ ಹೆಸರೂ ಇದೆ. ಇದರ ಬಗ್ಗೆ ಅಪಾರ ಜಾನಪದ ಕಥೆಗಳೂ ಇವೆ.

ಥಮ್ ಲುವಾಂಗ್ ಗುಹೆ ಒಂದು ದಿನದ ಜನಪ್ರಿಯ ಸಾಹಸ ಯಾತ್ರಾ ತಾಣವಾಗಿದೆ. ಹಲವಾರು ಸಲ ಇದರ ಒಳಕ್ಕೆ ಹೋದ ಅನೇಕ ಜನರು ಹಿಂದಕ್ಕೆ ಬಂದಿಲ್ಲದ ಉದಾಹರಣೆಗಳೂ ಇವೆ. ಜುಲೈ ತಿಂಗಳಲ್ಲಿ ಮುಂಗಾರು ಮಳೆ ಪ್ರಾರಂಭವಾದರೆ ಈ ಗುಹೆ ಅತ್ಯಂತ ಅಪಾಯಕಾರಿಯಾಗಿ ಮಾರ್ಪಡುತ್ತದೆ. ಭಾರೀ ಮಳೆಯಾದಲ್ಲಿ ಕೆಲವೊಮ್ಮೆ ಗಹೆಯ ಒಳಗೆ 16 ಅಡಿಗಳ ಎತ್ತರದವರೆಗೂ ಮಳೆ ನೀರಿನ ಪ್ರವಾಹ ಹರಿಯುತ್ತದೆ. ಹಾಗಾಗಿ ಜನರು ಸಾಮಾನ್ಯವಾಗಿ ನವೆಂಬರ್ ತಿಂಗಳಿಂದ ಏಪ್ರಿಲ್ ತಿಂಗಳ ಮಧ್ಯದಲ್ಲಿ ಮಾತ್ರ ಗುಹೆಯ ಒಳಕ್ಕೆ ಹೋಗಿ ಬರುತ್ತಾರೆ. ಮಳೆ ನೀರಿನ ಪ್ರವಾಹದ ಜೊತೆಗೆ ಕಲ್ಲು ಮಣ್ಣು, ಸುತ್ತಲಿನ ಅರಣ್ಯದ ಕಲ್ಮಷ ಎಲ್ಲವೂ ಗುಹೆಯ ಒಳಕ್ಕೆ ನುಗ್ಗಿದೆ. ಒಮ್ಮೆ ಗುಹೆ ಒಳಗೆ ಪ್ರವಾಹ ನುಗ್ಗಿದರೆ ಎಂತಹ ಈಜುಗಾರನೂ ಸಹ ಅಪಾಯದಲ್ಲಿ ಸಿಲುಕಿಕೊಳ್ಳುತ್ತಾನೆ. ಮೇ ಸಾಯಿ ಜಿಲ್ಲೆಯಲ್ಲಿರುವ ಎಲ್ಲರಿಗೂ ಇದು ಗೊತ್ತಿರುವ ಸಂಗತಿಯಾಗಿದೆ.

ಆತಂಕಕ್ಕೆ ಒಳಗಾದ ವೈಲ್ಡ್ ಬೋರ್ಸ್ ಪೋಷಕರು, ಅವರ ಮಿತ್ರರು ಎಲ್ಲಿಗೆ ಹೋಗಿದ್ದಾರೆ ಎಂಬ ಊಹೆಯ ಜಾಡಿಡಿದು ಪೊಲೀಸರ ಜೊತೆಗೆ ಮರು ದಿನ ಬೆಳಿಗ್ಗೆ ನೇರವಾಗಿಯೇ ಥಮ್ ಲುವಾಂಗ್ ಗುಹೆಯ ಹತ್ತಿರಕ್ಕೆ ಹೋದರು. ಈ ಹುಡುಗರು ತಮ್ಮ ಮೊಬೈಲ್‌ಗಳಲ್ಲಿ ಕೆಲವು ಪೋಷಕರು ಮತ್ತು ಗೆಳೆಯರಿಗೆ ಗುಹೆಗೆ ಹೋಗುವುದರ ಬಗ್ಗೆ ಮೆಸೇಜ್ ಮಾಡಿದ್ದರು ಮತ್ತು ಕೆಲವು ಸಲ ಮಾತನಾಡಿಕೊಂಡಿದ್ದನ್ನು ಪೋಷಕರು ಕೇಳಿದ್ದರೂ ಕೂಡ. ಗುಹೆಯ ಹತ್ತಿರ ತಲುಪಿದ್ದೆ ಗುಹೆ ಬಾಗಿಲಲ್ಲಿ ಸೈಕಲ್‌ಗಳು, ಚೀಲಗಳು, ಫುಟ್ಬಾಲ್ ಶೂಗಳು ಮತ್ತು ಇತರೆ ವಸ್ತುಗಳು ಇರುವುದು ಕಂಡುಬಂದಿತು. ಗುಹೆಯ ಒಳಗೆ ಆಗಲೇ 'ವೈಲ್ಡ್ ಬೋರ್ಸ್' ಪ್ರವಾಹದ ಮಧ್ಯೆ ಕೆಸರು ನೀರಿನಲ್ಲಿ ತೊಂದರೆಗೆ ಸಿಲುಕೊಕೊಂಡಿದ್ದರು. ನಾಲ್ಕಾರು ದಿನಗಳು ಮಳೆ ಬೆಟ್ಟಗಳ ಮೇಲೆ ನಿರಂತರವಾಗಿ ಬೀಳುತ್ತಲೇ ಇದ್ದು, ಬಿದ್ದ ಅಗಾಧ ಮಳೆ ನೀರು, ವೈಲ್ಡ್ ಬೋರ್ಸ್ ಇದ್ದ ಗುಹೆಯೊಳಕ್ಕೆ ನುಗ್ಗುತ್ತಲೇ ಇತ್ತು.



ವೈಲ್ಡ್ ಬೋರ್ಸ್ ತಂಡ ಗುಹೆಯ ಒಳಗೆ ಹೋಗುವ ಮುನ್ನ ತಮ್ಮ ಸೈಕಲ್ಲಗಳನ್ನು ಗುಹೆ ಬಾಗಿಲಲ್ಲಿ ಭದ್ರಪಡಿಸಿರುವುದು.

ಜೂನ್ 23 ರಂದು ವೈಲ್ಡ್ ಬೋರ್ಸ್ ಮುಖ್ಯ ಫುಟ್ಬಾಲ್ ತರಬೇತುದಾರನಿಗೆ

ಫುಟ್ಬಾಲ್ ತಂಡದ ಹುಡುಗರ ಪೋಷಕರ ಕಡೆಯಿಂದ 20 ಫೋನ್ ಕಾಲ್ಗಳು ಬಂದಿದ್ದನ್ನು ಸಾಯಂಕಾಲ 7 ಗಂಟೆಗೆ ನೋಡಿಕೊಂಡರು. ಆತ ತಕ್ಷಣವೇ ಎಲ್ಲಾ ಕಡೆಗೆ ಫೋನ್ ಮಾಡಿ ನೋಡಿದರು. ಫುಟ್ಬಾಲ್ ಆಟ ಅಭ್ಯಾಸ ಮಾಡಿ ಗೆಳೆಯರ ಜೊತೆಗೆ ಗುಹೆಗೆ ಹೋಗದೆ ಮನೆಗೆ ಹಿಂದಿರುಗಿದ್ದ 13 ವರ್ಷದ ಕಂಥಾವಾಂಗ್‌ನನ್ನು ವಿಚಾರಿಸಿದಾಗ ಹುಡುಗರ ತಂಡ ಗುಹೆಗೆ ಹೋಗಿರುವುದಾಗಿ ತಿಳಿದುಬಂದಿತು. ತರಬೇತುದಾರ ಬೆಳಿಗ್ಗೆಯೇ ಗುಹೆಯ ಹತ್ತಿರಕ್ಕೆ ಹೋಗಿ ಹುಡುಗರ ಸೈಕಲಗ್ಗಳು ಮತ್ತು ಇತರ ವಸ್ತುಗಳು ಗುಹೆಯ ಬಾಗಿಲಲ್ಲಿ ಇರುವುದನ್ನು ನೋಡಿದರು. ಇದೇ ವಿಷಯವನ್ನು ಪೋಷಕರು ಪೊಲೀಸರಿಗೆ ಮೊದಲೇ ತಿಳಿಸಿದ್ದ ಕಾರಣ ಪೊಲೀಸರು ಸಹ ಗುಹೆ ಹತ್ತಿರಕ್ಕೆ ತಲುಪಿ ವಿಷಯವನ್ನು ದೃಢಪಡಿಸಿಕೊಂಡರು.

ಥಮ್ ಲುವಾಂಗ್ ಗುಹೆ ಸಮೂಹದ ಒಳಕ್ಕೆ ಸುರಂಗಗಳ ಮೂಲಕ ಎಲ್ಲೆಲ್ಲೂ ನೀರು ಹೋಗುತ್ತಿತ್ತು. ಗುಹೆ ಸಮೂಹ ಅಥವಾ ಗುಹೆ ವ್ಯವಸ್ಥೆಯೆಂದರೆ (Cave system) ಬೆಟ್ಟಗಳ ಕೆಳಗೆ, ನೆಲದ ಒಳಗೆ ಲಕ್ಷಾಂತರ ವರ್ಷಗಳಿಂದ ಮಳೆ ನೀರು ಹರಿದೂ ಹರಿದೂ ನೆಲವನ್ನು ಕೊರೆದೂ ಕೊರೆದೂ ಗುಹೆಗಳು ರೂಪುಗೊಂಡಿರುತ್ತವೆ. ಒಟ್ಟಿನಲ್ಲಿ ಅದೊಂದು ಜೇಡರ ಬಲೆಯಂತಹ ಸುರಂಗಗಳು ಭೂಮಿಯ ಕೆಳಗೆ ಹೆಣೆದುಕೊಂಡಿರುತ್ತವೆ. ಕೇವಲ ಕೆಲವು ಅಡಿಗಳಿಂದ ನೂರಾರು ಕಿಲೋಮೀಟರುಗಳ ದೂರದವರೆಗೂ ನಾಲ್ಕಾರು ಕಿಲೋಮೀಟರುಗಳ ಆಳದವರಗೂ ಇರುತ್ತವೆ. ಈಶಾನ್ಯ ಭಾರತದ ಮೇಘಾಲಯದಲ್ಲಿ ಇದುವರೆಗೂ ಸುಣ್ಣದ ಶಿಲೆಗಳಲ್ಲಿ 1000 ಗುಹೆಗಳನ್ನು ಕಂಡಿಡಿದು ಅವುಗಳ ನಕ್ಷೆಗಳನ್ನು ತಯಾರಿಸಲಾಗಿದೆ. ಇಲ್ಲಿಗೆ ಪ್ರತಿ ವರ್ಷವೂ ಬೇಸಿಗೆ ಕಾಲದಲ್ಲಿ ಗುಹೆಗಳ ಸಂಶೋಧನೆ ಮಾಡುವ ಹತ್ತಾರು ದೇಶಗಳ ಸಾಹಸ ಪ್ರಿಯರು ಬಂದು ಹೋಗುತ್ತಾರೆ. ಚೀನಾದಿಂದ ಹರಿದು ಬರುವ ಬ್ರಹ್ಮಾಪುತ್ರ ನದಿ ಅರುಣಾಚಲ ಪ್ರದೇಶ ಗಡಿ ತಲುಪಿದ್ದೆ 100 ಕಿಲೋಮೀಟರುಗಳ ದೂರದವರೆಗೂ ಅಂತರ್ಗಾಮಿಯಾಗಿ ಹರಿದು ಅನಂತರ ಅಸ್ಸಾಂನಲ್ಲಿ ಕಾಣಿಸಿಕೊಳ್ಳುತ್ತಿತ್ತು. ಈ ನದಿಯ ಜಾಡನ್ನು ಕಳೆದ ಶತಮಾನದಲ್ಲಿ ಒಬ್ಬ ಬ್ರಿಟಿಷ್ ಅಧಿಕಾರಿ ಕಂಡು ಹಿಡಿದರು. ಹುಡುಗರು ಗುಹೆಯ ಒಳಕ್ಕೆ ಹರಿದು ಬರುತ್ತಿದ್ದ ಪ್ರವಾಹದ ಎದುರಿಗೆ ಈಜಿ ಬರಲು ಹಲವಾರು ಸಲ ಪ್ರಯತ್ನಿಸಿದರು. ಆದರೆ ನೀರಿನ ಪ್ರವಾಹ ಎಷ್ಟು ವೇಗವಾಗಿ ಎಷ್ಟು ರಭಸವಾಗಿತ್ತೆಂದರೆ ಹುಡುಗರೆಲ್ಲ ಪ್ರವಾಹದ ಸೆಳತಕ್ಕೆ ಸಿಕ್ಕಿಕೊಂಡು ವಿಧಿಯಿಲ್ಲದೆ ಗುಹೆಯ ಆಳಕ್ಕೆ ಇನ್ನಷ್ಟು ಮತ್ತಷ್ಟು ಒಳಕ್ಕೆ ಹೋಗಬೇಕಾಯಿತು.

ಅಥವಾ ಪ್ರವಾಹವೇ ಅವರನ್ನು ತಳ್ಳಿಕೊಂಡು ಹೋಯಿತು ಎನ್ನಬಹುದು. ಅಂತಿಮವಾಗಿ ವೈಲ್ಡ್ ಬೋರ್ಸ್ ಅದೃಷ್ಟ ಚೆನ್ನಾಗಿದ್ದು ಗುಹೆ ಬಾಗಿಲಿಂದ ಒಳಕ್ಕೆ 3.2 ಕಿಲೋಮೀಟರುಗಳ ದೂರದಲ್ಲಿ ಒಂದು ಎತ್ತರದ ಕಲ್ಲುಬಂಡೆ ಸಿಕ್ಕಿ ಅದರ ಮೇಲೆ ಏರಿ ಕುಳಿತು ಪ್ರಾಣ ಹಿಡಿದುಕೊಂಡು ಸಹಾಯಕ್ಕೆ ಕಾಯತೊಡಗಿದರು. ಅವರು ನಿಂತಿದ್ದ ಆ ಸ್ಥಳದ ಹೆಸರು 'ಪಟ್ಟಯಾ ಬೀಚ್' ಎಂದು ಕರೆಯುವ ಒಂದ ಸ್ಥಳವಾಗಿತ್ತು.

ಈ ವೈಲ್ಡ್ ಬೋರ್ಸ್ ಯಾರು?

ಹನ್ನೆರಡು ಜನ ಹುಡುಗರು ಮತ್ತು ಒಬ್ಬ ಯುವ ತರಬೇತುದಾರನನ್ನು ಥಮ್ ಲುವಾಂಗ್ ಬೆಟ್ಟ ಒಮ್ಮೆಲೆ ತನ್ನ ಗುಹೆಯೆಂಬ ಬಾಯಿಯ ಮೂಲಕ ಹೊಟ್ಟೆ ಒಳಕ್ಕೆ ನುಂಗಿಕೊಂಡಿದ್ದೆ ಗವ್ವನೆ ಕತ್ತಲಲ್ಲಿ ಕಪ್ಪು ರಂಧ್ರದ ಒಳಕ್ಕೆ ಎಳೆದುಕೊಂಡಂತೆ Space and time ಎರಡನ್ನು ಮರೆತುಹೋಗಿ ಸ್ವಲ್ಪ ಕಾಲ ಮೈಂಡ್ ಫ್ಯೂಸ್ ಹೋಗಿ ಸ್ಮೃಹ ಕಳೆದುಕೊಂಡಿದ್ದರು. ಬಹುಶಃ ಭಯ ಇನ್ನೂ ಭೀಕರವಾಗಿ ಅವರನ್ನು ಆವರಿಸಿಕೊಂಡಿತ್ತು. ಆದರೂ ಕೊನೆಗೆ ಅವರೆಲ್ಲ ಮಾಮೂಲಿ ಸ್ಥಿತಿಗೆ ಬಂದು ಇಂತಹ ಪರಿಸ್ಥಿತಿಯಲ್ಲೂ ಬದುಕಿ ಉಳಿಯಲು ನಿಧಾನವಾಗಿ ಆಲೋಚಿಸತೊಡಗಿದರು. ಎಲ್ಲರೂ ಸೇರಿ ಗುಹೆಯ ಕಲ್ಲು ಗೋಡೆಯಲ್ಲಿ ಬೆಚ್ಚಗೆ ಕುಳಿತುಕೊಳ್ಳಲು ಕಲ್ಲುಗಳನ್ನು ತೆಗೆದುಕೊಂಡು 15 ಅಡಿಗಳ ಉದ್ದದ ಒಂದು ಶೆಲ್ಫ್ ತೋಡಿದರು.

ತರಬೇತುದಾರ 'ಅಕೆ' ಮಾಜಿ ಬೌದ್ಧ ಸನ್ಯಾಸಿಯಾಗಿದ್ದ ಕಾರಣ ಆತ ಹುಡುಗರನ್ನು ಕೂರಿಸಿ ಬೌದ್ಧ ಧ್ಯಾನ ತಂತ್ರಗಳನ್ನು ಕಲಿಸತೊಡಗಿದ. ಇದರಿಂದ ಅವರೆಲ್ಲರೂ ಶಾಂತವಾಗಿರಲು ಮತ್ತು ಸಾಧ್ಯವಾದಷ್ಟು ಕಡಿಮೆ ಗಾಳಿ ಅಥವಾ ಆಮ್ಲಜನಕದಲ್ಲಿಯೇ ಉಸಿರಾಡುತ್ತ ಲವಲವಿಕೆಯಿಂದ ಇರಲು ಪ್ರಯತ್ನಿಸುವಂತೆ ತರಬೇತದಾರ ಹೇಳಿದ. ಇದು ಸುಳ್ಳಾಗಿದ್ದರೂ ಈ ಪರಿಸ್ಥಿತಿಯಲ್ಲಿ ಹುಡುಗರ ಮೇಲೆ ಅಸಾಧಾರಣ ಪ್ರಭಾವ ಬೀರಿತ್ತು. ನಿಜವಾಗಿ ಹೇಳಬೇಕಾದರೆ ಅವರ ಹತ್ತಿರ ತಿನ್ನಲು ಏನೂ ಇರಲಿಲ್ಲ. ಗುಹೆ ಗೋಡೆಗಳಲ್ಲಿ ತೇವಾಂಶದಿಂದ ನೀರು ಹನಿಗೊಂಡು ತೊಟ್ಟಿಕ್ಕುತ್ತಿದ್ದು ಅದನ್ನೇ ಕುಡಿಯಲು ಪ್ರಾರಂಭಿಸಿದರು. ಅದು ಬಿಟ್ಟರೆ ಪ್ರಾಣ ಉಳಿಸಿಕೊಳ್ಳಲು ಅವರಿಗೆ ಬೇರೆ ದಾರಿಯೇ ಇರಲಿಲ್ಲ. Of course, ಜೀವ ಉಳಿಸುವ ಮುಖ್ಯವಾದ ಗಾಳಿ – ಆಮ್ಲಜನಕವನ್ನು ಆ ಗುಹೆಗಳು ಉಸಿರಾಡುತ್ತಿದ್ದರಿಂದ ಗುಹೆಗಳ ಜೊತೆಗೆ ವೈಲ್ಡ್ ಬೋರ್ಸ್ ತಂಡವು ಪ್ರಾಣ ಉಳಿಸಿಕೊಳ್ಳುವಷ್ಟು ಆಮ್ಲಜನಕ ಉಳ್ಳ ಗಾಳಿಯನ್ನು ಪಡೆಯುತ್ತಿತ್ತು.

ಬೌದ್ಧ ಧ್ಯಾನ ಎಂಬ ಶಕ್ತಿ

ಬೌದ್ಧ ಧರ್ಮಿಗಳ ಧ್ಯಾನಕ್ಕೆ 2500 ವರ್ಷಗಳ ಇತಿಹಾಸ ಇದೆ. ಬುದ್ಧನು ಸ್ಪಷ್ಟತೆ, ಮನಸ್ಸಿನ ಶಾಂತಿ, ಮತ್ತು ನೋವುಗಳಿಂದ ಜನರನ್ನು ಮುಕ್ತಿಗೊಳಿಸುವುದಕ್ಕೆ ಧ್ಯಾನವನ್ನು ಸಾಧನವಾಗಿ ಬೋಧಿಸಲು ಪ್ರಾರಂಭಿಸಿದ್ದನು. ಬುದ್ಧನು ಬೋಧಿಸಿದ ಈ ಮಂತ್ರ ಸಹಸ್ರಮಾನ ಕಾಲದಿಂದಲೂ ಉಳಿದುಕೊಂಡು ಬಂದಿರುವುದಲ್ಲದೇ ಇತ್ತೀಚಿನ ವೈಜ್ಞಾನಿಕ ಸಂಶೋಧನೆಗಳ ಪ್ರಕಾರ ಖಿನ್ನತೆಯ ವಿರುದ್ಧ ಹೋರಾಡಲು ಶಕ್ತಿಯನ್ನು ಸಾಭೀತುಪಡಿಸಿದೆ. ಆತಂಕವನ್ನು ಕಡಿಮೆ ಮಾಡುತ್ತದೆ ಮತ್ತು ಮನುಷ್ಯನ ದೇಹ ಮತ್ತು ಮನಸ್ಸಿನಲ್ಲಿ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

ವ್ಯಯಾಮ ಕೂಡ ಹಲವು ವಿಧಗಳಲ್ಲಿ ಮನಷ್ಯನಿಗೆ ಸಹಾಯವಾಗುತ್ತದೆ. ಆದರೆ ಒಂದು ವೇಳೆ ವ್ಯಯಾಮ ಮಾಡಲು ಆಗದಿದ್ದರೆ ಕುಳಿತ ಕಡೆಯೇ ಧ್ಯಾನ ಮಾಡುವುದರಿಂದ ಅದನ್ನು ಹೋಗಲಾಡಿಸಬಹುದು. ವ್ಯಾಯಾಮದಿಂದ ಉತ್ಪತ್ತಿಯಾಗುವ ಹಾರ್ಮೋನುಗಳು ಮತ್ತು ಮಿದುಳಿನ ರಾಸಾಯನಿಕಗಳನ್ನು ಅವಲಂಬಿಸಬೇಕಾದ ಅಗತ್ಯವಿಲ್ಲದೆ ಮಾನಸಿಕವಾಗಿ ಹೇಗೆ ಪ್ರಬಲರಾಗಿ ಉಳಿದುಕೊಳ್ಳಬಹುದು ಎನ್ನುವುದನ್ನು ಧ್ಯಾನ ನಮಗೆ ಕಲಿಸಿಕೊಟ್ಟಿದೆ. ಒತ್ತಡದ ಸಂದರ್ಭಗಳಲ್ಲಿ ಮಾನಸಿಕ ದುಃಖ ಅಥವಾ ಖಿನ್ನತೆಯ ವಿರುದ್ಧ ಹೋರಾಡಲು ಧ್ಯಾನ ಸಹಾಯಕ್ಕೆ ನಿಲ್ಲುತ್ತದೆ. ಇದು ಪ್ರಾಚೀನ ಕಾಲದಿಂದಲೇ ಋಷಿ ಮುನಿಗಳು ಬೆಳೆಸಿಕೊಂಡು ಬಂದಿರುವ ತಂತ್ರ. ನಮ್ಮನ್ನ ನಾವೇ ಕಡಿಮೆ ಎಂದು ತಿಳಿದುಕೊಳ್ಳಬಾರದು. ಹಾಗೇ ತಿಳಿದುಕೊಂಡಲ್ಲಿ ಅದು ದೊಡ್ಡ ಹಿನ್ನಡೆಯಾಗುತ್ತದೆ.



ಬುದ್ಧನು ಬೋಧಿವೃಕ್ಷದ ಕೆಳಗೆ ಜ್ಞಾನ ಪಡೆದುಕೊಂಡ ಒಂದು ಅಪರೂಪದ ಚಿತ್ರ.

ಅದು ಅಗಾಧವಾದ ಗವಿಕತ್ತಲು. ಒಂದು ಅದೃಷ್ಟದ ವಿಷಯವೆಂದರೆ ಸುಣ್ಣದ ಕಲ್ಲುಗಳಲ್ಲಿ ಸಣ್ಣ ರಂಧ್ರಗಳು ಮತ್ತು ಬಿರುಕುಗಳಿದ್ದು ಅವುಗಳ ಮೂಲಕ ಅಷ್ಟಿಷ್ಟು ಗಾಳಿ ಗುಹೆಯ ಒಳಕ್ಕೆ ಬರುತ್ತಿತ್ತು. ಪಂಚಭೂತಗಳಾದ ಗಾಳಿ, ನೀರು, ಬೆಳಕು ಯಾವುದೇ ಪರಿಸ್ಥಿತಿಯಲ್ಲೂ ಎಂತಹದೇ ವಸ್ತುವಿನ ಮೂಲಕ ಪ್ರವೇಶ ಪಡೆಯುತ್ತವೆ.

ಒಂದು ವೇಳೆ ಈ ಗುಹೆಗಳು ಬಿರುಕು ನೆರಿಕೆಗಳಿಲ್ಲದ ಬಂಡೆಕಲ್ಲುಗಳಾದ ಗ್ರಾನೈಟ್ ಕಲ್ಲುಗಳಿಂದ ಕೂಡಿದ್ದರೆ ಅವರಿಗೆ ಸರಿಯಾಗಿ ಗಾಳಿ, ನೀರು ಬೆಳಕು ದೊರಕುತ್ತಿರಲಿಲ್ಲ. ಒಬ್ಬರೂ ಸಹ ಗುಹೆಯಿಂದ ಹೊರಕ್ಕೆ ಬರುತ್ತಿರಲಿಲ್ಲ. ಅವರ ಅಸ್ಥಿ ಪಂಜರುಗಳು ಮಾತ್ರ ದೊರಕುತ್ತಿದ್ದವು.

ಹುಡುಗರ ತಂಡ ಗುಹೆಯ ಒಳಗೆ ಒಂದೆರಡು ದಿನಗಳ ಕಾಲ ಬದುಕಲು ಅವಕಾಶಗಳಿದ್ದವೆ ವಿನಹಃ ಹೆಚ್ಚು ದಿನಗಳ ಕಾಲ ಬದುಕಿ ಉಳಿಯುವ ಪರಿಸ್ಥಿತಿ ಗುಹೆಯ ಒಳಗೆ ಇರಲಿಲ್ಲ. ಆದರೆ ಎಲ್ಲರೂ ಒಂದು ರೀತಿಯಲ್ಲಿ ಜೀವ ಗೆಳೆಯರಾಗಿದ್ದು ಒಬ್ಬರಿಗೊಬ್ಬರು ಏನು ಬೇಕಾದರೂ ಮಾಡುವ ಗೆಳೆಯರಾಗಿದ್ದರು. ಇಂತಹ ಪರಿಸ್ಥಿತಿಯಲ್ಲಿ ಹೊರಗಿನಿಂದ ಯಾರಾದರು ಬಂದು ಅವರನ್ನ ಪಾರು ಮಾಡುವ ಆಶಯ ಅವರ ಮನಸ್ಸಿನಲ್ಲಿ ತುಂಬಿಕೊಳ್ಳುತ್ತಿತ್ತು. ಆದರೆ ಅಲ್ಲಿಯವರೆಗೂ ಬದುಕಿ ಉಳಿಯುವುದಾದರು ಹೇಗೆ ಎಂಬ ಪ್ರಶ್ನೆಗಳು ಅವರನ್ನ ಕಾಡತೊಡಗಿದವು. ಅವರಿಗಿದ್ದ ಇನ್ನೊಂದು ಪ್ರಾಣವೆಂದರೆ ಏಕಾಪೋಲ್ ಚಂತವಾನ್ ಅವರ ಶಕ್ತಿ.

ಗುಹೆಯ ಭೂಗತ ಜಗತ್ತಿನಲ್ಲಿ ಪ್ರಾಣ ಉಳಿಸಿಕೊಳ್ಳಲು ಏನೆಲ್ಲ ಮಾಡಬಹುದು? ಎಂದು ಅವರು ಗುಹೆಯ ಕತ್ತಲೊಳಗೆ ಯೋಚಿಸುತ್ತಿದ್ದರೆ, ಗುಹೆಯ ಹೊರಗೆ ಯಾವ ರೀತಿಯ ಆಲೋಚನೆಗಳನ್ನೂ ಮಾಡದೆ ಸರ್ಕಾರ ಹುಡುಗರ ತಂಡವನ್ನು ರಕ್ಷಿಸಲು ಕೆಲಸವನ್ನು ಪ್ರಾರಂಭಿಸಿಯೇ ಬಿಟ್ಟಿತ್ತು. ಥಾಯ್ ಸರ್ಕಾರವಾಗಲಿ, ಇಲ್ಲ ಅಧಿಕಾರಿಗಳಾಗಲಿ ಸಂಸದರ ಸಭೆಯಾಗಲಿ ಯಾವುದೇ ನಿರ್ದೇಶನಗಳಿಗೆ ಅಧಿಕಾರಿಗಳು ಕಾಯಲಿಲ್ಲ. ಹುಡುಗರ ಪೋಷಕರಾಗಲಿ, ಸಾಮಾಜಿಕ ಕಾರ್ಯಕರ್ತರಾಗಲಿ ಅಥವಾ ಎನ್‌ಜಿಓಗಳು ಯಾರೂ ಸರ್ಕಾರವನ್ನು ಒತ್ತಾಯ ಮಾಡಲು ಅವಕಾಶವೇ ಇಲ್ಲದಂತೆ ಇಡೀ ಥೈಲ್ಯಾಂಡಿನ ಜನರೆಲ್ಲ ಒಂದಾಗಿ ಗುಹೆ ಮುಂದೆ ಸೇರಿ ಕೆಲಸವನ್ನು ಪ್ರಾರಂಭಿಸಿಬಿಟ್ಟಿದ್ದರು.

ಇಲ್ಲೊಂದು ಮಾತು ಹೇಳಲೇಬೇಕು. ಥೈಲ್ಯಾಂಡ್ ಅಭಿವೃದ್ಧಿ ಹೊಂದುತ್ತಿರುವ ದೇಶ. ಇಲ್ಲಿ ಗುಹೆ ಒಳಗೆ ಸಿಕ್ಕಿಕೊಂಡವರೆಲ್ಲ ಬಡವರು ಮತ್ತು ತೀರ ಬಡವರ ಮಕ್ಕಳೆ ಆಗಿದ್ದರು. ಇನ್ನು ಕೆಲವರಂತೂ ಹಾಸ್ಟೆಲ್ ಅಥವಾ ಬೌದ್ಧಾಶ್ರಮಗಳಲ್ಲಿ ಉಳಿದುಕೊಂಡು ಸರ್ಕಾರಿ ಶಾಲೆಗಳಲ್ಲಿ ಓದಿಕೊಳ್ಳುತ್ತಿದ್ದವರು. ಹನ್ನೆರಡು ಜನ ಹುಡುಗರಲ್ಲಿ ನಾಲ್ಕು ಹುಡುಗರು ಮೂಲವಾಗಿ ಥೈಲ್ಯಾಂಡಿಗೆ ಸೇರಿದವರಲ್ಲ. ಅವರ ಹತ್ತಿರ ಸರಿಯಾಗಿ ಥೈಲ್ಯಾಂಡಿನ ಪೌರತ್ವಾಗಲಿ, ಪಾಸ್ಪೋರ್ಟ್ ಆಗಲಿ ಇರಲಿಲ್ಲ. ಅವರ ತಂದೆ ತಾಯಿಗಳು ಯಾವುದೊ ಸಣ್ಣಪುಟ್ಟ ಕೆಲಸಗಳನ್ನು

ಮಾಡಿಕೊಂಡು ಬದುಕು ನಡೆಸುತ್ತಿದ್ದರು. ಫುಟ್ಬಾಲ್ ತಂಡದ ತರಬೇತುದಾರ ಬಾಲಕನಾಗಿದ್ದಾಗಲೇ ತಂದೆ ತಾಯಿಯನ್ನು ಕಳೆದುಕೊಂಡು ಬರ್ಮಾ ದೇಶದಿಂದ ಗಡಿದಾಟಿ ಬಂದವನು.

ಇನ್ನು ಥೈಲ್ಯಾಂಡಿನ ಹುಡುಗರೂ ಕೂಡ ಯಾವುದೇ ಹಣವಂತರ ಕುಟುಂಬಗಳಿಗೆ ಸೇರಿದವರಲ್ಲ. ಆದರೂ ಇಡೀ ದೇಶ ಅವರ್‍ಯಾರು? ಯಾರು ಮಕ್ಕಳು? ಅದ್ಯಾವುದನ್ನು ಕೇಳದೆ ಎಲ್ಲಾ ಹುಡುಗರನ್ನು ಹೇಗಾದರೂ ಮಾಡಿ ಪಾರು ಮಾಡಬೇಕೆಂದು ಹಳ್ಳಿ ಪಟ್ಟಣಗಳೆನ್ನದೇ ಎಲ್ಲಾ ರೀತಿಯ ಜನರು ಗುಹೆಯ ಮುಂದೆ ಸೇರಿಕೊಂಡು ತಮಗೆ ತಿಳಿದ ಕೆಲಸಗಳನ್ನು ಮಾಡುತ್ತ ಮಳೆಯನ್ನೂ ಲೆಕ್ಕಸದೆ ಹುಡುಗರನ್ನು ಪಾರು ಮಾಡುವ ಕೆಲಸಗಳಲ್ಲಿ ತೊಡಗಿಕೊಂಡಿದ್ದರು. ದೇಶ ವಿದೇಶಗಳಿಂದಲೂ ಎಲ್ಲಾ ರೀತಿಯ ತಜ್ಞರು ಯಾರ ಕರೆಗೂ ಕಾಯದೇ ತಾವೇ ಸ್ವಯಂಸೇವಕರಾಗಿ ಬಂದು ಕೆಲಸದಲ್ಲಿ ತೊಡಗಿಕೊಂಡರು. ಇದರ ಜೊತೆಗೆ ಥೈಲ್ಯಾಂಡ್ ಸರ್ಕಾರ ಹಲವು ದೇಶಗಳ ರಾಯಭಾರಿಗಳನ್ನು ಸಂಪರ್ಕ ಮಾಡಿ ತಜ್ಞರನ್ನು ಕಳುಹಿಸುವಂತೆ ಕೇಳಿಕೊಂಡಿತು.

ಥೈಲ್ಯಾಂಡಿನ ಪ್ರಧಾನ ಮಂತ್ರಿಯಿಂದ ಹಿಡಿದು ನೌಕಾ ದಳದ ಅಧಿಕಾರಿಗಳು, ಇತರ ವಿಭಾಗದ ನೂರಾರು ಅಧಿಕಾರಿಗಳು ಮತ್ತು ಜನಸಾಮಾನ್ಯರು ಕೈಜೋಡಿಸಿದ್ದರು. ಥೈಲ್ಯಾಂಡಿನ ರಾಜನು ಸಹ ಈ ಕಾರ್ಯಚರಣೆಗೆ ಬೇಕಾದ ಸಹಾಯ ಮತ್ತು ಆದೇಶಗಳನ್ನು ನೀಡಿ ಹುಡುಗರು ಗುಹೆಯ ಒಳಗಿಂದ ಪಾರಾಗುವುದನ್ನು ಎದುರು ನೋಡುತ್ತಿದ್ದರು. ಒಟ್ಟಿನಲ್ಲಿ ಇಡೀ ದೇಶ ಒಟ್ಟಾಗಿ ಈ ಕಾರ್ಯಾಚರಣೆಯಲ್ಲಿ ತೊಡಗಿಕೊಂಡಿತು. ಅಂತೂ ಥೈಲ್ಯಾಂಡಿನ ಸೀಲ್ ಅಧಿಕಾರಿಗಳು ವಿಶೇಷವಾಗಿ ಈಜುತಜ್ಞರು, ಹೊರದೇಶಗಳಿಂದ ಬಂದಿದ್ದ ಮುಖ್ಯವಾಗಿ ಬ್ರಿಟನ್ ಮತ್ತು ಅಮೇರಿಕಾ ತಜ್ಞರು ಅದ್ಭುತ ಕೆಲಸ ಮಾಡಿ ಹುಡುಗರನ್ನು ಗುಹೆಯ ಒಳಗಿಂದ ಪಾರು ಮಾಡಿದರು.

ಎಲ್ಲದಕ್ಕಿಂತ ಮುಂಚೆ ಯಾವ ಅಪ್ಪಣೆಗೂ ಕಾಯದೆ ಥಾಯ್ ನಾಕಾಪಡೆಯ (SEAL - Sea Air and Land) ಸೀಲ್ ಗುಹೆಯ ಮುಂದೆ ತಾಯಾರಿ ಮಾಡಿಕೊಂಡಿತು. ಅದರ ಜೊತೆಗೆ ಥಾಯ್ ರಾಷ್ಟ್ರೀಯ ಪೊಲೀಸ್ ಮತ್ತು ರೆಸ್ಕ್ಯೂ ತಂಡವೂ ಸೇರಿಕೊಂಡಿತು. ಸ್ಥಳೀಯ ಸ್ವಯಂಸೇವಕರೂ ಸೇರಿಕೊಂಡರು. ಮೊದಲಿಗೆ ಗುಹೆಯ ಒಂದು ಕೊಠಡಿಯಲ್ಲಿ ಹುಡುಗರು ನಡೆದಾಡಿರುವ ಹೆಜ್ಜೆ ಗುರುತುಗಳು ಕಾಣಿಸಿದ್ದನ್ನು ಬಿಟ್ಟರೆ ಹುಡುಗರು ಬದುಕಿ ಉಳಿದಿರುವ ಯಾವುದೇ ನಿಖರವಾದ ಸೂಚನೆಗಳು ಕಾಣಿಸಲಿಲ್ಲ.

ವೈಲ್ಡ್ ಬೋರ್ಸ್ ತಂಡ, ಥಮ್ ಲುವಾಂಗ್ ಗುಹೆಯ ಒಳಗೆ



ಥೈಲ್ಯಾಂಡಿನ ನೌಕಾದಳ ಸೀಲ್ ಅಧಿಕಾರಿಗಳ ತಂಡ.

ಆಳದಲ್ಲಿ ಎಲ್ಲೋ ಸೇರಿಕೊಂಡಿರಬೇಕು. ಆದರೆ ನಿಖರವಾಗಿ ಎಲ್ಲಿ ಎಂಬುದು ತಿಳಿಯಲಿಲ್ಲ. ಮತ್ತು ರಕ್ಷಕರಿಗೆ ಅವರನ್ನು ಪಾರು ಮಾಡುವುದು ಹೇಗೆ ಎಂಬುದು ಅರ್ಥವಾಗಲಿಲ್ಲ. ಗುಹೆಯ ಒಳಗಿಂದ ಹುಡುಗರನ್ನು ಪಾರು ಮಾಡುವುದು ಒಂದು ದೊಡ್ಡ ಸವಾಲಾಗಿತ್ತು. ಹೇಳಬೇಕೆಂದರೆ ಸೀಲ್ ಈಜುಗಾರರಿಗೆ ಗುಹೆಯ ಒಳಗೆ ಕಿಲೋಮೀಟರುಗಟ್ಟಲೆ ದೂರ ಈಜುಕೊಂಡು ಹೋಗುವುದು ಸುಲುಭದ ಕೆಲಸವಾಗಿರಲಿಲ್ಲ. ಅದು ಅವರ ಪ್ರಾಣದ ಪ್ರಶ್ನೆಯೂ ಆಗಿತ್ತು. ಮುಖ್ಯವಾಗಿ ಥೈಲ್ಯಾಂಡಿನ ನೌಕಾಪಡೆಗೆ ಗುಹೆಯ ಒಳಗೆ ಈಜುವ ಅನುಭವ ಇರಲಿಲ್ಲ.

ಈ ಪರಿಸ್ಥಿತಿಯಲ್ಲಿ ಹವಾಗುಣವೂ ತೀವ್ರ ವ್ಯತಿರಿಕ್ತವಾಗಿದ್ದು, ಮಳೆ ಸುರಿಯುತ್ತಲೇ ಇದ್ದು ಗುಹೆಯ ಒಳಗೆ ನೀರಿನ ಮಟ್ಟ ಏರುತ್ತಲೇ ಹೋಗುತ್ತಿತ್ತು. ಗುಹೆಯ ಕೊಠಡಿಗಳು ನೀರಿನಿಂದ ತುಂಬಿಕೊಳ್ಳುತ್ತಿದ್ದು ಪ್ರವಾಹ ಹೆಚ್ಚಾಗುತ್ತಲೇ ಹೋಗುತ್ತಿತ್ತು. ಈಜುಗಾರರು ಮುಂದಕ್ಕೆ ಹೋಗದಂತೆ ಪ್ರವಾಹ ತಡೆಯುತ್ತಿತ್ತು. ಎಂಜಿನಿಯರುಗಳು ಪ್ರವಾಹದ ನೀರನ್ನು ಗುಹೆಯ ಒಳಗಿಂದ ಹೊರಕ್ಕೆ ಪಂಪ್ ಮಾಡಲು ಪ್ರಯತ್ನಿಸುತ್ತಿದ್ದರು. ನಿಜವಾಗಿ ಏನು ಮಾಡಬೇಕೆಂಬುದು ಯಾರಿಗೂ ಅರ್ಥವಾಗಲಿಲ್ಲ. ಒಬ್ಬ ಸ್ವಯಂಸೇವಕ ಒಂದು ಮಾತು ಹೇಳಿದ. 'ಅಧಿಕಾರಿಗಳು ತಂದಿರುವ ಸಲಕರಣೆಗಳ ಬಗ್ಗೆ ಆಲೋಚಿಸಬೇಕಾಗಿದೆ – ಸಣ್ಣ ನೀರಿನ ಪಂಪುಗಳು, ಉದ್ದನೆ ಕೊಳವೆಗಳು, ಚಾಕುಗಳು ಮತ್ತು ಸಲಿಕೆಗಳು ಇವು ಯಾವವು ಯಾವುದೇ ಉಪಯೋಗಕ್ಕೆ ಬರಲಾರವು' ಎಂದುಬಿಟ್ಟ.

ಅಧಿಕಾರಿಗಳು ಈ ನಡುವೆ ಗುಡ್ಡದ ಕಡೆಗೆ ಹೋಗಿ ಗುಡ್ಡದ ಮೇಲೆ ಡ್ರಿಲ್ ಮಾಡುತ್ತ ಯಾವುದಾದರೂ ಬಿರುಕುಗಳು ಇವೆಯೇ ಎಂಬುದನ್ನು ಹುಡುಕಾಡಿ ನೋಡಿದರು. ಅದರ ಮೂಲಕ ಗುಹೆ ಸಮೂಹಕ್ಕೆ ಎಲ್ಲಿಯಾದರೂ ಸಣ್ಣ ದಾರಿ ಕಾಣಿಸಿದರೆ ದ್ರೋನ್ ಮತ್ತು ಉಷ್ಣ ಸಂವೇದಕಗಳ (thermal sensors) ಮೂಲಕ ಹುಡುಗರು ಇರುವು ಸ್ಥಳವನ್ನು ಗುರುತಿಸಬಹುದು ಎಂಬುದಾಗಿ ಯೋಚಿಸಿದರು. ರಕ್ಷಕರು ಸ್ಥಳೀಯ ಹಳ್ಳಿಗರನ್ನು ಕರೆದು-ಕೊಂಡು ಅವರ ಸ್ಥಳೀಯ ಜ್ಞಾನದಿಂದ ಯಾವುದಾದರೂ ಉಪಾಯಗಳು ದೊರಕುತ್ತವೆಯೇ ಎಂಬುದಾಗಿ ಅವರ ಜೊತೆಗೆ ಚರ್ಚೆ ಮಾಡಿ ನೋಡಿದರು. ವೈಲ್ಡ್ ಬೋರ್ಸ್ ಗುಂಪಿನ ಒಬ್ಬ ಹುಡುಗ ಆ ದಿನ ಫುಟ್ಬಾಲ್ ತಂಡದ ಜೊತೆಗೆ ಆಡಲು ಹೋಗದೆ ಗುಹೆ ಹೊರಗೆ ಉಳಿದುಕೊಂಡ ಕಾರಣ ಸೀಲ್

ಅವನನ್ನು ಜೊತೆಗೆ ಸೇರಿಸಿಕೊಂಡು ಅವನಿಂದಲೂ ಮಾಹಿತಿ ಪಡೆದು-ಕೊಂಡಿತು. ಆ ಹುಡುಗ ಹಿಂದೆ ಹಲವು ಸಲ ಹುಡುಗರ ಜೊತೆಗೆ ಹೋಗಿ ಬರುತ್ತಿದ್ದ ಗುಹೆ ಸಮೂಹದ ಒಳಗಿನ ಪಟ್ಟಾಯಾ ಬೀಚ್ ಬಗ್ಗೆ ಹೇಳಿದ. ಎಲ್ಲಾ 13 ಜನರು ಅಲ್ಲಿ ಉಳಿದುಕೊಂಡಿರಬಹುದೆ? ಎಂಬ ಸಣ್ಣ ಆಸೆ ಸೀಲ್ ತಂಡದಲ್ಲಿ ಉತ್ಸಾಹ ಮೂಡಿಸಿತು.

ಡ್ರೋನ್ಸ್, ನಾಯಿಗಳು ಮತ್ತು ಡ್ರಿಲ್ಲಿಂಗ್ ಕೆಲಸ

ಗುಹೆಯಲ್ಲಿ ಸಿಕ್ಕಿಕೊಂಡ ಹುಡುಗರನ್ನು ಪಾರು ಮಾಡುವ ಕೆಲಸಗಳು ಪೂರ್ಣ ಪ್ರಮಾಣದಲ್ಲಿ ನಡೆಯುತ್ತಿದ್ದಂತೆ ಗುಹೆಯ ಬಾಗಿಲಿನ ಹತ್ತಿರ ಯಾವ ರೀತಿಯ ವ್ಯತಿರಿಕ್ತ ಕೋಲಾಹಲ ನಡೆಯಬಾರದೆಂದು ರಕ್ಷಕರ ಗುಂಪೊಂದು ಕಾವಲು ಕಾಯುತ್ತಿತ್ತು. ವೈಲ್ಡ್ ಬೋರ್ಸ್ ಕುಟುಂಬಗಳ ಮಹಿಳೆಯರು ಮತ್ತು ಪುರುಷರು ಮಳೆಯಲ್ಲಿ ಗುಹೆ ಬಾಗಿಲಿನ ಮುಂದೆ ಸೇರಿಕೊಂಡು ಮಕ್ಕಳಿಗೆ ಯಾವುದೇ ಅಪಾಯವಿಲ್ಲದೆ ಕ್ಷೇಮವಾಗಿ ಹಿಂದಿರುಗಿ ಬರಲು ಪ್ರಾರ್ಥನೆ ನಡೆಸುತ್ತಿದ್ದರು. ಅವರಲ್ಲಿ ತರಬೇತುದಾರ ಚಂತವಾನ್ 'ಅಕೆ'ಯ ಧರ್ಮಮಾತೆ ಥುಮ್ ಕಾಂತಾಂಗ್ ಕೂಡಿ ಇದ್ದರು. ಆಕೆ ಪ್ರತಿ ದಿನ ಗುಹೆ ಬಾಗಿಲಿಗೆ ಬರುವಾಗ ಹಣ್ಣುಗಳು, ಧೂಪದ್ರವ್ಯ ಮತ್ತು ಮೇಣದ ಬತ್ತಿಗಳನ್ನು ತರುತ್ತಿದ್ದಳು. ಇದೆಲ್ಲವನ್ನು ಯಾತಕ್ಕಾಗಿ ತರುತ್ತಿರುವೆ ಎಂದು ಯಾರಾದರು ಕೇಳಿದರೆ, ಆಕೆ ನಮ್ಮ ಮಕ್ಕಳನ್ನು ರಕ್ಷಿಸುವ ಗುಹೆಯ ಆತ್ಮಕ್ಕೆ ಎಂದು ಹೇಳುತ್ತಿದ್ದಳು. ಇದನ್ನು ಕೇಳಿದ ಹುಡುಗರ ಪೋಷಕರು, ಗುಹೆಯ ಮುಂದಿರುವ ದೇವಾಲಯದ ಮುಂದೆ ಕುಳಿತುಕೊಂಡು ಕಳಿಕಳಿಯಾಗಿ ಪ್ರಾರ್ಥನೆ ಸಲ್ಲಿಸತೊಡಗಿದರು.



ಚಂತವಾನ್ 'ಅಕೆ'ಯ ಸಾಕು ತಾಯಿ ತುಮ್ ಕಾಂತಾಂಗ್ (ಬಲಗಡೆ ಇರುವವರು).



ಗುಹೆಯ ಮುಂದೆ ಸ್ವಲ್ಪ ದೂರದಲ್ಲಿರುವ 'ಜಾವೊ ಮೇ ನಾಂಗ್ ನಾನ್'– ಗುಹೆ ದೇವತೆಯ ದೇವಾಲಯ.

❑

ಅಧ್ಯಾಯ-9

ಗುಹೆಯ ಮುಂದೆ ಸ್ವಲ್ಪ ದೂರದಲ್ಲಿ ಒಂದು ಸಣ್ಣದಾದ ಗುಡಿಯನ್ನು ಕಟ್ಟಿ ಅದರಲ್ಲಿ ಒಂದು ಗುಲಾಬಿ ಬಣ್ಣದ ಥಾಯ್ ಜನರ ಸಂಪ್ರದಾಯ ಉಡುಗೆಯನ್ನು ಧರಿಸಿರುವ ಹೆಣ್ಣನ್ನು ನಿಲ್ಲಿಸಲಾಗಿತ್ತು. ಆ ಹೆಣ್ಣಿನ ಹೆಸರು 'ಜಾವ್ರೊ ಮೇ ನಾಂಗ್ ನಾನ್' – ಇದರ ಅರ್ಥ ಒರಗಿಕೊಂಡು ನಿದ್ದೆ ಮಾಡುತ್ತಿರುವ ಹೆಣ್ಣು. ಇದೇ ಹೆಸರನ್ನು ಈ ಗುಹೆಯೂ ಅಂಚಿಕೊಂಡಿದೆ. ಥಮ್ ಲುವಾಂಗ್ ನಾಂಗ್ ನಾನ್. ಈ ಗುಹೆಗಳಿರುವ ಸುತ್ತಲಿನ ಪ್ರದೇಶ ಡೊಯಿ ನಾಂಗ್ ನಾನ್ ಹೆಸರಿನೊಂದಿಗೆ ಕರೆಯಲಾಗುತ್ತದೆ.

ಥಮ್ ಲುವಾಂಗ್ ಗುಹೆಗೆ ಸಂಬಂಧಪಟ್ಟ ಜನಪದ ಕಥೆಯಂತೆ ದೇಶದ ಉತ್ತರದಲ್ಲಿರುವ ಮೇ ಸಾಯಿ ಪ್ರದೇಶದ ಚಿಯಾಂಗ್ ರೇ ಪ್ರದೇಶದ ಈ ಗುಹೆಯಲ್ಲಿ ಅವಳ ಆತ್ಮ ಹೇಗೆ ಸೇರಿಕೊಂಡಿತು ಎಂಬ ಕತೆ ಇಲ್ಲಿ ದೊರಕುತ್ತದೆ. ಇದೇ ರೀತಿಯ ಹಲವು ಬ್ರಾಹ್ಮಣ, ಬೌದ್ಧ ಮತ್ತು ಅನಿಮಿಸ್ಟ್‌ರ ಜನಪದ ಕಥೆಗಳು

ಈ ಪ್ರದೇಶದಲ್ಲಿ ಕಂಡುಬರುತ್ತವೆ. ಇದು ಆಗ್ನೇಯ ಏಷ್ಯಾದ ರಾಷ್ಟ್ರಗಳ ಗುಹೆಗಳ ಜೊತೆಗೆ ಆಧ್ಯಾತ್ಮಿಕತೆ ಮತ್ತು ಪೌರಾಣಿಕ ಪ್ರಾಮುಖ್ಯತೆಯನ್ನು ಕೂಡ ತೋರಿಸುತ್ತದೆ. ಫುಟ್ಬಾಲ್ ತಂಡ ಗುಹೆಯ ಒಳಗೆ ಸಿಕ್ಕಿಕೊಂಡ ಮೇಲೆ ಇಂತಹ ಪ್ರೇತ ಮತ್ತು ಅತಿಂದ್ರೀಯ ಕಥೆಗಳು ಹೊರಕ್ಕೆ ಇಣುಕಲು ಪ್ರಾರಂಭಗೊಂಡಿದ್ದವು.

ಥಮ್ ಲುವಾಂಗ್ ಕಥೆ ಹೀಗಿದೆ : ಪುರಾತನ ಕಾಲದಲ್ಲಿ ಒಬ್ಬ ರಾಜನಿಗೆ ಒಂದು ಸುಂದರವಾದ ರಾಜಕುಮಾರಿ ಇದ್ದಳು. ಆಕೆ ಅದೇ ರಾಜನ ಅಶ್ವಶಾಲೆಯಲ್ಲಿದ್ದ ಒಬ್ಬ ಹುಡುಗನೊಡನೆ ಪ್ರೀತಿಯಲ್ಲಿ ಸಿಲುಕಿಕೊಂಡು ಗರ್ಭಿಣಿಯಾದಳು. ಅವರ ಪ್ರೀತಿ ಸಂಪ್ರದಾಯದಂತೆ ನಿಷೇಧವಾಗಿದ್ದು ಅವರಿಬ್ಬರೂ ಓಡಿಹೋಗಿ ಗುಹೆಯಲ್ಲಿ ಸೇರಿಕೊಂಡರು. ಹುಡುಗ ಆಹಾರ ತರಲು ಹೊರಗೆ ಬಂದಾಗ ರಾಜನ ಸೈನ್ಯ ಅವನನ್ನು ಹಿಡಿದು ಕೊಂದುಬಿಟ್ಟಿತು. ವಿಷಯ ತಿಳಿದ ರಾಜಕುಮಾರಿ ತನ್ನನ್ನ ತಾನೇ ಇರಿದುಕೊಂಡು ಗುಹೆಯ ಒಳಗೆ ಪ್ರಾಣಬಿಟ್ಟಳು. ರಾಜಕುಮಾರಿಯ ರಕ್ತ ಗುಹೆಯಲ್ಲ ತುಂಬಿ ಹರಿಯುವ ನೀರಾಯಿತು. ಆಕೆಯ ದೇಹ ಒರಗಿಕೊಂಡು ನಿದ್ದೆ ಮಾಡುತ್ತಿರುವ ಸುತ್ತಲಿನ ಬೆಟ್ಟವಾಯಿತು.

ಮೇ ಸಾಯಿಯ ವಿದ್ಯಾರ್ಥಿನಿ ರಂಚನೊಕ್ ನಂಜಿಜಿತ್ ತಾನು ಸಣ್ಣ ಮಗುವಾಗಿದ್ದಾಗಿನಿಂದಲೂ ಗುಹೆಯ ಒಳಗಿರುವ ರಾಜಕುಮಾರಿಯ ಆತ್ಮದ ಕಥೆಯನ್ನು ಕೇಳುತ್ತಿರುವುದಾಗಿ ಹೇಳಿದಳು. ಸ್ಥಳೀಯರು ಈಗ ರಾಜಕುಮಾರಿಯ ಆತ್ಮ ಫುಟ್ಬಾಲ್ ತಂಡದ ಹುಡುಗರನ್ನು ಕಾಪಾಡುತ್ತಿರುವುದಾಗಿ ನಂಬಿದ್ದಾರೆ. ನಾವೆಲ್ಲರೂ ಅದನ್ನೇ ನಂಬುತ್ತೇವೆ, ಎಲ್ಲಾ ಬೆಟ್ಟಗಳು, ಗುಹೆಗಳು ಮತ್ತು ಮನೆಗಳಲ್ಲಿ ಗಾರ್ಡಿಯನ್ ಆತ್ಮಗಳು ಇರುತ್ತವೆ. ನಾವು ಅವುಗಳನ್ನು ನೋಡಲಾರೆವು. ಆದರೆ ಅವು ನಮ್ಮನ್ನ ನೋಡುತ್ತವೆ. ನಾವು ಆತ್ಮಗಳಿರುವ ಸ್ಥಳಕ್ಕೆ ಹೋದಾಗ ಅವುಗಳನ್ನು ಗೌರವಿಸಬೇಕು. ಹುಡುಗರು ಮಾಯವಾಗಲು ಆ ರಾಣಿ ಕಾರಣಳಾಗಿದ್ದಾಳೆ. ಆದರೆ ಹೇಗೆಂದು ನನಗೆ ತಿಳಿಯದು, ಎಂದಳು.

ಪುರಾಣಗಳ ಕಥೆಗಳಂತೆ ಗುಹೆಗಳಲ್ಲಿ ಅಪಾಯ ಇರುತ್ತದೆ, ಸ್ತ್ರೀ ಶಕ್ತಿಗಳು ಅಪಾಯಕಾರಿ. ಜಾವೊ ಮೇ ನಾಂಗ್ ನಾನ್ ದೇವತೆಗೆ ಮನವಿ ಮಾಡಿ ಬೇಡಿಕೊಂಡರೆ ಸಹಾಯ ಮಾಡುತ್ತಾಳೆ. ಆತ್ಮಗಳು ಜೀವನ ಮತ್ತು ಮರಣದ

ನಡುವಿನ ಸೇತುವೆಗಳಿದ್ದಂತೆ. ಜಗತ್ತಿನ ಬಹುತೇಕ ಸ್ಥಳಗಳನ್ನು ಸ್ತ್ರೀದೇವತೆಗಳು ಆವರಿಸಿಕೊಂಡಿವೆ. ಆ ಸ್ಥಳಗಳು ಅಪಾಯಕಾರಿಯಾದರೂ ಬೇಡಿದ ವರಗಳನ್ನು ಕೊಡಬಲ್ಲವು! ಸಮಕಾಲೀನ ಥಾಯ್ ಸಮಾಜದಲ್ಲಿ ಬೌದ್ಧಧರ್ಮ ಮತ್ತು ಶಕ್ತಿಯಲ್ಲಿ ಪರಿಣಿತರಾದ ಮತ್ತು ಸಾಂಸ್ಕೃತಿಕ ಮಾನವ ಶಾಸ್ತ್ರಜ್ಞ, ಕ್ಯೋಟೋ ವಿಶ್ವವಿದ್ಯಾಲಯದ ಪ್ರೊಫೆಸರ್, ಎಡೋವಾಡೋ ಸಿಯಾನಿ, ಥೈಯ್ಲಾಂಡಿನ ಗುಹೆಗಳು ವಿಶೇಷ ಶಕ್ತಿಯನ್ನು ಹೊಂದಿರುವುದಾಗಿ ಮತ್ತು ಯಾರೇ ಆಗಲಿ ಗುಹೆಗಳ ಒಳಕ್ಕೆ ಹೊಕ್ಕರೆ ಅವರೂ ಸಹ ಆ ಶಕ್ತಿಯನ್ನು ಪಡೆಯುತ್ತಾರೆ ಎಂದು ಹೇಳುತ್ತಾರೆ.

ಈ ಕಾರಣದಿಂದಾಗಿಯೇ ಸನ್ಯಾಸಿಗಳು, ಋಷಿಗಳು ಮತ್ತಿತರ ಜ್ಞಾನಿಗಳು ಗುಹೆಗಳ ಒಳಗೆ ಹೋಗಿ ಧ್ಯಾನ ಮಾಡುತ್ತಾರೆ. ಗುಹೆಗಳು ದೇವಾಲಯಗಳನ್ನು ಮತ್ತು ಅರ್ಪಣೆಗಳನ್ನು ಸಹ ಸೃಷ್ಟಿಸುತ್ತವೆ. ಥೈಯ್ಲಾಂಡ್ ಉದ್ದಕ್ಕೂ ಜನರು ಗುಹೆಗಳ ಒಳಗೆ ದೇವಾಲಯಗಳನ್ನು ನಿರ್ಮಿಸಿ ದೇವತೆಗಳಿಗೆ ಪೂಜೆ ಸಲ್ಲಿಸಿ ಬರುತ್ತಾರೆ. ಅಂದರೆ ಇಲ್ಲಿ ನೆಲೆಸಿರುವ ದೇವತೆಗಳನ್ನು ಅಥವಾ ಆತ್ಮಗಳನ್ನು ಪೂಜಿಸಿ ಅವುಗಳನ್ನು ಉಪಶಮನಗೊಳಿಸಿ ಬರುತ್ತಾರೆ. ಜನರು ಇದೇ ಕಾರಣದಿಂದ ಹಣ್ಣು, ಸಿಹಿ ತಿಂಡಿಗಳು, ಬೇಯಿಸಿದ ಮೊಟ್ಟೆಗಳು, ಮೋಂಬತ್ತಿ, ಅಗರಬತ್ತಿಗಳನ್ನು ತಂದು ಜಾವೊ ಮೇ ನಾಂಗ್ ನಾನ್ ದೇವತೆಗೆ ಅರ್ಪಿಸಿ ಪೂಜೆ ಮಾಡುತ್ತಿದ್ದರು. ಆಕೆ ಯಾಕೆ ಮುನಿಸಿಕೊಂಡಿದ್ದಾಳೋ ತಿಳಿಯದು. ಆದರೆ ನಾವು ಅವಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇವೆ. ಆಕೆ ಖಂಡಿತ ಹುಡುಗರ ಮೇಲೆ ದಯೆ ತೋರಿಸಿ ಕಾಪಾಡುತ್ತಾಳೆ. ಹುಡುಗರು ಹೊರಕ್ಕೆ ಬರುತ್ತಾರೆ ಎಂದು ನಾವು ಭಾವಿಸುತ್ತೇವೆ ಎಂಬುದಾಗಿ ಅಲ್ಲಿ ಪೂಜೆ ಮಾಡುತ್ತಿದ್ದವರು ಹೇಳಿದರು.



ವೈಲ್ಡ್ ಬೋರ್ಸ್ ಹುಡುಗರ ತಂಡದ ಶಾಲಾ ಮಕ್ಕಳು. ಹುಡುಗರು ಸುರಕ್ಷತೆಯಿಂದ ಹೊರಗೆ ಬರಲಿ ಎಂದು ಪ್ರಾರ್ಥನೆ ಸಲ್ಲಿಸುತ್ತಿರುವುದು.

ನಿಧಾನವಾಗಿ ಗುಹೆಯ ಮುಂದೆ ವೈಲ್ಡ್ ಬೋರ್ಸ್ ಶಾಲಾ ಮಕ್ಕಳು ಮತ್ತು ಶಿಕ್ಷಕರು ಸೇರಿಕೊಂಡರು. ಮಕ್ಕಳು, ಶಿಕ್ಷಕರು ಅನಂತರ ಹಳ್ಳಿಗಳ

ಜನರು ಎಲ್ಲರೂ ಒಟ್ಟುಗೂಡಿ ಪ್ರಾರ್ಥನೆಗಳನ್ನು ಸಲ್ಲಿಸತೊಡಗಿದರು. ಹಳ್ಳಿಗರು ಮೆರವಣಿಗಳನ್ನು ಮಾಡುತ್ತ ಗುಹೆಯ ಹತ್ತಿರಕ್ಕೆ ಬರುವವರಿಗೆ ಆಹಾರದ ಪೊಟ್ಟಣಗಳನ್ನು ಪೂರೈಸತೊಡಗಿದರು. ನಿಮಗೆ ಗೊತ್ತಿರುವ ಯಾರೇ ಆಗಲಿ ಇಂತಹ ಪರಿಸ್ಥಿತಿಗೆ ದೂಡಬೇಕು ಎಂಬ ಆಲೊಚನೆಯೂ ನಿಮ್ಮ ಮನಸ್ಸಿಗೆ ಬರಬಾರದು ಎಂಬ ವಿಷಯ ಥಮ್ ಲುವಾಂಗ್ ಗುಹೆಗಳನ್ನು ದಾಟಿ ಹಳ್ಳಿ, ಪಟ್ಟಣಗಳನ್ನು ದಾಟಿ ಥೈಲ್ಯಾಂಡ್ ದೇಶವೆಲ್ಲ ಹರಡಿಕೊಂಡಿತು.

ಕೇವಲ ಒಂದೆರಡು ದಿನಗಳಲ್ಲಿ ವೈಲ್ಡ್ ಬೋರ್ಸ್ ಫುಟ್ಬಾಲ್ ತಂಡ ಗುಹೆಯ ಒಳಗೆ ಸಿಕ್ಕಿಕೊಂಡಿರುವ ವಿಷಯ ಆಧುನಿಕ ಮಾಧ್ಯಮಗಳ ಮೂಲಕ ಇಡೀ ವಿಶ್ವವನ್ನು ವ್ಯಾಪಿಸಿಕೊಂಡುಬಿಟ್ಟಿತು. ಬಿಬಿಸಿ, ಸಿಎನ್‌ಎನ್, ಹಾಗೂ ಭಾರತದ ಎಲ್ಲಾ ಟಿ.ವಿ ಚಾನಲ್ಗಳಲ್ಲೂ ಪ್ರಚಾರವಾಗ ತೊಡಗಿತು. ಬಹಳ ಚಾನಲ್ಗಳಲ್ಲಿ ಲೈವ್ ವೀಡಿಯೋಗಳು ಪ್ರಚಾರ ವಾಗತೊಡಗಿದವು. ವಿಶ್ವದಾದ್ಯಂತ ನೂರಾರು ಕಡೆ ಗಣಿ ಸುರಂಗಗಳಲ್ಲಿ, ಗುಹೆಗಳಲ್ಲಿ, ಸುರಂಗ ನಿರ್ಮಾಣದ ವೇಳೆ ನೂರಾರು ಸಲ ಕಾರ್ಮಿಕರು ಸಿಕ್ಕಿಕೊಂಡು ದಿನಗಳಗಟ್ಟಲೇ ಒಳಗೇ ಉಳಿದುಕೊಂಡು ಬದುಕಿ ಬಂದ ಉದಾಹರಣೆಗಳು ಇತಿಹಾಸದಲ್ಲಿ ದಾಖಲಾಗಿವೆ. ಮತ್ತು ಹಲವು ನಮ್ಮ ಕಾಲದಲ್ಲಿಯ ನಡೆದುಹೋಗಿವೆ. ಅನೇಕ ಕಾರ್ಮಿಕರು ಸತ್ತು ಹೋಗಿರುವ ವಿಷಯಗಳು ನಮಗೆ ಗೊತ್ತಿವೆ. ಕಲ್ಲಿದ್ದಲು ಗಣಿಗಳಲ್ಲಿ ಈಗಲೂ ಪ್ರತಿ ವರ್ಷವೂ ಕೆಲವು ನೂರು ಕಾರ್ಮಿಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ.

ನಮ್ಮ ರಾಜ್ಯದಲ್ಲಿಯೇ ಇರುವ ಕೋಲಾರ ಚಿನ್ನದ ಗಣಿಗಳ ಇತಿಹಾಸವನ್ನು ಕೆದಕಿದರೆ ಸಾಕು ನಮಗೆ ಭಯಾನಕವಾದ ಒಂದು ಚಿತ್ರಣ ದೊರಕುತ್ತದೆ. ಈ ಗಣಿಗಳ 121 ವರ್ಷಗಳ ಚರಿತ್ರೆಯಲ್ಲಿ (1880 ರಿಂದ 2011) 7000 ಕಾರ್ಮಿಕರು ಪ್ರಾಣ ಕಳೆದುಕೊಂಡು, 16,000 ಜನರ ಅಂಗವಿಕಲಾದರು. 2010ರಲ್ಲಿ ಚಿಲಿ ದೇಶದ ಚಿನ್ನದ ಗಣಿಗಳಲ್ಲಿ ಸುರಂಗ ಕುಸಿದು ನೆಲದಿಂದ 2700 ಅಡಿಗಳ ಕೆಳಗೆ 33 ಕಾರ್ಮಿಕರು ಸಿಕ್ಕಿಕೊಂಡರು. ಅವರೆಲ್ಲರನ್ನು 69 ದಿನಗಳ ನಂತರ ಗಣಿಗಳಿಂದ ಹೊರಕ್ಕೆ ತರಲಾಯಿತು. ಅಷ್ಟೂ ದಿನಗಳ ಕಾಲ ಇವರಿಗೆ ಡ್ರಿಲ್ ಮಾಡಿದ ಪೈಪ್ಗಗಳ ಮೂಲಕ ಆಹಾರ, ನೀರು, ಮತ್ತು ಔಷಧಿಗಳನ್ನು ನೀಡಲಾಗಿತ್ತು.

ಗಣಿಗಳು, ಸುರಂಗಳು ಮತ್ತು ಗುಹೆಗಳಲ್ಲಿ ನೂರಾರು ಜನ ಸಿಲುಕಿಕೊಂಡು ಪ್ರಾಣ ಕಳೆದುಕೊಂಡಿದ್ದಕ್ಕಿಂತ ಈ ದುರಂತ ವಿಭಿನ್ನ ಮತ್ತು ವಿಶೇಷವಾದದ್ದು. ಕಾರಣ ಈ ಥಮ್ ಲುವಾಂಗ್ ಗುಹೆಯಲ್ಲಿ ಪ್ರವಾಹದ ಮಧ್ಯೆ ಸಿಲುಕಿಕೊಂಡ 11 ಹುಡುಗರ ವಯಸ್ಸು ಕೇವಲ 11 ಮತ್ತು 14ರ ಒಳಗಿತ್ತು. ಇನ್ನ ಇಬ್ಬರು ಹುಡುಗರು ವಯಸ್ಸು 15 ಮತ್ತು 16 ವರ್ಷಗಳು. ವಿಶ್ವದಾದ್ಯಂತ ವಿಷಯ



ಹುಡುಗರನ್ನು ಪಾರು ಮಾಡುವ ಕಾರ್ಯಾಚರಣೆಯಲ್ಲಿ ತೊಡಗಿಕೊಂಡಿರುವ ಹೆಲಿಕಾಪ್ಟರ್‌ಗಳು.



ಗುಹೆಯ ಹತ್ತಿರಕ್ಕೆ ಆಗಮಿಸಿದ ಆಸ್ಟ್ರೇಲಿಯಾದ ಮೊದಲ ಈಜುತಜ್ಞ ಮತ್ತು ಅರವಳಿಕೆ ವೈದ್ಯ ರಿಚರ್ಡ್ ಹ್ಯಾರಿಸ್.

ಮುಟ್ಟುತ್ತಿದ್ದಂತೆ, ಸ್ವಯಂಸೇವಕರು, ಥಾಯ್ ಸಾಮಾಜಿಕ ಕಾರ್ಯಕರ್ತರು ಮತ್ತು ವಿದೇಶಗಳ ಮಾಧ್ಯಮಗಳು ಥೈಲ್ಯಾಂಡ್ ತಲುಪಿದರು. ಇಡೀ ವಿಶ್ವವೇ ಒಂದಾಗಿ ಈ ಹುಡುಗರ ಬಗ್ಗೆ ಪ್ರೀತಿ ಮತ್ತು ಬೆಂಬಲ ತೋರಿಸತೊಡಗಿತು.

ಈ ಮಧ್ಯ ಥಾಯ್ ಸರ್ಕಾರ ಅಂತರರಾಷ್ಟ್ರೀಯ ಸಹಾಯ ಕೇಳಿಕೊಂಡಿದ್ದ ಕಾರಣ ಮೊದಲ ಅಂತರರಾಷ್ಟ್ರೀಯ ರಕ್ಷಕರ ತಂಡ ಜೂನ್ 28ರಂದು ಆಗಮಿಸಿತು. ಆ ತಂಡದಲ್ಲಿ ಯು.ಎಸ್. ವಾಯುಪಡೆಯ ರಕ್ಷಣ ತಜ್ಞರು, ಮತ್ತು ಯು.ಕೆ, ಬೆಲ್ಜಿಯಮ್ ಆಸ್ಟ್ರೇಲಿಯಾ, ಸ್ಕ್ಯಾಂಡಿನೇವಿಯಾ ಮತ್ತು ಇನ್ನೂ ಹಲವು ದೇಶಗಳಿಂದ ಗುಹಾತಜ್ಞ ಈಜುಗಾರರು ಬಂದು ಸೇರಿ-ಕೊಂಡರು. ಇವರ ಜೊತೆಗೆ ಅನೇಕ ಸ್ವಯಂಸೇವಕರು ಸೇರಿಕೊಂಡಿದ್ದರು. ಈ ಹುಡುಗರ ಫುಟ್ಬಾಲ್ ತಂಡವನ್ನು ರಕ್ಷಿಸುವುದು ಎಷ್ಟು ಮುಖ್ಯವಾದ ಕೆಲಸ ಎನ್ನುವುದು ಈಗ ಎಲ್ಲರಿಗೂ ಎದ್ದು ತೋರುತ್ತಿತ್ತು. ಮುಂದಿನ ಕೆಲವು ದಿನಗಳು ಥಾಯ್ ಈಜುಗಾರರು ಬಹಳ ಕಷ್ಟದಿಂದ ಗುಹೆಯ ಒಳಗೆ ಹುಡುಗರನ್ನು ಹುಡುಕುವ ಪ್ರಯತ್ನ ನಡೆಸಿದರು. ಉಕ್ಕಿ ಹರಿಯುತ್ತಿದ್ದ ಪ್ರವಾಹದ ಜೊತೆಗೆ ಈಜಲು ಪ್ರಯತ್ನ ನಡೆಸಿ ಏನೆಲ್ಲ ಸಾಹಸ ಮಾಡಿದರೂ ಪ್ರವಾಹ ಅವರನ್ನ ಹಿಂದಕ್ಕೆ ತಳ್ಳುತ್ತಿತ್ತು.

ಬರುಬರುತ್ತ ಗುಹೆಯ ಬಾಗಿಲಲ್ಲಿ ಪರಿಸ್ಥಿತಿ ಗಂಭೀರವಾಗಿ ಪರಿಣಮಿಸುತ್ತಿತ್ತು. ನೌಕಾದಳದ ಈಜುಗಾರರು ಈಜುವುದನ್ನು ಬಿಟ್ಟುಬಿಟ್ಟರು. ನೀರಿನ ಪ್ರವಾಹ ಹಿಡಿತ ಕಳೆದುಕೊಂಡು ಗುಹೆಯ ಒಳಗೆ ಹೋಗುವ ಎಲ್ಲಾ ರೀತಿಯ ಉಪಾಯಗಳು ಮುಗಿದುಹೋಗಿದ್ದವು. ಮಳೆ ಹೆಚ್ಚಾಗುತ್ತಲೇ ಇದ್ದು ನೀರು ಪಂಪ್ ಮಾಡುವ ಕೆಲಸವನ್ನು ಸ್ಥಗಿತಗೊಳಿಸಲಾಯಿತು. ಅಧಿಕಾರಿಗಳು ಬೇರೆ ರೀತಿಯ ತಂತ್ರಗಳನ್ನು ಹುಡುಕಲು ಯೋಚಿಸತೊಡಗಿದರು. ಕಾಣೆಯಾದ ಹುಡುಗರನ್ನು ಹುಡುಕುವ ಬೇರೆ ದಾರಿಗಳನ್ನು ಪುನರ್ವಿಮರ್ಶಿಲಾಯಿತು.

○○○

ಹುಡುಗರು ಕಾಣೆಯಾದ ಒಂದು ವಾರದ ನಂತರ ಜುಲೈ 1ರಂದು ಶನಿವಾರ ರಕ್ಷಕರು ತುಸು ಪ್ರಗತಿಯನ್ನು ಸಾಧಿಸಿದರು. ಈಜುಗಾರರು ಗುಹೆಯ ಒಳಗಿನ ಒಂದು ದೊಡ್ಡ ಕೊಠಡಿ ತಲುಪಿದರು. ಅನಂತರ ಆ ಕೊಠಡಿಯನ್ನು ಮೂರನೇ ಚೇಂಬರ್ ಎಂದು ಹೆಸರಿಸಿದರು. ಅದು ಮುಂದಿನ ಕೆಲಸಗಳಿಗೆ ಮೂಲ ಶಿಬಿರವಾಗಿ ಮಾರ್ಪಟ್ಟಿತು. ಆ ದಿನ ಹುಡುಗರ ಗುಂಪಿನಲ್ಲಿದ್ದ ಒಬ್ಬ ಹುಡುಗನ ಹುಟ್ಟು ಹಬ್ಬದ ದಿನವೂ ಆಗಿತ್ತು. ಈಗ ಮಾಧ್ಯಮ ಎಲ್ಲರಿಗೂ 'Thai cave boys' ಎಂದು ಹೆಸರು ಕೊಟ್ಟಿತ್ತು. ಆದರೆ ಇನ್ನೂ ಈ ಹುಡುಗರು ಹೊರಗಿನ ಪ್ರಪಂಚಕ್ಕೆ ಕಾಣದಾಗಿಯೇ ಉಳಿದುಕೊಂಡಿದ್ದರು. ಆದರೆ ಅವರ ಇರುವಿಕೆ ಬಹಳ ದೂರವೇನೂ ಉಳಿದುಕೊಂಡಿರಲಿಲ್ಲ. ಮರು ದಿನ ಬ್ರಿಟಿಷ್ ಈಜುಗಾರರು ಪ್ರಪಂಚ ನಂಬಲಾಗದ ಒಂದು ಅನ್ವೇಷಣೆಯನ್ನ ಮಾಡಿಬಿಟ್ಟಿದ್ದರು.

ಐದು ಭಾಷೆಗಳನ್ನು ಮಾತನಾಡುವ ಅದುಲ್ ಸ್ಯಾಮ್ ಎಂಬ ಬುದ್ಧಿವಂತ ಹುಡುಗ

ಬ್ರಿಟನ್ ದೇಶದ ಜಾನ್ ವೊಲಾನ್ಥೆನ್ ಮತ್ತು ರಿಕ್ ಸ್ಟಾಂಟನ್ ಅವರು ಥಮ್ ಲುವಾಂಗ್ ಗುಹೆಯ ಕಿರಿದಾದ ಕೆಸರು ನೀರಿನ ಕಿಂಡಿಗಳಲ್ಲಿ ಹಲವು ದಿನಗಳ ಕಾಲ ಹಗ್ಗಗಳನ್ನು ಮಾರ್ಗದರ್ಶನವಾಗಿ ಹಾಕುತ್ತ ತೂರಿಕೊಂಡು ಹೋಗಿ ಹುಡುಗರ ತಂಡವನ್ನು ಹುಡುಕುತ್ತಿದ್ದರು. ಸೋಮವಾರ ಅವರಿಬ್ಬರೂ ಪಟ್ಟಯಾ ಬೀಚ್ ಹತ್ತಿರ ತಲುಪಿ ನೋಡಿದಾಗ ಹುಡುಗರಿರುವ ಚಿಹ್ನೆಗಳು ಕಾಣಿಸಲಿಲ್ಲ. ಅಲ್ಲಿಂದ ಮತ್ತೆ ಕತ್ತಲ ಗುಹೆಯ ಒಳಗೆ ಆಳಕ್ಕೆ ಮುಂದುವರಿದರು.




ಜಾನ್ ವೊಲಾನ್ಥೆನ್ ಮತ್ತು ರಿಕ್ ಸ್ಟಾಂಟನ್ ಅವರು ಒಂಬತ್ತು ದಿನಗಳ ನಂತರ ಮೊದಲ ಬಾರಿಗೆ ವೈಲ್ಡ್ ಬೋರ್ಸ್ ತಂಡವನ್ನು ಗುಹೆಯ ಒಳಗೆ ಕ್ಯಾಮೆರಾದಲ್ಲಿ ಸೆರೆ ಹಿಡಿದ ದೃಶ್ಯ.

ಕೆಲವು ನೂರು ಮೀಟರುಗಳ ಆಳಕ್ಕೆ ಹೋದಾಗ ಅಲ್ಲೊಂದು ಏರ್ ಪಾಕೆಟ್ ಕಾಣಿಸಿತು. ಜಾನ್ ವೊಲಾನ್ಥೆನ್ ಮತ್ತು ರಿಕ್ ಸ್ಟಾಂಟನ್ ಇಬ್ಬರೂ ಗಾಳಿ ಇರುವ ಸ್ಥಳ ತಲುಪಿದಾಗಲೆಲ್ಲ ತಲೆ ಮೇಲಕ್ಕೆತ್ತಿ ಕೂಗುತ್ತಿದ್ದರು ಮತ್ತು ಗಾಳಿಯಲ್ಲಿ ಏನಾದರು ವಾಸನೆ ದೊರಕುತ್ತದೆಯೆ ಎಂದು ಮೂಸುತ್ತಿದ್ದರು. ಈಜು ತಜ್ಞರು ಇಂತಹ ಸಮಯದಲ್ಲಿ ಸಾಧಾರಣವಾಗಿ ಮಾಡುವ ಕಾರ್ಯಾಚರಣೆಯ ಮೂಲ ವಿಧಾನಗಳು ಇವು. ಜನರ ಇರುವಿಕೆಯನ್ನು ಅಥವಾ ಅವರ ಮಾತುಗಳನ್ನು ಕೇಳುವುದಕ್ಕೆ ಮುಂಚಿತವಾಗಿಯೇ ಜನರು ಇರುವ ವಿಷಯ ನಮಗೆ ತಿಳಿದುಬಿಡುತ್ತದೆ ಎನ್ನುತ್ತಾರ ಈ ಇಬ್ಬರು ಗುಹಾತಜ್ಞರು.

ಅಂತೂ ಕೊನೆಗೆ ಜಾನ್ ವೊಲಾನ್ಥೆನ್ ಅವರ ಬ್ಯಾಟರಿಯ ಬೆಳಕು ಒಂದು ದೃಷ್ಟಿಗೋಚರ ದೃಶ್ಯದ ಮೇಲೆ ಬಿದ್ದುಬಿಟ್ಟಿತು. 'ಹುಡುಗರು ಅಂಧಕಾರದಿಂದ ಹೊರಗೆ ಬಂದಂತಾಗಿ ನಮ್ಮ ಕಣ್ಣುಗಳಿಗೆ ಸಿಕ್ಕಿಯೇ ಬಿಟ್ಟರು', ಎಂಬುದಾಗಿ ಜಾನ್ ವೊಲಾನ್ಥೆನ್ ಗುಹೆಯ ಹೊರಗೆ ಬಂದಾಗ ಉತ್ಸುಕತೆಯಿಂದ ಹೇಳಿದರು.

ರಿಕ್ ಸ್ಟಾಂಟನ್ ಹುಡುಗರ ಸಂಖ್ಯೆಯನ್ನು ಎಣಿಸತೊಡಗಿದ್ದೆ, ಜಾನ್ 'ನೀವೆಲ್ಲ ಎಷ್ಟು ಜನ ಇದ್ದೀರೀ?' ಎಂಬ ಪ್ರಶ್ನೆಗೆ ಹುಡುಗರ ಗುಂಪಿನ ಮಧ್ಯದಿಂದ 'ಹದಿಮೂರು ಜನ ಇದ್ದೀವಿ' ಎಂಬ ಉತ್ತರ ಬಂದಿತು ಇಂಗ್ಲಿಷ್‌ನಲ್ಲಿ. 'Thirteen? Brilliant!' ಜಾನ್, ಎಂದರೆ 'ರಿಕ್ ನಾವು ನೋಡುತ್ತಿರುವ ದೃಶ್ಯ ನಂಬಲಸಾಧ್ಯ, ಅವರೆಲ್ಲರೂ ಜೀವಂತವಾಗಿದ್ದಾರೆ' ಎಂದ. ಅಂತೂ ಕಾಡಿನಲ್ಲಿ ತಪ್ಪಿಸಿಕೊಂಡಿದ್ದ ವೈಲ್ಡ್ ಬೋರ್ಸ್ (ಕಾಡಂದಿಗಳು) ಕೊನೆಗೂ ಕತ್ತಲ ಗುಹೆಯೊಳಗೆ ನಾಡಿನ ಜನರ ಕೈಗೆ ಸಿಕ್ಕಿಬಿದ್ದವು. ಬ್ರಿಟಿಷ್ ಡೈವರ್ಗಳು ಮೊದಲಿಗೆ ಹುಡುಗರನ್ನು ಸಂಧಿಸಿದಾಗ ಹುಡುಗರು ಎಷ್ಟು ದಿನಗಳಿಂದ ಗುಹೆಯಲ್ಲಿ ಸಿಕ್ಕಿಕೊಂಡಿದ್ದರು ಎನ್ನುವುದನ್ನು ಮರೆತುಹೋಗಿದ್ದರು. ಸಮಯ, ದಿನ ಯಾವುದೂ



ಥಮ್ ಲುವಾಂಗ್ ಗುಹೆ ಸಮೂಹ ಇರುವ 'ಡೊಯಿ ನಾಂಗ್ ನಾನ್' ಪರ್ವತಗಳ ಮೈಲ್ಮೈ ದೃಶ್ಯ.

ಅವರಿಗೆ ಗೊತ್ತಿರಲಿಲ್ಲ. ಮೊದಲಿಗೆ ಅವರಿಗೆ Emergency blanket ನೀಡಲಾಯಿತು. ವೀಡಿಯೊ ಮೂಲಕ ಮೊದಲಿಗೆ ಅವರೆಲ್ಲ ಹೊರಗಿನ ಪ್ರಪಂಚಕ್ಕೆ ಎರಡೂ ಕೈಗಳನ್ನು ಜೋಡಿಸಿ 'Wai-Thai' ವಂದನೆಗಳನ್ನು ಹೇಳಿದರು.

ಚಿತ್ರದಲ್ಲಿ ಎಡಗಡೆ ಪರ್ವತ ಶ್ರೇಣಿಗಳು ಹರಡಿಕೊಂಡಿದ್ದರೆ ಬಲಗಡೆ ಹಳ್ಳಿಯನ್ನು ನೋಡಬಹುದು. ಹುಡಗರು ನಡೆದುಹೋದ ದಾರಿ ಮತ್ತು ಗುಹೆ ಬಾಗಿಲಿಂದ ಇಡೀ ಗುಹೆಯ ನಕ್ಷೆಯನ್ನು ಇಲ್ಲಿ ನೀಡಲಾಗಿದೆ. ಹುಡುಗರು ಬಿಟ್ಟಿದ್ದ ಶೂಗಳು, ಅವರು ನಡೆದುಹೋದ ಹೆಜ್ಜೆ ಗುರುತುಗಳು ಮತ್ತು ಸಿಕ್ಕಿಬಿದ್ದ ಪಟ್ಟಯಾ ಬೀಚ್ ಸ್ಥಳಗಳನ್ನು ನಕ್ಷೆಯಲ್ಲಿ ನೋಡಬಹುದು. ಗುಹೆಯ ಬಾಗಿಲಿಂದ ಅವರಿದ್ದ ಪಟ್ಟಯಾ ಬೀಚ್ 3,200 ಮೀಟರುಗಳ ದೂರದಲ್ಲಿದ್ದು, ಬೆಟ್ಟದ ಮೇಲಿಂದ ಅದು 800 ರಿಂದ 1000 ಮೀಟರುಗಳ ಕೆಳಗಿತ್ತು.

ಬ್ರಿಟನ್‌ನ ಇಬ್ಬರೂ ಈಜುಗಾರರು ಹುಡುಗರ ಜೊತೆಗೆ ಸ್ವಲ್ಪ ಸಮಯ ಕಾಲ ಕಳೆದು ಅವರಿಗೆ ಆತ್ಮಸ್ಥೈರ್ಯ ತುಂಬಿದರು. ಅವರಲ್ಲಿದ್ದ ಕೆಲವು ಟಾರ್ಚ್‌ಗಳನ್ನು ಅವರಿಗೆ ನೀಡಿ ಅವರು ಮತ್ತೆ ಖಂಡಿತ ಆಹಾರ ತರುವುದಾಗಿ ಹೇಳಿ ಹಿಂದಿರುಗಿದರು. ಈಜುಗಾರರು ಮತ್ತು ಹುಡುಗರ ನಡುವಿನ ಭೇಟಿಯನ್ನು ಈಜುಗಾರರ ಕ್ಯಾಮೆರಾಗಳಲ್ಲಿ ಸೆರೆ ಹಿಡಿದುಕೊಂಡು ಅವುಗಳನ್ನು ತ್ವರಿತವಾಗಿ ಆನ್ಲೈನ್‌ನಲ್ಲಿ ಪೋಸ್ಟ್ ಮಾಡಲಾಯಿತು. ವಿಶ್ವದಾದ್ಯಂತ ಮಾಧ್ಯಮಗಳ ಮೂಲಕ ಜನರು ಸಂತೋಷವನ್ನು ಅಂಚಿಕೊಂಡರು. ಒಂದು ವಾರದಿಂದ ಚಿಂತೆಗೆ

ಒಳಗಾಗಿದ್ದ ವೈಲ್ಡ್ ಬೋರ್ಸ್ ಪೋಷಕರು ಒಮ್ಮೆಲೆ ಹುಡುಗರು ಬದುಕಿ ಉಳಿದಿರುವ ವಿಷಯವನ್ನು ಕೇಳಿ ನಲಿದಾಡಿದರು. ನೋಡುವುದಕ್ಕೆ ಸಣಕಲಾಗಿ ಕಾಣಿಸಿಕೊಂಡರೂ ಯಾರೂ ಹೆಚ್ಚಿನ ತೊಂದರೆಗೆ ಒಳಗಾಗಿರಲಿಲ್ಲ.

ಅನಂತರ ಥಾಯ್ ನೌಕಾದಳದ ಸೀಲ್ ಅಧಿಕಾರಿಗಳು ಹುಡುಗರಿದ್ದ ಸ್ಥಳಕ್ಕೆ ಹೋಗಿ ಸೇರಿಕೊಂಡು ಅವರ ಜೊತೆಗೆ ಇದ್ದುಕೊಂಡು ಬೇಕಾದ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತಿದ್ದರು. ಒಂಬತ್ತು ದಿನಗಳನ್ನು ಗುಹೆಯ ಕತ್ತಲಲ್ಲಿ ಕಳೆದ ಮೇಲೆ ಈಗ ಹೊರಗೆ ಬರುವ ಸಂತೋಷದಿಂದ ಅವರ ಮನಗಳು ತುಂಬಿಕೊಂಡವು. ಈಗ ಅವರಿಗೆ ಬೇಕಾದ ಊಟವನ್ನು ಪೂರೈಸಲಾಗಿತ್ತು. ಹುಡುಗರು ತಮಗೆ ಇಷ್ಟವಾದ ಆಹಾರ 'ಪ್ಯಾಡ್ ಕ್ರಪಾವೊಗೆ' ಬೇಡಿಕೆ ಇಟ್ಟರು. ಪ್ಯಾಡ್ ಕ್ರಪಾವೊ ಎಂದರೆ ಅನ್ನಕ್ಕೆ ಮಾಂಸ ಮತ್ತು ಬಸಿಲ್ ಸೊಪ್ಪಾಕಿ ಬೆರಸಿ ತಯಾರಿಸದ ಭಕ್ಷ್ಯ. ಆದರೆ ವೈದ್ಯರು ಔಷಧೀಯ ದ್ರವ ಆಹಾರದ ಜೊತೆಗೆ ವಿಶೇಷ ಆಹಾರ ಮತ್ತು ಖನಿಜಯುಕ್ತ ನೀರು ಸೇರಿಸಿದ ವಿಟಮಿನ್ಗಳ ಆಹಾರವನ್ನು ಮಾತ್ರ ಕೊಡುವಂತೆ ಆದೇಶಗಳನ್ನು ನೀಡಿಬಿಟ್ಟರು. ಮೂರನೇ ಹುಡುಗ ಡೊಮ್ ಕೂಡ ಗುಹೆಯಲ್ಲಿಯೇ ತನ್ನ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳಬೇಕಾಯಿತು. ಹುಡುಗರನ್ನು ಪಾರು ಮಾಡುವುದು ಹೇಗೆಂದು ರಕ್ಷಣಾ ಪಡೆಯ ಅಧಿಕಾರಿಗಳು ಗುಹೆಯ ಹೊರಗೆ ಯೋಜನೆಗಳನ್ನು ಮಾಡಿಕೊಳ್ಳುತ್ತಿದ್ದರು.

ತಜ್ಞರು ಮೊದಲಿಗೆ ಕೆಳಗಿನ ಪಾರುಗಾಣಿಕಾ ಯೋಜನೆಗಳನ್ನು ಆಲೋಚಿಸಿದರು:

1. ಮುಂಗಾರು ಮಳೆ ನಿಲ್ಲುವವರೆಗೂ ಕಾಯುವುದು.
2. ಹುಡುಗರ ತಂಡಕ್ಕೆ ಡೈವಿಂಗ್ ಮಾಡುವುದನ್ನು ಕಲಿಸಿ ಗುಹೆಯಿಂದ ಪಾರು ಮಾಡುವುದು.
3. ಗುಹೆಯ ಬೇರೆ ದಾರಿಯನ್ನು ಹುಡುಕಿ ಹುಡುಗರನ್ನು ಪಾರು ಮಾಡುವುದು.
4. ಬೆಟ್ಟದ ಮೇಲಿಂದ ಡ್ರಿಲ್ ಮಾಡಿ ಹೊಸ ಶ್ಯಾಫ್ಟ್ (ಗಣಿ) ಮೂಲಕ ಎಲ್ಲರನ್ನು ಹೊರಕ್ಕೆ ತರುವುದು.

5. ಗುಹೆಯ ಒಳಗಿನ ನೀರನ್ನು ಹೊರಕ್ಕೆ ಹಾಕಿ ಹುಡುಗರನ್ನು ಪಾರು ಮಾಡುವುದು.

6. ಗುಹೆಯ ಒಳಗೆ ಆಮ್ಲಜನಕದ ಅಂಶವನ್ನು 19 ರಿಂದ 21% ಮಧ್ಯ ಉಳಿಸಿಕೊಳ್ಳವುದು.

ಇದರ ಜೊತೆಗೆ ಗುಹೆಯ ಒಳಗಿನ ಸುರಂಗಗಳಲ್ಲಿ ಒಡ್ಡುಗಳನ್ನು ಕಟ್ಟಿ ನೀರನ್ನು ಮುಂದಕ್ಕೆ ಹೋಗದಂತೆ ನೋಡಿಕೊಳ್ಳವುದು.

❑

ಅಧ್ಯಾಯ–10

ಮೊದಲಿಗೆ ಗುಹೆಯ ಬಾಗಿಲಲ್ಲಿ ಲಾಜಿಸ್ಟಿಕ್ ಕ್ಯಾಂಪ್‌ನ್ನು ಸ್ಥಾಪಿಸಲಾಯಿತು. ಅದರಲ್ಲಿ ವರದಿಗಾರರು, ಸ್ವಯಂ ಸೇವಕರು, ರಕ್ಷಣಾ ಪಡೆ, ಮಿಲಿಟರಿ, ಹುಡುಗರ ಪೋಷಕರು ಮತ್ತು ಸಾರ್ವಜನಿಕರ ವಿಭಾಗಗಳಿದ್ದವು.

ನೂರಾರು ಕಾರ್ಮಿಕರು ಮತ್ತು ಸೈನಿಕರು ಬೆಟ್ಟದ ಮೇಲಿನ ಕಾಡನ್ನು ಕಡಿದು ನೂರಾರು ಕಡೆ ಡ್ರಿಲ್ ಮಾಡಿ ತೂತುಗಳನ್ನು ಮಾಡಿದರು. ಇದರಿಂದ ಗುಹೆ ಒಳಗಿರುವ ಹುಡುಗರಿಗೆ ಗಾಳಿ ಹೋಗಲು ಸಹಾಯಕವಾಗುತ್ತದೆ ಎನ್ನುವುದು ಅವರ ಲೆಕ್ಕಾಚಾರ. ಗುಹೆಸಮೂಹ ಹರಡಿಕೊಂಡಿದ್ದ ಬೆಟ್ಟದ ಮೇಲಿಂದ 800 ರಿಂದ 1000 ಮೀಟರುಗಳ ಕೆಳಗೆ ಮತ್ತು ಗುಹೆಯ ಬಾಗಿಲಿಂದ ನಾಲ್ಕು ಕಿಲೋಮೀಟರುಗಳ ದೂರದಲ್ಲಿ ಹುಡುಗರು ಸಿಕ್ಕಿಕೊಂಡಿದ್ದರು. ಇದೊಂದು ರೀತಿಯಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ಆಲೋಚನೆಯಿಂದ ಕೆಲಸ ಮಾಡಬೇಕಾಗಿತ್ತು. ಮುಂದೆ

ಅಧಿಕಾರಿಗಳು ಗುಹೆಯ ಬಾಗಿಲಿನಿಂದ ಪೈಪ್‌ಗಳನ್ನು ಜೋಡಿಸಿ ಗಾಳಿಯನ್ನು ಒಳಕ್ಕೆ ಪಂಪ್ ಮಾಡತೊಡಗಿದರು. ಇದು ಎಲ್ಲಾ ರೀತಿಯ ಆಳದ ಗಣಿಗಳಲ್ಲಿ ಮಾಡುವ ಕೆಲಸ. ಮೊದಲಗೆ 1.5 ಕಿಲೋಮೀಟರು ದೂರದವರೆಗೂ ಪೈಪ್ ಹಾಕಿ ಗಾಳಿಯನ್ನು ದೂಡಲಾಯಿತು. ಉಳಿದ 1.7 ಕಿಲೋಮೀಟರುಗಳ ದೂರದವರೆಗೂ ಆಮ್ಲಜನ ಉಳ್ಳ ಏರ್ ಟ್ಯಾಂಕರ್‌ಗಳನ್ನು (ಸಿಲೆಂಡರ್‌ಗಳು) ಪೂರೈಸಲಾಯಿತು.

OOO

ಒಂದು ಹಂತದಲ್ಲಿ ಅಧಿಕಾರಿಗಳು ಹುಡುಗರನ್ನು ಮುಂಗಾರು ಮಳೆ ನಿಲ್ಲುವವರೆಗೂ ಅಂದರೆ ನಾಲ್ಕು ತಿಂಗಳುಗಳ ಕಾಲ ಗುಹೆಯ ಒಳಗೆಯೇ ಇಟ್ಟು ನೋಡಿಕೊಳ್ಳುವ ಆಲೋಚನೆ ಮಾಡಿದ್ದರು. ಆದರೆ ಅನಂತರ ಮುಂಗಾರು ಮಳೆ ಹೆಚ್ಚಾಗಿ ಗುಹೆ ಸಮೂಹ ಸಂಪೂರ್ಣವಾಗಿ ನೀರಿನಿಂದ ತುಂಬಿಕೊಂಡರೆ ಏನು ಮಾಡಬೇಕು ಎನ್ನುವ ಪ್ರಶ್ನೆಗಳೆದ್ದು ಏನಾದರು ಆಗಲಿ ಎಲ್ಲರನ್ನೂ ಎರಡು ಮೂರು ದಿನಗಳಲ್ಲಿ ಪಾರು ಮಾಡುವ ಯೋಜನೆಯನ್ನು ಮಾಡಿಕೊಳ್ಳಲಾಯಿತು. ಮೊದಲಿಗೆ ಗಾರ್ಡಿಯನ್ ಪತ್ರಿಕೆಗೆ ಸಂದರ್ಶನ ಕೊಟ್ಟು ಯುಕಾಂಗ್ಕಾವ್ 'ಇದು ನಿಜವಾಗಿಯೂ ಒಂದು ನರಕದ ಕೆಲಸ' ಎಂದು ಹೇಳಿದ್ದರು.

ಬಹಳ ಹುಡುಗರಿಗೆ ಈಜು ಬರುತ್ತಿರಲಿಲ್ಲ. 3.20 ಕಿಲೋಮೀಟರುಗಳ ದೂರದ ಕೆಸರು ಮತ್ತು ಮರ್ಕಿ ನೀರಿನಲ್ಲಿ ನುರಿತ ತಜ್ಞ ಈಜುಗಾರರೇ ಆಮ್ಲಜನಕದ ಕೊರತೆಯಿಂದ ಈಜುಕೊಂಡು ಬರುವುದು ದೊಡ್ಡ ಸಾಹಸದ ಕೆಲಸವಾಗಿತ್ತು. ಸಮಯ ನಮ್ಮ ಕಡೆ ಸಹಾಯಕ್ಕೆ ನಿಂತಿಲ್ಲ ಎಂಬುದಾಗಿ ಕೆಲವು ಅಧಿಕಾರಿಗಳು ಹೇಳಿಕೊಳ್ಳುತ್ತಿದ್ದರು. ಏಕೆಂದರೆ ಮತ್ತೆ ಮೂರು ದಿನಗಳ ಕಾಲ ಭಾರೀ ಮಳೆ ಬರುವುದಾಗಿ ಹವಾಮಾನ ಇಲಾಖೆ ಮುನ್ಸೂಚನೆಯನ್ನು ನೀಡಿತ್ತು. ಈಜುತಜ್ಞ ಬೆನ್ ರೇಮನೆಂಟ್ಸ್ 'ಈಗ ನಿಜವಾಗಿ ಬಾಗಿಲಿಗೆ ಬಂದಿರುವ ತೊಂದರೆ ಎಂದರೆ ತೀವ್ರ ಮುಂಗಾರು ಮಳೆಯ ಮುನ್ಸೂಚನೆ' ಎಂದು ಸೀಲ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಮೇ ಸಾಯಿ ಪರ್ವತಗಳ ಕೆಳಗೆ ಗುಹೆಯಲ್ಲಿ ಬದುಕುಳಿದ ಹುಡಗರನ್ನ ಈಜುಗಾರರ ತಂಡ ಶೋಧನೆ ಮಾಡಿ ಗುರುತಿಸಿದ ಮೇಲೆ ಈ ಪರ್ವತಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡವು. ರಾತ್ರೋರಾತ್ರಿ ವಿಶ್ವದಾದ್ಯಂತ ಪತ್ರಕರ್ತರು ಈ ಗುಹೆಗಳ ಕಡೆಗೆ ದಂಡುದಂಡುಗಳಾಗಿ ಹರಿದುಬಂದರು.

ಸ್ವಯಂಸೇವಕರ ತಂಡಗಳು ಅವರಿಗಿಂತ ಹೆಚ್ಚಾಗಿ ಓಡಿಬಂದವು. ಸುಮಾರು 200 ರಿಂದ 300 ಥಾಯ್ ಮತ್ತು ವಿದೇಶಿ ಪತ್ರಕರ್ತರು ಗುಹೆಯ ಬಾಗಿಲಲ್ಲಿ ಜಮಾ ಆಗಿ ಸುದ್ದಿಯನ್ನು ವಿಶ್ವದ ಮೂಲೆಮೂಲೆಗಳಿಗೂ ತಲುಪಿಸುತ್ತಿದ್ದರು. ನಿರಂತರ ಪತ್ರಿಕಾಗೋಷ್ಠಿಗಳು ಜೊತೆಗೆ, ಪ್ರತಿ ಸಣ್ಣ ವಿಚಾರವೂ ಮಾಧ್ಯಮದ ಪ್ರಮುಖ ಹಗರಣವಾಗಿ ಪರಿವರ್ತನೆಗೊಳ್ಳುತ್ತಿತ್ತು.

ಕಾರ್ಯಾಚರಣೆಯಲ್ಲಿ ಕಂಡುಬಂದ ಕೆಲವು ಮುಖ್ಯಾಂಶಗಳು

1. ಬಹಳ ಹುಡುಗರಿಗೆ ಈಜುವುದು ಬರದ ಕಾರಣ ಅವರನ್ನು ಗುಹೆಯಿಂದ ಹೊರಕ್ಕೆ ತರುವಾಗ ಆಂಟಿ-ಆಂಕ್ಸಿಟಿ(ಕಿನ್ನತೆ) ಔಷಧಿಯನ್ನು ಕೊಡಲಾಯಿತು.

2. ಒಬ್ಬ ಹುಡುಗನನ್ನು ಹೊರಕ್ಕೆ ತರಲು ಒಬ್ಬ ಡೈವರ್‌ಗೆ ಸರಾಸರಿ ಹೋಗಿಬರಲು 8 ಕಿಲೋಮೀಟರುಗಳು ದೂರ ಮತ್ತು 11 ಗಂಟೆಗಳ ಸಮಯ ತೆ-ಗೆದುಕೊಂಡಿತು.

3. ಗುಹೆಯಿಂದ ನಿರಂತರವಾಗಿ ಹೊರಕ್ಕೆ ಹಾಕಿದ ಪ್ರವಾಹದ ಒಟ್ಟು ನೀರು 48 ಒಲಂಪಿಕ್ ಗಾತ್ರದ ಈಜುಕೊಳಗಳಿಗೆ ಸಮನಾಗಿತ್ತು. ಗುಹೆಗಳ ಒಳಗೆ ಪ್ರವಾಹದ ನೀರನ್ನು ತಡೆಗಟ್ಟಲು ಕಟ್ಟಿದ ಸಣ್ಣಸಣ್ಣ ಒಡ್ಡುಗಳು ಕೂಡ ಹರಿದುಹೋದವು.

4. ಎಲ್ಲರನ್ನು ರಕ್ಷಿಸಿದ ಮೇಲೆ ಥಾಯ್ ಸೀಲ್ ಅಧಿಕಾರಿಗಳು ಇದೊಂದು ವಿಸ್ಮಯ ಅಥವಾ ವಿಜ್ಞಾನವೇ ಎಂದು ತಮಗೆ ತಾವೇ ಪ್ರಶ್ನಿಸಿಕೊಂಡಿದ್ದರು. ಡೈವರ್‌ಗಳು ಮತ್ತು ರಕ್ಷಣಾ ಪಡೆ ತಮ್ಮ ನಡುವೆ ಸಂವಹನ ನಡೆಸಲು 20 ವರ್ಷಗಳ ಹಳೆ Heyphones ಬಳಸಿದ್ದರು. ಈ ಅಲ್ಟ್ರಾ-ಲೊ ಆವರ್ತನ ಟ್ರಾನ್ಸ್ಮಿಟರ್‌ಗಳು ಬಂಡೆಗಳನ್ನು ಭೇದಿಸಿಬಲ್ಲವು ಮತ್ತು ವೈವಿಧ್ಯಮಯ ಸ್ಥಳಗಳಲ್ಲಿ ಇದ್ದರೂ ಸಂದೇಶಗಳನ್ನು ಕಳುಹಿಸುವುದಲ್ಲದೆ ಅವರಿರುವ ಸ್ಥಳಗಳನ್ನು ಗುರುತಿಸಬಲ್ಲವು. ಆದರೂ ಅವುಗಳಿಗೂ ಒಂದು ಮಿತಿ ಇರುತ್ತಿತ್ತು.

5. ಒಟ್ಟು 90 ಡೈವರ್‌ಗಳು ಕಾರ್ಯಾಚರಣೆಯಲ್ಲಿ ನಿರತರಾಗಿದ್ದು ಅದರಲ್ಲಿ 50 ಡೈವರ್‌ಗಳು ವಿದೇಶಗಳಿಗೆ ಸೇರಿದವರಾಗಿದ್ದರು.

6. ಎರಡು ವಾರಗಳ ಕಾಲ ಕತ್ತಲಲ್ಲಿ ಕಾಲ ಕಳೆದ ಹುಡುಗರು ಹೊರಕ್ಕೆ

ಬಂದ ಮೇಲೆ ಅವರ ಕಣ್ಣುಗಳು ಬೆಳಕಿಗೆ ಹೊಂದಿಕೊಳ್ಳುವ ತನಕ ಕಪ್ಪು ಕನ್ನಡಕಗಳನ್ನು ಧರಿಸಬೇಕಾಯಿತು.

7. ಹುಡುಗರನ್ನು ಗುಹೆಯ ಒಳಗಿಂದ ನೇರವಾಗಿ ಆಸ್ಪತ್ರೆಗೆ ಸಾಗಿಸಲಾಯಿತು. ಅವರಿಗೆ ಏನಾದರು ಗುಹೆಯ ಒಳಗಿನ ನೀರು ಮತ್ತು ಗಾಳಿಯ ಮೂಲಕ ಕಾಯಿಲೆಗಳು ಅಂಟಿಕೊಂಡಿವೆಯೆ ಎಂಬ ಅನುಮಾನ ವೈದ್ಯರಿಗೆ ಇತ್ತು. ಎಲ್ಲಾ ಹುಡುಗರಿಗೂ ರೇಬಿಸ್ ಮತ್ತು ಟೆಟನಸ್ಗೆ ಪ್ರತಿ ಜೈವಿಕ ಚುಚ್ಚುಮದ್ದುಗಳನ್ನು ನೀಡಲಾಯಿತು. ಇಬ್ಬರು ಹುಡುಗರಿಗೆ ನ್ಯುಮೋನಿಯಾ ಇರಬಹುದೆಂದು ಊಹಿಸಲಾಗಿತ್ತು. ಆದರೆ ಯಾರಿಗೂ ಯಾವುದೇ ಸೋಂಕು ಕಾಯಿಲೆಗಳು ಅಂಟಿಕೊಂಡಿರಲಿಲ್ಲ.

ಹನ್ನೆರಡು ಹುಡುಗರ ಜೂನಿಯರ್ ಫುಟ್ಬಾಲ್ ತಂಡ



ವೈಲ್ಡ್ ಬೋರ್ಸ್ ತಂಡದ ಹನ್ನೆರಡು ಹುಡುಗರ ಒಂದು ಆಲ್ಬಮ್.

1. **ಚಾನಿನ್ ವಿಬುನ್ರುಂಗ್ರುಯಾಂಗ್ (ಅಡ್ಡ ಹೆಸರು ಟೈಟಾನ್) 11 ವರ್ಷ:**



ತಂಡದಲ್ಲಿ ಅತ್ಯಂತ ಕಿರಿಯನಾದ ಇವನು ತಂಡದಲ್ಲಿ ಫಾರ್ವರ್ಡ್‌ನಲ್ಲಿ ಆಡುತ್ತಾನೆ. ಶಾಲೆಯ ಫುಟ್ಬಾಲ್ ತಂಡಕ್ಕೆ ಸೇರುವ ಮುಂಚೆ ಇವನು 7 ವರ್ಷ ವಯಸ್ಸಿನಿಂದಲೇ ಫುಟ್ಬಾಲ್ ಆಡುತ್ತಿದ್ದಾನೆ. ಅನಂತರ ಇವನನ್ನು ವೈಲ್ಡ್ ಬೋರ್ಸ್ ಕ್ಲಬ್ಗೆ ಸೇರಿಸಿಕೊಳ್ಳಲಾಯಿತು.

2. **ಫನುಮತ್ ಸಾಂಗ್ದಿ (ಅಡ್ಡ ಹೆಸರು ಮಿಗ್) ವಯಸ್ಸು 12 ವರ್ಷ:** ಫುಟ್ಬಾಲ್ ತಂಡದ ಮುಖ್ಯ ತರಬೇತುದಾರನ ಪ್ರಕಾರ ಈ ಹುಡುಗ ತನ್ನ ವಯಸ್ಸಿನ ಇತರ ಮಕ್ಕಳಿಗಿಂತ ದೊಡ್ಡವನಾಗಿ ಕಾಣಿಸುತ್ತಾನೆ. ಆದರೆ ಅವನ ದೇಹ ಚುರುಕುನಿಂದ ಕೂಡಿದ್ದು ವೈಲ್ಡ್ ಬೋರ್ಸ್ ತಂಡದ ಡಿಫೆಂಡರ್ ಅಂದರೆ ರಕ್ಷಕನಾಗಿದ್ದಾನೆ.



3. **ಡುವಾಂಗ್ಫೆಟ್ ಫ್ರಾಮ್ಥೆಪ್ (ಅಡ್ಡ ಹೆಸರು ಡೊಮ್) ವಯಸ್ಸು 13 ವರ್ಷ:** ಇವನು ಫುಟ್ಬಾಲ್ ಸ್ಟ್ರೈಕರ್ ಆಗಿದ್ದು ವೈಲ್ಡ್ ಬೋರ್ಸ್ ನಾಯಕ. ಡೊಮ್, ಥಾಯ್‌ನ ಹಲವು ವೃತ್ತಿಪರ ಕ್ಲಬ್ಬುಗಳನ್ನು ತನಿಕೆ ಮಾಡಿ ಕೊನೆಗೆ ವೈಲ್ಡ್ ಬೋರ್ಸ್ ಕ್ಲಬ್ಬಿಗೆ ಸೇರಿಕೊಂಡಿದ್ದಾನೆ. ಅವನ ಫುಟ್ಬಾಲ್ ಕೌಶಲ್ಯಕ್ಕಾಗಿ ತಂಡದ ಇತರ ಆಟಗಾರರು ಅವನನ್ನು ತಂಡದ ಪ್ರೇರಣೆಯಾಗಿ ಗೌರವದಿಂದ ಕಾಣುತ್ತಾರೆ. ಮೈದಾನದಲ್ಲಿ ತಂಡದ ಆಟಗಾರರಿಗೆ ಇಂತಹ ನಾಯಕನೆ ಬೇಕಾಗುತ್ತದೆ.



4. **ಅದುಲ್ ಸ್ಯಾಮ್ 14 ವರ್ಷ :** ಮ್ಯಾನ್ಮಾರ್‌ನ ಸ್ವಯಂ ಆಡಳಿತ ವಾ ರಾಜ್ಯದಲ್ಲಿ ಜನಿಸಿದವನು. ಅಲ್ಲಿ ಒಳ್ಳೆ ಶಿಕ್ಷಣ ಇಲ್ಲದ ಕಾರಣ ತನ್ನ ಕುಟುಂಬವನ್ನು ಬಿಟ್ಟು ಬಂದು ಥೈಲ್ಯಾಂಡ್ನಲ್ಲಿ ಶಿಕ್ಷಣ ಪಡೆಯುತ್ತಿದ್ದಾನೆ. ಮೈದಾನದಲ್ಲಿ ಎಡಗಡೆ ಡಿಫೆಂಡ್‌ರ್ ಆಗಿ ಆಡುವ ಈತ ಥಾಯ್, ಬರ್ಮಾ, ಚೀನಿ ಮತ್ತು ಇಂಗ್ಲಿಷ್ ಭಾಷೆಗಳನ್ನು ಮಾತನಾಡುತ್ತಾನೆ. ಈ ಕಾರಣದಿಂದ ಬ್ರಿಟಿಷ್ ಈಜುಗಾರರು ಫುಟ್ಬಾಲ್ ತಂಡವನ್ನು ಗುಹೆಯ ಒಳಗೆ ಮೊದಲಿಗೆ ಸಂದಿಸಿದಾಗ ಇವನೊಬ್ಬನೆ ಬ್ರಿಟಿಷ್ ಈಜುಗಾರರೊಂದಿಗೆ ಇಂಗ್ಲಿಷ್ ಭಾಷೆಯಲ್ಲಿ ಸಂವಹನ ನಡೆಸಿದವನು.




ಗುಹೆಯಲ್ಲಿ ಸಿಕ್ಕಿಕೊಂಡಿದ್ದ ಇತರ ತಂಡದ ಸದಸ್ಯರೆಲ್ಲ ತಮ್ಮ ಪೋಷಕರು ಮತ್ತು ಗೆಳೆಯರಿಂದ ಪತ್ರಗಳನ್ನು ಪಡೆಯುತ್ತಿದ್ದರು. ಆದರೆ ನಾನು

ಮಾತ್ರ ಯಾವ ಪತ್ರಗಳನ್ನು ನನ್ನ ಪೋಷಕರಿಂದ ಪಡೆಯಲಿಲ್ಲ ಎಂದು ಹೇಳಿಕೊಂಡಿದ್ದಾನೆ. ಅವನ ಪೋಷಕರು ಅನಂತರ ನಿನ್ನ ಮುಖವನ್ನು ನಾವು ನೋಡಬೇಕು ಎಂದು ಪತ್ರ ಬರೆದಿದ್ದರು. ನನ್ನ ತಂದೆತಾಯಿ, ನಾನು ಮತ್ತು ನನ್ನ ತಂಡದವರು ಚೆನ್ನಾಗಿರಲೆಂದು ಪ್ರಾರ್ಥನೆ ಮಾಡಿರುವುದಾಗಿ ಮತ್ತು ನಾವು ಬೇಗನೆ ಭೇಟಿಯಾಗೋಣ ಎಂದು ಬರೆದಿದ್ದರು. ಅದುಲ್ ಸ್ಯಾಮ್ ಒಳ್ಳೆ ವಾಲಿಬಾಲ್ ಆಟಗಾರನೂ ಕೂಡ.



5. **ಸೊಮಾಂಗ್ ಚೈವಾಂಗ್ (ಅಡ್ಡ ಹೆಸರು ಪಾಂಗ್) 13 ವರ್ಷ:** ಈತ ಹರ್ಷಚಿತ್ತದಿಂದ ಕೂಡಿದ ಹುಡುಗ. ಇವನು ಎಲ್ಲಾ ರೀತಿಯ ಆಟಗಳನ್ನೂ ಇಷ್ಟಪಡುತ್ತಾನೆ. ಇವನ ಕನಸು ಥೈಲ್ಯಾಂಡ್ ರಾಷ್ಟ್ರೀಯ ಫುಟ್ಬಾಲ್ ತಂಡದಲ್ಲಿ ಆಡುವುದು. ಮೈಧಾನದಲ್ಲಿ ಎಡಭಾಗದಲ್ಲಿ ಆಡುವ ಈತ ಗುಹೆಯ ಒಳಗಿನಿಂದ ಅವರ ಪೋಷಕರಿಗೆ ಹೀಗೆ ಪತ್ರ ಬರೆದಿದ್ದ. 'ಮಾಮ್ ಮತ್ತು ದ್ಯಾಡ್ ನಿಮ್ಮನ್ನ ಪ್ರೀತಿಸುತ್ತೇನೆ. ನಾನು ಗುಹೆಯಲ್ಲಿ ಸುರಕ್ಷಿತವಾಗಿದ್ದೇನೆ. ನನ್ನ ಬಗ್ಗೆ ಚಿಂತಿಸಬೇಡಿ'. ಅವರ ಪೋಷಕರು ಹೀಗೆ ಅವನಿಗೆ ಮರು ಉತ್ತರ ಬರೆದಿದ್ದರು. 'ನಿನ್ನ ಆರೈಕೆಯನ್ನು ಚೆನ್ನಾಗಿ ಮಾಡಿಕೊಳ್ಳುವುದು. ನಿನ್ನ ಬರವಿಗಾಗಿ ನಾವೆಲ್ಲರೂ ಕಾಯುತ್ತಿದ್ದೇವೆ'.

6. **ಮೊಂಗ್ಖನ್ ಬನ್ಪಿಯಮ್ (ಅಡ್ಡ ಹೆಸರು ಮಾರ್ಕ್) 12–13ರ ಮಧ್ಯದ ವಯಸ್ಸು:** ಅವನ ಶಿಕ್ಷಕರ ಪ್ರಕಾರ ಇವನು ತುಂಬಾ ಗೌರವಾನ್ವಿತ ಹುಡುಗ. ಇವನು ಯಾವಾಗಲೂ ಹರ್ಷಚಿತ್ತ ಮತ್ತು ಶಕ್ತಿಯುತ, ಅತ್ಯಂತ ಸ್ನೇಹಪರ. ಫುಟ್ಬಾಲ್ ಮತ್ತು ವಾಲಿಬಾಲ್ ಎರಡೂ ಕ್ರೀಡೆಗಳನ್ನು ಇಷ್ಟ ಪಡುತ್ತಾನೆ. ಇವನು ಮತ್ತು ಈತನ ತಾಯಿ ಇಬ್ಬರೂ ಮ್ಯಾನ್ಮಾರ್‌ನಿಂದ ಥೈಲ್ಯಾಂಡಿಗೆ ಬಂದು ನೆಲೆಸಿದ್ದಾರೆ. ಅದುಲ್ ಸ್ವಾಮ್ ಮತ್ತು ಇವನು ಒಂದೇ ವಾಲಿಬಾಲ್ ತಂಡದಲ್ಲಿ ಆಡುತ್ತಾರೆ.



7. **ನಟ್ಟಾವುತ್ ತಖಾಮ್ಸಾಂಗ್ (ಅಡ್ಡ ಹೆಸರು ಟರ್ನ್) 14 ವರ್ಷ:** ಇವನಿಗೆ ಫುಟ್ಬಾಲ್ ಎಂದರೆ ಪ್ರಾಣ. ಇವನು ತನ್ನ ಪೋಷಕರಿಗೆ, 'ನನ್ನ ಬಗ್ಗೆ ಏನೂ ಚಿಂತಿಸಬೇಡಿ, ನೀವು ಮತ್ತು ಅಜ್ಜಿಅಜ್ಜ ಇಲ್ಲಿ ಇಲ್ಲದಿದ್ದರೂ ನಾನು, ನನ್ನ ಆರೈಕೆಯನ್ನು ಮಾಡಿಕೊಳ್ಳುತ್ತೇನೆ' ಎಂದು ಬರೆದಿದ್ದ. ಅಪ್ಪ ಅಮ್ಮ, 'ನೀನು ಹೇಳದೆ ಗುಹೆಗೆ ಹೋಗಿದ್ದರ ಬಗ್ಗೆ ಕೋಪಿಸಿಕೊಳುವುದಿಲ್ಲ. ನಾವು ನಿನಗಾಗಿ ಗುಹೆ ಹತ್ತಿರವೇ ಕಾಯುತ್ತಿದ್ದೇವೆ' ಎಂದು ಬರೆದಿದ್ದರು.



8. **ಫಿರಾಫಾಟ್ ಸೊಂಫಯಾಂಗ್ಜೈ (ಅಡ್ಡ ಹೆಸರು ನೈಟ್) 17 ವರ್ಷ:** ಈತ ತಂಡದಲ್ಲಿ ಎಲ್ಲರಿಗಿಂತ ದೊಡ್ಡವನು. ಈತ ಮೈದಾನದಲ್ಲಿ ಬಲಭಾಗದಲ್ಲಿ ಆಡುತ್ತಾನೆ. ಈತ ತನ್ನ ಹುಟ್ಟುದಿನವೇ ಕಾಣೆಯಾಗಿ ಗುಹೆ ಸೇರಿಕೊಂಡಿದ್ದು ಅವನ ಪೋಷಕರು ಕೇಕ್ ಕತ್ತರಿಸದೆ ಹಾಗೇ ಕಾಯುತ್ತಿದ್ದರು. ಇವನ ಹುಟ್ಟು ಹಬ್ಬವನ್ನು ಗುಹೆಯ ಒಳಗೆ ಆಚರಣೆ ಮಾಡಲು ಅವನ ತಂಡದವರು ಕೆಲವು ತಿಂಡಿಗಳನ್ನು ಕಟ್ಟಿಕೊಂಡು ಬಂದಿದ್ದರು ಎನ್ನಲಾಗಿದೆ. ಈ ತಿಂಡಿಗಳಿಂದಲೇ ಅವರು ಅಷ್ಟು ದಿನ ಉಳಿದುಕೊಳ್ಳಲು ಸಾಧ್ಯವಾಯಿತು ಎನ್ನಲಾಗಿದೆ. ಆದರೆ ಅವರು ಯಾವ ತಿಂಡಿಗಳನ್ನು ತೆಗೆದುಕೊಂಡು ಹೋಗಿಲ್ಲ ಎಂಬ ಮಾತುಗಳು ಇವೆ. ಇವನು ಬಹಳ ಶಿಷ್ಟಾಚಾರದ ಹುಡುಗನಾಗಿದ್ದು ಹೆಚ್ಚ ಮಾತನಾಡುವುದಿಲ್ಲ.



9. **ಇಕರಾತ್ ವೊಂಗ್ಸುಚನ್ (ಅಡ್ಡ ಹೆಸರು ಬೆವ್) 14 ವರ್ಷ:** ಇವನು ತಂಡದ ಗೋಲ್ ಕೀಪರ್. ಈತ ನಾನು ಗುಹೆಯಿಂದ ಬಿಡುಗಡೆಯಾಗಿದ್ದೆ ತನ್ನ ಪೋಷಕರಿಗೆ ಅಂಗಡಿಯಲ್ಲಿ ವಸ್ತುಗಳನ್ನು ಮಾರಾಟ ಮಾಡಲು ಸಹಾಯ ಮಾಡುತ್ತೇನೆ ಎಂದು ಪತ್ರ ಬರೆದಿದ್ದ.



10. ಪ್ರಚಾಕ್ ಸುಥಮ್ (ಅಡ್ಡ ಹೆಸರು ನೋಟ್) 15 ವರ್ಷ: ಚಿಯಾಂಗ್ ರೈ ಯುನೈಟೆಡ್‌ಅನ್ನು ಬೆಂಬಲಿಸುವ ಇವನು ಸ್ಮಾರ್ಟ್ ಹುಡುಗ. ನೋಟ್ ಗುಹೆಯಲ್ಲಿ ಸಿಲುಕಿಕೊಂಡಿದ್ದಾನೆ ಎಂಬ ಸುದ್ದಿ ತಿಳಿದ ಅವನ ಕುಟುಂಬದವರು ತಲ್ಲಣಿಸಿಹೋಗಿದ್ದರು.



ನೋಟ್ ಮನೆಯವರಿಗೆ ಹೇಳದೆ ಗುಹೆಗೆ ಹೋಗಿರುವುದು ಅವರಿಗೆ ನಂಬಲಾರದ ವಿಷಯವಾಗಿತ್ತು. ನೋಟ್ ತನ್ನ ಚಿಕ್ಕ ತಮ್ಮ ಮತ್ತು ಪುಟ್ಟ ತಂಗಿಯ ಬಗ್ಗೆ ಕಾಳಜಿ ವಹಿಸುವುದರ ಜೊತೆಗೆ ಯಾವಾಗಲೂ ಅವರ ಜೊತೆಗೆ ಆಟ ಆಡಿಕೊಳ್ಳುತ್ತಿರುತ್ತಾನೆ. ಇವನ ತಂದೆ ಗ್ಯಾರೇಜ್‌ನಲ್ಲಿ ಕೆಲಸ ಮಾಡುತ್ತಿದ್ದು ಗ್ಯಾರೇಜ್‌ನಲ್ಲಿ ನೋಟ್ಗೆ ಯಾವುದೇ ಕೆಲಸವನ್ನು ಹೇಳಿಕೊಟ್ಟರೂ ಒಂದೇ ಸಲಕ್ಕೆ ಕಲಿತುಕೊಂಡುಬಿಡುತ್ತಿದ್ದನು.



11. ಪಟ್ ಘೋ (ಅಡ್ಡ ಹೆಸರು ನಿಕ್) 15 ವರ್ಷ: ಗುಹೆಯಿಂದ ಹೊರಕ್ಕೆ ಬಂದ ಮೇಲೆ ಥಾಯ್‌ನ ಮೂಕಾತ ಅಥವಾ ಥಾಯ್ ಬಾರ್ಬೆಕ್ಯುಗೆ ಹೋಗಬೇಕೆಂದು ಪತ್ರದಲ್ಲಿ ಪೋಷಕರಿಗೆ ತಿಳಿಸಿದ್ದ. ಅದೇ ಪತ್ರದಲ್ಲಿ ಪ್ರೀತಿಯ ಚಿಹ್ನೆಯಾದ ಹೃದಯವನ್ನು ಚಿತ್ರಿಸಿದ್ದನು.

12. ಹೆಸರು ಘೋಂಚೈ ಖಮ್ಲುವಾಂಗ್ (ಅಡ್ಡ ಹೆಸರು ಟೀ) 16 ವರ್ಷ. ಇವನ ಬಗ್ಗೆ ಸರಿಯಾದ ವಿವರಗಳು ದೊರಕಿಲ್ಲ.



ಚಂತವಾಂಗ್ ಏಕಾಫೋಲ್ 'ಅಕೆ'

ಚಂತವಾಂಗ್ ಏಕಾಫೋಲ್ 'ಅಕೆ' ಮ್ಯಾನ್ಮಾರ್‌ನಲ್ಲಿ ಹುಟ್ಟಿದ್ದು ಈತ ಚಿಕ್ಕವನಾಗಿದ್ದಾಗಲೇ ಅವನ ತಂದೆ ತಾಯಿ ಇಬ್ಬರೂ ತೀರಿಕೊಂಡಿದ್ದರು. ಫುಟ್ಬಾಲ್ ತರಬೇತುದಾರನಾಗುವುದಕ್ಕೆ ಮುಂಚೆ ಹಲವು ವರ್ಷಗಗಳ ಕಾಲ ಬೌದ್ಧ ಸನ್ಯಾಸಿಯಾಗಿ ತರಬೇತಿ ಪಡೆದಿದ್ದನು. ಚಲನೆಗಳು ಮತ್ತು ಧ್ಯಾನವನ್ನು ನಿರ್ಬಂಧಿಸುವುದರ ಮೂಲಕ ಶಕ್ತಿಯನ್ನು ಸಂರಕ್ಷಿವುದರ ಬಗ್ಗೆ ಕಲಿತುಕೊಂಡಿದ್ದನು. ಈತ ಗುಹೆಯಲ್ಲಿ ಸಿಕ್ಕಿಕೊಂಡಿದ್ದ ಹುಡುಗರಿಗೆ



ಚಂತವಾಂಗ್ ಏಕಾಫೋಲ್ 'ಅಕೆ' ತನ್ನ ಶಿಷ್ಯರ ಜೊತೆಗೆ.

ಧ್ಯಾನ ಕಲಿಸಿ ಅವರು ಸಾಧ್ಯವಾದಷ್ಟು ಲವಲವಿಕೆಯಾಗಿ ಇರುವಂತೆ ನೋಡಿಕೊಂಡಿದ್ದನು.

ಆಕೆ, ಗುಯೆಯಲ್ಲಿ ಸಿಕ್ಕಿಕೊಂಡಿದ್ದ ಮಕ್ಕಳ ಪೋಷಕರಿಗೆ ಪತ್ರ ಬರೆದು ಅವರನ್ನು ಗುಹೆ ಒಳಕ್ಕೆ ಕರೆದುಕೊಂಡು ಹೋಗಿದ್ದಕ್ಕೆ ಕ್ಷಮೆ ಕೋರಿದ್ದನು. ಆದರೆ ಎಲ್ಲಾ ಪೋಷಕರು 'ಅದು ನಿಮ್ಮ ತಪ್ಪಲ್ಲ ನಿಮ್ಮನ್ನ ನಾವು ದೂಷಿಸುವುದಿಲ್ಲ' ಎಂದು ಉತ್ತರ ಬರೆದಿದ್ದರು. ಚಂತವಾಂಗ್, ಎಲ್ಲಾ ಮಕ್ಕಳನ್ನು ನಾನು ಸಾಧ್ಯವಾದಷ್ಟು ಚೆನ್ನಾಗಿ ನೋಡಿಕೊಳ್ಳಲು ಪ್ರಯತ್ನಿಸುವುದಾಗಿ ಹೇಳಿಕೊಂಡಿದ್ದನು.

ಗುಹೆಯಲ್ಲಿ ಮೊದಲಿಗೆ ಬ್ರಿಟನ್ ಈಜುಗಾರರು ಫುಟ್ಬಾಲ್ ತಂಡವನ್ನು ಸಂಧಿಸಿದಾಗ ತರಬೇತುದಾರ ಅತ್ಯಂತ ದುರ್ಬಲವಾಗಿ ಕಾಣಿಸುತ್ತಿರುವುದಾಗಿ ಹೇಳಿದ್ದರು. ಜೊತೆಗಿದ್ದ ಅಲ್ಪಸ್ವಲ್ಪ ತಿಂಡಿಗಳನ್ನು ಈತ ತಾನು ತಿನ್ನದೇ ಎಲ್ಲವನ್ನು ಹುಡುಗರಿಗೆ ಕೊಟ್ಟು ತಾನು ಉಪವಾಸ ಇದ್ದುದಾಗಿ ಹೇಳಲಾಗುತ್ತದೆ. ಅಕೆ, ತನ್ನ ಅಜ್ಜಿ ಮತ್ತು ಅತ್ತೆಗೆ ಬರೆದ ಪತ್ರದಲ್ಲಿ 'ನಾನು ಆರಾಮಾಗಿಯೇ ಇದ್ದೇನೆ. ನೀವು ನನ್ನ ಬಗ್ಗೆ ಹೆಚ್ಚು ಯೋಚಿಸದೆ ಆರೋಗ್ಯವನ್ನು ನೋಡಿಕೊಳ್ಳಿ. ನಾನು ಹಿಂದಿರುಗಿದಾಗ ನನಗೆ ತರಕಾರಿ ಜ್ಯೂಸ್ ಮತ್ತು ಹಂದಿ ಮಾಂಸದ ಖಾದ್ಯವನ್ನು ತಯಾರುಮಾಡಿ ಬಡಿಸಿ. ನಾನು ಹೊರಗೆ ಬಂದಾಗ ಅದನ್ನ ಸೇವಿಸುತ್ತೇನೆ' ಎಂದು ಬರೆದಿದ್ದ.

ವೈಲ್ಡ್ ಬೋರ್ಸ್ ತಂಡದ ಮೂವರು ಹುಡುಗರು ಮತ್ತು ಸಹಾಯಕ ತರಬೇತುದಾರ ಥಾಯ್ ಪೌರತ್ವ ಇಲ್ಲದವರು. ಇವರು ಥೈಲ್ಯಾಂಡ್ ಗಡಿ ಹಂಚಿಕೊಂಡಿರುವ ಮ್ಯಾನ್ಮಾರ್, ಲಾವೋಸ್ ಮತ್ತು ಚೀನಾ ಗಡಿಗಳ ಬುಡಕಟ್ಟು ಜನಾಂಗಗಳಿಗೆ ಸೇರಿದವರಾಗಿದ್ದು ಚಿಯಾಂಗ್ ರೈನಲ್ಲಿ ವಿದ್ಯಾಭ್ಯಾಸ ನಡೆಸುತ್ತಿದ್ದರು. ಇದೇ ಕಾರಣಕ್ಕೆ ಇವರು ಚಿಯಾಂಗ್ ರೈ ಪ್ರಾಂತ್ಯವನ್ನು ಬಿಟ್ಟು ಬೇರೆ ಕಡೆಗೆ ಹೋಗುವಂತಿರಲಿಲ್ಲ.

ooo

ಥೈಲ್ಯಾಂಡ್ ಅಧಿಕಾರಿಗಳಿಗೆ ಭಾರತೀಯ ದೂತಾವಾಸವು ಶಿಫಾರಸು

ಮಾಡಿದ ಬಳಿಕ ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್ನ (ಕೆಬಿಎಲ್) ಪರಿಣತಿಯನ್ನು ಭಾರತದಿಂದ ಆಹ್ವಾನಿಸಿದರು. ಜುಲೈ 5ರಂದು ಗುಹೆಯ ಹತ್ತಿರಕ್ಕೆ ಬರಿ ಕೈಗಳಲ್ಲಿ ತಲುಪಿದ ಕಿರ್ಲೋಸ್ಕರ್ ಅಧಿಕಾರಿಗಳು ಎಲ್ಲಾ ರೀತಿಯ ತಮ್ಮ ತಿಳುವಳಿಕೆಗಳೊಂದಿಗೆ ಇತರ ದೇಶಗಳ ತಂತ್ರಜ್ಞರೊಂದಿಗೆ ಕೈಜೋಡಿಸಿದರು. ಆದರೆ ಕೆ.ಬಿ.ಎಲ್ ನಾಲ್ಕು ವಿಶೇಷ ಸಾಮರ್ಥ್ಯದ ಆಟೋಪ್ರೈಮ್ ಡಿವಾಟರಿಂಗ್ ಪಂಪ್ಗಳನ್ನು ಭಾರತದಿಂದ ಥೈಲ್ಯಾಂಡ್ಗೆ ರವಾನಿಸಲು ಕೇಳಿಕೊಂಡಿತು. ಆದರೆ ಅವು ಥೈಲ್ಯಾಂಡ್ ತಲುಪಲಿಲ್ಲ. ಥೈಲ್ಯಾಂಡ್ ಮತ್ತು ಇತರ ದೇಶಗಳ ಪಂಪ್ಗಳ ಮೂಲಕವೇ ಗುಹೆಯ ಒಳಗಿನ ಪ್ರವಾಹದ ನೀರನ್ನು ಹೊರಕ್ಕೆ ಹಾಕಲಾಯಿತು.

❑

ಒಂಬತ್ತು ದಿನಗಳ ಕಾಲ ಅನ್ನ ಆಹಾರವಿಲ್ಲದೆ ಉಳಿದುಕೊಂಡಿದ್ದು ಹೇಗೆ?

ಅಧ್ಯಾಯ-11

ಇಷ್ಟಕ್ಕೂ ಈ 11 ರಿಂದ 16 ವರ್ಷಗಳ ನಡುವಿನ 12 ಜನ ಸಣಕಲು ಹುಡುಗರು ಮತ್ತು 25 ವರ್ಷದ ಸಹಾಯಕ ತರಬೇತುದಾರ ಒಂಬತ್ತು ದಿನಗಳ ಕಾಲ ಅನ್ನ ಆಹಾರ, ನೀರಲ್ಲದೆ ಉಳಿದುಕೊಂಡಿದ್ದಾದರು ಹೇಗೆ? ಈ 12 ಜನ ಹುಡುಗರಲ್ಲಿ 16 ವರ್ಷಗಳ ಹುಡುಗನು ತನ್ನ ಹುಟ್ಟು ಹಬ್ಬವನ್ನು ಜೂನ್ 23ರಂದು ಗುಹೆ ಒಳಗೆ ಥ್ರಿಲ್ ಆಗಿ ಆಚರಣೆ ಮಾಡಿಕೊಳ್ಳಲು ತನ್ನ ಗೆಳೆಯರ ಜೊತೆಗೆ ಹೋದ ಎಂಬ ವದಂತಿಗಳು ಇದ್ದವು. ಗುಹೆಯಲ್ಲಿ ಅವನ ಜೊತೆಗಿದ್ದವರೆಲ್ಲ ಹೆಚ್ಚಾಗಿ 12 ರಿಂದ 14 ವರ್ಷಗಳ ಒಳಗಿನ ಹುಡುಗರು. ಗುಹೆಯ ಒಳಗೆ ಕೇವಲ ಒಂದು ಗಂಟೆ ಸಮಯ ಕಾಲ ಕಳೆದು ಹೊರಕ್ಕೆ ಬರುವುದು ಇವರ ಆಲೋಚನೆಯಾಗಿತ್ತು. ಅವರು ಧರಿಸಿರುವ ಬಟ್ಟೆಗಳನ್ನು ಬಿಟ್ಟರೆ ಉಳಿದ ಯಾವುದೇ ಬಟ್ಟೆಗಳು ವಸ್ತುಗಳು ಅವರ ಕೈಗಳಲ್ಲಿ

ಇರಲಿಲ್ಲ. ಇಷ್ಟಾದರೂ ಅವರು ಒಂಬತ್ತು ದಿನಗಳ ಕಾಲ ಗುಹೆಯ ಒಳಗೆ ಕತ್ತಲಲ್ಲಿ ಬದುಕಿ ಉಳಿದುಕೊಂಡಿದ್ದರು.

ಥೈಲಾಂಡಿನ ಆಗ್ನೇಯ ಪ್ರಾದೇಶಿಕ ಸಂಯೋಜಕರಾದ ಟಿಮ್ ವೈಟ್, ಗುಹೆಯ ತುಲನಾತ್ಮಕ ಬೆಚ್ಚಗಿನ ಉಷ್ಣತೆಯು ಬಹುಶಃ ಹುಡುಗರ ಪ್ರಾಣವನ್ನು ಉಳಿಸುವಲ್ಲಿ ವರದಾನವಾಗಿದೆ ಎಂದು ಹೇಳಿದರು. ಈ ಹುಡುಗರ ತಂಡ ಒಂದು ವೇಳೆ ಅಮೇರಿಕ ಗುಹೆಗಳಲ್ಲಿ ಸಿಕ್ಕಿಕೊಂಡಿದ್ದರೆ ಅಲ್ಲಿನ ಉಷ್ಣತೆ ಕೆಲವೊಮ್ಮೆ – 60 ಡಿಗ್ರಿ ಸೆಲ್ಸಿಯಸ್‌ವರೆಗೂ ಇಳಿದುಬಿಡುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಹೈಪೋಥರ್ಮಿಯಾದ ಮಾರಕ ಕಾಯಿಲೆಗೆ ಸಿಲುಕಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಆಯಾ ಪ್ರದೇಶಕ್ಕೆ ತಕ್ಕ ಹಾಗೆ ಅಲ್ಲಿನ ಸಾಮಾನ್ಯ ಉಷ್ಣತೆಯನ್ನು ಗುಹೆಗಳು ಹೊಂದಿರುತ್ತವೆ.

ಉಷ್ಣತೆ – 60 ಡಿಗ್ರಿ ಸೆಲ್ಸಿಯಸ್ ಕೆಳಕ್ಕೆ ಬಿದ್ದರೆ ಹೈಪೋಥರ್ಮಿಯಾ ಮಾರಕವಾಗುತ್ತದೆ. ಅದೃಷ್ಟವಶಾತ್ ಥೈಲ್ಯಾಂಡಿನ ಗುಹೆಗಳ ಸಾಧಾರಣ ಉಷ್ಣತೆ ಎಂತಹ ಕಾಲದಲ್ಲೂ ಹೆಚ್ಚಾಗಿಯೇ ಇರುತ್ತದೆ. ಇದು ಈ ಗುಹೆಗಳ ಒಳಗೆ ಸಿಕ್ಕಿಕೊಂಡಿದ್ದವರ ಅದೃಷ್ಟವಾಗಿತ್ತು. ಇದರ ಜೊತೆಗೆ ಅವರ ಸುತ್ತಲೂ ಪ್ರವಾಹದ ನೀರು ತುಂಬಿಕೊಂಡಿತ್ತು. ಇದರಿಂದ ಅವರ ದೇಹಗಳು ಬೆವರಿನಿಂದ ಅಥವಾ ಹೆಚ್ಚು ಉಷ್ಣಾಂಶದಿಂದ ಕೂಡಿಲ್ಲದ ಕಾರಣ ಅವರು ನಿರ್ಜಲೀಕರಣಕ್ಕೆ ಒಳಗಾಗಲಿಲ್ಲ ಎಂಬುದಾಗಿ ವೈಟ್ ಹೇಳಿದರು.

ನ್ಯೂಸ್ ಡಾಟ್.ಕಾಮ್.ಎಯು ಪ್ರಕಾರ ಹುಡುಗರ ತಂಡಕ್ಕೆ ಸಿಹಿ ಅಥವಾ ಕುಡಿಯುವ ನೀರಿನ ಅವಕಾಶ ಗುಹೆಯ ಒಳಗೆ ದೊರಕಿತ್ತು. ಅದು ಗುಹೆಗಳ ಗೋಡೆಗಳ ಸಣ್ಣಸಣ್ಣ ಬಿರುಕುಗಳಿಂದ ಹೊಸರುತ್ತಿದ್ದ ಅಥವಾ ಪ್ರವಾಹದ ನೀರನ್ನು ಉಪಯೋಗಿಸಿರಬೇಕು. ಆದರೆ ತಜ್ಞರು ಪ್ರವಾಹದ ನೀರಿನಲ್ಲಿ ಸುತ್ತಲಿನ ಅಪಾಯಕಾರಿ ರಾಸಾಯನಿಕ ಕಲ್ಮಷ ಮತ್ತು ಬ್ಯಾಕ್ಟೀರಿಯಾಗಳು ಇರುವ ಸಾಧ್ಯತೆಗಳು ಇರುವುದರಿಂದ ಪ್ರವಾಹದ ನೀರು ಅಪಾಯ ಎಂದು ಎಚ್ಚರಿಸಿದರು. ಆದರೆ ಗುಹೆಯ ಒಳಗೆ ದೊರಕುವ ಯಾವುದಾದರೂ ನೀರನ್ನು ಹುಡುಗರು ಕುಡಿಯಲೇ ಬೇಕಿತ್ತು. ಕುಡಿದರೂ ಕಷ್ಟ, ಕುಡಿಯದಿದ್ದರೂ ಕಷ್ಟದ ಪರಿಸ್ಥಿತಿಯಲ್ಲಿ ಅವರು ಸಿಕ್ಕಿಕೊಂಡಿದ್ದರು.

ಒಂಬತ್ತು ದಿನಗಳ ಕಾಲ ಹುಡುಗರು ಏನು ತಿಂದರು ಯಾವ ನೀರು ಕುಡಿದರು ಎಂಬುದು ಯಾರಿಗೂ ತಿಳಿದಿರಲಿಲ್ಲ. ಅವರ ಜೊತೆಗೆ ಯಾವ

ಯಾವ ರೀತಿಯ ತಿಂಡಿಗಳನ್ನು ತೆಗೆದುಕೊಂಡು ಹೋಗಿದ್ದರು ಎನ್ನುವುದು ಗೊತ್ತಾಗಲಿಲ್ಲ. ಅವರು ಫುಟ್ಬಾಲ್ ಆಡುವ ಹುಡುಗರಾಗಿದ್ದು ಸಾಕಷ್ಟು ಶಕ್ತಿ ತುಂಬಿಕೊಂಡಿದ್ದ ಹುಡುಗರಾಗಿದ್ದರು. ಜೊತೆಗೆ ಆರೋಗ್ಯ ಪೂರ್ಣವಾಗಿದ್ದರೆ, ಒಂದೆರಡು ದಿನಗಳು ಏನೂ ತಿನ್ನದೆ ಉಳಿದುಕೊಳ್ಳಬಹುದು. ಗುಹೆಯಲ್ಲಿ ತಿನ್ನಬಹುದಾದ ಯಾವುದಾದರು ಪ್ರಾಣಿಗಳು ದೊರಕುತ್ತಿದ್ದವೊ ಏನೊ ತಿಳಿದಿಲ್ಲ. ಉದಾಹರಣೆಗೆ ಮೀನು ಮತ್ತು ಕಪ್ಪೆಗಳು. ಹಾಗೇನಾದರು ಯಾವುದೇ ಆಹಾರ ಮತ್ತು ನೀರು ಇಲ್ಲದಿದ್ದರೆ ಬರೀ ಕಲ್ಲುಗಳು, ಮಣ್ಣು ಮತ್ತು ಪ್ರವಾಹದ ನೀರೆ ಅವರಿಗೆ ಗತಿಯಾಗುತ್ತಿತ್ತು.

ಗುಹೆಗಳ ಒಳಗೆ ಹೋಗುವವರು ಅಗತ್ಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು. ಗುಹೆಗಳ ಅನ್ವೇಷಣೆ ತರಬೇತಿಗಳಲ್ಲಿ ಭಾಗವಹಿಸುವಾಗ ಸರಿಯಾದ ಬಟ್ಟೆಗಳನ್ನು ಮತ್ತು ಸಲಕರಣೆಗಳನ್ನು ತಗೆದುಕೊಂಡು ಗುಹೆಯ ಹವಾಮಾನ ಮತ್ತು ಪರಿಸರದ ಬಗ್ಗೆ ತಿಳಿದುಕೊಂಡು ಹೋಗುವುದು ಒಳ್ಳೆಯದು. ಮಳೆಕಾಲದಲ್ಲಿ ಗುಹೆಗಳ ಒಳಗೆ ಹೋಗುವುದು ಎಂತಹ ಪ್ರಮಾದ ಎನ್ನುವುದು ಈ ಘಟನೆಯಿಂದ ತಿಳಿದಂತಾಗಿದೆ. ಈ ಫುಟ್ಬಾಲ್ ತಂಡ ಗುಹೆಯ ಒಳಗಿರುವ ಸ್ಥಳವನ್ನು ತಜ್ಞ ಈಜುಗಾರರು ಗುರುತಿಸಿದ ಮೇಲೂ ಅನೇಕ ರೀತಿಯ ಸವಾಲುಗಳನ್ನು ಎದುರಿಸಬೇಕಾಯಿತು. ಅವರಿರುವ ಸ್ಥಳಕ್ಕೆ ಬೇಕಾದ ವಸ್ತುಗಳನ್ನು ಸರಬರಾಜು ಮಾಡುವುದೇ ತೊಂದರೆ-ಯ ಕೆಲಸವಾಗಿತ್ತು. ಈಜು ಬರದವರನ್ನು ನೀರಿನ ಪ್ರವಾಹದಲ್ಲಿ ಪಾರು ಮಾಡುವುದು ಇನ್ನೂ ಅಪಾಯದ ಕೆಲಸವಾಗಿತ್ತು. ಕಿರಿದಾದ ದಾರಿಗಳು, ನೀರಿನ ಪ್ರವಾಹ, ಆಮ್ಲಜನಕದ ಕೊರತೆ, ಉಸಿರಾಟದ ತೊಂದರೆಗಳು ಹೀಗೆ ಹಲವಾರು ತೊಂದರೆಗಳನ್ನು ಅವರು ಎದುರಿಸಬೇಕಾಯಿತು.

ಜುಲೈ 7ರಂದು ಗುಹೆಯ ಬಾಗಿಲಲ್ಲಿದ್ದ ಲಾಜಿಸ್ಟಿಕ್ ಕ್ಯಾಂಪ್‌ನ್ನು ಖಾಲಿ ಮಾಡಿಸಿ ಎಲ್ಲರನ್ನೂ ದೂರ ಕಳುಹಿಸಲಾಯಿತು. ಮೊದಲಿಗೆ 5 ವಿದೇಶಿ ತಜ್ಞ ಡೈವರ್‌ಗಳು ಮತ್ತು ಥೈಲ್ಯಾಂಡಿನ ನೌಕಾದಳದ 13 ಡೈವರ್‌ಗಳು ಗುಹೆಯ ಒಳಕ್ಕೆ ಹೊರಟರು. ಮೊದಲಿಗೆ 12 ಹುಡುಗರಲ್ಲಿ ಯಾರನ್ನ ಹೊರಗೆ ಸಾಗಿಸಬೇಕು ಎಂಬ ಪ್ರಶ್ನೆ ಎದ್ದಿತು. ಮೊದಲಿಗೆ ದುರ್ಬಲವಾಗಿರುವ ಹುಡುಗರನ್ನೇ ಅಥವಾ ಗಟ್ಟಿಯಾಗಿರುವ ಹುಡುಗರನ್ನೆ? ಕೊನೆಗೆ ಹುಡುಗರಲ್ಲಿ ಯಾರು ಸ್ವತಃ ಮೊದಲಿಗೆ ಬರುತ್ತಾರೊ ಆ ಹುಡುಗರನ್ನು ಹೊರಕ್ಕೆ ತರಲು ತೀರ್ಮಾನಿಸಲಾಯಿತು. ಕಷ್ಟದ

ಕೆಲಸವೆಂದರೆ ಒಂದು ಕಡೆ ಒಂದೇ ಸ್ಟ್ರೆಚರ್‌ನಲ್ಲಿ ಒಂದು ಕಿಲೋಮೀಟರು ದೂರ ನೀರಿನಲ್ಲಿ ಮುಳುಗಿ ಈಜುಕೊಂಡು ಬರಬೇಕಾಗಿತ್ತು.

ಆಗ ಒಬ್ಬ ಡೈವರ್, ಹುಡುಗನಿಗೆ ಹಾಕಿದ ಆಮ್ಲಜನಕದ ಸಿಲಿಂಡರನ್ನು ಮುಂದೆ ಹಿಡಿದುಕೊಂಡು ಸಾಗಿದರೆ, ಹಿಂದೆ ಒಬ್ಬ ಡೈವರ್ ಅನುಸರಿಸುತ್ತಿದ್ದರು. ಜೊತೆಗೆ ತಪಾಷಣೆ ಮಾಡಲು ವೈದ್ಯರು ಬರಬೇಕಾಗಿತ್ತು. ಹುಡುಗರು ಹೆದರದಂತೆ alprazolan and ketamine ಅರವಳಿಕೆ ಔಷದಿಯನ್ನು ಕೊಟ್ಟು ಡೈವ್ ಮಾಡಿಸಿಕೊಂಡು ಬರಲಾಯಿತು. ನೀರು ತುಂಬಾ ಶೀತಲವಾಗಿದ್ದ ಕಾರಣ ಹುಡುಗರ ದೇಹಗಳನ್ನು ವಿಶೇಷ ಪೇಪರ್‌ಗಳಲ್ಲಿ (Wrapped in specialized flexible) ಸಂಪೂರ್ಣವಾಗಿ ಸುತ್ತಲಾಗಿತ್ತು. ಕೆಲವು ಕಡೆ ಸ್ಟ್ರೆಚರ್‌ಗಳಲ್ಲಿ ಸಾಗಿಸಲಾಯಿತು.

ಜುಲೈ 10 ಎಲ್ಲರನ್ನೂ ಹೊರಕ್ಕೆ ತಂದ ಮೇಲೆ 4 ಜನ ಡೈವರ್‌ಗಳು ಮತ್ತು ಕೆಲವು ಸ್ವಯಂಸೇವಕರು ಇನ್ನೂ ಗುಹೆಯ ಒಳಗಡೆಯೇ ಉಳಿದುಕೊಂಡಿದ್ದರು. ದಿಢೀರನೆ ಮುಖ್ಯ ಪಂಪ್ ಕೆಲಸ ಮಾಡುವುದನ್ನು ನಿಲ್ಲಿಸಿಬಿಟ್ಟಿತು. ನಿರಂತರವಾಗಿ ಹಗಲು ರಾತ್ರಿ ಕೆಲಸ ಮಾಡಿದ ಕೈಗಾರಿಕಾ ಪಂಪ್‌ಗಳ ಹೋಸ್ ಪೈಪ್‌ಗಳು ಸ್ಫೋಟಗೊಂಡಿದ್ದವು. ಈಗ ಎಲ್ಲರೂ ಮೂರನೇ ಚೇಂಬರ್‌ನಿಂದ ಶೀಘ್ರವೇ ಗುಹೆಯಿಂದ ಹೊರಕ್ಕೆ ಓಡಬೇಕಾಗಿದೆ ಎಂದು ಕೂಗಿಕೊಳ್ಳಲಾಯಿತು. ಈ ಸಮಯದಲ್ಲಿ 10 ನಿಮಿಷಗಳಿಗೆ 50 ಸೆಂಟಿಮೀಟರಿನಷ್ಟು ನೀರಿನ ಮಟ್ಟ ಏರುತ್ತಿತ್ತು. ಈ ಸಮಯದಲ್ಲಿ 100 ಜನರ ರಕ್ಷಣಾ ತಂಡ ಮೂರನೇ ಚೇಂಬರ್‌ನಲ್ಲಿ ನೆರೆದಿದ್ದು ಅದು ಗುಹೆಯ ಬಾಗಿಲಿನಿಂದ 1.50 ಕಿಲೋಮೀಟರುಗಳ ದೂರದಲ್ಲಿತ್ತು. ಎಲ್ಲರೂ ಒಂದು ಗಂಟೆ ಸಮಯದಲ್ಲಿ ಗುಹೆ ಬಾಗಿಲಿಗೆ ಬಂದು ಪ್ರಾಣ ಉಳಿಸಿಕೊಂಡಿದ್ದರು.

ಇಷ್ಟೊಂದು ಅಗಾಧ ನೀರು ಗುಹೆಯ ಒಳಗೆ ಸಂಗ್ರಹವಾಗುವುದಕ್ಕೆ ಕಾರಣ 10 ಕಿಲೋಮೀಟರುಗಳ ವ್ಯಾಪ್ತಿಯ ವಿಶಾಲ ಬೆಟ್ಟಗಳ ಮೇಲಿಂದ ಮಳೆ ನೀರು ಗುಹೆಗಳ ಒಳಕ್ಕೆ ಇಂಗುತ್ತಿದ್ದಿದ್ದು, ಆ ಪರ್ವತಗಳ ಶಿಲೆಗಳು ಮಳೆ ನೀರನ್ನ ಸ್ಪಾಂಜ್‌ನಂತೆ ಹೀರಿಕೊಳ್ಳುತ್ತಿತ್ತು. ಗುಹೆಯಿಂದ ಎಲ್ಲರೂ ಹೊರಕ್ಕೆ ಬಂದ ಮೇಲೆ, ಗುಹೆ ದೇವತೆ ಎಲ್ಲರನ್ನು ರಕ್ಷಿಸಿದ್ದಕ್ಕೆ ವಂದನೆಗಳನ್ನು ಸಲ್ಲಿಸಿದರು. ಜೊತೆಗೆ ಹಲವು ಪ್ರಕಾರಗಳ ಸಲಕರಣೆಗಳನ್ನು ಗುಹೆಯ ಒಳಕ್ಕೆ ತೆಗೆದು-ಕೊಂಡು ಹೋಗಿದ್ದಕ್ಕೆ ದೇವತೆಯ ಮುಂದೆ ಕ್ಷಮೆಯನ್ನು ಯಾಚಿಸಿದರು.

ಕತ್ತಲಲ್ಲಿ ಸಿಕ್ಕಿಕೊಂಡೆವು ತರಬೇತುದಾರ ಏಕಾಫೋಲ್ 'ಅಕೆ'

ಹೊರಕ್ಕೆ ಬಂದ ಮೇಲೆ ಏಕಾಫೋಲ್ 'ಅಕೆ' ಪತ್ರಿಕಾಗೋಷ್ಠಿಯಲ್ಲಿ, 'ನಾವು ಒಳಗೆ ಹೋದಾಗ ನಮ್ಮ ಹತ್ತಿರ ಯಾವ ರೀತಿಯ ಆಹಾರವು ಇರಲಿಲ್ಲ' ವಿಶ್ವವಿಖ್ಯಾತ ಫುಟ್ಬಾಲ್ ತಂಡಗಳು ನಮ್ಮ ತೊಂದರೆಗಳ ಬಗ್ಗೆ ಮಾತನಾಡುತ್ತ ನಾವು ಪಾರಾಗಿಯಾಗಿರುವುದೊಂದು ಪವಾಡ ಎಂದು ಹೇಳಿದ್ದಾರೆ. ಫುಟ್ಬಾಲ್ ತಂಡದ ಹುಡುಗನೊಬ್ಬನಿಗೆ ಆ ಸಾಯಂಕಾಲ ಟ್ಯೂಷನ್ ಇದ್ದು ಬೇಗನೆ ಬಂದುಬಿಡೋಣವೆಂದು ಗುಹೆ ನೋಡಲು ಹೋದೆವು. ತಂಡದ ಹುಡುಗರು ಆಗಾಗ ಗುಹೆಸಮೂಹದ ಒಳಕ್ಕೆ ಹೋಗಿ ಬಂದಿರುವುದನ್ನು ಕೇಳಿದ ನಾನು, ಒಂದು ಸಲ ನೋಡೋಣ ಎಂದು ಆ ದಿನ ಹುಡುಗರ ಜೊತೆಗೆ ಹೋಗಿದ್ದೆ. ಹುಡುಗರಿಗೆ ಆ ಗುಹೆಸಮೂಹದ ಎಲ್ಲಾ ದಾರಿಗಳು ತಿಳಿದಿರಬೇಕು ಎಂದು-ಕೊಂಡಿದ್ದೆ. ಮುಂಗಾರು ಮಳೆಯ ಕಾಲವಾಗಿದ್ದು ಆಗಲೇ ಗುಹೆಯ ಬಾಗಿಲಲ್ಲಿ ಸಾಕಷ್ಟು ನೀರು ತುಂಬಿಕೊಂಡಿತ್ತು. ಗುಹೆಯ ಬಾಗಿಲಲ್ಲೇ ನಮಗೆ ಎಚ್ಚರಿಕೆಯ ಚಿಹ್ನೆಗಳು ಕಾಣಿಸಿಕೊಂಡರೂ ಹುಡುಗರು ಉತ್ಸುಕರಾಗಿದ್ದು ಸಾಹಸದಿಂದ ಒಳಕ್ಕೆ ನಡೆದರು. ನಾವು ಗುಹೆಯನ್ನು ಅನ್ವೇಷಿಸುವುದಾದರೆ ನೀರಿನಲ್ಲಿ ಈಜುವುದು ಹೇಗೆ ಎಂದು ಮಾತನಾಡಿಕೊಂಡೆವು. ಹುಡುಗರಿಗೆ ನಾನು, ಗುಹೆಯ ಒಳಗೆ ಹೋದಂತೆ ಒದ್ದೆಯಾಗಿರಬಹುದು, ತಣ್ಣಗೆ ಇರಬಹುದು ಎಂದು ಹೇಳಿದೆ. ಎಲ್ಲರೂ ಹೌದು! ಹೌದು! ಎಂದರು', ಎನ್ನುವ ಮಾತಗಳನ್ನು ಕೋಚ್ 'ಅಕೆ' ಜ್ಞಾಪಿಸಿಕೊಂಡರು.

ಮುಂದುವರಿಯುತ್ತ ಗುಹೆಯ ಸ್ವರ್ಗದ ಬಾಗಿಲು ಪ್ರವಾಹದಿಂದ ಮುಚ್ಚದಿದ್ದರೆ ಸಾಯಂಕಾಲದ ಒಳಗೆ ನಾವೆಲ್ಲರೂ ಅವರವರ ಮನೆಗಳಲ್ಲಿ ಇರುತ್ತಿದ್ದೆವು. ಬದಲಿಗೆ ಹಠಾತ್ ಪ್ರವಾಹವು ಗುಹೆಯೊಳಗೆ ನುಗ್ಗಿ ಆಳವಾದ ಒತ್ತಡವನ್ನು ಉಂಟುಮಾಡಿತು. ಪ್ರವಾಹದ ನೀರು ಪ್ರವೇಶದ್ವಾರದಲ್ಲಿ ತುಂಬಿಕೊಂಡು ಗೋಡೆಗಳ ಮೇಲೆ ಏರಿ ಬರುತ್ತಿತ್ತು. ನಿಸರ್ಗದ ದುರಾದೃಷ್ಟವಾದ ಈ ತೀರ್ಮಾನವು ಇತಿಹಾಸದಲ್ಲಿ ಅತ್ಯಂತ ಗಮನಾರ್ಹವಾದ ಘಟನೆಯಾಗಿ ನಮ್ಮನ್ನು ಒಳಕ್ಕೆ ತಳ್ಳಿಕೊಂಡು ಹೋಗಿ ಕತ್ತಲ ಕೂಪದಲ್ಲಿ ಬಂದಿ ಮಾಡಿಬಿಟ್ಟಿತು. ಆದರೆ ಹೊರಗಿದ್ದ ಆಧುನಿಕ ತಂತ್ರಜ್ಞಾನದ ಹೀರೋಗಳು ನಮ್ಮನ್ನ ಸಾವಿನ ದವಡೆಯಿಂದ ಪಾರು ಮಾಡಿ ಇತಿಹಾಸ ಸೃಷ್ಟಿಸಿಬಿಟ್ಟರು.

ಗುಹೆಯ ಕತ್ತಲಲ್ಲಿ ಪ್ರವಾಹದ ಮಧ್ಯೆ ಸಿಕ್ಕಿಕೊಂಡ ಹುಡುಗರಿಗೆ ಯಾರಾದರು

ಬಂದು ನಮ್ಮನ್ನ ಕಾಪಾಡುವರೆಂಬ ಊಹೆಯೇ ಇರಲಿಲ್ಲ. ಹದಿಮೂರು ವರ್ಷದ ಮೊಂಗ್ಕೊಲ್ ಬೂನ್ಪಮ್ ನಾನು ಎಂದಿಗೂ ಮನೆಗೆ ಹಿಂದಿರುಗುವುದಿಲ್ಲ ಎಂಬ ಭಯ ನನ್ನನ್ನ ತುಂಬಿಕೊಂಡಿತ್ತು ಎಂದು ಹೇಳಿಕೊಂಡ. ಅದೃಷ್ಟವಶಾತ್ ಹುಡುಗರು ಮಳೆ ಬೀಳುತ್ತಿದ್ದರಿಂದ ಗುಹೆಯ ಗೋಡೆಗಳ ಮೇಲೆ ಹೊಸರುವ ತಾಜಾ ನೀರಿನ ಪೂರೈಕೆ ಹೊಂದಿದ್ದರು. 'ಗೋಡೆಗಳಲ್ಲಿನ ಶಿಲೆಗಳ ಸಣ್ಣಸಣ್ಣ ರಂದ್ರಗಳಿಂದ ಹೊಸರುತ್ತಿದ್ದ ಮಳೆ ನೀರನ್ನ ನಾವು ಕಡಿಯುತ್ತಿದ್ದೆವು. ಆ ನೀರು ಶುದ್ಧ ಮತ್ತು ಯಾವುದೇ ಕುಡಿಯುವ ನೀರಿಗಿಂತ ರುಚಿಯಾಗಿ-ತ್ತು, ಎಂಬುದಾಗಿ 16 ವರ್ಷದ ಪೋರ್ಚೈ ಖಮ್ಲುವಾಂಗ್ ವರದಿಗಾರರಿಗೆ ತಿಳಿಸಿದ.

ಗುಹೆಯಲ್ಲಿ ಸಮಯ ಕಳೆಯುತ್ತಿದ್ದಂತೆ ಹುಡುಗರು ತಮ್ಮ ಆತ್ಮವಿಶ್ವಾಸವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಅನಂತರ ಕೋಚ್ ತಾನು ಹಿಂದೆ ಬೌದ್ಧ ಸನ್ಯಾಸಿಯಾಗಿ ಕಲಿತುಕೊಂಡಿದ್ದ ತಂತ್ರಗಳನ್ನು ಅಂದರೆ ಶಾಂತವಾಗಿರಲು, ಧ್ಯಾನ ಮಾಡಲು ಮತ್ತು ಗಾಳಿಯನ್ನು ದೇಹದಲ್ಲಿ ಹೇಗೆ ಸಂರಕ್ಷಿಸಿಕೊಳ್ಳಬೇಕೆಂದು ಹೇಳಿ ಕೊಡುತ್ತಿದ್ದರು. ಹುಡುಗರಿಗೆ ಸಮಯದ ಪರಿಕಲ್ಪನೆ ಸ್ವಲ್ಪ ಮಟ್ಟಗೆ ಇದ್ದು ಅವರು ಮೊದಲಿಗೆ ಧ್ಯಾನ ಮಾಡುತ್ತ ಮಾಡುತ್ತ ಆಗಾಗ ನಿದ್ದೆಗೆ ಜಾರಿಕೊಳ್ಳುತ್ತಿದ್ದರು ಎಂಬುದಾಗಿ ಕೋಚ್ ಹೇಳಿದರು. ಅವರಲ್ಲಿ ಶಾಂತತೆಯನ್ನು ಕಂಡರೂ ಮಧ್ಯೆಮಧ್ಯೆ ಭಯಂಕರ ಭೀತಿಯ ಕ್ಷಣಗಳೂ ಕಾಣಿಸಿಕೊಳ್ಳುತ್ತಿದ್ದವು.

ಪ್ರವಾಹ ಹೆಚ್ಚಾಗುತ್ತಿದ್ದ ಕಾರಣ ನಾವು ಗುಹೆಯ ಒಳಕ್ಕೆ ಹೋಗುತ್ತಲೇ ಇದ್ದೆವು. ಒಂದು ಹಂತದಲ್ಲಿ ಹುಡುಗರು ಹೊರಕ್ಕೆ ಹೋಗಲು ಗೋಡೆಯಲ್ಲಿ ತೂತು ಮಾಡಲು ಪ್ರಾರಂಭಿಸಿಬಿಟ್ಟರು. ಅವರ ಹತಾಶೆ ಗುಹೆ ಸಮೂಹದಲ್ಲಿ ನೂರಾರು ಮೀಟರುಗಳ ಆಳದ ಸುಣ್ಣದ ಶಿಲೆಗಳ ಗುಹೆಯಲ್ಲಿ ಸಮಾಧಿಯಾಗಿಬಿಟ್ಟತ್ತು. ಹದಿಮೂರು ವರ್ಷದ ಫಾನಾಮಾಸ್ ಸಾಂಗ್ದಿ 'ನಾವು ಗುಹೆ ಒಳಗಿದ್ದ ಕಲ್ಲುಗಳನ್ನು ತೆಗೆದುಕೊಂಡು ಮೂರರಿಂದ ನಾಲ್ಕು ಮೀಟರ್ ದೂರದ ಸುರಂಗವನ್ನು ಮಾಡಿದೆವು. ಕೊನೆಗೆ ಅದ್ಯಾವುದೂ ಫಲಿತಾಂಶ ನೀಡದೆ ನಾವೆಲ್ಲರೂ ಸಣ್ಣ ಮಣ್ಣುಗುಡ್ಡೆಯ ಮೇಲೆ ಕುಳಿತುಕೊಂಡು ಯಾರಾದರು ನಮ್ಮನ್ನ ಕಾಪಾಡಲು ಬರುತ್ತಾರೆಂದು ಕಾಯತೊಡಗಿದೆವು' ಎಂಬುದಾಗಿ ಹೇಳಿದ.

ಮೊದಲಿಗೆ ಕೋಚ್ ಏಕಾಫೋಲ್ 'ಅಕೆ', ಯಾವುದೋ ದುರುದ್ವೇಷದಿಂದ

12 ಜನ ಹುಡುಗರನ್ನ ಥಮ್ ಲುವಾಂಗ್ ಗುಹೆ ಒಳಕ್ಕೆ ಕರೆದುಕೊಂಡು ಹೋದನೆಂಬ ಊಹಾಊಹೆಗಳು ಹುಟ್ಟಿಕೊಂಡಿದ್ದವು. ಆದರೆ ಸ್ಥಳೀಯ ಅಧಿಕಾರಿಗಳು ಅದು ತಪ್ಪು ಎಂದು ದೃಢಪಡಿಸಿದರು. ಹುಡುಗರ ಪೋಷಕರು ಕೋಚ್ ಪರವಾಗಿ ಪತ್ರಗಳನ್ನು ಬರೆದುದಾಗಿ ತಿಳಿಯಿತು. ಅದುಲ್ ಸ್ಯಾಮ್ ಪೋಷಕರು ಏಕಾಪೋಲ್‌ಗೆ ಬರೆದ ಪತ್ರದಲ್ಲಿ ಹುಡುಗರನ್ನು ಕತ್ತಲ ಗುಹೆಯಲ್ಲಿ ಸುರಕ್ಷಿತವಾಗಿ ಇಟ್ಟುಕೊಂಡಿರುವುದಕ್ಕೆ ಧನ್ಯವಾದಗಳನ್ನು ಹೇಳಿದರು. ಜನಾಂಗೀಯ ಶಾನ್ ಅಲ್ಪಸಂಖ್ಯಾತನಾದ ಏಕಾಪೋಲ್ ಮಕ್ಕಳನ್ನು ನೋಡಿಕೊಳ್ಳುವ ದೀರ್ಘಕಾಲದ ಅನುಭವವನ್ನು ಹೊಂದಿದ್ದನು. 'ಅಕೆ' ಹುಡುಗನಾಗಿದ್ದಾಲೇ ಆತನ ಪೋಷಕರು ಮ್ಯಾನ್ಮಾರ್‌ನಲ್ಲಿ ಸಾವನ್ನಪ್ಪಿದ್ದರು. ಆಗ ಏಳು ವರ್ಷದವನಾಗಿದ್ದ 'ಅಕೆ' ಥೈಲ್ಯಾಂಡಿನ ಬೌದ್ಧ ಧರ್ಮದ ವ್ಯಾಪ್ತಿಗೆ ಒಳಪಟ್ಟನು. ಅನಾಥರು ಹಣಕಾಸು ಸಹಾಯ ದೊರಕುವ ಕಡೆ ಸೇರಿಕೊಳ್ಳುವುದು ಸಾಮಾನ್ಯ.

ಚಂತವಾನ್ 'ಅಕೆ'ಯ ಮೊದಲ ಕೆಲಸವೆಂದರೆ ಕಿರಿಯ ಶಿಷ್ಯರನ್ನು ನೋಡಿಕೊಳ್ಳುವುದು ಎಂಬುದಾಗಿ ಫ್ರಾಥಾಟ್ ಡೋಯಿ ವಾವೊ ದೇವಾಲಯದ ಸನ್ಯಾಸಿಯಾದ ಅಬ್ಬಾತ್ ಪ್ರಾಯುತ್ ಜೆಡಿಯುನೂರ್ನ್ ಹೇಳಿದರು. ಏ-ಫೋಲ್ ಅವರು ವರ್ಷಗಳ ಕಾಲದ ಆಧ್ಯಾತ್ಮಿಕ ತರಬೇತಿ, ಗುಹೆಯೊಳಗೆ ಕಷ್ಟದ ಕೆಲಸದಲ್ಲಿ ಸಹಾಯಕ್ಕೆ ಬಂದಿತ್ತು. ಏಕಾಫೋಲ್ ಈ ಪರಿಸ್ಥಿತಿಯಲ್ಲಿ ತನ್ನನ್ನ ತಾನು ದೂಷಿಸಿಕೊಂಡಿರಬೇಕು. ಕೊನೆಗೆ ಫುಟ್ಬಾಲ್ ತಂಡ ಗುಹೆಯ ಒಳಗಿಂದ ಹೊರಕ್ಕೆ ಬಂದ ವಿಷಯ ಕೇಳಿ ದೇವಾಲಯದ ಜನರು ಸಂತೋಷವನ್ನು ಹಂಚಿಕೊಂಡರು. ಈಗ 'ಅಕೆ' ಎಚ್ಚರವಾಗಿ ಅವರ ಮೇಲೆ ಎದ್ದಿರುವ ಅನುಮಾನಗಳನ್ನು ದೂರ ಮಾಡಿ ಹುಡುಗರ ಮನ ಗೆಲ್ಲಬೇಕಿದೆ ಎಂದರು, ಅಬ್ಬಾತ್ ಪ್ರಾಯುತ್ ಜೆಡಿಯುನೂರ್ನ್.

ಗುಹೆಯಲ್ಲಿ ತನಗೆ ಮೀಸಲಾದ ಅಲ್ಪಸ್ವಲ್ಪ ಆಹಾರ ಮತ್ತು ನೀರನ್ನು ಏಕಾಫೋಲ್ ತಾನು ತೆಗೆದುಕೊಳ್ಳದೆ ಹುಡುಗರಿಗೆ ಹಂಚಿದ್ದಾನೆ ಎಂಬುದಾಗಿ ತಿಳಿದಿದೆ. ತಾನು ಸತ್ತರೂ ಪರವಾಗಿಲ್ಲ ಆದರೆ ತನ್ನ ನೆಚ್ಚಿನ ಫುಟ್ಬಾಲ್ ತಂಡದ ಒಬ್ಬ ಹುಡಗನನ್ನೂ ಕಳೆದುಕೊಳ್ಳಲು ಇಷ್ಟವಿಲ್ಲದಂತಹ ಮನುಷ್ಯ ಏಕಾಫೋಲ್ ಎಂಬುದಾಗಿ ಮುಖ್ಯ ಫುಟ್ಬಾಲ್ ತರಬೇತದಾರ ನೊಪಾರತ್ ಹೇಳಿದರು. ಅದುಲ್ ಪೋಷಕರ ಐದು ಮಕ್ಕಳಲ್ಲಿ ಒಬ್ಬನಾದ ಅದುಲ್ ಥೈಲ್ಯಾಂಡ್‌ನಲ್ಲಿ ಓದುತ್ತಿರುವ ಏಕೈಕ ಅದೃಷ್ಟವಂತ ಮತ್ತು ಎಂತಹ ಕಠಿಣ ಪರಿಸ್ಥಿತಿಯಲ್ಲೂ

ಸ್ಥಿತಿವಂತನಾಗಿ ಅದುಲ್ ನಡೆದುಕೊಳ್ಳುತ್ತಾನೆ ಎಂಬುದಾಗಿ ಆತನ ಪೋಷಕರು ತಿಳಿಸಿದರು. ಅದುಲ್ ಪೋಷಕರು, ಅದುಲ್ ಗುಹೆಯಿಂದ ಹೊರಗೆ ಬಂದಾಗ ಪ್ರತಿಯೊಬ್ಬ ಅಧಿಕಾರಿಗಳಿಗೂ ಧನ್ಯಾವಾದಗಳನ್ನು ಹೇಳುಬೇಕು ಎಂದು ಸೂಚನೆ ನೀಡಿದ್ದರು.

ಪಶ್ಚಿಮ ದೇಶಗಳ ಮಾಧ್ಯಮಗಳು, ಚಂತವಾಂಗ್ 'ಅಕೆ' ಮೇಲೆ ಕ್ರಿಮಿನಲ್ ಕೇಸನ್ನು ಹಾಕಬೇಕು. ಯಾಕೆಂದರೆ ಮುಂಗಾರು ಮಳೆ ಕಾಲದಲ್ಲಿ ಹುಡುಗರನ್ನು ಗುಹೆಯ ಒಳಗೆ ಕರೆದುಕೊಂಡು ಹೋಗಿರುವುದು ಅಪರಾಧ ಎಂದರು. ಜೂಲೈ ಒಂದನೇ ತಾರೀಖಿನಿಂದ ಗುಹೆಗಳ ಒಳಗೆ ಹೋಗಬಾರದು ಎನ್ನುವ ವಿಚಾರವನ್ನು ಗುಹೆಗಳ ಮುಂದೆಯೇ ಫಲಕಗಳ ಮೇಲೆ ಬರೆದು ಹಾಕಲಾಗಿದೆ. ಆಗಿದ್ದರೂ ಗುಹೆಯ ಒಳಕ್ಕೆ ಹೋಗಿರುವುದು ಕಾನೂನು ಅಪರಾಧ ಎಂದು ಹೇಳಿದರು. ಹುಡುಗರ ಪೊಷಕರು ಮತ್ತು ಸಾರ್ವಜನಿಕರು ಇದು ಅಕೆಯ ತಪ್ಪಲ್ಲ. ಈ ವರ್ಷ ಮುಂಗಾರು ಮಳೆ ಒಂದು ತಿಂಗಳಿಗೆ ಮುಂಚಿತವಾಗಿಯೇ ಬಂದಿದೆ ಎಂದರು.

ಬ್ರಿಟನ್ ಗುಹೆತಜ್ಞರಾದ ವೆರ್ನ್ ಅನ್ಸವರ್ಥ್ ಅವರು ಯಾರನ್ನೂ ದೂಷಿಸುವುದು ಸರಿಯಲ್ಲ. ಇದು ಕೇವಲ ದುರದೃಷ್ಟವಶಾತ್ ಆಗಿ ನಡೆದುಹೋದ ಘಟನೆ. ಮಳೆಯ ಜೊತೆಗೆ ಈ ಬೆಟ್ಟಗಳು ಸ್ಪಾಂಜ್‌ನಂತೆ ಇದ್ದು ಮೊದಲೇ ಬಿದ್ದ ಮಳೆಯೂ ಕಾರಣವಾಗಿದೆ. ಜೂನ್ 24ರಂದು ಇದೇ ಗುಹೆ ಒಳಕ್ಕೆ ಹೋಗಲು ನಾನು ತಯಾರಾಗಿ ಬಂದಿದ್ದೆ. ಆದರೆ ಆಗಲೇ ಹುಡುಗರು ಒಳಕ್ಕೆ ಹೋಗಿ ಸಿಕ್ಕಿಕೊಂಡಿರುವು ವಿಷಯ ತಿಳಿಯಿತು ಎಂದರು.

ಈ ವಲಯದ ಪೊಲೀಸರ ಮುಖ್ಯಸ್ಥ ಖೋ ಗಾಡ್ ಅವರು, ಅಲಕ್ಷ್ಯದ ಆಧಾರದ ಮೇಲೆ ದೂರು ದಾಖಲು ಮಾಡಬೇಕಿದೆ, ಎಂದರು. ಆದರೆ ವಕೀಲರು, ಯಾರೂ ಬೇಕೆಂತಲೇ ಹೋಗಿಲ್ಲದ ಕಾರಣ ಆರೋಪ ನಿರಾಧಾರ ಎಂದರು. ಅಕೆಯ ನಡುವಳಿಕೆ, ಧ್ಯಾನ ಹುಡುಗರ ಸಹಾಯಕ್ಕೆ ನಿಂತುಕೊಂಡಿದ್ದರಿಂದಲೇ ಎಲ್ಲಾ ಹುಡುಗರು ಸುರಕ್ಷಿತವಾಗಿ ಹೊರಕ್ಕೆ ಬರಲು ಸಾಧ್ಯವಾಗಿದೆ ಎನ್ನುವ ಮಾತುಗಳು ಕೇಳಿ ಬಂದವು. ಪ್ರಧಾನ ಮಂತ್ರಿ ಸಾರ್ವಜನಿಕರು, ನ್ಯಾಯವಾಧಿಗಳು ಸುಮ್ಮನೆ ವಾದಿಸುವುದು ಬೇಡ ಎಂದರು.

ಸುದ್ದಿಗೋಷ್ಠಿಯಲ್ಲಿ ಅದುಲ್ ಸ್ಯಾಮ್



ಒಂಬತ್ತನೇ ದಿನ ಈಜುಗಾರರ ಧ್ವನಿಗಳನ್ನು ಹುಡುಗರು ಕೇಳಿಸಿಕೊಂಡರೂ ಅದು ಥಾಯ್ ಭಾಷೆಯಾಗಿರಲಿಲ್ಲ. ಇಬ್ಬರೂ ಬ್ರಿಟಿಷ್ ಡೈವರ್ಗಳೂ ಹಲವು ದಿನಗಳು ಕಾಲ ಪ್ರವಾಹ ಮತ್ತು ಕತ್ತಲ ಕೂಪಗಳಲ್ಲಿ ತಿಣುಕಾಡಿದ ಮೇಲೆ ಹುಡುಗರ ತಂಡವನ್ನು ಗುರುತಿಸಿದ್ದರು. ಹುಡುಗರ ತಂಡದಲ್ಲಿದ್ದ ಅದುಲ್ ಸ್ಯಾಮ್ ಮಾತ್ರ ಇಂಗ್ಲಿಷ್ ಬಲ್ಲವನಾಗಿದ್ದ. ಅವರು ನೀರಿನಿಂದ ಮೇಲಕ್ಕೆ ಹೊರಹೊಮ್ಮಿದಾಗ ಯಾರೋ ಬಿಳಿಯರು ಬಂದಿದ್ದಾರೆ ಎಂದು ಅಘಾತವಾಯಿತು. ಅದನ್ನು ಜ್ಞಾಪಿಸಿಕೊಂಡ ಅದುಲ್ ಸ್ಯಾಮ್, 'ಅದೊಂದು ಪವಾಡವಾಗಿತ್ತು, ನಾನು ಭಯಗೊಂಡಿದ್ದೆ. ಆದರೂ ಅವರನ್ನು, ನಾನು ನಿಮಗೆ ಸಹಾಯ ಮಾಡಬಹುದೆ?' ಎಂದು ಕೇಳಿದೆ. 'ಡೈವರ್' ಒಬ್ಬರ ಎದೆ ಮೇಲಿದ್ದ ವೀಡಿಯೊ ಕ್ಯಾಮೆರಾದಲ್ಲಿ ನನ್ನ ಮಾತುಗಳು ಚಿತ್ರಣವಾಗಿ ಅದು ಅನಂತರ ವಿಶ್ವದಾದ್ಯಂತ ಪ್ರಸಾರವಾಯಿತು. ಕೆಸರುಮಣ್ಣು ತುಂಬಿಕೊಂಡಿದ್ದ ಫುಟ್ಬಾಲ್ ಯುನಿಫಾರ್ಮ್‌ನಲ್ಲಿದ್ದ ಹುಡುಗರ ತಂಡವನ್ನು ಹುಡುಕಿದ ಡೈವರ್ಗಳಿಗೆ ಧನ್ಯವಾದಗಳು. ಅನೇಕ ಜನರು ನಿಮ್ಮನ್ನ ನೋಡಲು ಬರುತ್ತಿದ್ದಾರೆ, ಎಂದು ಡೈವರ್ಗಗಳು ಹೇಳಿದ ಮೇಲೆ ನಮ್ಮಲ್ಲಿಗೆ ಅನೇಕ ತಜ್ಞರು, ವೈದ್ಯರು, ಸ್ವಯಂಸೇವಕರು ಬಂದು ನಮಗೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಮಾಡಿದರು', ಎಂಬುದಾಗಿ ಹುಡುಗರು ಮಾಧ್ಯಮಗಳ ಮುಂದೆ ಹೇಳಿದರು.

ಅದುಲ್ ಸ್ಯಾಮ್ ಗಂಡಾಂತರಗಳಿಗೆ ಹೊಸಬನೇನೂ ಅಲ್ಲ. ಅದುಲ್ ಆರು ವಯಸ್ಸಿನವನಿದ್ದಾಗಲೇ ಗೆರಿಲ್ಲಾ ಯುದ್ಧ, ಆಫೀಮು ಕೃಷಿ ಮತ್ತು ಮೆಥಾಂಫಿಟಾಮೈನ್ (ಇದು ಉತ್ತೇಜಕ ಔಷಧಿಯಾಗಿದ್ದು ಸಾಮಾನ್ಯವಾಗಿ ಬಿಳಿ, ಕಹಿ ರುಚಿಯ ಪುಡಿ ಅಥವಾ ಮಾತ್ರೆಯ ಮೂಲಕ ದೊರಕುತ್ತದೆ) ಕಳ್ಳಸಾಗಣಿಕೆಗೆ ಹೆಸರುವಾಸಿಯಾದ ಮ್ಯಾನ್ಮಾರ್ ಗಡಿಯಿಂದ ತಪ್ಪಿಸಿಕೊಂಡು ಬಂದಿದ್ದಾನೆ. ಬಡವರಾದ ಅವನ ಪೋಷಕರು ಥೈಲ್ಯಾಂಡ್ಗೆ ಬಂದು ಅದುಲ್ಗೆ ಒಳ್ಳೆ ಶಿಕ್ಷಣ ಕೊಡಿಸುವ ಕನಸು ಕಾಣುತ್ತಿದ್ದಾರೆ. ಆದರೆ ಅದುಲ್ನ ಅದ್ಭುತ ಪವಾಡ ಗುಹೆಯಿಂದ ಪಾರಾಗಿದ್ದು. ಅದುಲ್ ಮತ್ತು ಅವನ ಗೆಳೆಯರು ತಮ್ಮಲ್ಲಿದ್ದ ಟಾರ್ಚ್‌ಗಳ ಬೆಳಕಿನಿಂದ ಮತ್ತು ಗುಹೆಯ ಗೋಡೆಗಳಲ್ಲಿ ಹೊಸರುತ್ತಿದ್ದ ಮಳೆ ನೀರನ್ನು ಕುಡಿದು ಪ್ರಾಣ ಉಳಿಸಿಕೊಂಡಿದ್ದರು. ಒಂಬತ್ತು ದಿನಗಳಾದ ಮೇಲೆ

ಬ್ರಿಟಿಷ್ ಡೈವರ್ಗಳು ವೈಲ್ಡ್ ಬೋರ್ಗಳನ್ನು ಮೊದಲಿಗೆ ಗುರುತಿಸಿದಾಗ ಅವರೆಲ್ಲ ಬಡಕಲಾಗಿ ಕಾಣಿಸುತ್ತಿದ್ದರು. ಮುಂದಿನ ಒಂಬತ್ತು ದಿನಗಳ ಕಾಲ ಅವರಿಗೆ ಎಲ್ಲಾ ರೀತಿಯ ಪ್ರೋಟೀನ್ ಆಹಾರ ಮತ್ತು ಖನಿಜಯುಕ್ತ ನೀರು ಕೊಟ್ಟು ಗುಹೆ ಬಿಡುವುದರೊಳಗೆ ಅವರ ಆರೋಗ್ಯ ಸಾಕಷ್ಟು ಸುಧಾರಿಸಿತ್ತು.

ಮೂಲವಾಗಿ ಮನುಷ್ಯರ (Head Hunting) ತಲೆಗಳ ಬೇಟೆಗೆ ಹೆಸರುವಾಸಿಯಾದ 'ವಾ' ಬುಡಕಟ್ಟು ಜನಾಂಗಕ್ಕೆ ಸೇರಿದ ಅದುಲ್ ಗುಹೆಯಲ್ಲಿನ ತನ್ನ ಫುಟ್ಬಾಲ್ ತಂಡವನ್ನು ಪಾರು ಮಾಡಲು ಬ್ರಿಟಿಷರ ಜೊತೆಗೆ ಇಂಗ್ಲಿಷ್ನಲ್ಲಿ ಇಂಟರ್ಪ್ರಿಟರ್ ಆಗಿ ಮುಖ್ಯವಾದ ಮತ್ತು ನಿರ್ಣಾಯಕ ಪಾತ್ರವನ್ನು ನಿಭಾಯಿಸಿದ್ದನು. ಈತ ಇಷ್ಟು ಚಿಕ್ಕ ವಯಸ್ಸಿಗೆ ಇಂಗ್ಲಿಷ್, ಥಾಯ್, ಬರ್ಮಾ, ಮ್ಯಾಂಡರಿನ್ (ವಿಶ್ವದಲ್ಲೆ ಅತಿ ಹೆಚ್ಚು ಜನರು ಮಾತನಾಡುವ ಚೀನಿ ಭಾಷೆ) ಮತ್ತು ವಾ ಬುಡಕಟ್ಟು ಭಾಷೆಗಳನ್ನು ಬಲ್ಲವನಾಗಿದ್ದನು. ಅದುಲ್ ಬ್ರಿಟಿಷ್ ಡೈವರ್ಗಳ ಮೂಲಕ ತಮ್ಮ ತಂಡಕ್ಕೆ ಬೇಕಾದ ಎಲ್ಲಾ ರೀತಿಯ ಅಗತ್ಯಗಳನ್ನು ಸಂವಹನ ಮೂಲಕ ನಡೆಸಿದ್ದನು.

ಅದುಲ್ಗೆ ಇಂಗ್ಲಿಷ್ ಗೊತ್ತಿದ್ದ ಕಾರಣ ವೈಲ್ಡ್ ಬೋರ್ಗಳ ಸುರಕ್ಷತೆಯನ್ನು ಖಾತ್ರಿ ಪಡಿಸಿಕೊಳ್ಳಲು ನಿರ್ಣಾಯಕನಾಗಿದ್ದನು. ಅದುಲ್ ತನ್ನ ತರಗತಿಯಲ್ಲಿ ಉನ್ನತ ವಿದ್ಯಾರ್ಥಿಯಾಗಿದ್ದಾನೆ. ಮೇ ಸಾಯಿಯಲ್ಲಿನ ಬನ್ ವಿಯಾಂಗ್ ಫಾನ್ ಶಾಲೆಯಲ್ಲಿ ತನ್ನ ಉನ್ನತ ಶೈಕ್ಷಣಿಕ ದಾಖಲೆ ಮತ್ತು ಕ್ರೀಡಾ ಪರಾಕ್ರಮದಿಂದ ಉಚಿತ ಶಿಕ್ಷಣ ಮತ್ತು ಊಟಕ್ಕೆ ದಾರಿ ಮಾಡಿಕೊಂಡಿದ್ದಾನೆ. ಎಂಟು ವರ್ಷಗಳ ಹಿಂದೆ ಥೈಲ್ಯಾಂಡ್ ಗಡಿ ದಾಟಿಕೊಂಡು ಬಂದ ಇವನ ಪೋಷಕರು ಮೇ ಸಾಯಿಯ ಒಂದು ಬ್ಯಾಪ್ಟಿಸ್ಟ್ ಚರ್ಚ್‌ನಲ್ಲಿ ಅವನನ್ನು ಬಿಟ್ಟು ಚರ್ಚ್ ಪಾದ್ರಿ ಮತ್ತು ಆತನ ಪತ್ನಿಗೆ ತನ್ನ ಮಗನ ಕಾಳಜಿ ವಹಿಸುವಂತೆ ಕೇಳಿಕೊಂಡರು. ಮ್ಯಾನ್ಮಾರಿನ ಸ್ವಯಂ ಆಡಳಿತದ ವಾ ಪ್ರಾಂತ್ಯದಲ್ಲಿ ಒಳ್ಳೆ ಗುಣಮಟ್ಟದ ಶಿಕ್ಷಣ ಲಭ್ಯವಿಲ್ಲ, ಮತ್ತು ಅಲ್ಲಿನ ಗೆರಿಲ್ಲಾ ಪಡೆಗಳು ಸ್ಥಳೀಯ ಹುಡುಗರನ್ನು ತಮ್ಮ ಕಡೆಗೆ ಸೆಳೆದುಕೊಳ್ಳುವ ಅಪಾಯದಿಂದ ತಪ್ಪಿಸಿಕೊಂಡು ಬಂದಿದ್ದರು.

ಬಾನ್ ವಿಯಾಂಗ್ ಫಾನ್ ಶಾಲೆಯಲ್ಲಿ ಶೇಕಡ 20ರಷ್ಟು ವಿದ್ಯಾರ್ಥಿಗಳು ಬಡವರಾಗಿದ್ದು ಅರ್ಧದಷ್ಟು ವಿದ್ಯಾರ್ಥಿಗಳು ಜನಾಂಗೀಯ ಅಲ್ಪ ಸಂಖ್ಯಾತರಾಗಿರುವುದರ ಬಗ್ಗೆ ಶಾಲೆಯ ಪ್ರಾಂಶುಪಾಲರಾದ ಪನ್ವಾಯಿತ್ ಥೆಪ್ಸುರಿನ್ ಹುಡುಗರ ಅನಿಶ್ಚಿತ ಸ್ಥಾನಮಾನವನ್ನು ವಿವರಿಸಿದರು. ಯಾವುದೇ

ದೇಶದ ಪೌರತ್ವ ಪತ್ರಗಳನ್ನು ಹೊಂದಿಲ್ಲದ ಹುಡುಗರೆ ಅವರ ಶಾಲಾ ವಿದ್ಯಾರ್ಥಿಗಳ ಸಂಖ್ಯೆಯ ಬಲವನ್ನು ಹೆಚ್ಚಿಸಿರುವು ವಿಷಯವನ್ನು ಹೇಳಿದರು. ಒಳ್ಳೆಯ ಸ್ಥಿತಿಯಿಲ್ಲದ ಹುಡುಗರು ಹೆಚ್ಚು ಚೈತನ್ಯದಿಂದ ಹೋರಾಟ ನಡೆಸಿ ಒಳ್ಳೆಯ ವಿದ್ಯಾರ್ಥಿಗಳಾಗಿ ಹೊರಹೊಮ್ಮುತ್ತಿರುವುದಾಗಿ ಮತ್ತು 'Adul is the best of the best' ಎಂಬ ಮಾತನ್ನು ಸೇರಿಸಿದರು.

ಕನಿಷ್ಠ 4,40,000 ಜನರು ಥೈಲ್ಯಾಂಡ್ ಪೌರತ್ವ ಇಲ್ಲದವರು ಥೈಲ್ಯಾಂಡ್ನಲ್ಲಿ ಇರುವುದಾಗಿ ತಿಳಿದು ಬರುತ್ತದೆ. ಇವರಲ್ಲಿ ಹೆಚ್ಚು ಪಾಲು ಮ್ಯಾನ್ಮಾರ್ ಜನಾಂಗೀಯ ಸಂಘರ್ಷದ ಬಲಿಪಶುಗಳು ಎಂಬುದು ವಿಶ್ವಸಂಸ್ಥೆಯ ನಿರಾಶ್ರಿತರ ಸಂಸ್ಥೆಯ ಲೆಕ್ಕಾಚಾರ. ದೇಶದ ಒಟ್ಟು ಜನಸಂಖ್ಯೆ 70 ದಶಲಕ್ಷಗಳಾದರೆ ಮಾನವ ಹಕ್ಕಗಳ ಪ್ರಕಾರ ಈ ನಿರಾಶ್ರಿತರ ಸಂಖ್ಯೆ 3 ದಶಲಕ್ಷಗಳು. ವಿಶ್ವಸಂಸ್ಥೆ ಥೈಲ್ಯಾಂಡ್ನನಲ್ಲಿರುವ ಎಲ್ಲಾ ನಿರಾಶ್ರಿತರಿಗೆ ಪೌರತ್ವನ್ನು ಕೊಡುವಂತೆ ಕೇಳಿಕೊಂಡರೂ ಇದುವರೆಗೂ ಥೈಲ್ಯಾಂಡ್ ಅದರ ಮಾತು ಕೇಳಿಸಿಕೊಳ್ಳಲಿಲ್ಲ. ಕಡಿಮೆ ಕಾನೂನಿನ ರಕ್ಷಣೆಯೊಂದಿಗೆ ಥೈಲ್ಯಾಂಡ್ನಲ್ಲಿ ದಾಖಲೆರಹಿತ ಕಾರ್ಮಿಕರು ಮಾನವ ಕಳ್ಳಸಾಗಣೆದಾರರ ಅಥವಾ ನಿರ್ಲಜ್ಜ ಉದ್ಯೋಗದಾತರ ಕರುಣೆಯಿಂದ ಇರಬಹುದಾಗಿದೆ. ಆದರೆ ವೈಲ್ಡ್ ಬೋರ್ಸ್ ಆಡಳಿತ ಥಾಯ್ ನಿರಾಶ್ರಿತ ಮಕ್ಕಳಿಗೆ ಒಂದು ನಿಶ್ಚಿತ ಧಾಮವನ್ನು ಒದಗಿಸಿದೆ. ಪ್ರತಿ ವಾರಾಂತ್ಯದಲ್ಲಿ ಫುಟ್ಬಾಲ್ ತಂಡವು ಸಾಮಾನ್ಯವಾಗಿ ಹತ್ತಿರದ ಕಾಡುಗಳಲ್ಲಿ ಹೊರಾಂಗಣ ಪ್ರವೃತ್ತಿ ಚಟುವಟಿಕೆಗಳನ್ನ ನಡೆಸಲು ಹೋಗುತ್ತಿತ್ತು.

ಕಾಣದ ಕತ್ತಲೆ ಜೊತೆಗೆ ಹೋರಾಟ

ಜುಲೈ 10ರಂದು ಮಂಗಳವಾರ 18ನೇ ದಿನ 12ನೇಯವನಾಗಿ ಒಬ್ಬ ಹುಡುಗನನ್ನು ಮತ್ತು ಕೊನೆಯದಾಗಿ 13ನೇಯವನಾಗಿ ಸಹಾಯಕ ತರಬೇತುದಾರನನ್ನು ಪ್ರವಾಹ ತುಂಬಿಕೊಂಡಿದ್ದ ಗುಹೆಯಿಂದ ಹೊರಕ್ಕೆ ತರಲಾಯಿತು. ಅಲ್ಲಿಗೆ 18 ದಿನಗಳ ದೊಂಬರಾಟ ಮುಗಿದುಹೋಗಿ ಇಡೀ ಥೈಲ್ಯಾಂಡ್ ದೇಶ ನಿಟ್ಟುಸಿರು ಬಿಟ್ಟಿತು. ಈ ಗುಹೆಯಿಂದ ಪಾರು ಮಾಡಿದ ರೀತಿ ಮತ್ತು ಸಾಹಸ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರಗೊಂಡು ಮಾನವನ ಆಧುನಿಕ ಇತಿಹಾಸದಲ್ಲೊಂದು ಮೈಲಿಗಲ್ಲಾಗಿ ಉಳಿದುಹೋಯಿತು. ಉಸಿರು ಬಿಗಿ ಹಿಡಿದುಕೊಂಡು ಕಾಯುತ್ತಿದ್ದ ಜನರು ವಿಶ್ವದಾದ್ಯಂತ ಬುದ್ಧನ ಒಂದು ಮುಗುಳು ನಗೆ ಬೀರಿ ಇದರಲ್ಲಿ ಪಾಲ್ಗೊಂಡಿದ್ದ ಎಲ್ಲರಿಗೂ ಶಭಾಷ್ ಎಂದರು. ವಿಶ್ವದ ಯಾವುದೋ ಮೂಲೆಯಲ್ಲಿ ಸಣ್ಣದಾಗಿ ಪ್ರಾರಂಭವಾದ

ಈ ಕಾರ್ಯಾಚರಣೆಯಲ್ಲಿ ನೂರಾರು ಸ್ವಯಂಸೇವಕರು, ತಂತ್ರಜ್ಞರು, ವಿಶ್ವದ ನಾನಾ ಕಡೆಯಿಂಡ ಬಂದು ಸೇರಿಕೊಂಡಿದ್ದರು.

ಕಾರ್ಯನಿರತರಾಗಿದ್ದ ಈಜುಗಾರರ ಕೆಲಸ ತುಂಬಾ ಕಠಿಣವಾದ ಕೆಲಸವಾಗಿತ್ತು. ಅತ್ಯಂತ ಕಿರಿದಾದ ಹಾದಿಗಳಲ್ಲಿ ಹಾದುಹೋಗುವಾಗ ತೀವ್ರ ತರದ ಉದ್ವೇಗಕ್ಕೆ ಒಳಗಾಗಬೇಕಾಗಿತ್ತು. ಇದು ನಾವು ಹಿಂದೆಂದೂ ಭಾಗಿಯಾಗದ ಕಠಿಣ ಕಾರ್ಯವಾಗಿರುವುದಾಗಿ ಗುಹಾತಜ್ಞರು ಹೇಳಿಕೊಳುತ್ತಿದ್ದರು. ನೀರು ಕಡಿಮೆಯಾದಷ್ಟು ಪ್ರವಾಹದ ಅಲೆಗಳು ಹೆಚ್ಚಾಗುತ್ತಿದ್ದವು. ಒಂದೊಂದು ಸಮಯದಲ್ಲಿ ಒಂದೊಂದು ರೀತಿಯಲ್ಲಿ ಅಲೆಗಳು ಏಳುತ್ತಿದ್ದವು. ಕೆಸರಿನ ನೆಲದಲ್ಲಿ ಹೆಜ್ಜೆಯೂರಿ ತೆಗೆಯುವ ಪ್ರತಿಯೊಂದು ಸಲವೂ ಅಪಾಯಕಾರಿಯಾಗಿ ತೋರುತ್ತಿತ್ತು. ಎಲ್ಲಿಯಾದರೂ ಹೆಚ್ಚು ಕೆಸರಿದ್ದರೆ ಕಾಲುಗಳು ಹೂತುಹೋಗುವ ಸಂಭವವೂ ಇತ್ತು ಎಂಬುದಾಗಿ ಥಾಯ್ ವಿದ್ಯುತ್ ಉತ್ಪಾದನಾ ಪ್ರಾಧಿಕಾರದ ಅಧಿಕಾರಿ ನೊವ್ಪೊಂಗ್ಸುಕ್ ಕಾಸಬ್ ಹೇಳುತ್ತಿದ್ದರು.

ಆತ ಸೀಲ್ ತಂಡದ ಒಬ್ಬ ಈಜುಗಾರನ ಕೆಲಸ ನಿಭಾಯಿಸುವ ಸದಸ್ಯನಾಗಿದ್ದು ಆತನ ಕೆಲಸವೆಂದರೆ ಸುರಂಗದೊಳಗೆ ಆಮ್ಲಜನಕ ಸಿಲಿಂಡರ್‌ಗಳನ್ನು ಸಾಗಿಸಿ ತಲುಪಿಸುವುದು. ಈಜುಗಾರರು ಹಲವು ರೀತಿಯ ತೊಂದರೆಗಳನ್ನು, ಸವಾಲುಗಳನ್ನು ಎದುರಿಸಬೇಕಾಯಿತು. ನಾವು ಈಜುವಾಗ ಹತ್ತಿರಕ್ಕೆ ಬಂದಾಗ ಮಾತ್ರ ಕೈಗಳನ್ನು ನೋಡಬಹುದಾಗಿತ್ತು. ಜೊತೆಗೆ ಕಿರು ದಾರಿಗಳಲ್ಲಿ ಕಲ್ಲುಗಳು ರೇಜರ್‌ನಂತೆ ಚೂಪಾಗಿರುತ್ತಿದ್ದವು. ಕಾರಣ ನಾವು ಕೈಕಾಲುಗಳನ್ನು ಅಲ್ಲಾಡಿಸಲು ಸಹ ಭಯ ಪಡುತ್ತಿದ್ದೆವು ಎಂಬುದಾಗಿ ಒಬ್ಬ ಈಜುಗಾರ ಹೇಳಿದನು.



ಕಾರ್ಯಾಚರಣೆ ಮುಗಿಸಿದ ಮೇಲೆ ಸೀಲ್ ಅಧಿಕಾರಿಗಳು ಸುದ್ದಿ ಮಾಧ್ಯಮಗಳ ಜೊತೆಗೆ ಮಾತನಾಡುತ್ತಿರುವುದು.


ಗುಹೆಯ ಒಳಗೆ ಕಾರ್ಯ ನಡೆಸುತ್ತಿದ್ದ ಕಾಸಬ್ ತನಗೆ ಏನಾದರು ಆದರೆ ಎಂದು, ಮನೆಯಲ್ಲಿರುವ ತನ್ನ ಸ್ವಂತ ಮಕ್ಕಳ ಬಗ್ಗೆಯೂ ಆಲೋಚನೆಗೆ ಒಳಗಾಗಿಗುತ್ತಿದ್ದೆ. ಇಂತಹ ಸಮಯದಲ್ಲಿ ಪ್ರತಿಯೊಬ್ಬ ತಂದೆಯೂ ತಮ್ಮ ಕುಟುಂಬದೊಂದಿಗಿನ

ಭಾವನಾತ್ಮಕ ಸಂಬಂಧಗಳನ್ನು ಅನುಭವಿಸಿರುತ್ತಾನೆ. ಹಾಗೆಯೇ ಇಲ್ಲಿ ಗುಹೆಯಲ್ಲಿ ಸಿಲುಕಿಕೊಂಡಿರುವ ಮಕ್ಕಳು ಕೂಡ ನಮ್ಮ ಮಕ್ಕಳೇ ಎಂಬ ಭಾವನೆ ಹುಟ್ಟುತ್ತಿತ್ತು ಎಂದು ಮಾಧ್ಯಮದ ಮುಂದೆ ಹೇಳಿಕೊಂಡಿದ್ದರು. ಇದು ಹಲವು ದಿನಗಳ ಅಪಾಯಕಾರಿ ಹೋರಾಟವಾಗಿತ್ತು. ಭೀಕರ ಮಳೆ ಎಲ್ಲಾ ಸಮಯದಲ್ಲೂ ಪದೇಪದೇ ಕಾರ್ಯಾಚರಣೆಗೆ ಅಡ್ಡಿ ಪಡಿಸುತ್ತಿತ್ತು. ಹುಡುಗರಿಗೆ ಹೊಸದಾಗಿ ಸ್ಕೂಬ್ ಗೇರ್ ಧರಿಸಿ ನೀರಿನೊಳಗೆ ಡೈವ್ ಮಾಡುವುದನ್ನು ಕಲಿಸಿ ಕೊಡಲಾಯಿತು. ಈಜುತಜ್ಞರು ಹುಡುಗರನ್ನು ಹೊರಕ್ಕೆ ತರುವುದಕ್ಕೆ ಮುಂಚೆ ಅವರಿಗೆ ಎಲ್ಲವನ್ನು ಕಲಿಸಿಕೊಡಲು ಪ್ರಯತ್ನ ಪಡುತ್ತಿದ್ದರು. ಅಧಿಕಾರಿಗಳು, ಹುಡುಗರಿಗೆ ಆಮ್ಲಜನಕ ಕವಚ ತೊಡುವುದಕ್ಕೆ ಮುಂಚೆ ಸಂಪೂರ್ಣವಾಗಿ ನೀರು ಒಳಗೆ ನುಗ್ಗದಂತೆ ಪರೀಕ್ಷಿಸಿ ಅವರಿಗೆ ಕವಚಗಳನ್ನು ಮುಖಕ್ಕೆ ತೊಡಿಸಲಾಯಿತು.

ಮೊದಲನೇ ತಂಡವನ್ನು ಗುಹೆಯಿಂದ ಹೊರಕ್ಕೆ ತರಲು ಯೋಜನೆ ಮಾಡಿಕೊಂಡ ಎರಡು ದಿನಗಳ ಮುಂಚೆ ಗುಹೆಯ ಒಳಗೆ ಶೇಕಡ 15ರಷ್ಟು ಆಮ್ಲಜನಕ ಕಡಮೆಯಾಗಿರುವುದನ್ನು ಅಧಿಕಾರಿಗಳು ಎಚ್ಚರಿಸಿದರು. ಹೆಚ್ಚು ಮುಂಗಾರು ಮಳೆಯ ಮುನ್ಸೂಚನೆ ಯಾವಾಗಲೂ ತಲೆಯ ಮೇಲೆಯೆ ಓಡಾಡುತ್ತಿತ್ತು. ಇದರಿಂದ ಮತ್ತೆಮತ್ತೆ ನೀರಿನ ಪ್ರವಾಹ ಗುಹೆ ಒಳಕ್ಕೆ ನುಗ್ಗುವ ಅವಕಾಶ ಇರುತ್ತಿತ್ತು. ಈ ಎಲ್ಲದರ ಸಮಸ್ಯೆಗಳಿಂದ ಹುಡುಗರನ್ನು ಹೊರಕ್ಕೆ ತರುವ ಅವಕಾಶಗಳು ಇನ್ನಷ್ಟು ಮುಂದಕ್ಕೆ ದೂಡುತ್ತಲೇ ಹೋಗುತ್ತಿತ್ತು. ಈ ನಡುವೆ ಆಕಾಶದಲ್ಲಿ ಮೋಡಗಳು ಸ್ವಲ್ಪ ಸಡಿಲವಾಗಿದ್ದು ನೀರನ್ನು ಗುಹೆಯ ಒಳಗಿಂದ ಹೊರಕ್ಕೆ ಪಂಪ್ ಮಾಡುತ್ತಲೇ ಇದ್ದರು. ಇದರಿಂದ ಗುಹೆಯಲ್ಲಿನ ಕೆಲವು ಭಾಗಗಳು ನೀರಿನಿಂದ ತೆರುವಾಗಿ ಹುಡುಗರು ಸ್ವಲ್ಪ ದೂರ ನಡೆದುಕೊಂಡು ಬರಲು ಸಾಧ್ಯವಾಗಿತ್ತು.

ಗುಹೆಯಿಂದ ನೀರಿನಲ್ಲಿ ಕೆಲವು ಗಂಟೆಗಳ ಕಾಲ ಹೊರಕ್ಕೆ ಬರುವಾಗ ಪ್ರತ್ರಿಯೊಬ್ಬ ಹುಡುಗನ ಜೊತೆಗೆ ಇಬ್ಬರು ಈಜುಗಾರರು ಹುಡುಗನನ್ನು ಹಿಡಿದುಕೊಂಡು ಜೊತೆಗೆ ಈಜುತ್ತಾ ಬರುತ್ತಿದ್ದರು. ಅತ್ಯಂತ ಅಪಾಯಕಾರಿ ಭಾಗವೆಂದರೆ ಮೊದಲಿನ ಒಂದು ಕಿಲೋಮೀಟರ್ ದೂರ. ಈ ಭಾಗದಲ್ಲಿ ಈಜುಗಾರರು ಮತ್ತು ಹುಡುಗರು ಕಿರಿದಾದ ಪ್ರವಾಹದಲ್ಲಿ ಮುಳುಗುತ್ತ ಈಜುತ್ತಾ ಬರಬೇಕಾಗಿತ್ತು. ರಕ್ಷಕರು ಹುಡುಗರ ಮುಂದೆ ಆಮ್ಲಜನಕದ ಸಿಲಿಂಡರ್ಗಳನ್ನು ಹಿಡಿದುಕೊಂಡು ಪೆನ್ಸಿಲ್‌ನಂತಹ ಕಿರಿದಾದ ನೀರು ತುಂಬಿಕೊಂಡಿರುವ

ತೂತುಗಳಲ್ಲಿ ಈಜುಕೊಂಡು ಬರಬೇಕಾಗಿತ್ತು. ಹೀಗೆ ಬರುವಾಗ ಎಲ್ಲರೂ ಗುಹೆಯ ದಾರಿಯಲ್ಲಿ ಕಟ್ಟಿದ್ದ ದಾರಿ ಸೂಚಿಸುವ ಹಗ್ಗವನ್ನು ಕೈಯಲ್ಲಿ ಹಿಡಿದುಕೊಂಡೆ ಬರಬೇಕಾಗಿತ್ತು. ಇಲ್ಲವೆಂದರೆ ದಾರಿ ತಪ್ಪುವ ಅಪಾಯ ಇರುತ್ತಿತ್ತು. ಈ ಭಾಗಗಳನ್ನು ದಾಟಿದ ಮೇಲೆ ಪ್ರತ್ಯೇಕ ವಿಶೇಷ ಈಜುತಜ್ಞರಿಗೆ ಹುಡುಗರನ್ನು ಒಪ್ಪಿಸಲಾಯಿತು. ಅವರು ಅನಂತರ ಹುಡುಗರನ್ನು ಈಜಿಸುತ್ತ, ನಡೆಸುತ್ತಾ ಹೊರಕ್ಕೆ ತಂದು ನಿಲ್ಲಿಸಿದರು.



ಗುಹೆ ಒಳಗೆ ಇಬ್ಬರು ಈಜುತಜ್ಞರು ಹುಡುಗನನ್ನು ನೀರಿನ ಒಳಗೆ ಕರೆದು ತರುತ್ತಿರುವುದು.

ಚಿತ್ರದಲ್ಲಿ, ಹಿಂದೆ ಇರುವ ಈಜುಗಾರ ತನ್ನ ಬೆನ್ನಿಗೆ ಆಮ್ಲಜನಕ ಸಿಲಿಂಡರ್ ಕಟ್ಟಿಕೊಂಡು ಹಣೆಯ ಮೇಲೆ ಲ್ಯಾಂಪ್‌ನ್ನು ಧರಿಸಿದ್ದರೆ, ಮುಂದಿರುವ ಈಜುಗಾರ ಅದೇ ರೀತಿ ಬೆನ್ನಿನ ಮೇಲೆ ಆಮ್ಲಜನಕದ ಸಿಲಿಂಡರ್ ಕಟ್ಟಿಕೊಂಡು ಹಣೆಯಲ್ಲಿ ಲ್ಯಾಂಪ್ ಕಟ್ಟಿಕೊಂಡಿದ್ದು ಜೊತೆಗೆ ಹುಡುಗನ ಆಮ್ಲಜನಕದ ಸಿಲಿಂಡರನ್ನು ಕೈಗಳಲ್ಲಿ ಹಿಡಿದುಕೊಂಡು ಸಾಗುತಿ-ದ್ದರು. ಹುಡುಗನ ಮುಖವನ್ನು ಸಂಪೂರ್ಣವಾಗಿ ಮುಖ ಕವಚದಿಂದ ಮುಚ್ಚಲಾಗಿತ್ತು. ಎಲ್ಲರೂ 8 ಮಿಲಿಮೀಟರ್ ದಪ್ಪ ಇರುವ ಮಾರ್ಗಸೂಚಿ ಹಗ್ಗವನ್ನು ಹಿಡಿದುಕೊಂಡು ಸಾಗುತ್ತಿದ್ದರು. ಕಿರಿದಾದ ಸಂದುಗಳು ಬಂದರೆ ಈಜುಗಾರರು ಸಿಲಿಂಡರುಗಳನ್ನು ಕೈಗಳಲ್ಲಿ ಹಿಡಿದುಕೊಂಡು ಸಾಗುತ್ತಿದ್ದರು. ಗುಹೆಯ ಅತ್ಯಂತ ಕಿರು ಸಂದುಗಳೆಂದರೆ 3X72 ಸೆಂಟಿಮೀಟರುಗಳು (15X18 ಅಂಗುಲ).

OOO

ಗುಹೆಯಿಂದ ಎಲ್ಲರನ್ನೂ ನೇರವಾಗ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅದರಲ್ಲಿ 8 ಹುಡುಗರಿಗೆ ಆಮ್ಲಜನಕ ನೀಡಿ ನಿಗಾ ಘಟಕದಲ್ಲಿ ಇರಿಸಲಾಯಿತು. 13 ಜನರ ಜೂನಿಯರ್ ಫುಟ್ಬಾಲ್ ತಂಡ ಗುಹೆಯಿಂದ ಹೊರಕ್ಕೆ ಬಂದ

ಮೇಲೆ ಅವರ ಜೊತೆಗಿದ್ದ ಸೀಲ್‌ನ 4 ಅಧಿಕಾರಿಗಳು ಗುಹೆಯಿಂದ ಹೊರಕ್ಕೆ ಬಂದರು. ಅವರಲ್ಲಿ ಒಬ್ಬರು ವೈದ್ಯರೂ ಇದ್ದರು. ಎಲ್ಲಾ ಮುಗಿದ ಮೇಲೆ ಸೀಲ್ ಅಧಿಕಾರಿಯೊಬ್ಬರು ಫೇಸ್ಬುಕ್‌ನಲ್ಲಿ ಹೀಗೆ ಬರೆದುಕೊಂಡಿದ್ದರುಃ We are not sure if this is a miracle, a science, or what. All the thirteen Wild Boars are now out of the cave," ಒಟ್ಟು 19 ಈಜುಗಾರರು ಭಾನುವಾರ ದಿನ ಜೂಲೈ 8ರಂದು ರಾತ್ರಿ 10 ಗಂಟೆಗೆ (ಸ್ಥಳೀಯ ಸಮಯ) ಗುಹೆಯ ಒಳಕ್ಕೆ ಹೋದರು. ಇವರಲ್ಲಿ ಹಲವರು ಮುಂಚೆಯೇ ಎರಡು ಸಲ ಗುಹೆಯ ಒಳಕ್ಕೆ ಹೋಗಿ ಎಲ್ಲವನ್ನು ಅಸಸ್ ಮಾಡಿ ನೋಡಿಕೊಂಡು ಬಂದಿದ್ದರು. ಕೊನೆ ದಿನ ಜೂಲೈ 10ರಂದು ಮಂಗಳವಾರ ಮೂರನೇ ಸಲ ಒಳಗೆ ಉಳಿದಿರುವವರನ್ನು ಹೊರಕ್ಕೆ ತರಲು ಹೋದವರು 9 ಗಂಟೆಗಳ ಕಾಲ ರಕ್ಷಣಾ ಕಾರ್ಯದಲ್ಲಿ ತೊಡಗಿಕೊಂಡಿದ್ದರು.

ವೈಲ್ಡ್ ಬೋರ್ನ ಮುಖ್ಯ ತರಬೇತುದಾರ ನೊಪ್ಪರತ್ ಕತಾವೊಂಗ್ ಸಿ.ಎನ್. ಎನ್‌ಗೆ ಹೀಗೆ ವಿವರಿಸಿದರು. 'ಹಿಂದಿನ ದಿನಗಳಿಗಿಂತ ಈಗ ಆರಾಮಾಗಿದೆ. ಈ ದಿನಕ್ಕಾಗಿ ನಾವು ಎದುರು ನೋಡುತ್ತಿದ್ದೆವು. ಈಗ ನಾನು ಸಂತೋಷವಾಗಿ ನಿದ್ದೆ ಮಾಡುತ್ತೇನೆ ಮತ್ತು ಕನಿಷ್ಟ ಈ ರಾತ್ರಿಯಾದರೂ ಒಳ್ಳೆ ಕನಸುಗಳನ್ನು ಕಾಣುತ್ತೇನೆ. ಹನ್ನೆರಡು ಜನರ ತಂಡ ಮತ್ತು ಸಹಾಯಕ ತರಬೇತುದಾರ




ಜೂಲೈ 15ರಂದು ಫುಟ್ಬಾಲ್ ತಂಡದ ಹುಡುಗರು ಆಸ್ಪತ್ರೆಯಲ್ಲಿ ಅವರನ್ನು ಪಾರು ಮಾಡುವ ಕೆಲಸದಲ್ಲಿ ಮಡಿದ ಮಾಜಿ ನೌಕಾದಳದ ಅಧಿಕಾರಿ ಸಮನ್ ಗುನನ್ ಅವರ ರೇಖಾ ಚಿತ್ರವನ್ನು ಹಿಡಿದುಕೊಂಡು ನಿಂತಿರುವುದು.

ಗುಹೆಯ ಒಳಕ್ಕೆ ಹೋಗುವ ವಿಷಯವನ್ನು ನನಗೆ ತಿಳಿಸಿರಲಿಲ್ಲ. ಚಂತವಾನ್ ಗುಹೆಯಿಂದ ಹೊರಕ್ಕೆ ಬಂದಿದ್ದಾನೆ. ಈಗ ಏನು ಹೇಳಿಕೆ ನೀಡುತ್ತಾನೊ ನೋಡಬೇಕು. ಆದರೂ ನಾನು ಅವರನ್ನು ಭೇಟಿಯಾಗಿ ತಬ್ಬಿಕೊಳ್ಳುತ್ತೇನೆ.' ಎಂದು ಹೇಳಿದರು.

ಭಾನುವಾರ ಮತ್ತು ಸೋಮವಾರ ಹೊರಕ್ಕೆ ಪಾರು ಮಾಡಿದ 8 ಹುಡುಗರನ್ನು ಚಾಯಂಗ್ ರೈ ಆಸ್ಪತ್ರೆಯಲ್ಲಿ ಪ್ರತ್ಯೇಕ ಕೋಣೆಗಳಲ್ಲಿ ಇಡಲಾಯಿತು. ಆಸ್ಪತ್ರೆಯ ವೈದ್ಯರು ಎಲ್ಲರೂ ಆರೋಗ್ಯವಾಗಿ ದೃಢವಾಗಿ ಇರುವುದಾಗಿ ಹೇಳಿದರು. ಕೆಲವರು ಹೆಚ್ಚು ಉತ್ಸಾಹಕತೆಯಿಂದ ಕೂಡಿರುವುದಾಗಿಯೂ ಹೇಳಿದರು. ಕೆಲವು ಮಕ್ಕಳು ಬ್ರೆಡ್ ಮತ್ತು ಚಾಕೊಲೇಟ್ಗಳನ್ನು ಕೇಳಿ ಕೊಡಲಾಯಿತು. ಜೊತೆಗೆ ಹಾಲು ಮತ್ತು ಪ್ರೋಟೀನಸ್ ಆಹಾರವನ್ನು ಕೊಡಲಾಯಿತು. ಭಾನುವಾರ ಮೊದಲ ಗುಂಪಿನಲ್ಲಿ ಹೊರಕ್ಕೆ ತಂದಾಗ ಹುಡುಗರ ದೇಹದ ಉಷ್ಣತೆ ತೀರಾ ಕಡಿಮೆಯಿದ್ದು ಗುಹೆಯ ಒಳಗೆ ತೇವಾಂಶದೊಂದಿಗೆ ಇದ್ದ ಕಾರಣ ಶ್ವಾಸಕೋಶ ಸೋಂಕು ಆಗಿರಬಹುದೆಂದು ಸಂದೇಹ ಬಂದಿತ್ತು. ಮೊದಲಿಗೆ ಅವರ ಪೋಷಕರಿಗೆ ಹುಡುಗರನ್ನು ಗಾಜು ಕಿಟಿಕಿಗಳ ಮೂಲಕ ತೋರಿಸಿ ಅನಂತರ ಫೋನ್ ಮೂಲಕ ಮಾತನಾಡಿಸಲು ಅವಕಾಶ ಮಾಡಿಕೊಡಲಾಯಿತು.

ಎರಡನೇ ಗುಂಪನ್ನು ಸೋಮವಾರ ಹೊರಕ್ಕೆ ತರಲಾಯಿತು. ಒಬ್ಬ ಹುಡುಗನ ಹೃದಯಬಡಿತ ತೀವ್ರ ಕಡಿಮೆ ಇದ್ದರೂ ವೈದ್ಯಕೀಯ ತಪಾಷಣೆಗೆ ಸ್ಪಂದಿಸುತ್ತಿತ್ತು. ಎಲ್ಲಾ ಹುಡುಗರ ರಕ್ತವನ್ನು ತೆಗೆದುಕೊಂಡು ಪರೀಕ್ಷೆಗಾಗಿ ಬ್ಯಾಂಕಾಕ್ ಕಳುಹಿಸಲಾಯಿತು. ವೈದ್ಯಕೀಯ ಅಧಿಕಾರಿಗಳು ಹಿಸ್ಟೋಪ್ಲಾಸ್ಮೋಸಿಸ್ ಶಂಕೆಯನ್ನು ಗಮನಿಸುತ್ತಿದ್ದರು. ಇದು ಹೆಚ್ಚು ದಿನಗಳ ಕಾಲ ಗುಹೆಗಳ ಒಳಗಿದ್ದರೆ ಬರುವ ಕಾಯಿಲೆ. ಗುಹೆಯಲ್ಲಿ ಉಸಿರಾಡುವಾಗ ಪಂಗಸ್ ಅಥವಾ ಶಿಲೀಂಧ್ರ ಸ್ಪೋರ್ಸ್ ಉಸಿರಾಟದಲ್ಲಿ ಸೇರಿಕೊಂಡರೆ ಬರುವ ಕಾಯಲೆ. ಈ ಕಾಯಿಲೆ ಪಕ್ಷಿಗಳು ಮತ್ತು ಬಾವಲಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಕಾಯಿಲೆ. ಎಲ್ಲರನ್ನೂ ಒಂದು ವಾರದವರೆಗೂ ಆಸ್ಪತ್ರೆಯಲ್ಲೇ ಇರಿಸಿಕೊಳ್ಳುವುದಾಗಿ ವೈದ್ಯರು ನಿರ್ಧರಿಸಿದ್ದರು. ಥಾಯ್ ಪ್ರಧಾನಮಂತ್ರಿ ಸೋಮವಾರ ಆಸ್ಪತ್ರೆಗೆ ಭೇಟಿ ನೀಡಿ ಹುಡುಗರು, ಪೋಷಕರು ಮತ್ತು ಆಸ್ಪತ್ರೆ ಸಿಬ್ಬಂದಿಯ ಜೊತೆಗೆ ಮಾತುಕತೆ ನಡೆಸಿದರು.



ಥೈಲ್ಯಾಂಡ್ ಪ್ರಧಾನ ಮಂತ್ರಿ ಪ್ರಯತ್ ಚಾನ್-ಓ-ಚ ಫುಟ್ಬಾಲ್ ತಂಡದ ಪೋಷಕರ ಜೊತೆಗೆ ಮಾತನಾಡುತ್ತಿರುವುದು.

❑

ಪ್ರಧಾನ ಮಂತ್ರಿ ಮತ್ತು ವಿಶ್ವಕಪ್ ಫುಟ್ಬಾಲ್ ಆಟಗಾರರ ಪ್ರಶಂಸೆ

ಅಧ್ಯಾಯ-12

ಥೈಲ್ಯಾಂಡ್ ಪ್ರಧಾನ ಮಂತ್ರಿ ಪ್ರಯತ್ ಚಾನ್-ಒ-ಚ ಅವರು ಹುಡುಗರಿಗೆ ಚೇತರಿಸಿಕೊಳ್ಳಲು ಸಮಯ ನೀಡಬೇಕು. ಅವರು ಹೀರೋಗಳಲ್ಲ. ಅವರನ್ನು ಅವರ ಪಾಡಿಗೆ ಬಿಟ್ಟುಬಿಡಿ. ಅವರು ಓದುಕೊಳ್ಳುವುದು ಮುಖ್ಯ ಎಂದರು. ಸೀಲ್ ಘಟಕದ ಕಮಾಂಡರ್ ಹಿರಿಯ ಅಡ್ಮಿರಲ್ ಯುಕೊಂಗ್ಕಾವ್ ಅವರು ಅಂತರರಾಷ್ಟ್ರೀಯ ತಂಡಗಳ ಪ್ರಯತ್ನವನ್ನು ಪ್ರಶಂಸೆ ಮಾಡಿದರು. ನಾವು ನಾಯಕರಲ್ಲ. ನಿಜವಾದ ನಾಯಕರು ಹುಡುಗರನ್ನು ಪಾರುಮಾಡಿದ ಪ್ರತಿಯೊಬ್ಬರೂ. ಎಲ್ಲರ ಸಹಕಾರದಿಂದಲೇ ನಮ್ಮ ಪ್ರಯತ್ನ ಸಫಲವಾಗಿದೆ. ಸೀಲ್ ಸದಸ್ಯರು ಇಂತಹ ವಿಷಯಗಳಿಗಾಗಿಯೇ ತರಬೇತಿಯನ್ನು ಪಡೆದುಕೊಂಡಿದ್ದಾರೆ. ನೌಕಾ ಪಡೆ ಒಂದು ಗುರಿ ಹೊಂದಿದ್ದು ಜನರನ್ನು ನಾವು ಬಿಟ್ಟುಕೊಡುವುದಿಲ್ಲ ಎಂದು ಹೇಳಿದರು.

ಬ್ರಿಟನ್, ಯುನೈಟೆಡ್ ಸ್ಟೇಟ್ಸ್, ಜಪಾನ್, ಲಾಹೋಸ್, ಮ್ಯಾನ್ಮಾರ್, ಚೀನಾ ಮತ್ತು ಆಸ್ಟ್ರೇಲಿಯಾ ದೇಶಗಳಿಂದ ಅಧಿಕೃತ ನೆರವು ಬಂದಿರುವ ಸರ್ಕಾರಿ ದಾಖಲೆಗಳನ್ನು ಅಡ್ಮಿರಲ್ ಯುಕೊಂಗ್ಕಾವ್ ತೋರಿಸಿದರು. ಡೆನ್ಮಾರ್ಕ್, ಜರ್ಮನಿ, ಬೆಲ್ಜಿಯಂ, ಕೆನಡಾ, ಉಕ್ರೇನ್ ಮತ್ತು ಫಿನ್ಲ್ಯಾಂಡ್ನಿಂದ ಸ್ವಯಂಸೇವಕರು ಬಂದಿದ್ದರು. ಹದಿಮೂರು ವಿದೇಶಿ ಈಜುಗಾರರನ್ನು ಒಳಗೊಂಡಂತೆ 18 ಈಜುಗಾರರು ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಉಳಿದ ಐದು ಈಜುಗಾರರು ಸೀಲ್ಗೆ ಸೇರಿದವರಾಗಿದ್ದರು.

ಪಾರು ಮಾಡುವ ವಿಷಯ ಥೈಲ್ಯಾಂಡ್ ಮಾಧ್ಯಮಗಳಲ್ಲಿ ಅಷ್ಟೂ ದಿನ ಮುಖ್ಯ ಸುದ್ದಿಯಾಗಿದ್ದು ಅದು ವಿಶ್ವದ ಇತರ ದೇಶಗಳಲ್ಲೂ ಭಾರಿ ಸುದ್ದಿಯಾಗಿತ್ತು. 'ಹೊಯಾಹ್! ಮಿಷನ್ ಗುರಿಮುಟ್ಟಿದೆ'. ಎಂದು ಉದ್ಗರಿಸುತ್ತ ಸೀಲ್ ಘಟಕ ಯಾರ್ಲಿಂಗ್ ಕ್ರೈ ಅನ್ನು ಪ್ರತಿನಿಧಿಸುತ್ತದೆ. ಹ್ಯಾಶ್ಟ್ಯಾಗ್# ನೂರಾರು ರಕ್ಷಕರನ್ನು ಬೆಂಬಲಿಸುವ ಜನರೊಂದಿಗೆ ಸಾಮಾಜಿಕ ಮಾಧ್ಯಮಗಳಲ್ಲಿ 'ಹೊಯಾಹ್!' ಪದ ಅತ್ಯಂತ ಜನಪ್ರಿಯವಾಗಿತ್ತು. ವಿಶ್ವದಾದ್ಯಂತ ಈಜುಗಾರರನ್ನು ಒಳಗೊಂಡಂತೆ ಹುಡುಗರು ಅಪಾಯದಿಂದ ಹೊರಬರಲು ಸಹಾಯ ಮಾಡಿದ್ದರು.

ಹುಡುಗರ ಭವಿಷ್ಯವು ರಷ್ಯಾವರೆಗೂ ಹರಡಿಕೊಂಡು ಅಲ್ಲಿ ವಿಶ್ವಕಪ್ ಫುಟ್ಬಾಲ್ ತನ್ನ ಅಂತಿಮ ಹಂತವನ್ನು ತಲುಪಿದಾಗಲೂ ಪ್ರತಿಧ್ವನಿಸಿತ್ತು. ಫ್ರಾನ್ಸ್ ಮತ್ತು ಇಂಗ್ಲೆಂಡ್ ಆಟಗಾರರು, ಹುಡುಗರು ಪಾರಾದ ಸುದ್ದಿಯನ್ನು ಸ್ವಾಗತಿಸಿದರು ಮತ್ತು ಟ್ವಿಟ್ಟರ್ನಲ್ಲಿ ವೈಲ್ಡ್ ಬೋರ್ಸ್‌ಗೆ ತಮ್ಮ ಶುಭಾಶಯಗಳನ್ನು ಕಳುಹಿಸಿದ್ದರು. ಫ್ರೆಂಚ್ ತಂಡದ ಮಿಡ್ಫೀಲ್ಡರ್ ಪೌಲ್ ಪೋಗ್ಬಾ ಬೆಲ್ಜಿಯಂ ತಂಡವನ್ನು ಸೋಲಿಸಿದ ನಂತರ ವೈಲ್ಡ್ ಬೋರ್ಸ್ ಹುಡುಗರು ಪಾರಾದ ವಿಷಯ ಕೇಳಿ 'this victory goes to the heroes of the day, well done boys, you are so strong' ಎಂದರು.

ಮ್ಯಾಂಚೆಸ್ಟರ್ ಸಿಟಿ ಮತ್ತು ಇಂಗ್ಲೆಂಡ್ ರಕ್ಷಕ ಕೈಲ್ ವಾಕರ್ ಅವರ ತಂಡ ಕ್ರೊಯೇಷಿಯಾ ವಿರುದ್ಧ ಎರಡನೇ ಸೆಮಿಫೈನಲ್ನಲ್ಲಿ ಎದುರಿಸುತ್ತಿದೆ ಎಂದು ತಿಳಿಸಿ, ಅವರು ಹುಡುಗರಿಗೆ ಶರ್ಟ್ಗಳನ್ನು ಕಳುಹಿಸಲು ಬಯಸಿದ್ದರು. 'ಎಲ್ಲಾ ಥಾಯ್ ಮಕ್ಕಳು ಗುಹೆಯಿಂದ ಸುರಕ್ಷಿತವಾಗಿ ಪಾರಾಗಿದ್ದೀರಿ –

ಎಂತಹ ಅದ್ಭುತ ಸುದ್ದಿ!' ಎಂದು ಟ್ವೀಟ್ ಮಾಡಿದ್ದರು. ಥಾಯ್ ಗುಹೆಯಿಂದ ಹುಡುಗರು ಪಾರಾದ ವಿಷಯದ ಬಗ್ಗೆ ಗೂಗಲ್ ಜುಲೈ 10ನೇ ತಾರೀಖು ಹುಡುಕಾಡಿದಾಗ 359 ದಶಲಕ್ಷ ಫಲಿತಾಂಶಗಳು ಬಹಿರಂಗವಾಗಿದ್ದವು.

ಎಲ್ಲಾ 13 ಜನರ ಫುಟ್ಬಾಲ್ ತಂಡ ಗುಹೆಯಿಂದ ಹೊರಕ್ಕೆ ಬಂದ ವಿಷಯ ತಿಳಿದ ಅನೇಕ ದೇಶಗಳ ಮುಖ್ಯ ನಾಯಕರು ಥಾಯ್ ಪ್ರಧಾನಿಗೆ ಶುಭಾಷಯಗಳು ಕೋರಿ ಅಭಿನಂದನೆಗಳನ್ನು ಸಲ್ಲಿಸಿದರು. ಅಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಥಾಯ್ ನೌಕಾದಳ ಸೀಲ್ಗೆ ತಮ್ಮ ಅಭಿನಂದನೆಗಳನ್ನು ಕಳುಹಿಸಿದ್ದರು.

ಮಾಧ್ಯಮಗಳ ಜೊತೆಗೆ ತಜ್ಞರ ಸುದ್ದಿಗೋಷ್ಠಿ

ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಇಬ್ಬರು ಗುಹೆತಜ್ಞ ಈಜುಗಾರರು, ಕತ್ತಲೆಯಲ್ಲಿ ನೀರಿನೊಳಗೆ ಕಿರಿದಾದ ಗುಹೆ ಸಂಧುಗಳಲ್ಲಿ ಹುಡುಗರನ್ನು ಪಾರುಮಾಡಿ ಕರೆದುಕೊಂಡು ಬರುವಾಗ ಅರವಳಿಕೆ ಮದ್ದನ್ನು ನೀಡಲಾಯಿತು ಎಂದು ತಿಳಿಸಿದರು. ಮಾಜಿ ನೌಕಾ ದಳದ ಅಧಿಕಾರಿ ಚೈಯಾನತ್ ಪೀರನಾರಂಗೆ ಎ.ಎಫ್.ಪಿ ಮಾಧ್ಯಮಗಳಿಗೆ ಹೀಗೆ ಹೇಳಿದರುಃ ಕೆಲವು ಹುಡುಗರನ್ನು ಗುಹೆಯ ಒಳಗೆ ಕರೆತರುತ್ತಿದ್ದಾಗ ನಿದ್ದೆಗೆ ಜಾರಿಬಿಟ್ಟರು. ಕೆಲವರು ತಮ್ಮ ಬೆರಳುಗಳನ್ನು ಅಲ್ಲಾಡಿಸುತ್ತ ಸಂಕೇತ ಮಾಡಿದರು. ಆದರೆ ಉಸಿರಾಡುತ್ತಿದ್ದರು. ಈಗ ನಮ್ಮ ಕೆಲಸ ಅವರನ್ನು ಹೊರಗೆ ತರುವುದು ಮಾತ್ರ ಆಗಿತ್ತು. ಪ್ರತಿಯೊಬ್ಬ ಹುಡುಗನನ್ನು ಸಾಗಿಸುತ್ತಿದ್ದ ಇಬ್ಬರು ಈಜುಗಾರರಲ್ಲಿ ಒಬ್ಬ ಈಜುಗಾರನ ಸ್ಟ್ರ್ಯಾಪ್ಗ್‌ಳಿಗೆ ಕಟ್ಟಲಾಗಿತ್ತು. ಸಾಧ್ಯವಾದಷ್ಟು ಒಣಗಿದ ಭಾಗಗಳ ಮೂಲಕ ಹೊರಕ್ಕೆ ತರಲು ಪ್ರಯತ್ನಿಸಲಾಯಿತು.

ವಿಶ್ವದ ಪ್ರಸಿದ್ಧ ಈಜುಗಾರರು, ಕಾರ್ಟೋಗ್ರಾಫರ್‌ಗಳು, ಮತ್ತು ಗಹೆತಜ್ಞರನ್ನು ಒಟ್ಟಾಗಿ ಸೇರಿಸಿಕೊಂಡು ಕಾರ್ಯಾಚರಣೆಯನ್ನು ಕೈಗೊಳ್ಳಲಾಯಿತು. ಸ್ಪೇಸ್ ಎಕ್ಸ್ ಮತ್ತು ಟೆಸ್ಲಾರ್ ಬಿಲಿಯನೇರ್ ಸಂಸ್ಥಾಪಕ ಎಲಾನ್ ಮಸ್ಕ್ ಅವರು ಕಾರ್ಯಾಚರಣೆಗೆ ಸಹಾಯ ನೀಡಿದರು. ಸಾಕಷ್ಟು ಜನರು ಗುಹೆ ಒಳಗಿನ ಹುಡುಗರನ್ನು ಹೊರಗೆ ತರಲು ಇಷ್ಟೊಂದು ಅಧಿಕಾರಿಗಳು, ನೌಕಾಪಡೆ,

ಯಂತ್ರಗಳು, ತಂತ್ರಜ್ಞರು ಬೇಕಾಗಿದೆಯೇ ಎಂದು ಕೇಳಿದರು. ನೀರು ತುಂಬಕೊಂಡ 3.2 ಕೀಲೋಮೀಟರುಗಳ ದೂರದಲ್ಲಿ 1000 ಮೀಟರುಗಳ ಎತ್ತರದ ಬೆಟ್ಟದ ಕೆಳಗೆ ಪ್ರವಾಹದ ಮಧ್ಯೆ ಸಿಕ್ಕಿಕೊಂಡಿರುವ ಹುಡುಗರನ್ನು ಹೊರಗೆ ತರುವುದು ಅಷ್ಟು ಸುಲುಭದ ಕೆಲಸವಾಗಿರಲಿಲ್ಲ. ಆದರೂ ಒಟ್ಟು 10,000 ಜನರು ಈ ಸಂಕೀರ್ಣ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು ಎನ್ನುವುದು ತೀರಾ ಹೆಚ್ಚು ಎನ್ನುವ ಪ್ರಶ್ನೆಗಳು ಕೇಳುತ್ತಲೇ ಬರುತ್ತಿದ್ದವು.

ಹುಡುಗರನ್ನು ಕತ್ತಲ ಗುಹೆಯೊಳಗೆ ಗುರುತಿಸಿದ ಬಳಿಕ ಥೈಲ್ಯಾಂಡ್ ನೌಕಾದಳದ ಮುಖ್ಯಸ್ಥರು, ಥಮ್ ಲುವಾಂಗ್ ಗುಹೆಯಿಂದ ಹುಡುಗರು ಮತ್ತು ಅವರ ತರಬೇತುದಾರನನ್ನು ಹೊರಗೆ ತರವು ಭರವಸೆ ನಿಜವಾಗಲಿದೆ ಎಂದು ಮೊದಲು ಬಿ.ಬಿ.ಸಿ.ಗೆ ಮಾಹಿತಿ ನೀಡಿದರು. ಹುಡುಗರು ಇನ್ನೂ ಜೀವಂತವಾಗಿರಬಹುದು ಎಂಬುದಾಗಿ ನಾವು ಸ್ವಲ್ಪ ಭರವಸೆ ಹೊಂದಿದ್ದೆವು. ಆದರೆ ಅದು ಈಗ ನಿಜವಾಗಿದ್ದು, ನಾವೀಗ ಅವರನ್ನು ಪಾರು ಮಾಡಿ ತೋರಿಸಬೇಕಾಗಿದೆ ಎಂದು ಹಿರಿಯ ಆಡಳಿತ Arpakorn Yuukong-kaew ಹೇಳಿದರು.

ವೈಲ್ಡ್ ಬೋರ್ಸ್ ತಂಡದ ಹುಡುಗರು ಎರಡು ವಾರಗಳ ನಂತರ ಗುಹೆಯಿಂದ ಹೊರಗೆ ಬಂದಿದ್ದೆ ಮೊದಲ ಬಾರಿಗೆ ಅಧಿಕಾರಿಗಳು ಮಾಧ್ಯಮಗಳ ಜೊತೆಗೆ ಲವಲವಿಕೆ ಮತ್ತು ಸಮಾಧಾನದಿಂದ ಮಾತನಾಡಿದರು. ಎಲ್ಲರೂ ತಾಜಾ ಆಗಿ ಕಾಣುತ್ತಿದ್ದರು. ಒಂದೇ ರೀತಿಯ ಟಿ-ಶರ್ಟ್‌ಗಳನ್ನು ಧರಿಸಿ, ತಮ್ಮನ್ನು ಉಳಿಸಿದ ತಜ್ಞರು ಮತ್ತು ಅವರುಗಳು ಗುಹೆಯ ಒಳಗೆ ಕಳೆದ ಸಮಯವನ್ನು ನೆನೆಪಿಸಿಕೊಂಡರು. ಅವರನ್ನು ಪಾರು ಮಾಡಿದ ವಿಧಾನವನ್ನು ಇಡೀ ವಿಶ್ವವೇ ಉಸಿರು ಬಿಗಿ ಹಿಡಿದುಕೊಂಡು ಎದುರು ನೋಡುತ್ತಿತ್ತು. ಹುಡುಗರನ್ನು ಗುಹೆಯಿಂದ ಹೊರಗೆ ತಂದಿದ್ದೆ ಗುಹೆಯ ಹೊರಗಿದ್ದ ಜನರ ಹರ್ಷೋದ್ಗಾರಗಳು ಮುಗಿಲು ಮುಟ್ಟಿತ್ತು. ಚಿಯಾಗ್ ರೈ ಆಸ್ಪತ್ರೆ ಮುಂದೆ ನೆರೆದಿದ್ದ ಜನರು ತಮ್ಮ ವಾಹನಗಳ ಹಾರ್ನ್ ಭಾರಿಸಿ ಸಂತೋಷ ವ್ಯಕ್ತಪಡಿಸಿದರು. ದೇಶ ವಿದೇಶಗಳ ಅನೇಕ ಫುಟ್ಬಾಲ್ ಕ್ಲಬ್ಬುಗಳ ಸದಸ್ಯರು ಹುಡುಗರಿಗೆ ಶುಭಾಷಯಗಳನ್ನು ಕೋರಲು ಬಂದಿದ್ದರು.

ಈ 12 ಜನ ಹುಡುಗರು ಮತ್ತು ಫುಟ್ಬಾಲ್ ತಂಡದ ತರಬೇತುದಾರ

ಆಹಾರ ದೊರಕದೆ ಒಂಬತ್ತು ದಿನಗಳ ಕಾಲ ಗುಹೆಯ ಗೋಡೆಗಳಿಂದ ಹೊಸರುತ್ತಿದ್ದ ನೀರನ್ನು ಕುಡಿದುಕೊಂಡು ಬದುಕಿರುವುದಾಗಿ ಅಧಿಕಾರಿಗಳು ತಿಳಿಸಿದರು. ಒಂಬತ್ತು ದಿನಗಳಾದ ಮೇಲೆ 13 ಜನರ ಜೊತೆಗೆ ವೈದ್ಯರು, ಸ್ವಯಂಸೇವಕರು ಮತ್ತು ಅಧಿಕಾರಿಗಳು ಕೆಲವರು ಉಳಿದುಕೊಂಡು ಅವರ ಕ್ಷೇಮವನ್ನು ನೋಡಿಕೊಂಡಿದ್ದರು. ನಿಜವಾಗಿ ಇವರನ್ನು ರಕ್ಷಿಸಿ ಹೊರಗೆ ತಂದವರೇ ಹೀರೋಗಳು ಎಂದು ಪ್ರಶಂಸಿಸಲಾಯಿತು. ವಿಶ್ವದ ಫುಟ್ಬಾಲ್ ತಂಡಗಳೆಲ್ಲ ಇವರು ಸುರಕ್ಷಿತವಾಗಿ ಹೊರಗೆ ಬರಲಿ ಎಂದು ಶುಭ ಕೋರಿದ್ದರು.

ಬ್ರಿಟಿಷ್ ಈಜುಗಾರರು ಹುಡುಗರನ್ನು ಮೊದಲಿಗೆ ಕಂಡುಹಿಡಿದಾಗ ಅವರೆಲ್ಲ ಕತ್ತಲಲ್ಲಿ ಒಂದು ಕಡೆ ದೊಡ್ಡ ಕಲ್ಲಿನ ಮೇಲೆ ನೀರಿನ ಮಧ್ಯ ಹೆದರಿಕೊಂಡಿದ್ದ ಗುಬ್ಬಚ್ಚಿಗಳಂತೆ ಕುಳಿತುಕೊಂಡಿದ್ದರು. ಹದಿಮೂರು ಜನರ ಗುಂಪನ್ನು ಅಲ್ಲಿಂದ ಪಾರು ಮಾಡುವುದಾದರೂ ಹೇಗೆ ಎಂಬ ಪ್ರಶ್ನೆ ಮೊದಲಿಗೆ ಎಲ್ಲರನ್ನೂ ಕಾಡತೊಡಗಿತು. ಕಾರಣ ಹಲವು ಹುಡುಗರಿಗೆ ಈಜಲು ಬರುತ್ತಿರಲಿಲ್ಲ. ಜೊತೆಗೆ ಆಹಾರವಿಲ್ಲದೆ ಬಲಹೀನಗೊಂಡಿದ್ದರು. ಇಂತಹ ಸಮಯದಲ್ಲಿ ನೀರಿನಲ್ಲಿ ಸಣ್ಣದಾದ ಉಸಿರಾಡಲಾಗದ ಕಿಂಡಿಗಳ ಮೂಲಕ ಅವರನ್ನೆಲ್ಲ ತರುವುದಾದರೂ ಹೇಗೆ ಎಂಬ ಪ್ರಶ್ನೆಗಳು ಕಾಣಿಸಿಕೊಂಡವು. ಅದಕ್ಕಾಗಿಯೆ ಕೆಲವು ದಿನಗಳ ಕಾಲ ಹುಡುಗರ ಜೊತೆಗೆ ಕಾಲ ಕಳೆದು ಅವರಿಗೆ ಸರಿಯಾದ ಆಹಾರ ನೀಡಿ, ಈಜುವುದು ಹೇಗೆ ಎಂದು ತೋರಿಸಿ ಸಾಧ್ಯವಾದಷ್ಟು ತಯಾರಿಗಳನ್ನು ಮಾಡಿಕೊಂಡ ಮೇಲೆಯೆ ಎಲ್ಲರನ್ನು ಹಂತಹಂತವಾಗಿ ಪಾರು ಮಾಡಲಾಯಿತು.

ಗುಹೆಯ ಬಾಗಿಲಿಂದ ಒಳಗೆ 3.2 ಕಿಲೋಮೀಟರುಗಳ ದೂರದಲ್ಲಿ ಹುಡುಗರು ಸಿಕ್ಕಿಕೊಂಡಿದ್ದ ಕಾರಣ ಈಜುಗಾರರು ಅಷ್ಟು ದೂರ ಈಜುತ್ತಾ ಹೋಗಿ ಹಿಂದಕ್ಕೆ ಬರುವುದೇ ದೊಡ್ಡ ಕಷ್ಟದ ಕೆಲಸವಾಗಿತ್ತು. ಎಂತಹ ಈಜುಗಾರರು ಸುಸ್ತಾಗಿ ಹೋಗುತ್ತಿದ್ದರು. ಅದೂ ಕೂಡ ಹಂತಹಂತವಾಗಿ ಹೋಗಬೇಕಾಗಿತ್ತು. ಅಷ್ಟು ದೂರದ ದಾರಿಯಲ್ಲಿ ಸುರಂಗಗಳಲ್ಲಿ ಹತ್ತಿ ಇಳಿದು, ನಡೆದುಹೋಗಿ, ಕೆಸರಿನ ನೀರಿನಲ್ಲಿ ಈಜುಕೊಂಡು, ಡೈವಿಂಗ್ ಮಾಡಿ ಕೆಲವು ಕಡೆ ಕೇವಲ ಒಬ್ಬ ಮನುಷ್ಯನು ಮಾತ್ರ ತೂರಿ ಹೋಗುವಂತುವ ಕಿಂಡಿಗಳಲ್ಲಿ ದೇಹವನ್ನು ಸಣ್ಣದು ಮಾಡಿಕೊಂಡು ಹೋಗಬೇಕಾಗಿತ್ತು. ಇದರ ಜೊತೆಗೆ

ಕೆಲವು ಸಲಕರಣೆಗಳನ್ನು ಜೊತೆಗೆ ತೆಗೆದುಕೊಂಡು ಹೋಗಬೇಕಾಗಿತ್ತು. ಅದರಲ್ಲಿ ಅತಿ ಮುಖ್ಯವಾದದ್ದು ಆಮ್ಲಜನಕದ ಸಿಲಿಂಡರ್ ಒಂದು.

ವೈದ್ಯರು ಹುಡುಗರ ಜೊತೆಗೆ ಇರಲು ಪ್ರಾರಂಭಿಸಿದ ಮೇಲೆ ಅವರಿಗೆ ಖನಿಜಯುಕ್ತ ಜೀವಸತ್ವಗಳು ಮತ್ತು ಸುಲಭವಾಗಿ ಜೀರ್ಣವಾಗುವ ಹೆಚ್ಚಿನ ಶಕ್ತಿಯ ಆಹಾರವನ್ನು ನೀಡಲಾಯಿತು ಎಂದು ಹಿರಿಯ ಆಡಳಿತ ಅಧಿಕಾರಿ Adm Arpakorn Yuukongkaew ಹೇಳಿದರು. ತರಬೇತುದಾರನ ಧ್ಯಾನ ಮತ್ತು ಒಳ್ಳೆಯ ಮಾತುಗಳಿಂದ ಹುಡುಗರು ಗುಹೆಯ ಒಳಗಡೆ ಒತ್ತಡವನ್ನು ನಿಭಾಯಿಸಲು ಮಾನಸಿಕವಾಗಿ ದೃಢವಾಗಿ ಮನಸ್ಸು ಮಾಡಿಕೊಂಡಿದ್ದರು. ವೈಲ್ಡ್ ಬೋರ್ಸ್ ತಂಡದ ಸಹಾಯಕ ಫುಟ್ಬಾಲ್ ತರಬೇತುದಾರ ಏಕಾಫೋಲ್ 'ಅಕೆ' ಅವರು ಮೊದಲ ಬಾರಿಗೆ ಏಕೆ ಗುಹೆ ಒಳಗೆ ಹೋದರು ಎಂದು ವಿವರಿಸಿದರು. ಅವರು ಜೂನ್ 23ರಿಂದು ಗುಹೆಯ ಒಳಗೆ ನಡೆದ ಎಲ್ಲಾ ವಿವರಗಳನ್ನು ಸರಳವಾಗಿ ವಿವರಿಸಿದರು. ನಾವು ಪ್ರತಿಯೊಬ್ಬರು ಗುಹೆ ಒಳಗಡೆ ಏನಿದೆ ಎಂಬುದನ್ನು ನೋಡಬೇಕೆಂದು ಬಯಸಿದ್ದೆವು. ಆದರೆ ಒಮ್ಮೆಲೆ ಮಳೆ ಬೀಳಲು ಪ್ರಾರಂಭವಾಗಿ ಅತಿ ವೇಗದಲ್ಲಿ ಗುಹೆಯ ಬಾಗಿಲಿನಿಂದ ನೀರಿನ ಪ್ರವಾಹ ನಮ್ಮನ್ನ ಹಿಂದಕ್ಕೆ ತಳ್ಳುತ್ತಾ ತಳ್ಳುತ್ತಾ ನಾಲ್ಕು ಕಿಲೋಮೀಟರುಗಳ ದೂರ ಎಳೆದುಕೊಂಡು ಹೋಯಿತು ಎಂಬುದು ಆಶ್ಚರ್ಯವಾಗಿದೆ!' ಎಂದರು.

ನಾವು ಗುಹೆ ಒಳಗಿದ್ದಾಗ ಮೊದಲ ತಲುಪಿದ ಬ್ರಿಟನ್ ಈಜುಗಾರರ ಜೊತೆಗೆ 14 ವರ್ಷದ ಅದುಲ್ ಸ್ಯಾಮ್ ಇಂಗ್ಲಿಷ್ನಲ್ಲಿ ಮಾತನಾಡತೊಡಗಿ ನನಗೆ ಇದು ನಿಜವಾಗಿಯೂ ಒಂದು ಪವಾಡ ಎನಿಸಿತು. ನನಗೆ ಇಂಗ್ಲಿಷ್ನನಲ್ಲಿ ಪ್ರತಿಕ್ರಿಯೆ ಮಾಡುವುದು ಗೊತ್ತಿರಲಿಲ್ಲ. ನಮ್ಮನ್ನ ಪರೀಕ್ಷಿದ ವೈದ್ಯರು ಎಲ್ಲರೂ ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯದಿಂದ ಇರುವುದಾಗಿ ತಿಳಿಸಿದರು. ಹುಡುಗರ ತಂಡವನ್ನು ಪಾರು ಮಾಡುವ ಸಮಯದಲ್ಲಿ ಪ್ರಾಣ ಕಳೆದುಕೊಂಡ ಸೀಲ್ನ ಮಾಜಿ ಅಧಿಕಾರಿ ಸಮನ್ ಗುನನ್ ಮಾತು ಬಂದು, ಮಾಧ್ಯಮದ ಮುಂದೆ ಎಲ್ಲರೂ ಭಾವುಕರಾದರು.

ರಕ್ಷಣಾ ಹೊಣೆಯನ್ನು ಹೊತ್ತುಕೊಂಡಿದ್ದ ಮುಖ್ಯ ಅಧಿಕಾರಿ ನರೋಂಗ್ಸಾಕ್ ಒಸೊಟನಕಾರ್ನ್, ಹುಡುಗರು ಗುಹೆಯ ಒಳಗೆ ಹೋಗಿ ಕಳೆದುಹೋದರು

ಎಂಬುದಾಗಿ ಯಾರೂ ಅವರನ್ನ ದೂಷಿಸಿಲ್ಲ. ಹುಡುಗರು ಮಾಡಿದ್ದು ತಪ್ಪು ಅಥವಾ ಹೀರೋಗಳೆಂದು ನಾವು ಅವರನ್ನು ನೋಡುತ್ತಿಲ್ಲ. ಇದೊಂದು ಅಪಘಾತವಾಗಿ ನಡೆದುಹೋಯಿತು. ಹೇಗಾದರು ಆಗಲಿ ಅವರು ಮಕ್ಕಳಲ್ಲವೇ ಎಂಬುದಾಗಿ ಮುಖ್ಯಸ್ಥರು ಮಾಧ್ಯಮದ ಮುಂದೆ ಹೇಳಿದರು.

ಆಸ್ಪತ್ರೆಯಲ್ಲಿರುವ ಹುಡುಗರ ವೀಡಿಯೋ ಅನ್ನು ಸುದ್ದಿಗೋಷ್ಠಿಯಲ್ಲಿ ತೋರಿಸಲಾಯಿತು. ಅವರಲ್ಲಿ ಕೆಲವರು ಶಸ್ತ್ರಚಿಕಿತ್ಸೆಯ ಮುಖವಾಡಗಳನ್ನು ಧರಿಸಿ ತಮ್ಮ ಹಾಸಿ[illegible] ಮೇಲೆ ಮಲಗಿದ್ದರು. ಕೆಲವರು ಕ್ಯಾಮೆರಾ ಎದುರಿಗೆ ಶಾಂತಿ ಸೂಚನೆಯ ಚಿಹ್ನೆ ತೋರಿಸಿದರು. ಮೊದಲ ಸುದ್ದಿ ಸಮ್ಮೇಳನದಲ್ಲಿ ತೋರಿಸಿದ ಕ್ಲಿಪ್ಪುಗಳಲ್ಲಿ ಹುಡುಗರು ಮಾತನಾಡಿದ ಯಾವುದೇ ವೀಡಿಯೋಗಳನ್ನು ತೋರಿಸಲಿಲ್ಲ.

ಹನ್ನೆರಡು ಹುಡುಗರು ಮತ್ತು ತರಬೇತುದಾರ ಸರಾಸರಿ ಎರಡು ಕೇಜಿಗಳ ತೂಕವನ್ನು ಕಳೆದುಕೊಂಡಿರುವುದಾಗಿ ತಿಳಿದುಬಂದಿತು. ಇದು ಅವರನ್ನ ಗುಹೆಯ ಒಳಗೆ ಕಂಡಿಡಿದು ಆಹಾರ ನೀರು ಔಷಧಿಗಳನ್ನು ಕೊಟ್ಟ ಮೇಲಿನ ತೂಕ. ಆದರೆ 9 ದಿನಗಳ ಕಾಲ ಆಹಾರ ಇಲ್ಲದ ಸಮಯದಲ್ಲಿ ಅವರುಗಳ ತೂಕ ಎಷ್ಟಿಷ್ಟಿತ್ತು ಎನ್ನುವುದು ಎಲ್ಲಿಯೂ ದಾಖಲಾಗಿಲ್ಲ. ಆದರೆ ಅವರೆಲ್ಲರ ತೂಕ ತೀರಾ ಕಡಿಮೆಯಾಗಿತ್ತು ಎನ್ನಲಾಗಿದೆ. ಗುಹೆಯಿಂದ ಹೊರಗೆ ಬಂದ ಎಲ್ಲರನ್ನು ಗುಹೆಯ ಬಾಗಿಲಿಂದಲೇ ನೀರವಾಗಿ ಹೆಲಿಕಾಪ್ಟರುಗಳಲ್ಲಿ 70 ಕಿಲೋಮೀಟರುಗಳ ದೂರದ ಚಿಯಾಂಗ್ ರೈ ಪಟ್ಟಣದ ಆಸ್ಪತ್ರೆಗೆ ನೇರವಾಗಿ ತರಲಾಯಿತು. ಹುಡುಗರು ಕನಿಷ್ಟ 10 ದಿನಗದಳಾರೂ ಆಸ್ಪತ್ರೆಯಲ್ಲಿ ಇರಬೇಕಾಗುತ್ತದೆ ಎಂದು ನಿರ್ದೇಶಕರಾದ ಚೈವೆಟ್ ಥಾನಪೈಸಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮತ್ತೆ 30 ದಿನಗಳು ಕಾಲ ಮನೆಯಲ್ಲಿ ಉಳಿದುಕೊಂಡು ಚೇತರಿಕೊಳ್ಳಬೇಕು ಎಂದು ಹೇಳಿದರು.

ಹುಡುಗರನ್ನು ಪಾಲಕರು ಭೇಟಿಯಾಗಲು ತೊಂದರೆ ಇಲ್ಲ. ಆದರೆ ಹುಡುಗರು ರಕ್ಷಣಾತ್ಮಕ ಸೂಟುಗಳನ್ನು ಧರಿಸಿ ಏಳು ಅಡಿಗಳ ದೂರ ನಿಂತುಕೊಂಡು ಅವರ ಪಾಲಕರ ಜೊತೆಗೆ ಮಾತನಾಡಲು ಅವಕಾಶ ಮಾಡಿಕೊಡಲಾಯಿತು. ಅಧಿಕಾರಿಗಳು ಗುಹೆಗಳಲ್ಲಿ ಸೋಂಕು ತಗುಲಿದ್ದರೆ

ಅದು ಪಾಲಕರಿಗೆ ಸೋಂಕಿ ಅನಂತರ ಬೇರೆಯವರಿಗೂ ಹರಡಬಹುದು ಎಂಬ ಅನುಮಾನಗಳು ಇದ್ದ ಕಾರಣ ಈ ರೀತಿಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಲಾಯಿತು. ಆರೋಗ್ಯ ಇಲಾಖೆಯ ಇನ್ಸ್ಪೆಕ್ಟರ್ ಥಾಂಚೈ ಲಟ್ವೈರಾಯಟನಾಪೋಂಗ್ ಅವರು ಕೊನೆಯ ದಿನ ಪಾರು ಮಾಡಿದ ಗುಂಪಿನ ಹುಡುಗನೊಬ್ಬ ಶ್ವಾಸಕೋಶದ ಸೋಂಕಿಗೆ ಒಳಗಾದ ಕಾರಣ ರೇಬಿಸ್ ಮತ್ತು ಟಿಟ್ನೆಸ್ ಚುಚ್ಚುಮದ್ದು ನೀಡಿರುವುದಾಗಿ ತಿಳಿಸಿದರು.

□

ಗುಹೆಯಲ್ಲೇ ತಯಾರು ಮಾಡಿದ ಕೋಕೂನ್ ಚೆಂಬರ್

ಅಧ್ಯಾಯ-13

ಗುಹೆಯ ಒಳಗೆ ಹುಡುಗರನ್ನು ನೋಡಿದ ಮೇಲೂ ಕಾರ್ಯಾಚರಣೆ ಕೆಲವು ದಿನಗಳು ಕಾಲ ಮುಂದೂಡುತ್ತಲೇ ಹೋಗುತ್ತಿತ್ತು. ಮಳೆ – ಪ್ರವಾಹದ ನೀರು, ಗಾಳಿ – ಆಮ್ಲಜನಕದ ಕೊರತೆ, ಕೆಸರು ನೀರಿನ ಜೊತೆಗೆ ಹುಡುಗರ ದೈಹಿಕ ಮತ್ತು ಮಾನಸಿಕ ಪರಿಸ್ಥಿತಿ ಗಂಭೀರವಾಗಿತ್ತು. ಅವರನ್ನು ಪಾರು ಮಾಡುವುದಕ್ಕೆ ಮುಂಚೆ ಅವರ ಮುಖಗಳು ಸಂಪೂರ್ಣವಾಗಿ ಮುಚ್ಚಿಕೊಳ್ಳುವುದರೊಂದಿಗೆ ಆಮ್ಲಜನಕ ಸರಬರಾಜಾಗುವ ಕವಚಗಳು ಬೇಕಾಗಿದ್ದವು. ಯು.ಎಸ್.ನಿಂದ ತಂದಿದ್ದ ಮುಖವಾಡಗಳು ವಯಸ್ಕರು ಮಾತ್ರ ಉಪಯೋಗಿಸುವಂತವಾಗಿದ್ದವು. ಅವುಗಳನ್ನು ಗುಹೆಯ ಹೊರಗಡೆ ಸ್ವಯಂಸೇವಕರಾಗಿ ಬಂದ ಹುಡುಗರಿಗೆ ಧರಿಸಿ ಸ್ಥಳೀಯ ಈಜು ಕೊಳಗಳಲ್ಲಿ ಪರೀಕ್ಷೆ ಮಾಡಲಾಯಿತು. ಐದು ಕವಚಗಳನ್ನು ಮುಖಕ್ಕೆ ಹಾಕಿದಾಗ ಎಷ್ಟು ಗಟ್ಟಿಯಾಗಿರುತ್ತವೊ ಅಷ್ಟು ಗಟ್ಟಿಯಾಗಿ ಬಿಗಿಯಾಗಿ ಕೆಲಸ ಮಾಡುವಂತಿದ್ದವು.

ಈ ಯೋಜನೆಯಲ್ಲಿ 30 ಜನರ ಬಲವಾದ ಈಜುಗಾರರ ತಂಡವು ಪ್ರತಿ ಹುಡುಗನನ್ನು ಒಂದು ಫ್ಲೆಕ್ಸಿಬಲ್ ಪ್ಲ್ಯಾಸ್ಟಿಕ್ ಕೊಕೂನ್ನಲ್ಲಿ ಕೂರಿಸಿ ಹೊರಕ್ಕೆ ತರಬೇಕೆಂದು ಶಿಫಾರಸು ಮಾಡಲಾಯಿತು. ಇದನ್ನು 'ಸ್ಕೆಡ್' ಎಂದು ಕರೆಯಾಯಿತು. ಇದನ್ನು ಪಾರು ಮಾಡುವ ಸ್ಟ್ರೆಚರಾಗಿ ಮಾರ್ಪಡಿಸಲಾಯಿತು. ಇದು ಯು.ಎಸ್. ಏರ್ ಫೋರ್ಸ್ ತಂಡದ ಪ್ರಾಮಾಣಿತ ಗಿಯರ್ ಭಾಗವಾಯಿತು. ಇದನ್ನು ಕಾರ್ಯಾಚರಣೆಯಲ್ಲಿ ಪಾರುಮಾಡುವ ಒಂದು ಮುಖ್ಯ ಸ್ಟ್ರೆಚರ್ ರೀತಿಯಾಗಿ ಉಪಯೋಗಿಸಿಕೊಳ್ಳಲಾಯಿತು.



ಈಜುಗಾರರು ಮತ್ತು ರಕ್ಷಣಾ ದಳದವರು ಹುಡುಗರನ್ನು ಸ್ಟ್ರೆಚರ್‌ಗಳಲ್ಲಿ ಗುಹೆಯಿಂದ ಹೊರಕ್ಕೆ ತರುತ್ತಿರುವುದು.



ಬ್ರಿಟಿಷ್ ಗುಹೆ ಗೈಡ್‌ಗಳು ಕೊಕೂನ್‌ಗಳಲ್ಲಿ ಹುಡುಗರನ್ನು ಮಲಗಿಸಿ ನೀರಿನೊಳಗೆ ಸಾಗಿಸುವ ಉಸ್ತುವಾರಿಯನ್ನು ಮಾಡಿದರು. ಹುಡುಗರ ಬಾಯಿಗೆ ಸಿಕ್ಕಿಸಿದ್ದ ಗಾಳಿಯ ಪೈಪ್‌ಗಳಿಂದ ಗಾಳಿ ಗುಳ್ಳೆಗಳು ಹೊರಕ್ಕೆ ಬರುವುದರಿಂದ ಅವರು ಉಸಿರಾಡುತ್ತಿದ್ದಾರೆ ಎಂಬುದನ್ನು ದಾರಿಯ ಉದ್ದಕ್ಕೂ ಗಮನಿಸುತ್ತಿದ್ದರು. ಹುಡುಗರನ್ನು ನೀರಿನ ಒಳಗೆ ಸಾಗಿಸುವಾಗ ಅವರು ಸುಮ್ಮನೆ ಆರಾಮಾಗಿ ಮಲಗಿರಬೇಕು ಎಂಬುದಾಗಿ ಹುಡುಗರನ್ನು ಹೊರಕ್ಕೆ ತರುವುದಕ್ಕಿಂತ ಮುಂಚೆ ಯು.ಎಸ್.ನ ಮುಖ್ಯಸ್ಥ ಹಡ್ಜಸ್ ಹೇಳಿದರು. ನೀರಿನ ಒಳಗಿನ ಸಾಗಾಟವನ್ನು ಎರಡು ಗಂಟೆಗಳ ಕಾಲ ಸಾಗಿಸಿದರೆ ಸಾಕು, ಅನಂತರದ ಕೆಲಸ ಸುಲಭ. ಅದರೂ ಗುರಿ ಮುಟ್ಟುವುದು ಇನ್ನೂ ಸವಾಲಿನ ಕೆಲಸವೇ ಆಗಿತ್ತು. ಥೈಲ್ಯಾಂಡಿನ ಸೀಲ್ ನೌಕಾದಳದ ಪಡೆ ವೈಲ್ಡ್ ಬೋರ್ಸ್‌ಗಳನ್ನು ಗುಹೆಯ ಒಳಗೆ ಕಡಿದಾದ ಇಳಿಜಾರು ಮತ್ತು ಎತ್ತರದ ಪ್ರದೇಶಗಳಲ್ಲಿ ತೇವ

ಮತ್ತು ಜಾರುವ ಪ್ರದೇಶಗಳಲ್ಲಿ ಅತ್ಯಂತ ಜಾಗರೂಕರಾಗಿ ಹೊರಕ್ಕೆ ತರುವ ಕೆಲಸಗಳಲ್ಲಿ ತೊಡಗಿಕೊಂಡಿತು.

ಒಂದು ಹಂತದಲ್ಲಿ ತಂಡದ ಸದಸ್ಯರು ಹೊಂದಿದ್ದ ಪ್ಲ್ಯಾಸ್ಟಿಕ್ ಕಟ್ಟುಗಳು ನೀರಿನ ಪಂಪ್ಗಳಿಗಾಗಿ ನೀರ್ನಾಳಗಳ (ಹೋಸಸ್) ಮೇಲೆ ಇರಿಸಲ್ಪಟ್ಟಿದ್ದವು. ಇವು ಅನಿರೀಕ್ಷಿತವಾಗಿ ಸ್ಲೈಡ್ ಆಗಿ ಕಾರ್ಯ ನಿರ್ವಹಿಸಿದವು. ಗುಹೆಯ ದಾರಿಯಲ್ಲಿ ಹಗ್ಗದ ದಾರಿಗಳಲ್ಲಿ ಫುಟ್ಬಾಲ್ ತಂಡದ ಹುಡುಗರನ್ನು ಸ್ಟ್ರೆಚರ್‌ಗಳಲ್ಲಿ ಮೇಲಕ್ಕೆ ಎತ್ತಿದ ಕಾರಣ, ಅವರು ವಿಶೇಷವಾಗಿ ಗುಹೆಯ ಹಾನಿಗೊಳಗಾಗದ ಭಾಗಗಳಲ್ಲಿ ಸ್ವಿಂಗ್ ಆಗಿ ಬಂಡೆಗಳಿದ್ದ ಭಾಗಗಳಲ್ಲಿ ಬೇಗನೆ ಬರುವಂತೆ ಆಯಿತು. ಕೆಲವು ಕಡೆ ಈಜುಗಾರರು ಮತ್ತು ಹುಡುಗರಿರುವ ಕೊಕೋನ್ಗಳನ್ನು ಒಟ್ಟಿಗೆ ತೆಗೆದುಕೊಂಡು ಹೋಗಲಾರದ ಸಣ್ಣಸಣ್ಣ ಕಿಂಡಿಗಳಲ್ಲಿ ತೇಲಾಡುವ ಸ್ಟ್ರೆಚರ್ಗಳಲ್ಲಿ ಇಟ್ಟು ಕಪ್ಪೆಗಳ ರೀತಿಯಲ್ಲಿ ಥಾಯ್ ನೌಕಾದಳದ ಸದಸ್ಯರು ಅವುಗಳನ್ನು ಮುಂದಕ್ಕೆ ತಳ್ಳಿ ಹಿಂದೆ ಹೋಗುತ್ತಿದ್ದರು. ಒಬ್ಬರಿಬ್ಬರು ಮುಂದೆ ಇರುತ್ತಿದ್ದರು.

ಥಾಯ್ ನೌಕಾದಳದ ಕೀವ್ ಅವರು ಸಣ್ಣದಾಗಿ ಪ್ರವಾಹ ಹರಿಯುತ್ತಿದ್ದ ಗುಹೆಯಲ್ಲಿ ತಣ್ಣನೆ ನೀರಿನಲ್ಲಿ ನಿಂತುಕೊಂಡು ಸಿ-ಫುಡ್ ಮತ್ತು ಪೈನಾಪಲ್ ಪಿಜ್ಜಾದ ಕೊನೆಯ ಪೀಸನ್ನು ಬಾಯಿಗೆ ಇಟ್ಟುಕೊಂಡಿದ್ದೆ ತಡ, ಅವರ ಹಿಂದಿನಿಂದ ಹೆಚ್ಚು ಪ್ರವಾಹ ಬರುವ ಎಚ್ಚರಿಕೆ ಬಂದಿತು: 'ಪ್ರವಾಹ ಬರುತ್ತಿದೆ ಅಲ್ಲಿಂದ ದೂರ ಹೋಗಿ' ಎನ್ನುವ ಕೂಗು ಕೇಳಿ ಸುರಕ್ಷಿತ ಸ್ಥಳಕ್ಕೆ ಓಡಿಹೋದರು. ಕಳೆದು ಮೂರು ದಿನಗಳಿಂದ ಅವರ ಜೊತೆಗೆ ಕೆಲಸ ಮಾಡುತ್ತಿದ್ದ 12 ಹುಡುಗರನ್ನು ಮತ್ತು ಅವರ ತರಬೇತುದಾರನನ್ನು ಅಪಾಯ ಬಂದಾಗೆಲ್ಲ ಸುರಕ್ಷಿತವಾದ ಸ್ಥಳಗಳಿಗೆ ಹೋಗವಂತೆ ಎಚ್ಚರಿಕೆ ನೀಡುತ್ತಾ ಹಿಂಬಾಲಿಸುತ್ತಿದ್ದರು.

ಎಲ್ಲವೂ ಮುಗಿದಿದೆ ಎಂದು ಕಂಡುಬಂದಾಗ ಕೊನೆಯಲ್ಲಿ ಗುಹೆಯಲ್ಲಿ ನೀರು ತೆಗೆಯುತ್ತಿದ್ದ ಪಂಪ್ ವಿಫಲವಾಗಿ ನೀರು ಪಂಪ್ ಆಗದೆ ಕೆಲಸ ನಿಂತುಹೋಗಿ ಸೊಂಟ ಮಟ್ಟಕ್ಕಿದ್ದ ನೀರು ಎದೆಯ ಮಟ್ಟಕ್ಕೆ ಏರತೊಡಗಿತು. ಇದರ ಜೊತೆಗೆ ಮತ್ತೆ ಮಳೆ ನೀರು ಸುರಿಯತೊಡಗಿ ಕೀವ್ ಇದ್ದ ಸ್ಥಳಕ್ಕೆ ನೀರು ನುಗ್ಗಿಬಂದಿತ್ತು. ಕೀವ್ ಆಗ ಗುಹೆಯ ಬಾಗಿಲಿಂದ ಅರ್ಧ ಮೈಲಿ ದೂರದಲ್ಲಿ ಒಳಗೆ ನಿಂತುಕೊಂಡಿದ್ದರು. ಇವರ ಹತ್ತಿರ ಸ್ಕೂಬಾ ಗೇರ್ ಇಲ್ಲದ ಕಾರಣ ಸ್ವಲ್ಪ ಎತ್ತರದ ಪ್ರದೇಶಕ್ಕೆ ಓಡಿಹೋಗಿ ನಿಂತುಕೊಂಡರು. ಅಂತಿಮವಾಗಿ ಜೋರಾಗಿ ನುಗ್ಗಿದ ಪ್ರವಾಹದಿಂದ ಕೊನೆ ಕ್ಷಣಗಳಲ್ಲಿ ಸಾವಿನಿಂದ ತಪ್ಪಿಸಿಕೊಂಡಿದ್ದರು.

ಕಾರ್ಯಾಚರಣೆಯಲ್ಲಿ ಥಾಯ್ ಪಟ್ಟಣ ಮೇ ಸಾಯಿಗೆ ಸೇರಿದವರೇ ಹೆಚ್ಚು ಡೈವರುಗಳಿದ್ದು ಪ್ರವಾಹದಿಂದ ಕೊನೆಯಲ್ಲಿ ತಪ್ಪಿಸಿಕೊಂಡಿದ್ದು ದೈವಿಕ ರಕ್ಷಣೆಯಾಗಿತ್ತು ಎಂಬುದಾಗಿ ಮಾತನಾಡಿಕೊಂಡರು. ಇಡೀ ಕಾರ್ಯಾಚರಣೆ-ಯ ಉದ್ದಕ್ಕೂ ಕೀವ್ ಜಲನಿರೋಧಕ ಟೇಪ್ನಲ್ಲಿ ತನ್ನ ಕುತ್ತಿಗೆಗೆ ಬುದ್ಧನ ತಾಯಿತೆಯನ್ನು ನೇತಾಕಿಕೊಂಡಿದ್ದು, 'ಕೊನೆಗೆ ಥಮ್ ಲುವಾಂಗ್ ಗುಹೆ ಪವಿತ್ರವಾಗಿದ್ದು. ಕೊನೆಯವರೆಗೂ ನಮ್ಮನ್ನ ಭದ್ರವಾಗಿ ಕಾಪಾಡಿದೆ' ಎಂದು ಹೇಳಿದರು.

ಇಡೀ ಫುಟ್ಬಾಲ್ ತಂಡದ ಪಾರು

ಮುರುಕಲು ಇಂಗ್ಲಿಷ್ನಲ್ಲಿ ತಂಡದ ಹುಡುಗರು ತಿನ್ನಲು ಏನಾದರು ಬೇಕು ಎನ್ನುವ ಬದಲು eat, eat, eat ಎಂದು ಹೇಳಿದಾಗ, ಅದುಲ್ ಈಗಾಗಲೇ ಹೇಳಿದ್ದೇನೆ ಎನ್ನುತ್ತಾನೆ. ಸೀಲ್ ಬಿಡುಗಡೆ ಮಾಡಿರುವ ವೀಡಿಯೋದಲ್ಲಿ ಅದುಲ್ ದೊಡ್ಡದಾಗಿ ನಕ್ಕಿರುವುದನ್ನು ಕಾಣಬಹುದು. ಮೇ ಸಾಯಿ ಪಟ್ಟಣದ ಚರ್ಚ್ ಒಂದರಲ್ಲಿ ವಾಸವಾಗಿರುವ ಅದುಲ್ ಜುಲೈ 10ರಂದು ಬಿಡುಗಡೆ-ಯಾದಾಗ ಚರ್ಚ್‌ನಲ್ಲಿ ಸೇರಿದ್ದ ಜನರು ಹರ್ಷೋದ್ಗಾರದಿಂದ ಸಂತೋಷವನ್ನು ವ್ಯಕ್ತಪಡಿಸಿದರು. ಅಸಾಧಾರಣ ಹುಡುಗರ ಪಾರು, ನಾಲ್ಕು ವರ್ಷಗಳ ಮಿಲಿಟರಿ ಆಡಳಿತ ಮತ್ತು ಬೆಳೆಯುತ್ತಿರುವ ಗ್ರಾಮೀಣ-ನಗರಗಳ ವಿಭಜನೆಯ ನಡುವೆ ಇಡೀ ರಾಷ್ಟ್ರದಲ್ಲಿ ಉತ್ಸಾಹ ತುಂಬಿಕೊಂಡಿತ್ತು.

ವೈಲ್ಡ್ ಬೋರ್ಸ್ ತಂಡ ಸಿಕ್ಕಿಕೊಂಡಿದ್ದ ಮೇ ಸಾಯಿ ಪ್ರದೇಶ ಥೈಲ್ಯಾಂಡಿನ ಉತ್ತರದ ತುದಿಯಾಗಿದ್ದು ಮ್ಯಾನ್ಮಾರ್, ಲಾವೋಸ್ ಮತ್ತು ಥೈಲ್ಯಾಂಡ್ ಮೂರು ದೇಶಗಳು ಸಂಧಿಸುವ (ಗೋಲ್ಡನ್ ಟ್ರಯಾಂಗಲ್) ಚಿನ್ನದ ತ್ರಿಕೋನವಾಗಿದೆ. ಈ ಪ್ರದೇಶದಲ್ಲಿ ವಾಸಿಸುವ ಜನರು ಆಗಾಗ ದಂಗೆಗಳಿಗೆ ಈಡಾಗುತ್ತಿರುತ್ತಾರೆ. ಇದರಿಂದ ಕೆಲವು ಬಾರಿ ಥಾಯ್ ದೇಶದ ಈ ಭಾಗದಲ್ಲಿ ಸರಕಾರಿ ಆಡಳಿತ ಮತ್ತು ಸರಕಾರಿ ಸಂಸ್ಥೆಗಳು ತೊಂದರೆಗೆ ಒಳಗಾಗುತ್ತವೆ. ಈ ಚಿನ್ನದ ತ್ರಿಕೋನ ಕಳ್ಳಸಾಗಣಿಕೆಯ ಕೇಂದ್ರವಾಗಿದ್ದು, ಮ್ಯಾನ್ಮಾರ್ ಸರ್ಕಾರದಿಂದ ಸ್ವಾಯತ್ತತೆಗಾಗಿ ದಶಕಗಳ ಕಾಲದಿಂದ ವಿವಿಧ ಜನಾಂಗೀಯ ಬಂಡುಕೋರರು ಈ ಅಭಯಾರಣ್ಯಗಳಲ್ಲಿ ಸೇರಿಕೊಂಡು ತೊಂದರೆ ಉಂಟು ಮಾಡುತ್ತಿರುತ್ತಾರೆ.

ಗುಹೆಯಲ್ಲಿ ಸಿಕ್ಕಿಬಿದ್ದಿದ್ದ ಮೂವರು ವೈಲ್ಡ್ ಬೋರ್ಸ್ ಆಟಗಾರರು

ಮತ್ತು ಕೋಚ್ ಏಕಾಫೋಲ್ ಚಂತವಾನ್ ಸ್ವಂತ ದೇಶ ಇಲ್ಲದ ಮೂಲ ಜನಾಂಗೀಯ ಅಲ್ಪಸಂಖ್ಯಾತರಾಗಿದ್ದು, ಸಮಯ ಸಿಕ್ಕಾಗೆಲ್ಲ ಮ್ಯಾನ್ಮಾರ್ ಗಡಿಯೊಳಕ್ಕೆ ಒಂದೆರಡು ದಿನ ತಪ್ಪಿಸಿಕೊಂಡೋಗಿ ಮತ್ತೆ ಹಿಂದಕ್ಕೆ ಬರುವ ಅಭ್ಯಾಸವನ್ನು ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಈ ಹುಡುಗರೆಲ್ಲರ ಉಪಸ್ಥಿತಿಯು ದೇಶದ ಎಲ್ಲಾ ಸಂಸ್ಥೆಗಳು ಈ ವಿಜಯೋತ್ಸವದ ಮೂಲಕ ಒಂದಾಗಿ ಸೇರ್ಪಡೆಗೊಂಡು ರಾಷ್ಟ್ರೀಯತೆಯ ಥಾಯ್ ಅರ್ಥವನ್ನು ಹೆಚ್ಚಿಸಿವೆ: ಮಿಲಿಟರಿ, ರಾಜಪ್ರಭುತ್ವ ಮತ್ತು ಬೌದ್ಧ ಮತಗಳು ಒಂದಾಗುವಂತೆ ಮಾಡಿವೆ.

○○○

ಮಿಲಿಟರಿ : ಥೈಲ್ಯಾಂಡ್ ಮಿಲಿಟರಿ ಸರ್ಕಾರ ಪದೇಪದೇ ಚುನಾವಣೆಯನ್ನು ಮುಂದೂಡುತ್ತಲೆ ಬರುತ್ತಿದ್ದು ಮಿಲಿಟರಿ ಆಡಳಿತವನ್ನು ಮುಂದುವರಿಸುತ್ತಲೇ ಬಂದಿದೆ. ಥೈಲ್ಯಾಂಡ್ ದೇಶದಲ್ಲಿ ಪ್ರಜಾಪ್ರಭುತ್ವ ಪುನಃಸ್ಥಾಪನೆಗಾಗಿ ಕರೆ ನೀಡುವ ವಿದ್ಯಾರ್ಥಿ ನಾಯಕ, ರಂಗ್ಸಿಮನ್ ರೋಮ್, ಹುಡುಗರನ್ನು ಪಾರು ಮಾಡಿದ ಮಿಲಿಟರಿ, ಕೆಲವು ಅಂಕಗಳನ್ನು ಗಳಿಸಿದೆ ಎಂದು ಹೇಳಿದ್ದಾನೆ. ಥೈಲ್ಯಾಂಡಿನ ರಾಜಪ್ರಭುತ್ವವೂ ಕೂಡ ಹುಡುಗರ ತಂಡವನ್ನು ಹೊರತರಲು ಬೆಂಬಲ ನೀಡಿತು. 2016ರಲ್ಲಿ ಸಿಂಹಾಸನ ಏರಿದ ರಾಜ ಮಹಾ ವಜ್ರಲೋಂಗ್ಕಾರ್ನ್ ಬೋಡಿಂದರೇಡೆ ಬಯರಾಂಗ್ಕುನ್ ಅವರು ತಮ್ಮ ಕಡಿಮೆ ಆಳ್ವಿಕೆಯ ಅವಧಿಯಲ್ಲಿ ಹಿಂದೆಂದಿಗಿಂತ ಈ ಬಿಕ್ಕಟ್ಟಿನಲ್ಲಿ ಸಾರ್ವಜನಿಕರ ಜೊತೆಗೆ ತೀವ್ರವಾಗಿ ಸಂಪರ್ಕ ಹೊಂದಿದ್ದರು. ಮಹಾ ರಾಜ ವಜ್ರಲೋಂಗ್ಕಾರ್ನ್ ಅವರ 13 ವರ್ಷದ ಯುವರಾಜ ದಿಪಾಂಗ್ಕಾರ್ನ್ ರಾಸ್ಮಿಜ್ಯೊಟಿ ಜರ್ಮನ್ ಭಾಷೆಯಲ್ಲಿ ಒಂದು ಪತ್ರ ಬರೆದಿದ್ದು, ರಾಯಲ್ ಹೌಸ್ಹೋಲ್ಡ್ ಬ್ಯೂರೋ ಪ್ರಕಾರ ಆ ಪತ್ರದಲ್ಲಿ wishing the rescue mission success, ಎಂದು ಬರೆದಿರುವುದಾಗಿ ಹೇಳಲಾಗಿದೆ. ರಾಜನ ಕುಟಂಬದ ಕಡೆಯಿಂದ ರಕ್ಷಣಾ ತಂಡಕ್ಕೆ ಇತರ ದೇಣಿಗೆಗಳೊಂದಿಗೆ 2000 ಮಳೆ ಕೋಟುಗಳನ್ನು ಕೊಟ್ಟಿರುವುದಾಗಿ ತಿಳಿದುಬಂದಿದೆ.

ಥೈಲ್ಯಾಂಡಿನ ರಾಜನು ಹಲವು ರೀತಿಯಲ್ಲಿ ಕಾರ್ಯಾಚರಣೆಗೆ ಸಹಾಯ ಮಾಡಿದರೆ, ಇಡೀ ದೇಶದ ಜನರು ಸ್ವಯಂಸೇವಕರಾಗಿ ಸಹಾಯಕ್ಕೆ ನಿಂತು-ಕೊಂಡಿದ್ದರು. ಈ ಸಮಯದಲ್ಲಿ ಸಾರ್ವಜನಿಕರು ಕಾರ್ಯಾಚರಣೆಯಗಳ ಕೆಲಸದಲ್ಲಿ ತೊಡಗಿಕೊಂಡಿದ್ದು ಮತ್ತು ಅಲ್ಲಿಗೆ ಬಂದ ಜನರಿಗೆಲ್ಲ ಆಹಾರ

ಅಲ್ಲಿಯೇ ತಾಯಾರು ಮಾಡಿ ಬಡಿಸುತ್ತಿದ್ದರು. ಪಂಪ್ಗಳನ್ನು ಸಹ ಸ್ವಯಂಸೇವಕರೆ ನಡೆಸುತ್ತಿದ್ದರು. 'ವಾಷಿಂಗ್ಟನ್ ವಿಶ್ವ ವಾಣಿಜ್ಯ ಕೇಂದ್ರಕ್ಕೆ ಬೆಂಕಿಬಿದ್ದಾಗ ಅಗ್ನಿಶಾಮಕ ದಳದ ಸದಸ್ಯರು ತಮ್ಮನ್ನ ಅಪಾಯಕ್ಕೆ ಒಡ್ಡಿಕೊಂಡಿದ್ದನ್ನು ಬಿಟ್ಟರೆ ಬಹುಶಃ ಥಾಯ್ ಗುಹೆಯ ಘಟನೆಯನ್ನ ಹೆಸರಿಸಬಹುದು. ಬೇರೆ ಇಂತಹ ಅಪಾಯಕ್ಕೆ ಒಡ್ಡಿಕೊಂಡು ಕಾರ್ಯ ನಿರ್ವಹಿಸಿದ ಇನ್ನೊಂದು ಕಾರ್ಯಾಚರಣೆ ನನಗೆ ಜ್ಞಾಪಕವಿಲ್ಲ' ಎಂಬುದಾಗಿ ಹೊಡ್ಜಸ್ ಹೇಳಿದರು.

2001ರಲ್ಲಿ ವಾಷಿಂಗ್ಟನ್ ವಿಶ್ವ ವಾಣಿಜ್ಯ ಕೇಂದ್ರಕ್ಕೆ ಎರಡು ವಿಮಾನಗಳು ಡಿಕ್ಕಿ ಹೊಡೆದು ಇಡೀ 110 ಅಂತಸ್ತುಗಳ ಕಟ್ಟಡ ಹೊತ್ತಿ ಉರಿಯುತ್ತಿತ್ತು. ಆಗ 300 ಜನ ಅಗ್ನಿಶಾಮಕ ದಳದ ತಂಡ ಹಿಂದಕ್ಕೆ ಬದುಕಿ ಬರುವುದಿಲ್ಲ ಎಂದು ಗೊತ್ತಿದ್ದರು ಒಳಕ್ಕೆ ಹೋದರು. ಹೋದವರಲ್ಲಿ ಒಬ್ಬರೂ ಹಿಂದಿರುಗಿ ಬರಲಿಲ್ಲ. ಇತ್ತೀಚಿನ ದಿನಗಳಲ್ಲಿ ಇದೊಂದು ಮರೆಯಲಾಗದ ಭಯಾನಕ ಘಟನೆಯಾಗಿದ್ದು ಒಟ್ಟು 2999ರ ಜನರು ಪ್ರಾಣ ಕಳೆದುಕೊಂಡಿದ್ದರು. ಸಾಮಾನ್ಯವಾಗಿ ಈಗ ಆಧುನಿಕ ಪ್ರವಾಸಿ ತಾಣಗಳಲ್ಲಿ, ಗುಹೆಗಳ ಒಳಗೂ ಜಿಪಿಎಸ್ ವ್ಯವಸ್ಥೆ, ವೈಫೈ ಮತ್ತು ಸೆಲ್ ಫೋನ್ಗಳ ಸೇವೆಗಳನ್ನು ವ್ಯವಸ್ಥೆ ಮಾಡಲಾಗಿರುತ್ತದೆ. ಆದರೆ ಥಮ್ ಲುವಾಂಗ್ ಗುಹೆಗಳಲ್ಲಿ ಈ ಸೌಕರ್ಯಗಳು ಯಾವೂ ಇಲ್ಲ.

○○○

ಈ ಗುಹೆಯಲ್ಲಿ ಕೊನೆಯದಾಗಿ 1980ರಲ್ಲಿ ಫ್ರೆಂಚ್ ಗುಹೆ ಸೊಸೈಟಿ ಅವರು ಅನ್ವೇಷಣೆ ನಡೆಸಿದ್ದರು. ಆದರೆ ಗುಹೆಸಮೂಹದ ಅನೇಕ ಆಳದ ಸ್ಥಳಗಳು ಇನ್ನೂ ಅನ್ವೇಷಣೆಗೆ ಒಳಪಟ್ಟಿಲ್ಲ. ಗುಹೆತಜ್ಞರ ಪ್ರಕಾರ ಥಮ್ ಲುವಾಂಗ್ ಗುಹೆಗಳ ಸಮೂಹ ಜಗತ್ತಿನ ಅತ್ಯಂತ ಸಂಕೀರ್ಣ ಮತ್ತು ಸವಾಲಿನ ಒಂದು ಗುಹೆ ಸಮೂಹವಾಗಿದೆ. ಹುಡುಕಾಟ ಶುರುವಾದಾಗ ಗುಹೆಯೊಳಗಿನ ಪ್ರಮುಖ ಸ್ಥಳಗಳ ಮಧ್ಯದ ದೂರ ಯಾರಿಗೂ ನಿಖರವಾಗಿ ತಿಳಿದಿರಲಿಲ್ಲ. ಗುಹೆಯ ಒಳಗಿನ ಹೆಗ್ಗುರುತುಗಳು ಅನಿಶ್ಚಿತವಾಗಿದ್ದವು. ಸ್ಥಳೀಯ ಜನರು ಹೇಳುವಂತೆ ಮಳೆಗಾಲದಲ್ಲಿ ಗುಹೆಯ ಬಾಗಲಲ್ಲಿ ನಿಂತುಕೊಳ್ಳುವುದು ಅಪಾಯವಾಗಿತ್ತು. ಕಾರಣ ಮಳೆ ನೀರಿನ ಅಗಾಧವಾದ ಪ್ರಹಾವ ದಿಢೀರನೆ ಬರುತ್ತದೆ ಎನ್ನುವುದು.

ಥಾಯ್ ಜನರು ಉಷ್ಣವಲಯದ ನೆಲದ ಮೇಲಿನ ನೀರಿಗೆ

ಒಗ್ಗಿಕೊಂಡವರು. ಗುಹೆ ಒಳಗಿನ ಮರ್ಕಿ ಶೀತಲ ಪ್ರವಾಹಗಳ ನೀರಿನಲ್ಲಿ ಅವರಿಗೆ ಯಾವುದೇ ಅಭ್ಯಾಸವಿರಲಿಲ್ಲ. ಜೊತೆಗೆ ಅಂತಹ ನೀರಿನಲ್ಲಿ ಈಜಾಡುವ ಯಾವುದೇ ವಿಶೇಷ ಉಪಕರಣಗಳೂ ಅವರಲ್ಲಿ ಇರಲಿಲ್ಲ. ಗುಹೆಗಳ ಒಳಗೆ ಅಗತ್ಯವಿರುವ ಪರಣತಿಯೂ ಕೂಡ ಅವರಿಗೆ ಕಡಿಮೆಯಾಗಿದ್ದು, ಏನಾದರು ಹೆಚ್ಚೂಕಡಿಮೆಯಾದರೆ ಡೈವರ್‌ಗಳು ನೀರಿನ ಮಟ್ಟದ ಮೇಲಕ್ಕೆ ಬರದಂತೆ ಇರಬೇಕಾಗುತ್ತದೆ. ಜೂನ್ 25ರಂದು ಸ್ಥಳೀಯ ಜನರಲ್ ಮೋಟಾರ್ಸ್‌ನ ಮ್ಯಾನೇಜರ್ ರುಯೆನ್ರಟ್ ಚಾಂಗ್ಯಾಕ್ವನ್ಯುವೆನ್ ಹೆಸರಿನ ಡೈವರ್ ಮೊದಲಿಗೆ ಗುಹೆಯ ಹತ್ತಿರಕ್ಕೆ ಬಂದ ಸ್ವಯಂಸೇವಕ. ಅದರ ನಂತರ ಡಜನ್ನಗಟ್ಟಲೇ ಡೈವರ್ಸ್ ಬೇರೆಬೇರೆ ದೇಶಗಳಿಂದಲೂ ಆಗಮಿಸಿದರು.

ರುಯೆನ್ರಟ್ ಚಾಂಗ್ಯಾಕ್ವನ್ಯುವೆನ್ ಒಳ್ಳೆ ಅನುಭವಿ ಡೈವರ್ ಆದರೂ ಗುಹೆ ಒಳಗಿನ ಪ್ರವಾಹದ ಅಲೆಗಳನ್ನು ನೋಡಿ ಗಾಬರಿಗೊಂಡಿದ್ದರು. ಪ್ರವಾಹದ ಎದುರಿಗೆ ನಿಂತುಕೊಳ್ಳಲು ಆಗದೆ ಮುಖಕ್ಕೆ ಧರಿಸಿದ್ದ ಮುಖವಾಡ ಕಿತ್ತುಹೋಗಿತ್ತು. ಇದು ಹೇಗಿತ್ತೆಂದರೆ ಅಗಾಧ ನೀರು ನಿಮ್ಮ ಎದುರಿಗೆ ಹರಿದು ಬರುವ ಜಲಪಾತದೊಳಗೆ ನಡೆದುಕೊಂಡು ಹೋಗುವಂತ್ತಿತ್ತು. ಅಂದರೆ ಪ್ರತಿ ಚಲನೆಯೂ ನೀರಿನ ವಿರುದ್ಧ ನಡೆಸುವ ಆರೋಹಣವಾಗಿತ್ತು, ಎಂಬುದಾಗಿ ಅವರು ಹೇಳಿದರು. ಸೀಲ್ಗಳು ಮತ್ತು ಸ್ವಯಂಸೇವಕ ಡೈವರ್‌ಗಳು ತುಂಬಾ ಕಷ್ಟಪಟ್ಟು ಗುಹೆಯೊಳಕ್ಕೆ ತೂರಿಹೋದರು. ಅವರ ಸುರಕ್ಷತೆಯನ್ನು ಖಾತ್ರಿ ಪಡಿಸಿಕೊಳ್ಳಲು ಮಾರ್ಗದರ್ಶಿ ಸೂತ್ರಗಳನ್ನು ಪಡೆದುಕೊಳ್ಳುತ್ತಿದ್ದರು. ಮುಂಗಾರು ಮಳೆಯ ಪ್ರವಾಹದ ಜೊತೆಗೆ ಸುಣ್ಣದ ಶಿಲೆಗಳು ನೀರನ್ನ ಸ್ಪಾಂಜ್ನಂತೆ ಹೀರಿಕೊಂಡು ಗುಹೆಗಳ ಗೋಡೆಗಳಲ್ಲಿ ನೀರು ತೊಟ್ಟಿಕ್ಕುತ್ತಿತ್ತು. ಕತ್ತಲಲ್ಲಿ ನಮ್ಮ ಕೈಗಳು ನಮಗೆ ಕಾಣಿಸುತ್ತಿರಲಿಲ್ಲ ಎಂದು ತಿಳಿಸಿದರು.

ಗುಹೆಯೊಳಗೆ ಆಳವಾದ ನೀರಿನಲ್ಲಿ 12 ಗಂಟೆಗಳ ಶಿಫ್ಟ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ನೀರಿನ ಶೀತಕ್ಕೆ ಸೀಲ್ ಡೈವರ್‌ಗಳು ಗಡಗಡನೆ ನಡುಗುತ್ತಿದ್ದರು. ಸರಿಯಾದ ಹೆಲ್ಮೆಟ್ಟುಗಳಿಲ್ಲದ ಕಾರಣ ಸೀಲ್ಗಳು ತಮ್ಮ ಶಿರಸ್ತ್ರಾಣಕ್ಕೆ ಸುಧಾರಿತ ಬ್ಯಾಟರಿಗಳನ್ನು ಸಿಕ್ಕಿಸಿಕೊಳ್ಳಬೇಕಾಗಿತ್ತು. ಕಾರ್ಯಾಚರಣೆ ನಡೆಯುತ್ತಿದ್ದಾಗ ಮೂವರು ಸೀಲ್ ಡೈವರ್‌ಗಳು 23 ಗಂಟೆಗಳ ಕಾಲ ಸಂಪರ್ಕವಿಲ್ಲದೆ ಕಳೆದುಹೋಗಿದ್ದರು. ಮತ್ತೆ ಅವರು ಪುನಃ ಕಾಣಿಸಿಕೊಂಡಾಗ ಅವರ ದೇಹಗಳಲ್ಲಿ ಆಮ್ಲಜನಕ ತೀರಾ ಕಡಿಮೆಯಾಗಿ ಅವರನ್ನು ತುರ್ತಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾಯಿತು.

ಆತಂಕದೊಂದಿಗೆ ಕೊನೆ ಹುಡುಗನ ಪಾರು

ಗುಹೆ ಒಳಗೆ ಇದ್ದ ಎಲ್ಲರನ್ನೂ ಪಾರು ಮಾಡಲು ಡೈವರ್ಸ್ ನಡೆಸಿದ 10 ಟ್ರಿಪ್ಗಳು ಅಷ್ಟು ಕಷ್ಟವಾಗದೆ ಸರಾಗವಾಗಿ ನಡೆದುಹೋದವು. ಆದರೆ 11ನೇ ಟ್ರಿಪ್ ವೇಳೆ ಹುಡುಗನನ್ನು ಪಾರು ಮಾಡುವಾಗ ಬಹಳ ಅಪಾಯಕಾರಿ ಘಟನೆ ನಡೆದುಹೋಗಿತ್ತು. ಭೂಗತ ಚೇಂಬರ್ ಒಳಗೆ ರಕ್ಷಕರ ಹಗ್ಗದ ಮೇಲೆ ಭಾರೀ ಗಾತ್ರದ ಕಲ್ಲುಗಳು ಕುಸಿದಂತಾಗಿ ಪ್ರವಾಹದ ನೀರಿನಲ್ಲಿ ಬಿದ್ದವು. ಸಿಗ್ನಲ್ ಕೊಡುತ್ತಿದ್ದವರು 'ಫಿಶ್ ಆನ್' ಎಂದು ಕೂಗಿಕೊಂಡರು ಎಂಬುದಾಗಿ ಯು.ಎಸ್. ನೌಕಾದಾಳದ ಮಿಷನ್ ಕಮಾಂಡರ್ ಮೇಜರ್ ಚಾರ್ಲ್ಸ್ ಹೊಡ್ಜಸ್ ಸೈಟ್ನಲ್ಲಿ ನೆನಪಿಸಿಕೊಂಡರು.

ಸಮಯ 15 ನಿಮಿಷ, 60 ನಿಮಿಷ ಕೊನೆಗೆ 90 ನಿಮಿಷಗಳಾದವು. ರಕ್ಷಕರು ಉದ್ವೇಗದಿಂದ ಕಾಯುತ್ತಿದ್ದರು. ನೀರೊಳಗೆ ದಾರಿ ತೋರಿಸುವ ಹಗ್ಗವನ್ನು ಮೇಜರ್ ಕಳೆದುಕೊಂಡು ಹುಡುಕುತ್ತಿದ್ದರು. ಕತ್ತಲಲ್ಲಿ ಕಣ್ಣುಗಳಿಗೆ ಏನೂ ಕಾಣಿಸುತ್ತಿರಲಿಲ್ಲ. ಹಗ್ಗದ ದಾರಿ ಗೊತ್ತಾಗಲಿಲ್ಲ. ಮತ್ತೆ ನೀರಿನ ಪ್ರವಾಹ ತುಂಬಿಕೊಂಡಿದ್ದ ಗುಹೆಯಲ್ಲಿ ಹಗ್ಗವನ್ನು ಹಿಡಿಯಲು ಹಿಂದಕ್ಕೆ ಡೈವ್ ಮಾಡುತ್ತ ಪ್ರವಾಹದ ಆಳಕ್ಕೆ ಹೋದರು. ಕೊನೆಗೂ ಕೈಯಿಂದ ತಪ್ಪಿಸಿಕೊಂಡಿದ್ದ ಹಗ್ಗ ಸಿಕ್ಕಿಯೇ ಬಿಟ್ಟಿತು. ಅಂತೂ ಇನ್ನೊಬ್ಬ ಹುಡುಗನನ್ನ ಗುಹೆಯಿಂದ ಪಾರು ಮಾಡಲಾಯಿತು.

ಇದು ಥೈಲ್ಯಾಂಡಿನ ಥಮ್ ಲುವಾಂಗ್ ಗುಹೆಗಳಲ್ಲಿ ನಡೆದ ಭಯಾನಕ ಕಾರ್ಯಾಚರಣೆಗಳಲ್ಲಿ ಒಂದು ತುಣುಕು. ಈ 13 ಜನರು ಏನು ಅದೃಷ್ಟ ಮಾಡಿದ್ದರೋ ಅಂತೂ ಕತ್ತಲ ಗುಹೆಯಲ್ಲಿ ಮೊದಲ 9 ದಿನಗಳ ಕಾಲ ಆಹಾರ ನೀರು ಬೆಳಕಿಲ್ಲದೆ ಗೋಡೆಗಳಲ್ಲಿ ಹೊಸರುವ ತಣ್ಣನೆ ನೀರನ್ನು ಬೊಗಸೆಯಲ್ಲಿ ಹಿಡಿದು ಕುಡಿಯುತ್ತ ಬದುಕಿಕೊಂಡಿದ್ದರು. ಇನ್ನೊಂದು ಮುಖ್ಯ ವಿಷಯವೆಂದರೆ ಈ ಸುಣ್ಣದ ಶಿಲೆಗಳು ನೀರನ್ನು ಹೊಸರುವಾಗ ಸುಣ್ಣದ ಅಂಶವನ್ನು ಬಿಟ್ಟುಕೊಡುವುದಿಲ್ಲ. ಕಾರಣ ಈ ಸುಣ್ಣದ ಶಿಲೆಗಳು ಲಕ್ಷಾಂತರ ವರ್ಷಗಳ ಹಿಂದೆ ರೂಪಾಂತರ (meta morphosed) ಹೊಂದಿದ ಶಿಲೆಗಳು. 'ಇಡೀ ವಿಶ್ವ ನಮ್ಮನ್ನ ಗಮನಿಸುತ್ತಿದ್ದು, ನಮಗೆ ಬೇರೆ ದಾರಿ ಇರಲಿಲ್ಲ. ನಾವು ಯಶಸ್ವಿಯಾಗಲೇ ಬೇಕಿತ್ತು' ಎಂಬುದಾಗಿ ಥಾಯ್ ಸೀಲ್ ಅಧಿಕಾರಿ ಕೀವ್ ಹೇಳಿದರು. ಎಲ್ಲರೂ ಹೇಗೆ ವರ್ತಿಸಿದರು ಎಂಬುದನ್ನು ನೆನಪಿಸಿಕೊಂಡ



ಥೈಲ್ಯಾಂಡ್ ನೌಕಾದಳ ಸೀಲ್ ಅಧಿಕಾರಿಗಳ ತಂಡ.

ಅವರು ಆಶ್ಚರ್ಯಚಕಿತರಾಗಿ ತಲೆಬಾಗಿ ವಿನಮ್ರದಿಂದ ಭೂಮಿಯ ಕಡೆಗೆ ವಂದಿಸಿದರು.

ಮಿಲಿಟರಿ ಸಿಬ್ಬಂದಿ ಮತ್ತು ಅಧಿಕಾರಿಗಳ ಜೊತೆಗೆ ನಡೆದ ಸಂದರ್ಶನಗಳಿಂದ ತಿಳಿದುಬಂದ ವಿಷಯವೆಂದರೆ ಶಕ್ತಿ ಮತ್ತು ಯುಕ್ತಿಯ ಸಮ್ಮಿಲನದ ವಿವರವಾದ ಕಾರ್ಯಾಚರಣೆ ಇದಾಗಿತ್ತು ಎಂಬುದಾಗ ವಿಶ್ವಕ್ಕೆ ತಿಳಿಯಿತು: ಸರ್ಕಾರಿ ಏಜನ್ಸಿಗಳಿಂದ 2000 ಸೈನಿಕರು, 200 ಡೈವರ್ಸ್ ಮತ್ತು ಪ್ರತಿನಿಧಿಗಳು ಸೇರಿದಂತೆ ಒಟ್ಟು 10,000 ಜನರು ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು ಎಂದರೆ ಸ್ವಲ್ಪ ಆಶ್ಚರ್ಯವೇ ಆಗುತ್ತದೆ. ಆದರೆ ಒಟ್ಟು ಎಷ್ಟು ಹಣ ಖರ್ಚಾಗಿದೆ ಎಂಬ ಲೆಕ್ಕ ಎಲ್ಲೂ ದೊರಕಲಿಲ್ಲ. ಒಟ್ಟು 10,000 ಜನರ ಖರ್ಚು, ಯಂತ್ರ – ತಂತ್ರಜ್ಞಾನವನ್ನು ಬಳಸಿದ ಖರ್ಚು, ಬೆಟ್ಟದ ಮೇಲೆ ಸಾವಿರಾರು ತೂತುಗಳನ್ನು ಮಾಡಿದ ಡ್ರಿಲ್ಲಿಂಗ್ ಹೀಗೆ ಮಿಲಿಯನ್ಗಟ್ಟಲೇ ಹಣ ಖರ್ಚಾಗಿರಬೇಕು.

ಪ್ಲಾಸ್ಟಿಕ್ ಕೋಕೋನ್ಗಳು, ತೇಲುವ ಸ್ಟ್ರೆಚರ್ಸ್, ಮತ್ತು ಹಗ್ಗಗಳನ್ನು ತೆಗೆದುಕೊಂಡು ಹುಡುಗರಿರುವ ಕಡೆಗೆಲ್ಲ ತಲುಪಿಸಲಾಯಿತು. ಹುಡುಗರು 3.2 ಕಿಲೋಮೀಟರುಗಳ ದೂರದ ಕತ್ತಲಲ್ಲಿ ಕಲ್ಲುಬಂಡೆಯ ಮೇಲೆ ಕುಳಿತು ನಿಂತು ಕಾಯುತ್ತಿದ್ದರು. ಇಲ್ಲಿಂದ ಅವರನ್ನು ಪಾರು ಮಾಡಲು ಒಂದೊಂದು ಸಲವೂ ಮಧ್ಯದಲ್ಲಿ ಕನಿಷ್ಟ 40 ನಿಮಿಷಗಳ ಕಾಲ ಹೆಲುಬುಗಳು ಕರಗುವಷ್ಟು ತಣ್ಣನೆಯ ನೀರಿನಲ್ಲಿ ಮುಳುಗಿಕೊಂಡು, ಈಜುಕೊಂಡು ಇಲ್ಲ ನಡೆದುಕೊಂಡು ಗುಹೆಯ ದಾರಿಗಳಲ್ಲಿ ಹತ್ತಿ ಇಳಿದು, ಕಲ್ಲುಗಳ ಮೇಲೆ ಜಾರಿಕೊಂಡು ಗುಹೆ ಒಳಗೆ ಕತ್ತಲಲ್ಲಿ ಬರಬೇಕಾಗಿತ್ತು. ಹುಡುಗರಿಗೆ ಈ ಸಮಯದಲ್ಲಿ ಹೆದರಿಕೆಯನ್ನು ದೂರಮಾಡಲು ಆತಂಕ ವಿರೋಧಿ ಔಷಧಿಯನ್ನು (Anti anxiety medicine) ಕೊಡಲಾಗಿತ್ತು.

ಎಲ್ಲದಕ್ಕಿಂತ ಮುಖ್ಯವಾದ ವಿಷಯವೆಂದರೆ ಅದೃಷ್ಟ ಚೆನ್ನಾಗಿತ್ತು. ಇದು ನಾವು ನಡೆಸಿದ ಕಾರ್ಯಾಚರಣೆಗೆ ಸಹಾಯವಾಗಿ ನಿಂತಿತ್ತು. ಎಷ್ಟೋ ವಿಷಯಗಳು ತಪ್ಪಾಗಿದ್ದವು. ಆದರೂ ಹೇಗೋ ಹುಡುಗರನ್ನು

ಗುಹೆಯಿಂದ ಪಾರು ಮಾಡಿದೆವು. ಈಗಲೂ ನಾವು ಮಾಡಿದ ಕೆಲಸವನ್ನು ನೆನೆಸಿಕೊಂಡರೆ ನಂಬುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂಬುದಾಗಿ ಮೇಜರ್ ಜನರಲ್ ಚಾಲಾಂಗ್ಚಾಯ್ ಚೈಯಾಖಮ್, ಥಾಯ್ ಮೂರನೇ ಸೇನಾ ಸಹಾಯಕ ಕಮಾಂಡರ್, ಹೇಳಿದರು.

❑

ಮಾಜಿ ಥಾಯ್ ನೌಕಾಪಡೆಯ ಅಧಿಕಾರಿ ಸಮನ್ ಗುನನ್ ಸಾವು

ಅಧ್ಯಾಯ–14

'ದೊಡ್ಡ ಈಜುಗಾರರು ಈಜುವಾಗಲೇ ಸಾಯುತ್ತಾರೆ' ಎಂಬ ಗಾದೆ ಒಂದಿದೆ. ಮಾಜಿ ಥಾಯ್ ನೌಕಾಪಡೆಯ ಸೀಲ್ ಅಧಿಕಾರಿ ಸಮನ್ ಗುನನ್ ಗುಹೆಯ ಒಳಗೆ ಕಾರ್ಯಾಚರಣೆ ನಡೆಸುತ್ತಿರುವಾಗಲೇ ಆಮ್ಲಜನಕದ ಕೊರತೆಯಿಂದಾಗಿ ಪ್ರಾಣ ಕಳೆದುಕೊಂಡರು. ಹುಡುಗರಿದ್ದ ಸ್ಥಳಕ್ಕೆ ಮೂರು ಏರ್ ಟ್ಯಾಂಕರುಗಳನ್ನು (ಸಿಲಿಂಡರ್ಗಳನ್ನು) ತಲುಪಿಸಿ ಹಿಂದಕ್ಕೆ ಬರುತ್ತಿದ್ದಾಗ ಈ ದುರಂತ ಸಂಭವಿಸಿದೆ. ಅವರ ಜೊತೆಗಿದ್ದ ಅಧಿಕಾರಿ ಒಬ್ಬರು ಅವರನ್ನು ಕಾಪಾಡಲು ಎಷ್ಟೋ ಪ್ರಯತ್ನ ನಡೆಸಿದರೂ ಪ್ರಯೋಜನವಾಗಲಿಲ್ಲ. ಏರ್ ಟ್ಯಾಂಕರುಗಳೆಂದರೆ ನೀರಿನಲ್ಲಿ ಈಜುಕೊಂಡು ಬರುವಾಗಿ ಉಪಯೋಗಿಸುವ ಈಜುಗಾರರ ಸಿಲಿಂಡರುಗಳು. ಇನ್ನೂ ಸರಳವಾಗಿ ಹೇಳುವುದಾದರೆ ಈಜುವಾಗ ತಲೆಯನ್ನು ನೀರಿನ ಮಟ್ಟಕ್ಕಿಂತ ಮೇಲೆತ್ತಿ ಉಸಿರಾಡಲಾಗದ ಸಮಯದಲ್ಲಿ ಮುಖಕ್ಕೆ ಗಾಳಿ ಮತ್ತು ಇತರ ಅನಿಲಗಳಿರುವ ಪೈಪ್

ಇರುವ ಕವಚವನ್ನು ಕಟ್ಟಿಕೊಳ್ಳಲಾಗುತ್ತದೆ. ಆ ಪೈಪ್ ಜೋಡಿಸಿರುವ ಸಿಲಿಂಡರನ್ನು ಬೆನ್ನಿನ ಹಿಂದೆ ಅಥವಾ ಸೊಂಟದ ಭಾಗಕ್ಕೆ ಕಟ್ಟಿಕೊಂಡಿರುತ್ತಾರೆ. ಇವುಗಳನ್ನು ಪೋರ್ಟೆಬಲ್ ಕಂಪ್ರೆಸರ್ ಏರ್ ಟ್ಯಾಂಕ್ಸ್ ಎಂದೂ ಕರೆಯಲಾಗುತ್ತದೆ. ಇವು ಎರಡು ಮೂರು ಆಕಾರಗಳಲ್ಲಿ ಇರುತ್ತವೆ.


ಕಾರ್ಯಾಚರಣೆಯಲ್ಲಿ ಪ್ರಾಣ ಕಳೆದುಕೊಂಡ ಸಮನ್ ಗುನನ್.

ಪೋರ್ಟೆಬಲ್ ಕಂಪ್ರೆಸರ್ ಏರ್ ಟ್ಯಾಂಕ್ಗಳನ್ನು ಗುಹೆಯೊಳಗೆ ಸರಬರಾಜು ಮಾಡುವುದು ಅತ್ಯಂತ ಮುಖ್ಯ ಕೆಲಸವಾಗಿತ್ತು. ಗುಹೆ ಒಳಗೆ ಒಮ್ಮೆಲೇ ನೂರಾರು ಜನರು ಸೇರಿಕೊಂಡ ಕಾರಣ ಗುಹೆ ಒಳಗಿದ್ದ ಹುಡುಗರಿಗೆ ದೊರಕಬೇಕಾದ ಗಾಳಿಯಲ್ಲಿನ ಆಮ್ಲಜನಕ 15% ಕ್ಕಿಂತ ಕಡಿಮೆಯಾಗಿತ್ತು ಎಂಬುದಾಗಿ ಉಪ ಸೇನಾ ಕಮಾಂಡರ್ ಚಾಲೋಂಗ್ಚಾಯ್ ಚೈಯಖಾಮ್ ತಿಳಿಸಿದರು. ಅಂದರೆ ಯಾವುದೇ ನಿಯಂತ್ರಣ ಇಲ್ಲದೆ ನೂರಾರು ಜನರು ಗುಹೆ ಒಳಕ್ಕೆ ಹೋಗಲು ಬಿಟ್ಟ ಕಾರಣವೂ ದುರಂತವಾಗಿ ಪರಿಣಮಿಸಿತ್ತು ಎನ್ನುವುದನ್ನು ಇಲ್ಲಿ ಉಲ್ಲೇಖಿಸಬಹುದು.

ಸಾಮಾನ್ಯವಾಗಿ ಭೂಮಿಯ ಹೊರಮೈ ಗಾಳಿಯಲ್ಲಿ 21% ಆಮ್ಲಜನಕ ಇರುತ್ತದೆ. ಗುಹೆಯ ಒಳಗಿನ ಗಾಳಿಯಲ್ಲಿ 6% ಆಮ್ಲಜನಕ ಕಡಿಮೆಯಾಗಿದ್ದು ಹುಡುಗರು ತೊಂದರೆಗೆ ಸಿಲುಕೊಂಡಿರುತ್ತಾರೆ ಎಂಬ ಸಂದೇಹವನ್ನು ಮೇಲಿನ ಅಧಿಕಾರಿ ಹೊರಹಾಕಿದರು. ಹಿಮಾಲಯ ಪರ್ವತಗಳಲ್ಲಿ 20,000 ಅಡಿಗಳ ಮೇಲಕ್ಕೆ ಹೋದಾಗ ಗಾಳಿಯಲ್ಲಿನ ಆಮ್ಲಜನಕದ ಕೊರತೆ ಉಂಟಾಗಿ ಜನರು ಅನೇಕ ರೀತಿಯ ತೊಂದರೆಗಳಿಗೆ ಸಿಲುಕಿಕೊಳ್ಳುತ್ತಾರೆ. ಕಾರಣ ನಾವು ತೆಗೆದುಕೊಳ್ಳುವ ಗಾಳಿಯಲ್ಲಿ ಆಮ್ಲಜನಕ ಕಡಿಮೆ ಇದ್ದು ದೇಹದಲ್ಲಿ ಆಮ್ಲಜನಕದ ಸರಬರಾಜಿನ ಕೊರತೆ ಉಂಟಾಗಿ ರಕ್ತದಲ್ಲಿ ಆಮ್ಲಜನಕದ ಅಂಶ ಕಡಿಮೆಯಾಗಿಬಿಡುತ್ತದೆ. ಆಗ ಮೆದುಳಿಗೆ ಬೇಕಾದ ಆಮ್ಲಜನಕ ದೊರಕದೇ ತಲೆ ಸುತ್ತುವಂತಾಗುತ್ತದೆ. ಕುಸಿದು ಬೀಳಲೂಬಹುದು. ಗಾಳಿಯಲ್ಲಿ ಆಮ್ಲಜನಕ ತೀರಾ ಕಡಿಮೆಯಾದಾಗ ಸಾವು ಕೂಡ ಸಂಭವಿಸಬಹುದು.

ಹುಡುಗರನ್ನು ಕಂಡು ಹಿಡಿಯುವುದಕ್ಕೆ ಮುಂಚೆ ಇಂತಹ ಸಂದೇಹಗಳೆಲ್ಲ ಹುಟ್ಟಿಕೊಂಡಿದ್ದವು. ಗುಹೆಯ ಒಳಗೆ ಆಮ್ಲಜನಕದ ಅಂಶವನ್ನು ಹೆಚ್ಚಿಸುವ

ಸಲುವಾಗಿ ಸಮನ್ ಗುನನ್ ಗುಹೆ ಒಳಗೆ 3 ಏರ್ ಟ್ಯಾಂಕರ್ಗಳನ್ನು ತೆಗೆದುಕೊಂಡು ಹೋಗಿ ಕೊಟ್ಟು ಹಿಂದಕ್ಕೆ ಬರುವಾಗ ಉಸಿರುಗಟ್ಟಿ ಪ್ರಾಣ ಕಳೆದುಕೊಂಡಿದ್ದರು. ಹುಡುಗರನ್ನು ಕಂಡು ಹಿಡಿದ ಮೇಲೂ ಒಂದು ವಾರದವರೆಗೂ ಬಹಳ ಎಚ್ಚರಿಕೆಗಳಿಂದ ಯೋಜನೆಯನ್ನು ನಿರೂಪಿಸಲಾಯಿತು. ಹುಡುಗರನ್ನು ಹೊರಕ್ಕೆ ತರುವಾಗ ಕೆಲವು ಕಡೆ ನೀರಿನಲ್ಲಿ ಮುಳುಗಿಸಿಯೇ ತರಬೇಕಾಗಿದ್ದರಿಂದ ಅಧಿಕಾರಿಗಳು ಅನುಮಾನಿಸುತ್ತಿದ್ದರು. ಆದರೆ ಮುಂಗಾರು ಮಳೆ ತೀವ್ರವಾಗುವುದರ ಮುನ್ಸೂಚನೆಗಳು ಕಂಡುಬಂದಿದ್ದರಿಂದ ಇನ್ನು ತಡಮಾಡುವುದು ಸರಿಯಲ್ಲ ಎಂಬ ಗಟ್ಟಿ ನಿರ್ಧಾರವನ್ನು ತೆಗೆದುಕೊಳ್ಳಬೇಕಾಯಿತು.

'ಮೊದಲಿಗೆ, ನಾವು ಹುಡುಗರ ಜೊತೆಗೆ ಇರುವವರೆಗೂ ಅವರಿಗೆ ಯಾವುದೇ ತೊಂದರೆ ಇಲ್ಲ ಎಂದುಕೊಂಡಿದ್ದೆವು. ಆದರೆ ಈಗ ಅನೇಕ ಸಮಸ್ಯೆಗಳು ಹುಟ್ಟುಕೊಂಡು ನೀರ್ಧಾರಗಳನ್ನು ಬದಲಿಸಬೇಕಾಯಿತು. ಈಗ ನಮಗೆ ಕಡಿಮೆ ಸಮಯ ಉಳಿದಿದೆ' ಎಂಬುದಾಗಿ ಥಾಯ್ ನೌಕಾಪಡೆಯ ಸೀಲ್ ಕಮಾಂಡರ್ ರೇರ್ ಆಡ್ಮಿರಲ್ ಆರ್ಪಕಾರ್ನ್ ಯುಕೊಂಗ್ಕಾವೆ ಹೇಳಿದರು. ಸಮನ್ ಗುನನ್ ಜುಲೈ 6ನೇ ತಾರೀಖು ಬೆಳಗಿನ ಜಾವ 1:00 ಗಂಟೆಗೆ 3.2 ಕಿಲೋಮೀಟರುಗಳ ದೂರದವರೆಗೂ ಹೋಗಿ ಏರ್ ಟ್ಯಾಂಕರ್ಗಳನ್ನು ಕೊಟ್ಟು ಹಿಂದಿರುಗಿ ಬರುತ್ತಿದ್ದಾಗ ಪ್ರಾಣ ಕಳೆದುಕೊಂಡರು. ಅವರು ತನ್ನ ದೇಹಕ್ಕೆ ಕಟ್ಟಿಕೊಂಡಿದ್ದ ಆಮ್ಲಜನಕದ ಸಿಲಿಂಡರ್ನಲ್ಲಿ ಆಮ್ಲಜನಕ ಮುಗಿದು ಹೋಗಿದ್ದರ ಜೊತೆಗೆ ಹೆಚ್ಚು ಆಯಾಸಕ್ಕೆ ಒಳಗಾಗಿದ್ದರು ಎಂದು ತಿಳಿದುಬಂದಿತು.

ಗುಹೆಯ ಒಳಗೆ ಹಿಂದಕ್ಕೆ ಬರುವಾಗ 1.5 ಕಿಲೋಮೀಟರುಗಳ ದೂರದಲ್ಲಿ ಮೂರನೇ ಚೇಂಬರ್ ತಲುಪಿದಾಗ ಗುನನ್ ಅವರಿಗೆ ಪ್ರಜ್ಞೆ ತಪ್ಪಿತು. ಜೊತೆಯಲ್ಲಿದ್ದ ಸಹ ಈಜುಗಾರ ಸ್ನೇಹಿತನನ್ನು ಪುನರುಜ್ಜೀವಗೊಳಿಸಲು ಪ್ರಯತ್ನಿಸಿ ಯಶಸ್ವಿಯಾಗಲಿಲ್ಲ. ಗುನನ್ ದೇಹವನ್ನು ಬ್ಯಾಂಕಾಕ್ ವಿಮಾನ ನಿಲ್ದಾಣಕ್ಕೆ ಕಳುಹಿಸಿಕೊಡಲಾಯಿತು. 'ಇಂತಹ ಕಾರ್ಯಾಚರಣೆಗಳಲ್ಲಿ ಯಾರಿಗಾದರೂ ಯಾವುದೇ ಸಮಯದಲ್ಲಿ ಅಪಘಾತಗಳು ನಡೆಯಬಹುದು. ಆದರೆ ಕೆಲಸಗಳು ಯಾರಿಗೂ ಕಾಯದೇ ಮುಂದುವರಿಯುತ್ತಲೇ ಇರುತ್ತವೆ. ಒಬ್ಬ ಅಪ್ಪಟ ದೇಶ ಪ್ರೇಮಿಯನ್ನು ನಾವು ಕಳೆದುಕೊಂಡರೂ ನಮ್ಮ ನೈತಿಕತೆ ಇನ್ನೂ ಪ್ರಬಲವಾಗಿದೆ. ಹನ್ನೆರಡು ಹುಡುಗರಲ್ಲಿ ಇಬ್ಬರು ಹುಡುಗರು ದುರ್ಬಲವಾಗಿದ್ದರೂ ಇಂತಹ

ಅಪಾಯಕಾರಿ ಕಾರ್ಯಾಚರಣೆಯಲ್ಲಿ ಉಳಿದುಕೊಂಡರು. ಆದರೆ ಒಬ್ಬ ಗಟ್ಟಿ ಅಧಿಕಾರಿ ಪ್ರಾಣ ಕಳೆದುಕೊಂಡರು' ಎಂಬುದಾಗಿ ಯುಕಾಂಗ್ಕಾವ್ ಹೇಳಿದರು.

ಯುಕಾಂಗ್ಕಾವ್ ಅವರು ಮಾತು ಮುಂದುವರಿಸುತ್ತ 'ಇದು ಭಿನ್ನವಾಗಿ ತೋರುತ್ತದೆ. ಸೀಲ್ ಅಧಿಕಾರಿಗಳು ಒಂದು ರೀತಿಯಲ್ಲಿ ಕಾರ್ಮಿಕರು. ಅವರು ಜನರನ್ನು ರಕ್ಷಿಸುವ ಕೆಲಸವನ್ನು ಮಾಡುತ್ತಾರೆ. ಆದರೆ ಮಕ್ಕಳಿಗೆ ವಿಭಿನ್ನವಾದ ದೇಹ ಗುಣಮಟ್ಟ ಇರುತ್ತದೆ. "ಹುಡುಗರು ಕಲ್ಲು ಒಳಗಿನ ಮೊಟ್ಟೆಗಳಂತೆ" ಎಂಬುದಾಗಿ ಥಾಯ್ ಗಾದೆಯೊಂದು ಹೇಳುತ್ತದೆ. ಹುಡಗರಿಗೆ ಆರೈಕೆಯೊಂದಿಗೆ ಚಿಕಿತ್ಸೆ ನೀಡಲಾಗುತ್ತದೆ' ಎಂದರು.

ಅಪ್ಪಟ ದೇಶಪ್ರೇಮಿ ಸಮನ್ ಗುನನ್

ಗುನನ್ ಗುಹೆಯ ಒಳಗೆ ಕೆಲಸದಲ್ಲಿ ತೊಡಗಿದ್ದಾಗ ತೀವ್ರತರದ ಪ್ರವಾಹಗಳು ಗಂಟೆಗಳ ಕಾಲ ಅವರನ್ನು ತಳ್ಳುತ್ತಿದ್ದವು. ಅವು ಎಷ್ಟು ಬಿರುಸಾಗಿದ್ದವೆಂದರೆ ಮುಖಕ್ಕೆ ಧರಿಸಿದ್ದ ಮುಖವಾಡಗಳು ಕಿತ್ತುಬರುತ್ತಿದ್ದವು. ಜೊತೆಗೆ ಆಮ್ಲಜನಕದ ಸಿಲಿಂಡರ್‌ಗಳ ಪೈಪ್‌ಗಳು ಕಿತ್ತೋಗಿ ಉಸಿರಾಟಕ್ಕೆ ತೊಂದರೆಯಾಗುತ್ತಿತ್ತು. ಸುಮಾರು 150ಕ್ಕಿಂತಲೂ ಹೆಚ್ಚು ಥಾಯ್ ನೌಕಾಪಡೆಯ ಸದಸ್ಯರು ಡಕ್ಟ್ ಟೇಪಿನೊಂದಿಗೆ ಕೆಲವೊಮ್ಮೆ ಸಂಯೋಜಿಸಲ್ಪಟ್ಟ ಸುಧಾರಿತ ಸಾಧನಗಳೊಂದಿಗೆ ಹೊರಬಂದಿದ್ದಾರೆ. ಥಾಯ್ ಗುಹೆ ಡೈವರ್‌ಗಳು ಮತ್ತು ವಿದೇಶಗಳ ಮಿಲಿಟರಿ ಪಡೆಗಳ ಸದಸ್ಯರು ಪ್ರತಿಸಲವೂ ಗುಹೆಯ ಒಳಗೆ ಇಕ್ಕಟ್ಟಾದ ಸಂಧುಗಳಲ್ಲಿ ತೂರುವಾಗ ಅಪಾಯಕ್ಕೆ ಒಳಗಾಗುತ್ತಿದ್ದರು. ಅಮೇರಿಕನ್ನರು ಲಾಜಿಸ್ಟಿಕ್ ಒದಗಿಸಿದರೆ, ಬ್ರಿಟಿಷ್ ಈಜುಗಾರರು ಅತ್ಯಂತ ಅಪಾಯದ ಸ್ಥಳಗಳಿಗೆ ತಲುಪಿ ಹುಡುಗರ ತಂಡವನ್ನು ಹುಡುಕುತ್ತಿದ್ದರು.

ಸೀಲ್ ನೌಕಾದಳ ಕೆಲಸ ತೊರೆದ ಗುನನ್ ಏರ್ ಪೋರ್ಟ್‌ನಲ್ಲಿ ಭದ್ರತಾ ಕೆಲಸ ನಿರ್ವಹಿಸುತ್ತಿದ್ದರು. ಗುನನ್ ಕುಟುಂಬದವರು, ಅವರ ಶವ ಪರೀಕ್ಷೆಯನ್ನು ನಿರಾಕರಿಸಿದರು. ಥಾಯ್ ಅಧಿಕಾರಿಗಳು ಹೇಳುವಂತೆ ಗುನನ್ ತಮ್ಮ ಮುಖಕ್ಕೆ ಜೋಡಿಸಿಕೊಂಡಿದ್ದ ಆಮ್ಲಜನಕದ ಸಿಲಿಂಡರ್‌ನಲ್ಲಿ ಆಮ್ಲಜನಕ ಮುಗಿದುಹೋದ ಕಾರಣ ಸಾವನ್ನಪ್ಪಿದು ಎಂದು ಹೇಳಿದರು. ಇನ್ನೂ

ಕೆಲವು ವದಂತಿಗಳ ಪ್ರಕಾರ ಗುನನ್ ಹೈಪೊಥರ್ಮಿಯಾಗೆ ತುತ್ತಾಗಿದ್ದರು ಎನ್ನಲಾಗಿದೆ.

ಕಾರ್ ಮೆಕಾನಿಕ್ ಆದ ಗುನನ್ ಅವರ ತಂದೆ ವಿಚಾಯ್ ಗುನನ್, 'ನನ್ನ ಮಗನ ಬಗ್ಗೆ ಅಪಾರ ಹೆಮ್ಮೆ ಇದೆ. ಆತ ಹೀರೋ. ಹುಡುಗರನ್ನು ಪಾರು ಮಾಡುವ ಕೆಲಸದಲ್ಲಿ ಏನು ಮಾಡಬೇಕೊ ಅದೆಲ್ಲವನ್ನು ಮಾಡಿದ್ದಾನೆ' ಎಂದು ಹೇಳಿದರು. ಇದರ ನಡುವೆ ಗುಹೆಯ ಮುಂದೆ ಸಣ್ಣ ಪ್ರಮಾಣದ ಒಡ್ಡು ಕಟ್ಟಿ ಪಂಪ್ಗಳಿಗಿ ಹೊರ ಹಾಕಿದ ನೀರು ಹಿಂದಕ್ಕೆ ಬರದಂತೆ ಆ ನೀರನ್ನು ಮತ್ತೆ ಮುಂದಕ್ಕೆ ಪಂಪ್ ಮಾಡಿ ದೂರ ಹರಿಸಿದಾಗ ಮಳೆ ಬಂದರೂ ನೀರು ಗುಹೆ ಒಳಕ್ಕೆ ಬರದಂತೆ ನೋಡಿಕೊಳ್ಳಲಾಯಿತು. ಇದ-ರಿಂದ ಒಳ್ಳೆ ಫಲಿತಾಂಶ ದೊರಕಿತು. ಇದರಿಂದ ಗುಹೆಯೊಳಗೆ ಕಲ್ಲುಗಳಿರುವ ಎತ್ತರ ಪ್ರದೇಶಗಳು ಗೋಚರಿಸಿ ನೀರಿನ ಪ್ರಮಾಣ ಕಡಿಮೆಯಾಗಿತ್ತು. ನೀರು ತುಂಬಿಕೊಂಡಿದ್ದಾಗ 5 ಗಂಟೆಗಳ ಕಾಲ ತೆಗೆದುಕೊಳ್ಳುತ್ತಿದ್ದು, ಈಗ ನೀರು ಕಡಿಮೆಯಾದ ಕಾರಣ 2 ಗಂಟೆಗಳ ಕಾಲದಲ್ಲಿ ದಾರಿ ಸೂಚಿಸುವ ಹಗ್ಗಗಳ ಮೂಲಕ ಈಜುಕೊಂಡು ಹೊರಕ್ಕೆ ಬರಬಹುದಾಗಿತ್ತು.


ಶ್ರೀಮತಿ ವಲೀಪೆರ್ನ್ ಗುನನ್ : 'ನಾನು ಸತ್ತುಹೋಗಿದ್ದೇನೆ ಆದರೂ ಬದುಕಿದ್ದೇನೆ'.

ಆಮ್ಲಜನಕದ ಏರ್ ಟ್ಯಾಂಕರ್ಗಳನ್ನು ಸಾಗಿಸುತ್ತಿದ್ದ ಸಮನ್ ಅದೇ ಆಮ್ಲಜನಕದ ಕೊರತೆಯಿಂದ ಪ್ರಾಣ ಕಳೆದುಕೊಂಡಿದ್ದು ಮಾತ್ರ ಆತಂಕಕಾರಿ ವಿಷಯವಾಯಿತು. ಥೈಲ್ಯಾಂಡ್ ಮಹಾರಾಜ ವಜ್ರೈರಾಲಾಂಗ್ಕಾರ್ನ್, ಸಮನ್ ಗುನನ್ ಅವರಿಗೆ ರಾಯಲ್ – ಪ್ರಾಯೋಜಿತ ಅಂತ್ಯಕ್ರಿಯೆಯನ್ನು ಮಾಡುವಂತೆ ಆದೇಶ ನೀಡಿದರು. ಮೊದಲಿಗೆ ಸಮನ್ ಗುನನ್ ಅವರ ಪಾರ್ಥಿವ ಶರೀರವನ್ನು ಚಿಯಾಂಗ್ ರೈ ಪ್ರಾಂತ್ಯದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾ ಫಹ್ ಲ್ವಾಂಗ್ಗೆ ಕೊಂಡ್ಯೊದು ಅನಂತರ ಸಮನ್ ಹುಟ್ಟೂರಾದ ರೋಯಿ ಎಟ್ನಲ್ಲಿಗೆ ತೆಗೆದುಕೊಂಡು ಹೋಗಲಾಯಿತು. ಸಮನ್ ಗುನನ್ ಒಳ್ಳೆ ಸೈಕ್ಲಿಸ್ಟ್ ಮತ್ತು ಓಟಗಾರರು ಆಗಿದ್ದರು.

ooo

ಜುಲೈ 6ರ ಬೆಳಿಗ್ಗೆ ಥಾಯ್ ನೌಕಾದಳದ ಸೀಲ್ ಅಧಿಕಾರಿಗಳು ತಮ್ಮ ಮಾಜಿ ಸಹೋದ್ಯೋಗಿಗೆ ಗೌರವ ಸಲ್ಲಿಸಿ, ಸಮನ್ ಒಬ್ಬ ನುರಿತ ಮತ್ತು ಪ್ರತಿಭಾನ್ವಿತ ಸೀಲ್ ಮತ್ತು ಟ್ರೈಯಾಥ್ಲಾನ್ ಕ್ರೀಡಾಪಟು ಎಂದು ತಿಳಿಸಿದರು. ಸಮನ್ ಸೀಲ್ನಿಂದ ರಾಜೀನಾಮೆ ಪಡೆದುಕೊಂಡ ಮೇಲೂ ಅವರು ತಮ್ಮ ಹಿಂದಿನ ಸಹೋದ್ಯೋಗಿಗಳೊಂದಿಗೆ ನಿಖಟ ಸಂಪರ್ಕ ಇಟ್ಟುಕೊಂಡಿದ್ದರು ಎಂದು ತಿಳಿಸಿದರು. ಅವರು ಕೊನೆಯವರೆಗೂ ಸೀಲ್ನ ಯಾವುದೇ ಚಟುವಟಿಕೆ ನಡೆದರೂ ಅದರಲ್ಲಿ ಪಾಲ್ಗೊಳ್ಳುತ್ತಿದ್ದರು. ಸಮನ್ ಕಾರ್ಯ ನಿರ್ವಹಿಸುತ್ತಲೇ ನಮ್ಮನ್ನ ಬಿಟ್ಟುಹೋದರು. ಅವರ ಪ್ರಯತ್ನ ಮತ್ತು ನಿರ್ಣಯ ಯಾವಾಗಲೂ ಎಲ್ಲಾ ಡೈವರ್ಸ್ ಹೃದಯಗಳಲ್ಲಿ ಉಳಿದುಕೊಳ್ಳುತ್ತದೆ. ನೀವು ಶಾಂತಿಯಿಂದ ವಿಶ್ರಾಂತಿ ಪಡೆಯುತ್ತೀರಿ ಮತ್ತು ನೀವು ಬಯಸಿದಂತೆ ನಾವು ನಿಮ್ಮ ಉದ್ದೇಶದ ಜೊತೆಗೆ ಇರುತ್ತೇವೆ ಮತ್ತು ಸಾಧಿಸುತ್ತೇವೆ ಎಂಬುದಾಗಿ ಅವರ ಗೆಳೆಯರು ಪ್ರಜ್ಞೆ ಮಾಡಿದರು. ಮೂವತ್ತೆಂಟು ವರ್ಷಗಳ ವಯಸ್ಸಿನ ಸಮನ್ ಸೀಲ್ ನೌಕಾದಳಕ್ಕೆ ರಾಜೀನಾಮೆ ನೀಡಿ ವಿಮಾನ ನಿಲ್ದಾಣದಲ್ಲಿ ಭದ್ರತಾ ಅಧಿಕಾರಿಯಾಗಿ ಕೆಲಸ ಮಡುತ್ತಿದ್ದರು ಎಂದು ತಿಳಿಯುತ್ತದೆ. ಕಾರ್ಯಾಚರಣೆಯಲ್ಲಿ ತೊಡಗಿಕೊಂಡಿದ್ದ ಸೀಲ್ನ 50 ರಕ್ಷಕರಲ್ಲಿ ಸಮನ್ ಒಬ್ಬರಾಗಿದ್ದರು.

ಸಮನ್ ಗುನನ್ ಅವರ ಪತ್ನಿ ಶ್ರೀಮತಿ ವಲೀಪೆರ್ನ್ ಅವರನ್ನು ಬಿ.ಬಿ.ಸಿ ಟಿವಿ ಸಂದರ್ಶಕರು ಮಾತನಾಡಿಸಿದಾಗ 'ನನ್ನ ದುಃಖವನ್ನು ನಿಗ್ರಹಿಸಲು ನಾನು ಹೆಮ್ಮೆ ಪಡುತ್ತೇನೆ. ನಾನು ಸತ್ತುಹೋಗಿದ್ದೇನೆ. ಆದರೂ ಬದುಕಿದ್ದೇನೆ' ಎಂಬುದಾಗ ಹೇಳಿದರು.



ಶ್ರೀಮತಿ ವಲೀಪೆರ್ನ್ ಗುನನ್.

ನನ್ನ ಪತಿ ಯಾರು ಎಂಬ ಕಾರಣಕ್ಕಾಗಿ ನಾಯಕನೆಂಬ ಪ್ರಶಂಸೆ ನೀಡಲಾಗಿದೆ. ಅವರು ಬೇರೆಯವರಿಗೆ ಸಹಾಯ ಮಾಡುವುದನ್ನು ಪ್ರೀತಿಸುತ್ತಿದ್ದರು ಮತ್ತು ಧರ್ಮಾರ್ಥ ಕೆಲಸಗಳನ್ನು ಮಾಡುತ್ತಿದ್ದರು ಎಂದು ಹೇಳಿದರು. ಪತಿ ಸಮನ್ ಮತ್ತು ಆಕೆಯ ನುಡುವಿನ ಸಂಬಂಧದ ಬಗ್ಗೆ ಮಾತನಾಡುತ್ತ, ಪ್ರತಿ ದಿನ ಕೆಲಸಕ್ಕೆ ಹೋಗುವಾಗ ಒಬ್ಬರಿಗೊಬ್ಬರು 'ಐ ಲವ್ ಯು' ಎಂದು ಹೇಳಿಕೊಳ್ಳುತ್ತಿದ್ದೆವು

ಎಂದು ಹೇಳಿದರು. ಆ ದಿನವೂ ಹಾಗೆಯೇ ಹೇಳಿ ಹೋದರು. ಮಧ್ಯಾಹ್ನದ ಸಮಯದಲ್ಲಿ ಇಬ್ಬರೂ ಊಟ ಏನು ಮಾಡಿದೆವು ಎಂದು ಕೇಳಿಕೊಳ್ಳುತ್ತಿದ್ದೆವು. ಮತ್ತೆ ಸಾಯಂಕಾಲ ಮನೆಗೆ ಕೆಲಸದಿಂದ ಬಂದಾಗ ಹೇಗಿದ್ದೀರ ಎಂದು ನಾನು ಕೇಳುವುದು ದಿನನಿತ್ಯದ ವಾಡಿಕೆ.

ooo

ಹುಡುಗರು ಆಸ್ಪತ್ರೆಯಲ್ಲಿ ಚೇತರಿಸಿಕೊಂಡ ಮೇಲೆ ಒಂದು ವಾರದ ನಂತರ ಗುನನ್ ಅವರ ಸಾವಿನ ಬಗ್ಗೆ ಹುಡುಗರಿಗೆ ತಿಳಿಸಲಾಯಿತು. ರಾಷ್ಟ್ರೀಯ ಸಾರ್ವಜನಿಕ ಆರೋಗ್ಯ ಸಚಿವಾಲಯ ಬಿಡುಗಡೆ ಮಾಡಿದ ವೈಲ್ಡ್ ಬೋರ್ಸ್ ತಂಡದ ಎಲ್ಲಾ ಹುಡುಗರು ತಮ್ಮ ತಲೆಗಳನ್ನು ಬಗ್ಗಿಸಿಕೊಂಡು ಗುನನ್ ಅವರ ರೇಖಾಚಿತ್ರದ ಮುಂದೆ ದುಃಖವನ್ನು ವ್ಯಕ್ತಪಡಿಸಿದರು. ಈ ರೇಖಾಚಿತ್ರವನ್ನು 37 ವರ್ಷದ ವಿಮಾನ ಭದ್ರತಾ ಪಡೆಯ ಅಧಿಕಾರಿಯೊಬ್ಬರು ಬಿಡಿಸಿದ್ದರು. ಆ ರೇಖಾಚಿತ್ರದ ಮೇಲೆ ಈ ರೀತಿ ಬರೆಯಲಾಗಿತ್ತು. 'bring the boys back home.' ವೈಲ್ಡ್ ಬೋರ್ಸ್ ತಂಡ ಗುಹೆಯ ಒಳಗೆ ಇರುವುದನ್ನು ಗುರುತಿಸಿದ ಒಂದು ದಿನಕ್ಕೆ ಮುಂಚೆ ಅಂದರೆ ಜುಲೈ 1ರಂದು ಗುನನ್ ಸ್ವಯಂಸೇವಕರಾಗಿ ಬಂದು ಸೇರಿಕೊಂಡಿದ್ದರು.

ಚಿಯಾಂಗ್ ರೈನಲ್ಲಿ ವಿಮಾನ ಹತ್ತುವ ಮುನ್ನ ಗುನನ್ ಸಾಮಾಜಿಕ ಮಾಧ್ಯಮಗಳ ಜೊತೆಗೆ ಮಾತನಾಡಿದ ಒಂದು ವೀಡಿಯೋದಲ್ಲಿ 'ಈ ಸಾಯಂಕಾಲ ನೀವು ನೋಡಿ, ನಾವು ಮಕ್ಕಳನ್ನು ಮನೆಗೆ ಕರೆದುಕೊಂಡು ಬರುತ್ತೇವೆ' ಎಂದು ಹೇಳಿದ್ದರು. ಅವರ ಪ್ರಯತ್ನಗಳಿಗೆ ಧನ್ಯವಾದಗಳು, ಮತ್ತು ಜಗತ್ತಿನಾದ್ಯಂತ ಬಂದ ಡಜನ್ಗಟ್ಟಲೆ ಈಜುಗಾರರು ಹುಡುಗರನ್ನು ಪಾರುಮಾಡಿ ಗುನನ್ ಅವರ ಪ್ರತಿಜ್ಞೆಯನ್ನು ಪೂರೈಸಿದರು. ರಾಯ್ ಎಟ್ ಪ್ರಾಂತ್ಯದ ವಾಟ್ ಬಾನ್ ನೊಂಗ್ ಖುನಲ್ಲಿ ಅಪಾರ ಜನಸಮೂಹ ಗುನನ್ ಅವರ ಪಾರ್ಥಿವ ಶರೀರಕ್ಕೆ ವಿದಾಯ ಹೇಳಿತು. ಮರು ದಿನ ಥಾಯ್ ಕಿಂಗ್ ರಾಯಲ್ ತೀರ್ಪು ನೀಡಿದರು. ಅದು ಮರಣೋತ್ತರವಾಗಿ ಸಮನ್ ಅವರಿಗೆ ಲೆಫ್ಟಿನೆಂಟ್ ಕಮಾಂಡರ್ ಜೊತೆಗೆ honoured him with the royal decoration of Knight Grand Cross (first class) of the most exalted order of the White Elephant ನೀಡಿ ಗೌರವಿಸಲಾಯಿತು.

ಸಮನ್ ಅವರ ಪತ್ನಿ ವಲೀಪೆರ್ನ್ ಗುನನ್ ಸಾಮಾಜಿಕ ಮಾಧ್ಯಮಕ್ಕೆ ತನ್ನ ಪತಿಯ ಬಗ್ಗೆ ಕೆಲವು ವಿಷಯಗಳನ್ನು ಬರೆದು ಪೋಸ್ಟ್ ಮಾಡಿದರು: ಗುನನ್ ಅವರ ಕಪ್ಪು ಬಿಳುಪಿನ ಚಿತ್ರದ ಪಕ್ಕದಲ್ಲಿ, “I miss you, ಎಂದು ಬರೆದಿದ್ದಾರೆ. ಹಾಗೇ ಪೋಸ್ಟ್‌ನಲ್ಲಿ 'ನಿಮ್ಮನ್ನ ಪ್ರೀತಿಸುತ್ತೇನೆ. ನಿಮ್ಮನ್ನ ಇಷ್ಟ ಪಡುತ್ತೇನೆ. ನೀವು ನನ್ನ ಹೃದಯ... ಈಗ ನಾನು ಬೆಳಿಗ್ಗೆ ಎದ್ದೇಳುವಾಗ... ಯಾರಿಗೆ ಮುದ್ದು ಕೊಡಲಿ?' ಎಂದು ಬರೆದುಕೊಂಡಿದ್ದರು.



ಗುಹೆಯಿಂದ ನೀರು ಹೊರಕ್ಕೆ ಹಾಕುತ್ತಿರುವ ಒಂದು ಚಿತ್ರ.

ಬೌದ್ಧ ಸನ್ಯಾಸಿಗಳಾಗಿ ಒಂಬತ್ತು ದಿನಗಳ ಪ್ರಾರ್ಥನೆ ಧ್ಯಾನ

ವೈಲ್ಡ್ ಬೋರ್ಸ್ ಜೂನಿಯರ್ ಫುಟ್ಬಾಲ್ ತಂಡದ ಹನ್ನೊಂದು ಹುಡುಗರು ಮತ್ತು ಸಹಾಯಕ ತರಬೇತುದಾರ 'ಅಕೆ' ಆಸ್ಪತ್ರೆಯಿಂದ ಮನೆಗೆ ಬಂದು ಕೆಲವು ದಿನಗಳ ಕಾಲ ಪೋಷಕರು ಮತ್ತು ಗೆಳೆಯರ ಜೊತೆಗೆ ಕಾಲ ಕಳೆದಿದ್ದರು. ಈಗ ಅವರೆಲ್ಲ ಮತ್ತೆ ಸಾಮಾನ್ಯ ಜೀವನಕ್ಕೆ ಕಾಲಿಡುವ ಮುಂಚೆ ಬೌದ್ಧ ಮಠಕ್ಕೆ ಹೋಗಿ 9 ದಿನಗಳ ಕಾಲ ಬೌದ್ಧ ಸನ್ಯಾಸಿಗಳ ರೀತಿ ಕಾಲ ಕಳೆಯಬೇಕಾಗಿತ್ತು. ಕೋಚ್ ಏಕಾಪೋಲ್ ಚಂತವಾಂಗ್ ಅವರನ್ನು ಮುಖ್ಯ ಸನ್ಯಾಸಿಯಾಗಿ ನೇಮಿಸಲಾಯಿತು. ಹನ್ನೆರಡು ಹುಡುಗರಲ್ಲಿ ಅದುಲ್ ಸ್ಯಾಮ್ ಕ್ರಿಶ್ಚಿಯನ್ ಆದ ಕಾರಣ ಅವನನ್ನು ಸೇರಿಸಿಕೊಳ್ಳಲಿಲ್ಲ. ಮಿಲಿಟರಿ ನಿಯಂತ್ರಿತ ಸರ್ಕಾರವು ಅವರು ಗುಹೆಯಿಂದ ಪಾರಾದ ಕಥೆಯನ್ನು ಹೇಗೆ ಹಿಡಿತದಲ್ಲಿ ಇಡಬೇಕು ಎಂಬುದನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿತ್ತು. 25 ವರ್ಷಗಳ ತರಬೇತುದಾರನೂ ಕೂಡ ಸನ್ಯಾಸಿಯ ಅದೇಶಗಳನ್ನು ಸ್ವೀಕರಿಸಬೇಕಿತ್ತು.

ಒಟ್ಟು 12 ಜನರ ತಂಡ 9 ದಿನಗಳ ಕಾಲ ಬೌದ್ಧ ಮಠದಲ್ಲಿ ಕಾಲ ಕಳೆಯಬೇಕಿದ್ದು, ಇದು ಥೈಲ್ಯಾಂಡಿನಲ್ಲಿ ಎಲ್ಲಾ ಬೌದ್ಧ ಪುರಷರು ನಡೆಸಬೇಕಾದ ಸಂಪ್ರದಾಯವಾಗಿತ್ತು. ಇಲ್ಲಿ ಈಗ ವೈಲ್ಡ್ ಬೋರ್ಸ್ ತಂಡಕ್ಕಾಗಿ ನಡೆಸುತ್ತಿರುವ ಈ ಸನ್ಯಾಸಿ ತರಬೇತಿ ವಿಶೇಷವಾಗಿ 'ಆಧ್ಯಾತ್ಮಿಕ ಶುದ್ಧೀಕರಣ' ಎಂಬ ಪ್ರತ್ಯೇಕ

ಬೌದ್ಧ ತರಬೇತಿಯಾಗಿತ್ತು. ಈ ತರಬೇತಿಯಲ್ಲಿ ರಕ್ಷಣಾ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಪ್ರಾಣ ಕಳೆದುಕೊಂಡಿದ್ದ ಸಮನ್ ಗುನನ್ ಅವರನ್ನು ನೆನಪಿಸಿಕೊಳ್ಳುವುದು ಮತ್ತು ಅವರ ಕುಟುಂಬಕ್ಕೆ ನೀಡಿದ ಮಾತುಗಳನ್ನು ನೆರವೇರಿಸುವುದು ಒಂದು ಮುಖ್ಯ ಕೆಲಸವಾಗಿತ್ತು.



ವೈಲ್ಡ್ ಬೋರ್ಸ್ ತಂಡ ಬೌದ್ಧ ಸನ್ಯಾಸಿಗಳಾಗಿ ದೀಕ್ಷೆ ಪಡೆದುಕೊಳ್ಳುತ್ತಿರುವುದು.

ಎಲ್ಲಾ ಹುಡುಗರು ಮಠದಲ್ಲಿ ಕೆಲಸ ಮಾಡಬೇಕಿದ್ದು, ಇದೆಲ್ಲ ಅವರ ಒಳ್ಳೆಯದಕ್ಕೆ ಮತ್ತು ಅವರ ರಕ್ಷಣೆಗಾಗಿ ನಡೆಸುವ ಕೆಲಸವಾಗಿದೆ ಎಂದು ಹೇಳಲಾಯಿತು. ನೈಟ್ ಎಂಬ ಹುಡುಗನ ಅಜ್ಜ ಸೀವಾಡ್ ಸೊಂಪಿಯಾಂಗ್ಜೈ ಹೇಳುವಂತೆ, ಹುಡುಗರೆಲ್ಲ ಗುಹೆಯ ಒಳಗೆ ಹೋಗಿ ಸತ್ತೋಗಿ ಮತ್ತೆ ಪುನರ್ಜನ್ಮ ಪಡೆದಿದ್ದಾರೆ. ಅದಕ್ಕಾಗಿಯೇ ಅವರೆಲ್ಲ ಈಗ ಬೌದ್ಧ ಸನ್ಯಾಸಿ ದೀಕ್ಷೆಯನ್ನು ಪಡೆಯಬೇಕಿದೆ ಎಂದು ಹೇಳಿದರು. ಎಲ್ಲರೂ 9 ದಿನಗಳ ಕಾಲ ಸನ್ಯಾಸಿಗಳಾಗಿ ಬೇರೆಬೇರೆ ಮಠಗಳಲ್ಲಿ ಕಾಲ ಕಳೆದರು. ಈ 9 ದಿನಗಳಲ್ಲಿ ಧ್ಯಾನ, ಪ್ರಾರ್ಥನೆ ಮಾಡುವುದರೊಂದಿಗೆ ದೇವಾಲಯಗಳ ಕೆಲಸಗಳಲ್ಲಿ ತೊಡಗಿಕೊಂಡಿದ್ದರು. ಥಾಯ್ ಸಾಂಪ್ರದಾಯದಲ್ಲಿ 9 ದಿನಗಳು ಎನ್ನುವುದು ಅದೃಷ್ಟದ ಸಂಖ್ಯೆಯಾಗಿದೆ.

ಮೊದಲಿಗೆ ಎಲ್ಲಾ ಹುಡುಗರನ್ನೂ ಚಿಯಾಂಗ್ ರೈಯ ಮೇ ಸಾಯಿ ಜಿಲ್ಲೆಯ ಫ್ರಾ ದ ದಾಯ್ ವಾವೊ ಬೌದ್ಧ ದೇವಾಲಯಕ್ಕೆ ಕರೆಸಿಕೊಳ್ಳಲಾಯಿತು. ಮೊದಲನೇ ದಿನ ಹುಡುಗರ ಪೋಷಕರು ಮತ್ತು ಸ್ಥಳೀಯ ಜನರು ಹುಡುಗರೆಲ್ಲ ದೀಕ್ಷೆ ಪಡೆಯುವುದನ್ನು ವೀಕ್ಷಿಸಲು ಬಂದಿದ್ದರು. ಸಾಯಂಕಾಲ ಅಲ್ಲಿನ ಸನ್ಯಾಸಿಗಳು ಎಲ್ಲಾ ಹುಡುಗರ ತಲೆ ಕೂದಲನ್ನು ಬೋಳಿಸಿ ಸನ್ಯಾಸಿಗಳಾಗಿ ದೀಕ್ಷೆ ಪಡೆಯಲು ಸಿದ್ಧಗೊಳಿಸಿದರು. ಥೈಲ್ಯಾಂಡಿನ ಬೌದ್ಧ ಪುರುಷರು ಸಾಂಪ್ರದಾಯಿಕವಾಗಿ ಸನ್ಯಾಸಿಗಳಾಗಿ ದೀಕ್ಷೆ ಪಡೆಯುತ್ತಾರೆ. ಅವರು ಬಾಲಕರಾಗಿದ್ದಾಗಲೇ ನವಶಿಷ್ಯರಾಗಿ ಸೇರಿಕೊಂಡು ತಮ್ಮ ಪೋಷಕರಿಗೆ

ಅಥವಾ ತಮ್ಮನ್ನ ಬೆಳೆಸುವವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾರೆ. ಒಬ್ಬ ವ್ಯಕ್ತಿ ಸನ್ಯಾಸಿಯಾಗಿ ದಾನ ಮಾಡಿದರೆ ಅಥವಾ ಸೇವೆ ಮಾಡಿದರೆ ಅವರು ಮುಂದೆ ಪೋಷಕರಾಗಿ ವಿಸ್ತರಿಸುವ ಯೋಗ್ಯತೆಯನ್ನು ಗಳಿಸುತ್ತಾರೆ ಎಂದು ನಂಬಲಾಗಿದೆ. ಇದರ ಜೊತೆಗೆ ಇಲ್ಲಿ ಹುಡುಗರು ಸಮನ್ ಗುನನ್ ನೆನಪಿಗಾಗಿ ತಮ್ಮ ಅರ್ಹತೆಯನ್ನು ದಾನ ಮಾಡಿದರು.

❑

ವಿದೇಶಗಳಿಂದ ಹರಿದುಬಂದ ಸ್ವಯಂಸೇವಕರು ಮತ್ತು ಸಹಾಯ

ಅಧ್ಯಾಯ-15

- ಆಸ್ಟ್ರೇಲಿಯಾ : ಫೆಡರಲ್ ಪೊಲೀಸ್ ಡ್ರೈವರ್ಸ್, ವಿದೇಶಾಂಗ ವ್ಯವಹಾರಗಳ ಅಧಿಕಾರಿಗಳು ಮತ್ತು ರಕ್ಷಣಾ ಪಡೆಗಳನ್ನು ಒಳಗೊಂಡಿದ್ದ 20 ಜನರ ತಂಡ ಬಂದಿತ್ತು. ಅವರೆಲ್ಲ ಗುಹೆಯ ಒಳಗೆ ಮೂರನೇ ಚೇಂಬರ್ನಲ್ಲಿ ಶಿಬಿರ ಹಾಕಿಕೊಂಡು ಸಹಾಯಕ್ಕೆ ನಿಂತಿದ್ದರು. ದಕ್ಷಿಣ ಆಸ್ಟ್ರೇಲಿಯಾದ ಅರವಳಿಕೆ ವೈದ್ಯ ಮತ್ತು ಗುಹಾತಜ್ಞ ಈಜುಗಾರ ರಿಚರ್ಡ್ ಹ್ಯಾರಿಸ್ ಇವರಲ್ಲಿ ಮುಖ್ಯರು. ಹ್ಯಾರಿಸ್ ಜೊತೆಗೆ ಬಂದಿದ್ದ ಕ್ರೇಗ್ ಛಲನ್ ಇಬ್ಬರೂ ಗುಹೆಗಳ ಒಳಗೆ ಕೆಲಸ ಮಾಡಿದ ತಜ್ಞರು. ಹಲವು ಕಡೆಗಳಲ್ಲಿ ಗುಹೆಗಳ ಒಳಗೆ ಸಿಕ್ಕಿಕೊಂಡವರನ್ನು ಪಾರು ಮಾಡುವ ಕೆಲಸದಲ್ಲಿ ತೊಡಗಿಕೊಂಡಿದ್ದ ಅನುಭವ ಹೊಂದಿದ್ದವರು. ಥಾಯ್ ಸರ್ಕಾರ ಆಸ್ಟ್ರೇಲಿಯಾ ಸರ್ಕಾರದ ಜೊತೆಗೆ ಮಾತನಾಡಿ ಅವರನ್ನು ಕರೆಸಿಕೊಂಡಿತ್ತು.

- **ಯುನೈಟೆಡ್ ಕಿಂಗ್ಡಮ್ :** ಬ್ರಿಟಿಷ್ ಗುಹಾ ಪಾರುಗಾಣಿಕಾ ಕೌನ್ಸಿಲ್, ಥೈಲ್ಯಾಂಡ್‌ನ ಗುಹೆಗಳಲ್ಲಿ ಅನುಭವ ಪಡೆದ ಎಂಟು ಅನುಭವಿ ಗುಹಾ ಪಾರುಗಾಣಿಕಾ ಈಜುಗಾರರನ್ನು ಕಳುಹಿಸಿಕೊಟ್ಟಿತ್ತು. ಇವರ ಜೊತೆಗೆ ಮೂವರು ಪಾರುಗಾಣಿಕಾ ಸಿಬ್ಬಂದಿ ವಿಶೇಷ ಸಲಕರಣೆಗಳೊಂದಿಗೆ ಆಗಮಿಸಿದ್ದರು. ಥಮ್ ಲುವಾಂಗ್ ಪ್ರದೇಶದಲ್ಲಿ ವಾಸಿಸುತ್ತಿರುವ ಬ್ರಿಟಿಷ್ ವ್ಯಕ್ತಿ ವರ್ನನ್ ಅನ್ಸ್ವರ್ತ್ ಗುಹೆಯ ಬಾಗಿಲಿಗೆ ಬಂದ ಮೊದಲ ಗುಹಾತಜ್ಞ ವ್ಯಕ್ತಿಯಾಗಿದ್ದರು. ಜಾನ್ ವೋಲನ್ಥೆನ್ ಮತ್ತು ರಿಕ್ ಸ್ಟಾಂಟನ್ 3.2 ಕಿಲೋಮೀಟರುಗಳ ದೂರದಲ್ಲಿ ಗುಹೆಯ ಒಳಗೆ ಸಿಕ್ಕಿಕೊಂಡಿದ್ದ ಹುಡುಗರನ್ನು ಮೊದಲಿಗೆ ಪತ್ತೆಹಚ್ಚಿದ ಬ್ರಿಟಿಷರು. ಕ್ರಿಸ್ ಜುವೆಲ್ ಮತ್ತು ಜಾಸನ್ ಮಲ್ಲಿಸನ್ 500 ಕಿಲೋಗ್ರಾಂ ತೂಕದ ಡೈವಿಂಗ್ ಉಪಕರಣಗಳನ್ನು ಬ್ರಿಟನ್ನಿಂದ ತಂದಿದ್ದರು. ಇವರ ಜೊತೆಗೆ ಬಂದಿದ್ದ ಉಳಿದ ತಜ್ಞರೆಂದರೆ ಕಾನರ್ ರೋಯಿ, ಜೋಸ್ ಬ್ರಾಚ್ಗೆ, ಜಿಮ್ ವಾರ್ನಿ, ಮೈಕ್ ಕ್ಲೇಟನ್, ಗ್ಯಾರಿ ಮಿಚೆಲ್ ಮತ್ತು ಟಿಮ್ ಆಯ್ಕಾನ್. ರಾಬರ್ಟ್ ಹಾರ್ಪರ್ ಸೇರಿದಂತೆ ಗುಹಾ ಪಾರುಗಾಣಿಕಾ ಸಿಬ್ಬಂದಿಗೆ ಮತ್ತು ಈಜುಗಾರರಿಗೆ ಮೇಲ್ವಿ ನಿಯಂತ್ರಣಗಳನ್ನು ಒದಗಿಸಿದರು.
- **ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ :** ಜೂನ್ 28ರಂದು 353ನೇ ಸ್ಪೆಶಲ್ ಆಪರೇಷನ್ಸ್ ಗ್ರೂಪ್ ಮತ್ತು 31ನೇ ಪಾರುಗಾಣಿಕಾ ಸ್ಕ್ವಾಡ್ರನ್ ಮತ್ತು ವಿಮಾನ ಸಿಬ್ಬಂದಿ ಸೇರಿದಂತೆ ಒಕಿನಾವಾದಿಂದ ಯು.ಎಸ್. ಮಿಲಿಟರಿ ಇಂಡೋ–ಪೆಸಿಫಿಕ್ ಕಮ್ಯಾಂಡ್ –36 ಜನರ ತಂಡವನ್ನು ಥೈಲ್ಯಾಂಡ್ಗೆ ಕಳುಹಿಸಿಕೊಟ್ಟಿತ್ತು. ಮಿಲಿಟರಿ ಡಾಟ್.ಕಾಮ್ ಪ್ರಕಾರ ಅವರು ಜಂಟಿ ಯು.ಎಸ್. ಮಿಲಿಟರಿ ಸಲಹಾ ಗ್ರೂಪ್ ಥೈಲ್ಯಾಂಡ್ ಸದಸ್ಯರನ್ನೂ ಒಳಗೊಂಡಂತೆ 7 ಜನರ ಇತರ ಸಿಬ್ಬಂದಿಯನ್ನು ಸೇರಿಕೊಂಡಿತು. ಪೆಂಟಗಾನ್ ವಕ್ತಾರ ಕರ್ನಲ್ ರಾಬ್ ಮ್ಯಾನಿಂಗ್ ಯು.ಎಸ್. ಸಿಬ್ಬಂದಿಯ ಸಾಧನಗಳನ್ನು ಪತ್ರಕರ್ತರ ಮುಂದೆ ಮೊದಲಿಗೆ ಪ್ರದರ್ಶಿಸಿ ಸುರಕ್ಷಿತ ಹಾದಿಗಾಗಿ ಗುಹೆಯ ಮೊದಲ ಮೂರು ಕೋಣೆಗಳನ್ನು ಸಿದ್ಧಪಡಿಸಿದರು. ಯು.ಎಸ್. ಸೈನ್ಯವು ಅಂತಿಮವಾಗಿ ಕೋಣೆಗಳ ಮೂಲಕ ಹುಡುಗರನ್ನು ಸ್ಥಳಾಂತರಿಸುವಾಗ ಸಹಾಯಕ್ಕೆ ನಿಂತುಕೊಂಡಿತ್ತು. ವೈದ್ಯಕೀಯ ಮತ್ತು ಇತರ ಸಿಬ್ಬಂದಿಗೆ ತಾಂತ್ರಿಕ ನೆರವನ್ನೂ ಒದಗಿಸಿತು.
- **ಬೆಲ್ಜಿಯಂ :** ಫುಕೆಟ್ನಲ್ಲಿನ ಡೈವಿಂಗ್ ಶಾಲೆಯ ಮಾಲೀಕರಾದ ಬೆನ್

ರೀಮೆನ್ಸ್‌ಮೆಂಟ್ಸ್ ಗುಹೆಗಳ ಡೈವಿಂಗ್ ಸಾಮರ್ಥ್ಯದಲ್ಲಿ ಅಪಾರ ಕೊಡುಗೆ ನೀಡಿರುವವರು.

- **ಕೆನಡಾ :** ವ್ಯಾಂಕೋವರ್ನಿಂದ ಡೈವ್ ಬೋಧಕರಾದ ಎರಿಕ್ ಬ್ರೌನ್, ಗುಹೆ ಡೈವಿಂಗ್ ತಂಡದಲ್ಲಿ ಪಾಲ್ಗೊಂಡು ಅನುಭವ ಪಡೆದಿರುವರು.
- **ಚೀನಾ :** ಚೀನಾ ದೇಶದ 6 ಜನರ ಗುಹಾ ಪಾರುಗಾಣಿಕಾ ತಜ್ಞರ ತಂಡ ಜೂನ್ 29ರಂದು ಥೈಲ್ಯಾಂಡ್ಗೆ ಆಗಮಿಸಿತು. ಈ ತಂಡ ನೀರಿನೊಳಗಿನ ರೋಬೋಟ್. ಡೈವಿಂಗ್ ಉಪಕರಣಗಳು ಮತ್ತು ಮೂರು-ಆಯಾಮದ ಇಮೇಜರ್ ಸೇರಿದಂತೆ ರಕ್ಷಣಾ ಸಾಧನಗಳನ್ನು ತಂದಿತ್ತು. ದಿ.ಪೇಸ್ಲ್ಯಾಂಡ್ ಫೌಂಡೇಶನ್ ಮತ್ತು ಚೀನಾ ಗ್ರೀನ್ ಬೋಟ್ನ ಹೆಚ್ಚುವರಿ ತಂಡಗಳು ಸಹ ಈ ಪ್ರಯತ್ನದಲ್ಲಿ ನೆರವಾಗಲು ಬಂದಿದ್ದವು.
- **ಝೆಕ್ ರಿಪಬ್ಲಿಕ್ :** ಝೆಕ್ ರಿಪಬ್ಲಿಕ್ ಸರ್ಕಾರವು ಝೆಕ್ ಉತ್ಪಾದಕರ ಉನ್ನತ ಸಾಧನೆ ಪಂಪ್ಗಳನ್ನು ತಂದಿತ್ತು. ಅದು ನಾಲ್ಕು ಪಂಪ್ಗಳನ್ನು ಹೊಂದಿದ್ದು ಪ್ರತಿ ಸೆಕೆಂಡಿಗೆ 400 ಲೀಟರಿನಷ್ಟು (1,440,000 ಎಲ್/ಎಚ್380,000 ಯು.ಎಸ್.ಗ್ಯಾಲನ್/ಗಂಟೆಗೆ) ನೀರನ್ನು ಹೊರಕ್ಕೆ ಹಾಕುತ್ತಿತ್ತು.
- **ಡೆನ್ಮಾರ್ಕ್ :** ಫಿನ್ನಿಷ್ ಮಿಕೊ ವಾಸಿ ಜೊತೆಗೆ ಡೈವಿಂಗ್ ಶಾಲೆಯನ್ನು ನಡೆಸುತ್ತಿರುವ ಇಬ್ಬರು ಡ್ಯಾನಿಷ್ ಡೈವರ್ಗಳು, ಡೈವಿಂಗ್ ಭೋದಕ ಕ್ಲಾಸ್ ರಾಸ್ಮುಸ್ಸೆನ್, ಗುಹೆ ಡೈವಿಂಗ್ ತಂಡದಲ್ಲಿ ಬಾಗವಹಿಸಲು ಬಂದಿದ್ದರು.
- **ಫಿನ್ಲ್ಯಾಂಡ್ :** ಮಿಕ್ಕೊ ಪಾಸಿ ನೀರಿನಲ್ಲಿ ಧುಮುಕುವವರನ್ನು ಪಾರಮಾಡಲು ಅಥವಾ ಅವರಿಗೆ ಸಹಾಯ ಮಾಡಲು ಬಂದಿದ್ದರು.
- **ಇಂಡಿಯಾ :** ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್(ಕೆಬಿಎಲ್)ನಿಂದ ನಾಲ್ಕು ಜನರು ಪಂಪ್ಗಳ ಬಗ್ಗೆ ತಾಂತ್ರಿಕ ಪರಿಜ್ಞಾನ ಇರುವವರು ಗುಹೆಯಿಂದ ನೀರನ್ನು ಹೋರಗಾಕಲು ಸಹಾಯ ಮಾಡಲು ಬಂದಿದ್ದರು. ಅವರು ಕಿರ್ಲೋಸ್ಕರ್ ಪಂಪ್ಗಳನ್ನು ತೆಗೆದುಕೊಂಡು ಹೋಗಿರಲಿಲ್ಲ.
- **ಇಸ್ರೇಲ್ :** ರಾಫೆಲ್ ಅರೋಶ್ ಈಜುಗಾರರ ಜೊತೆಗೆ ಸೇರಿಕೊಳ್ಳಲು ಬಂದಿದ್ದರು. ತುರ್ತಾಗಿ ಮೊಬೈಲ್ ಸಂವಹನ ಸಾಧನಗಳನ್ನು ಮ್ಯಾಕ್ಸ್ಟೆಕ್ ನೆಟ್ವರ್ಕ್ಸ್ ಧಾನ ಮಾಡಿದರು.

- **ಜಪಾನ್ :** ಥೈಲ್ಯಾಂಡ್ನ ಜಪಾನ್ ಇಂಟರ್‌ನ್ಯಾಷನಲ್ ಕೋಆಪರೇಷನ್ ಎಜೆನ್ಸಿಯ ಒಳಚರಂಡಿ ತಜ್ಞರಾದ ಶಿಗೆಕಿ ಮಿಯಕೆ ಸೇರಿದಂತೆ ಡೈವರ್ಸ್ ಮತ್ತು ಎಂಜಿನಿಯರ್‌ಗಳು ಗುಹೆಯ ಒಳಗಿನ ನೀರನ್ನು ಹೊರಕ್ಕೆ ಹಾಕಲು ಬಂದಿದ್ದರು.
- **ಲಾವೋಸ್ :** ಮಿಯೆಂಟಿಯಾನ್ ಪಾರುಗಾಣಿಕಾ ಸದಸ್ಯರು ಗುಹೆಯ ಒಳಗೆ ಸಿಕ್ಕಿಕೊಂಡಿರುವವರ ಹುಡುಕಾಟ ಮತ್ತು ಪಾರು ಮಾಡುವ ಪ್ರಯತ್ನಗಳಿಗೆ ಸಹಾಯ ಮಾಡಲು ಬಂದಿದ್ದರು.
- **ನೆದರ್ಲ್ಯಾಂಡ್ :** ನೀರಿನ್ನು ಪಂಪ್ ಮಾಡುವ ಪ್ರಯತ್ನಗಳಿಗೆ ಸಹಾಯ ಮಾಡಲು ಒಳಚರಂಡಿ ತಜ್ಞರು ಬಂದಿದ್ದರು.
- **ರಷ್ಯಾ :** ತುರ್ತು ಪರಿಸ್ಥಿತಿಗಳ ಸಚಿವಾಲಯವು ಒಂದು ಸ್ವಯಂಸೇವಕ ಪಾರುಗಾಣಿಕಾ ಪರಿಣಿತರನ್ನು ಒಳಗೊಂಡ ತಂಡವನ್ನು ಕಳುಹಿಸಿತ್ತು.

ಮೇಲಿನ ದೇಶಗಳ ತಜ್ಞರ ಜೊತೆಗೆ ಇನ್ನೂ ಅನೇಕ ದೇಶಗಳ ತಂತ್ರಜ್ಞರು ಭಾಗವಹಿಸಿದ್ದರು. ಇವರಲ್ಲಿ ಹೆಚ್ಚಾಗಿ ಸ್ವಯಂಸೇವಕರು ಇದ್ದರೂ. ಜರ್ಮನಿ, ಮ್ಯಾನ್ಮಾರ್, ಫಿಲಿಪೈನ್ಸ್, ಸಿಂಗೂಪೂರ್, ಸ್ಪೇನ್, ಸ್ವೀಡನ್ ಮತ್ತು ಉಕ್ರೇನ್ಗೆ ಸೇರಿದವರಿದ್ದರು. ಫ್ರಾನ್ಸ್ ತಜ್ಞರು ತಮ್ಮ ತಂತ್ರಜ್ಞರನ್ನು ಕಳುಹಿಸಲು ವಿನಂತಿ ಮಾಡಿಕೊಂಡಾಗ ಥೈಲ್ಯಾಂಡ್ ಅಧಿಕಾರಿಗಳು ಈಗಾಗಲೇ ಸಾಕಷ್ಟು ಪರಿಣಿತರು ಮತ್ತು ಸಂಪನ್ಮೂಲಗಳು ಥೈಲ್ಯಾಂಡ್ಗೆ ತಲುಪಿರುವ ಕಾರಣ ಬೇಕಾಗಿಲ್ಲ ಎಂದು ನಿರಾಕರಿಸಿದರು. ಈ ಗುಹಾ ಪಾರುಗಾಣಿಕಾ ಯೋಜನೆ ವಿಶ್ವದಾದ್ಯಂತ ಗಮನ ಸೆಳೆಯಿತು. ಎಲ್ಲಾ ರೀತಿಯ ಸುದ್ದಿ ಮಾಧ್ಯಮಗಳಲ್ಲಿ ಥೈಲ್ಯಾಂಡ್ ಗುಹೆಯ ಸುದ್ದಿಯ ಪ್ರಕಟಣೆಗಳು ಅಗ್ರ ಭಾಗವನ್ನು ಹೊಂದಿದ್ದವು.

ಫುಟ್ಬಾಲ್ ತಂಡವನ್ನು ಪಾರು ಮಾಡಲು ಒಟ್ಟು 10,000 ಜನರು ಕೈ ಜೋಡಿಸಿದ್ದರು ಎಂದರೆ ನೀವು ನಂಬಲೇಬೇಕು. ಇದಕ್ಕೆ ಮುಂಚೆಯೇ ಪಾಲ್ಗೊಂಡಿದ್ದ ಜನರ ವಿವರಗಳನ್ನು ನೀಡಿದ್ದು ಉಳಿದ ಕೆಲವು ವಿವರಗಳು ಹೀಗಿವೆ. ಏಳು ಪೊಲೀಸ್ ಅಂಬ್ಯುಲೆನ್ಸ್‌ಗಳು, 700ಕ್ಕಿಂತ ಹೆಚ್ಚು ಏರ್ ಕ್ಯಾನಿಸ್ಟರ್ಸ್ (ವಾಯು ಗುಂಡುಗಳು). ಕಾರ್ಯಾಚರಣೆಯಲ್ಲಿ ಗುಹೆಯಿಂದ ಸುಮಾರು ಒಂದು ಬಿಲಿಯನ್ ಲೀಟರ್ ನೀರನ್ನು ಹೊರಕ್ಕೆ ಹಾಕಲಾಯಿತು. ಇದು 400 ಒಲಂಪಿಕ್ ಸಮನಾದ ಈಜು ಕೊಳಗಳ ನೀರು. ಎರಡು ವಾರಗಳ ಸಂದಿಗ್ಧ ಪರಿಸ್ಥಿತಿಯಲ್ಲಿ ದೇಶ ವಿದೇಶಗಳಿಂದ ನೂರಾರು ಸ್ವಯಂ

ಸೇವಕರು, ಅನೇಕ ರೀತಿಯ ತಜ್ಞರು ಥಮ್ ಲುವಾಂಗ್ ಗುಹೆಯ ಹತ್ತಿರಕ್ಕೆ ಸಹಾಯಕ್ಕಾಗಿ ಓಡಿ ಬಂದಿದ್ದರು.

ಹದಿನೆಂಟು ದಿನಗಳು ನಡೆದ ಚಟುವಟಿಕೆಗಳ ಒಂದು ಪಕ್ಷಿ ನೋಟ

- **23.6.2018 :** ಫುಟ್ಬಾಲ್ ಅಭ್ಯಾಸದ ನಂತರ ಭಾರೀ ಮಳೆ ಬೀಳುವ ಮುಂಚೆ ಫುಟ್ಬಾಲ್ ತಂಡ ಥಮ್ ಲುವಾಂಗ್ ಗುಹೆಯ ಒಳಕ್ಕೆ ಪ್ರವೇಶ ಮಾಡಿತು. ಹುಡುಗರು ಮನೆಗೆ ಬರುವುದು ತಡವಾಗಿ ಅವರ ಪೋಷಕರು ಪೊಲೀಸರಿಗೆ ವಿಷಯ ತಿಳಿಸಿದರು. ಪೊಲೀಸರು ಗುಹೆಯ ಪ್ರವೇಶ ದ್ವಾರದಲ್ಲಿ ಬೂಟುಗಳು ಮತ್ತು ಬೈಸಕಲ್ಗಳನ್ನು ಪತ್ತೆ ಮಾಡಿದರು.
- **24.6.2018 :** ಹುಡುಗರ ಕೈಬೆರಳುಗಳು ಮತ್ತು ಹೆಜ್ಜೆ ಗುರುತುಗಳನ್ನು ಪೊಲೀಸರು ಮತ್ತೆ ಮಾಡಿದರು. ಸಂಬಂಧಿಕರಿಂದ ಗುಹೆಯ ಹೊರಗೆ ಪ್ರಾರ್ಥನೆ ಮತ್ತು ಜಾಗರಣೆ ಶುರುವಾಗಿತ್ತು.
- **25.6.2018 :** ಥೈಲ್ಯಾಂಡ್ ನೌಕಾಪಡೆ ಸೀಲ್ ಡೈವರ್ಸ್ ತಂಡ 12 ಹುಡುಗರು ಮತ್ತು ಒಬ್ಬ ಸಹಾಯಕ ಫುಟ್ಬಾಲ್ ಕೋಚ್‌ಅನ್ನು ಹುಡುಕಲು ಗುಹೆಯ ಒಳಕ್ಕೆ ಪ್ರವೇಶ ಮಾಡಿತು.
- **26.6.2018 :** ಗುಹೆಯ ಒಳಗಿನ T-junction ತಲುಪಿದ ನಂತರ ಪ್ರವಾಹ ಅವರನ್ನು ಹಿಂದಕ್ಕೆ ತಳ್ಳಿ ಅವರು ಇನ್ನಷ್ಟು ಹಿಂದಕ್ಕೆ ಹೋಗಬೇಕಾಯಿತು. ಪಟ್ಟಾಯಾ ಬೀಚ್ ಎಂಬ ಸ್ಥಳದಲ್ಲಿ ಗಾಳಿ ಪಾಕೆಟ್ ಸಿಕ್ಕಿ ಬಹುಶಃ ಹುಡುಗರ ತಂಡ ಅಲ್ಲೆಲ್ಲೋ ಇರಬೇಕು ಎಂದು ಊಹಿಸಲಾಯಿತು.
- **27.6.2018 :** ಬ್ರಿಟಿಷ್ ಮತ್ತು ಯು.ಎಸ್. ಮಿಲಿಟರಿ ತಂಡಗಳು ಥೈಲ್ಯಾಂಡ್ಗೆ ಆಗಮಿಸಿದವು. ಈ ತಂಡಗಳ ಈಜುಗಾರರು ಗುಹೆಯ ಒಳಕ್ಕೆ ಪ್ರವೇಶ ಮಾಡಿದರು. ಆದರೆ ನೀರಿನ ಪ್ರವಾಹದಿಂದ ಈಜುಗಾರರು ವಿಧಿ ಇಲ್ಲದೆ ಹಿಂದಕ್ಕೆ ಬರಬೇಕಾಯಿತು.
- **28.6.2018 :** ಭಾರೀ ಮಳೆಯಿಂದ ಎಲ್ಲಾ ರೀತಿಯ ಕಾರ್ಯಾಚರಣೆಗಳು ಸ್ತಬ್ಧಗೊಂಡವು. ಗುಹೆಯೊಳಗಿನ ನೀರನ್ನು ಹೊರ ಚೆಲ್ಲಲು ಯೋಜನೆಗಳನ್ನು ಮಾಡಿಕೊಳ್ಳಲಾಯಿತು. ಗುಹೆ ಛಾವಣಿಗಳ ಮೂಲಕ ಹೊಸ ದ್ವಾರಗಳನ್ನು ಹುಡುಕಲು 600ಕ್ಕೂ ಹೆಚ್ಚು ಜನರೊಂದಿಗೆ ಡ್ರೋನ್‌ಗಳನ್ನು ಕಳುಹಿಸಲಾಯಿತು.

- **29.6.2018 :** ಥಾಯ್ ಪ್ರಧಾನ ಮಂತ್ರಿ ಪ್ರಯತ್ ಚಾನ್-ಓಚ ಗುಹೆಯ ಹತ್ತಿರಕ್ಕೆ ಭೇಟಿ ನೀಡಿ ಪೋಷಕರ ಜೊತೆಗೆ ಮಾತನಾಡಿ ನಂಬಿಕೆಯನ್ನು ಬಿಡಬೇಡಿ ಎಂದು ಹೇಳಿಹೋದರು.
- **30.6.2018 :** ಮಳೆ ಸ್ವಲ್ಪ ವಿರಾಮ ನೀಡಿದ್ದೆ ಕಾರ್ಯಚರಣೆಯನ್ನು ಮುಂದುವರಿಸಲಾಯಿತು. ಈಜುಗಾರರು ಗುಹೆಯ ಒಳಗೆ ಸಾಕಷ್ಟು ದೂರ ಹೋದರು ಪ್ರಯೋಜನೆ ಆಗಲಿಲ್ಲ. ಹುಡುಗರ ತಂಡ ಇನ್ನೂ ದೂರದಲ್ಲಿ ಇರುವುದಾಗಿ ನಂಬಲಾಯಿತು.
- **1.7.2018 :** ಈಜುಗಾರರು ಇನ್ನೂ ಗುಹೆಯ ಆಳಕ್ಕೆ ತಲುಪಿದರು. ಜೊತೆಗೆ ಒಂದು ತಾತ್ಕಾಲಿಕ ಕಾರ್ಯಾಚರಣೆಯ ಶಿಬಿರವನ್ನು ಸ್ಥಾಪನೆ ಮಾಡಿ ಡೈವಿಂಗ್ ಸಿಲಿಂಡರುಗಳು ಮತ್ತು ಇತರ ವಸ್ತುಗಳ ಸರಬರಾಜನ್ನು ಅಲ್ಲಿಗೆ ಕೊಂಡೊಯ್ಯಲಾಯಿತು.
- **2.7.2018 :** ಪಟ್ಟಯಾ ಬೀಚ್‌ಗಿಂತಲೂ 400 ಮೀಟರುಗಳ ದೂರದಲ್ಲಿ ಬ್ರಿಟಿಷ್ ಈಜುಗಾರರ ತಂಡ ಸಂಜೆ 20.20 ಗಂಟೆಗೆ ಜೀವಂತವಾಗಿರುವ 13 ಜನರ ಫುಟ್ಬಾಲ್ ತಂಡವನ್ನು ಗುರುತಿಸಿತು.
- **3.7.2018 :** ವೈದ್ಯರು ಮತ್ತು ವೈದ್ಯರನ್ನೊಳಗೊಂಡ ಏಳು ಥಾಯ್ ನೌಕಾಪಡೆಯ ಈಜುಗಾರರು ಹೆಚ್ಚಿನ ಕ್ಯಾಲೋರಿ ಜೆಲ್ಗಳು ಮತ್ತು ಪ್ಯಾರಾಸಿಟಮಾಲ್ ಸೇರಿದಂತೆ ಹುಡುಗರಿಗೆ ಆಹಾರ, ಔಷಧಿ ಮತ್ತು ಬಟ್ಟೆಗಳನ್ನು ತಲುಪಿಸಲು ಹೊರಟಿತು. ಲೋಹಾರ್ನ್ಯಾನ್ ಡೈವಿಂಗ್ ಮೆಡಿಕ್‌ಗೆ ಸೇರಿದ ನಾಲ್ಕು ಜನರು (ಸ್ವಯಂಸೇವಕರು ಸೇರಿ) ಗುಹೆ ಒಳಗೆ ಸಿಕ್ಕಿಕೊಂಡಿರುವವರನ್ನೆಲ್ಲ ಪಾರು ಮಾಡುವವರೆಗೂ ಅವರೊಂದಿಗೆ ಉಳಿದುಕೊಳ್ಳಲು ತಲುಪಿದರು. ಗುಹೆಯಿಂದ ಕೊನೆಯದಾಗಿ ಹೊರಕ್ಕೆ ಬಂದವರು ಇವರೆ.
- **4.7.2018 :** ಗುಹೆಯ ಒಳಗಿಂದ ಪಂಪುಗಳು ನಿರಂತರವಾಗಿ ನೀರನ್ನು ಹೊರಕ್ಕೆ ಚೆಲ್ಲುತ್ತಲೇ ಇದ್ದವು. ಮುಖಕ್ಕೆ ಪೂರ್ಣವಾಗಿ ಡೈವಿಂಗ್ ಮುಖವಾಡ ಮತ್ತು ಉಸಿರಾಟದ ಉಪಕರಣವನ್ನು ಹೇಗೆ ಬಳಸಬೇಕೆಂದು ಹುಡುಗರ ತಂಡಕ್ಕೆ ಕಲಿಸಕೊಡಲಾಯಿತು.
- **5.7.2018 :** ರಕ್ಷಣಾ ತಂಡಕ್ಕೆ ಹುಡುಗರನ್ನು ಬೇಗನೆ ರಕ್ಷಿಸುವಂತೆ ಒತ್ತಾಯ ಬರುತ್ತಿತ್ತು. ಕಾರಣ ಮುಂದಿನ ಎರಡು ಮೂರು ದಿನಗಳಲ್ಲಿ

ಹೆಚ್ಚಿನ ಮುಂಗಾರ ಮಳೆ ಬರುವ ಸಾಧ್ಯತೆಗಳು ಇರುವುದಾಗಿ ಹವಾಮಾನ ಇಲಾಖೆ ಮುನ್ಸೂಚನೆ ನೀಡುತ್ತಿತ್ತು. ಜೊತೆಗೆ ಒಂದು ಗುಂಪು ಬೆಟ್ಟದಲ್ಲಿ ಗುಹೆ ತಲುಪುವ ಹೊಸ ದಾರಿಗಳೇನಾದರು ದೊರಕುತ್ತವೆಯೇ ಎಂದು ಹುಡುಕುತ್ತಿತ್ತು.

- **6.7.2018 :** ಮಾಜಿ ಥಾಯ್ ನೌಕಾ ದಳದ ಡೈವರ್ ಮತ್ತು ಸಹಾಯಕ ಕಾರ್ಯಚರಣೆಯ ಸ್ವಯಂಸೇವಕ ಸಮನ್ ಗುನನ್ ಹುಡುಗರನ್ನು ಹೊರತರುವ ದಾರಿಯಲ್ಲಿ ತಮ್ಮ ಸಿಲಿಂಡರ್‌ನಲ್ಲಿ ಆಮ್ಲಜನಕ ಖಾಲಿಯಾಗಿ ನಿತ್ರಾಣಗೊಂಡು ಸಾವನ್ನಪ್ಪಿದರು. ಗುಹೆಯಲ್ಲಿ ಕಡಿಮೆ ಆಮ್ಲಜನಕ ಇದ್ದ ಕಾರಣ ಪಾರು ಮಾಡುವ ಕೆಲಸ ಬೇಗನೆ ಆಗಬೇಕೆಂದು ಅಧಿಕಾರಿಗಳು ಒತ್ತಾಯ ತರುತ್ತಿದ್ದರು.

- **7.7.2018 :** ಪಾರುಗಾಣಿಕಾ ಮುಖ್ಯ ಅಧಿಕಾರಿ ಈಜುಗಾರರು ಕಾರ್ಯಾಚರಣೆಗೆ ಧುಮಕಲು ಸರಿಯಾದ ಸಮಯವಲ್ಲ ಎಂದು ಹೇಳಿದರು. ಆಗಲೇ ಹುಡುಗರ ತಂಡವನ್ನು ಹೊರತರಲು ಬೆಟ್ಟದಲ್ಲಿ 100ಕ್ಕಿಂತ ಹೆಚ್ಚು ಕಡೆ ಡ್ರಿಲ್ ಮಾಡಿ ಗುಹೆಗೆ ಬೇರೆ ದಾರಿ ಏನಾದರು ದೊರಕುತ್ತದೆಯೇ ಎಂದು ಹುಡುಕುತ್ತಿದ್ದರು. ಇದರ ಇನ್ನೊಂದು ಉದ್ದೇಶ ಡ್ರಿಲ್ ಮಾಡಿದರೆ ಅದರ ಮೂಲಕ ಗಾಳಿ ಗುಹೆಗೆ ತಲುಪುತ್ತದೆ ಎಂಬ ಆಲೋಚನೆಯೂ ಇತ್ತು. ಅದೇ ದಿನ ಕೋಚ್ ಅಕಿ ಪೋಷಕರಿಗೆ ಕ್ಷಮೆ ಯಾಚಿಸಿ ಪತ್ರವನ್ನು ಬರೆದಿದ್ದರು.

- **8.7.2018 :** ನಾಲ್ಕು ಬ್ರಿಟಿಷ್ ಮತ್ತು ಇಬ್ಬರು ಆಸ್ಟ್ರೇಲಿಯಾ ಈಜುಗಾರರು ನೇತೃತ್ವದಲ್ಲಿ 18 ಅಂತರರಾಷ್ಟ್ರೀಯ ಈಜುಗಾರರು ಮತ್ತು 5 ಥಾಯ್ ಮಿಲಿಟರಿ ಸೀಲ್ಸ್ ಈಜುಗಾರರು ಹುಡುಗರ ತಂಡವನ್ನು ಗುಹೆಯಿಂದ ಹೊರಕ್ಕೆ ತರಲು ಕಾರ್ಯಾಚರಣೆಯನ್ನು ಪ್ರಾರಂಭಿಸಿದರು. ಮೊದಲನೇ ತಂಡದಲ್ಲಿ ಮೂವರು ಹುಡುಗರನ್ನು 17.40ಕ್ಕೆ ಗುಹೆಯಿಂದ ಹೊರಕ್ಕೆ ತರಲಾಯಿತು. ನಾಲ್ಕನೇ ಹುಡುಗನನ್ನು 19.50ಕ್ಕೆ ಹೊರಕ್ಕೆ ತರಲಾಯಿತು. ಎಲ್ಲರನ್ನು ಹತ್ತಿರದ ಆಸ್ಪತ್ರೆಗೆ ತಲುಪಿಸಲಾಯಿತು. ಅನಂತರ ಕನಿಷ್ಟ 10 ಗಂಟೆಗಳ ಕಾಲವಾದರೂ ಮುಂದಿನ ಕಾರ್ಯಾಚರಣೆಗೆ ಅಣಿಯಾಗಬೇಕೆಂದು ತಿಳಿಸಲಾಯಿತು.

- **9.7.2018 :** ಮತ್ತೆ ನಾಲ್ಕು ಹುಡುಗರನ್ನು ಹೊರಕ್ಕೆ ತಂದು ಆಸ್ಪತ್ರೆಗೆ ಸೇರಿಸಲಾಯಿತು.

- **10.7.2018 :** ಉಳಿದ ನಾಲ್ಕು ಹುಡುಗರು ಮತ್ತು ಸಹಾಯಕ ತರಬೇತುದಾರರನ್ನು ಹೊರಕ್ಕೆ ತಂದು ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತು. ಕೊನೆಗೆ ಒಳಗೆ ಉಳಿದುಕೊಂಡಿದ್ದ ಎಲ್ಲಾ ಈಜುಗಾರರು, ಸ್ವಯಂಸೇವಕರು ಹೊರಕ್ಕೆ ಬಂದರು.

ಜೀವಂತ ಸಂಗ್ರಹಾಲಯ ಸ್ಥಾಪನೆ ಮತ್ತು ಸಿನಿಮಾ

ರಕ್ಷಣಾ ಕಾರ್ಯದ ಮುಖ್ಯಸ್ಥ ಮತ್ತು ಚಿಯಾಂಗ್ ರೈ ಪ್ರಾಂತ್ಯದ ಮಾಜಿ ಗವರ್ನರ್ ನರೋಂಗ್ಸಾಕ್ ಒಸೋಟ್ಟನಕಾರ್ನ್ ಈ ಕಾರ್ಯಾಚರಣೆಯನ್ನು ಹೇಗೆ ನಿರೂಪಿಸಿದರು ಎಂಬುದರ ಬಗ್ಗೆ ಹೈಲೈಟ್ ಮಾಡಲು ಗುಹೆ ಸಂಕೀರ್ಣವನ್ನು ಜೀವಂತ ವಸ್ತು ಸಂಗ್ರಹಾಲಯವಾಗಿ ಪರಿವರ್ತಿಸಲಾಗುವುದೆಂದು ಹೇಳಿದರು. ಪ್ರಧಾನ ಮಂತ್ರಿ ಪ್ರಯತ್ ಚಾನ್-ಒಚ ಅವರು ಈ ಹೇಳಿಕೆಯನ್ನು ಒಪ್ಪಿಕೊಂಡರೂ ಪ್ರವಾಸೋದ್ಯಮದ ಸುರಕ್ಷತೆಯ ಕಾಳಜಿಯ ಬಗ್ಗೆ ಚೆನ್ನಾಗಿ ಆಲೋಚಿಸಿ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಂಡು ಸಂಗ್ರಹಾಲಯವನ್ನು ಸ್ಥಾಪಿಸುವಂತೆ ಸಲಹೆ ನೀಡಿದರು.

ಈ ಘಟನೆಯ ಸಂಭವದಿಂದ ಥಾಯ್ ಸರ್ಕಾರ ನೌಕಾಪಡೆ ಸೀಲ್ಗಳು ತಮ್ಮ ತರಬೇತಿಯಲ್ಲಿ ಗುಹಾ ಡೈವಿಂಗ್‌ಅನ್ನು ಸೇರಿಸಿ ಮುಂದೆ ಇಂತಹ ಪರಿಸ್ಥಿತಿಗಳು ಬಂದರೆ ಹೇಗೆ ಎದುರಿಸಬೇಕೆಂದು ತಯಾರಾಗಿರಲು ಅಣಿಯಾಗಲು ನಿರ್ಧಾರ ತೆಗೆದುಕೊಂಡಿದೆ. ಫುಟ್ಬಾಲ್ ತಂಡದ ಸಹಾಯಕ ತರಬೇತುದಾರ ಮತ್ತು 3 ಹುಡುಗರಿಗೆ ಥೈಲ್ಯಾಂಡ್ ಪೌರತ್ವ ಇಲ್ಲದ ಕರಣ ಅವರಿಗೆ ಥೈಲ್ಯಾಂಡ್ ಪೌರತ್ವವನ್ನು ಕೊಡಿಸುವುದಾಗಿ ಅಧಿಕಾರಿಗಳು ಹೇಳಿಕೆ ಕೊಟ್ಟರು. ಸರ್ಕಾರವೂ ಇದಕ್ಕೆ ಒಪ್ಪಿಗೆ ನೀಡಿತು.

ಜುಲೈ 10ರಂದು ಯು.ಎಸ್. ಫಿಲ್ಮ್ ಪ್ರೊಡಕ್ಷನ್ ಕಂಪನಿಯ ಫೋರ್ ಫ್ಲಿಕ್ಸ್ನ ವ್ಯವಸ್ಥಾಪಕ ಪಾಲುದಾರ ಸಂಸ್ಥೆಯು ವಿಶ್ವದಾದ್ಯಂತ ಬಿಡುಗಡೆ ಮಾಡಬಹುದಾದಂತ ಸಂಭಾವ್ಯತೆಯೊಂದಿಗೆ ಪಾರಾಗಿ ಬಂದ ಫುಟ್ಬಾಲ್ ತಂಡದ ಆಧಾರಿತ ಚಲನಚಿತ್ರವನ್ನು ತೆಗೆಯಲು ಯೋಚಿಸಿರುವುದಾಗಿ ಘೋಷಿಸಿತು. ಎಸ್. ಕೆ. ಗ್ಲೋಬಲ್ ಎಂಟರ್ಟೈನ್ಮೆಂಟ್ ಇವಾನ್ಹೋ ಪಿಕ್ಚರ್ಸ್ ಪ್ರತ್ಯೇಕ ಯೋಜನೆಯಲ್ಲಿ ಆಸಕ್ತಿ ತೋರಿಸಿದೆ. ಜೊನ್ ಚು ಇದರ ನಿರ್ದೇಶಕರಾಗಲಿದ್ದಾರೆ.

❑

ಉಪಸಂಹಾರ

'ಮನಸ್ಸಿದ್ದರೆ ಮಾರ್ಗ' ಎನ್ನುವುದು ಹಳೆ ನಾಣ್ಣುಡಿ. ಥೈಲ್ಯಾಂಡ್ ಗುಹೆಯಿಂದ ಜೂನಿಯರ್ ಫುಟ್ಬಾಲ್ ತಂಡವನ್ನು ಪಾರು ಮಾಡಿದ ಯಶೋಗಾಥೆ ಆಧುನಿಕ ಜಗತ್ತಿನಲ್ಲಿ ಮನುಷ್ಯ ಛಲದ ಒಂದು ರೂಪಕವಾಗಿ ದಾಖಲಾಗಿ ಹೋಯಿತು. ಅದರ ಹಿಂದಿನ ಕಥೆ ಬಹಳ ರೋಚಕ ಮತ್ತು ಅನೇಕ ಕವಲುಗಳಿಂದ ಕೂಡಿದೆ ಎನ್ನುವುದನ್ನು ಈ ಕೃತಿಯಲ್ಲಿ ನೀವು ಸ್ವಲ್ಪ ಮಟ್ಟಿಗೆ ನೋಡಿದಿರಿ. ಈ ಕಥೆಗೆ ಸಂಬಂಧಪಟ್ಟ ಇಲ್ಲಿ ದಾಖಲಾಗದ ಇನ್ನೂ ಅನೇಕ ವಿಸ್ಮಯಕಾರಿ ಕೊಂಡಿಗಳು ಈ ಕಾರ್ಯಾಚರಣೆಗೆ ಇವೆ ಎನ್ನುವುದು ಸತ್ಯ. ಆದರೆ ಈ ಯಶೊಗಾಥೆಯಲ್ಲಿ ತೊಡಗಿಕೊಂಡ ಮನುಷ್ಯನ ಮನಸ್ಸುಗಳು ಮಾತ್ರ ಬಹಳ ದೊಡ್ಡದಾಗಿ ಕೆಲಸ ಮಾಡಿದವು.

ಈ ಕಾರ್ಯಾಚರಣೆ ಯಶಸ್ವಿಯಾದ ಕಾರಣ ಜಗತ್ತು ಕೊಂಡಾಡಿತು. ಒಂದು ವೇಳೆ ಈ ಕಾರ್ಯಾಚರಣೆ ದುರಂತವಾಗಿ ಮಾರ್ಪಟ್ಟಿದ್ದರೆ, ಅದು ಹತ್ತರಲ್ಲಿ ಹನ್ನೊಂದನೇ ಘಟನೆಯಾಗಿ ಚರಿತ್ರೆಯಲ್ಲಿ ಕಳೆದು ಹೋಗುತ್ತಿತ್ತು. ಜನರೂ ಕೂಡ ಅಯ್ಯೋ ಪಾಪ! ಎಂದು ಒಂದು ನಟ್ಟುಸಿರಿಟ್ಟು ಸುಮ್ಮನಾಗಿಬಿಡುತ್ತಿದ್ದರು. ಮಾಧ್ಯಮಗಳೂ ಕೂಡ ಒಂದು ದುರಂತದ ಸುದ್ದಿ ಮಾಡಿ ಕೈ ತೊಳೆದುಕೊಳ್ಳುತ್ತಿದ್ದವು. ಪ್ರಸ್ತುತ, ಪ್ರಪಂಚದ ಸುದ್ದಿ ಮಾಧ್ಯಮಗಳು ಕ್ಷಣಕ್ಷಣಕ್ಕೂ ರೋಚಕ ಸುದ್ದಿಗಳಿಗಾಗಿ ಹಪಿಹಪಿಸುತ್ತ ಇಡೀ ಭೂಮಿಯನ್ನು ಅಂಗೈಯಪ್ಪು ಮೈಬೈಲ್ನಲ್ಲಿ ಸಿಕ್ಕಿಸಿಕೊಂಡು ಕೋತಿಗಳಂತೆ ಆಡಿಕೊಂಡವ. ಅದಕ್ಕಾಗಿ ಬಹುಕೋಟಿ ಕಂಪನಿಗಳು ಅದರ ಮಧ್ಯ ತಮ್ಮ ವಸ್ತುಗಳನ್ನು ಮಾರಿಕೊಳ್ಳಲು ಮಿಲಯನ್ಗಟ್ಟಲೇ ಹಣಕೊಟ್ಟು ಜನರ ಮುಂದೆ ಸುಳ್ಳು ಆಮಿಷಗಳನ್ನು ಒಡ್ಡಿ ಜನರ ಆರೋಗ್ಯ ಮತ್ತು ಪರಿಸರವನ್ನು ಆಳು ಮಾಡುತ್ತಿವೆ.

ಥೈಲ್ಯಾಂಡಿನಲ್ಲಿ ನಡೆದ ಈ ಘಟನೆ ಮೂರನೇ ಜಗತ್ತಿನ

ಇನ್ನ್ಯಾವುದೇ ದೇಶದಲ್ಲಿ, (ಥೈಲ್ಯಾಂಡ್ ಕೂಡ ಮೂರನೇ ಜನತ್ತಿನ ದೇಶವಾದರೂ ಒಂದಷ್ಟು ಶಿಸ್ತು ಮೈಗೂಡಿಸಿಕೊಂಡಿದೆ) ಒಂದು ವೇಳೆ ನಮ್ಮ ದೇಶದಲ್ಲಿ ಘಟಿಸಿದ್ದರೆ, ಅದಕ್ಕೆ ಹಲವಾರು ಆಯಾಮಗಳು ಸುತ್ತಿಕೊಂಡುಬಿಡುತ್ತಿದ್ದವು. ಉದಾ: ರಾಜಕಾರಣಿಗಳ ಕಮಿಶನ್ ಹಗರಣಗಳು. ಫುಟ್ಬಾಲ್ ತಂಡದ ಹುಡುಗರು ಒಳಗೆ ಸತ್ತರೋ ಬದುಕಿ ಹೊರಕ್ಕೆ ಬಂದರೋ ಎನ್ನುವುದು ಅವರಿಗೆ ಅವಶ್ಯಕವಾದ ವಿಷಯವಾಗುತ್ತಿರಲಿಲ್ಲ. ಅದು ದೇಶದ ಪ್ರತಿಷ್ಠೆಯೂ ಆಗುತ್ತಿರಲಿಲ್ಲ. ಅವರಿಗೆ ಮುಖ್ಯಾವಾದ ಕೆಲಸವೆಂದರೆ ಯಾರಿಗೆ ಎಷ್ಟು ಸಿಕ್ಕಿತು ಎನ್ನುವುದು? ಈ ವಿಷಯಗಳಲ್ಲಿ ನಮ್ಮ ರಾಜಕಾರಣಿಗಳು, ಭ್ರಷ್ಟ ಅಧಿಕಾರಿಗಳು ಕಲಿತುಕೊಳ್ಳುವುದು ಬಹಳ ಇದೆ. ನಮ್ಮ ಸಂಪೂರ್ಣ ವ್ಯವಸ್ಥೆ ಇದರಿಂದ ಏನು ಕಲಿತುಕೊಂಡಿತು ಎನ್ನುವ ಪ್ರಶ್ನೆ ನಮ್ಮ ಮುಂದೆ ನಿಂತುಕೊಂಡಿದೆ.

ಇದಕ್ಕೆ ತದ್ವಿರುದ್ಧವಾಗಿ ಇದೇ ವರ್ಷ ಡಿಸೆಂಬರ್ 23, 2018ರಲ್ಲಿ 15 ಜನರು ಮೇಘಾಲಯದ ಕಲ್ಲಿದ್ದಲು ಗಣಿಗಳಲ್ಲಿ ಸಿಕ್ಕಿಕೊಂಡು ಪ್ರಾಣ ಕಳೆದುಕೊಂಡರು. ಇದು ದೇಶದ ಸುದ್ದಿಯಲ್ಲಿ ಎಷ್ಟು ನಿರ್ಲಕ್ಷಿತ ವಿಷಯವಾಯಿತೆಂದರೆ ಯಾವುದೇ ಸುದ್ದಿ ಮಾಧ್ಯಮಗಳು ಅದರ ಬಗ್ಗೆ ತಲೆ ಕೆಡಸಿಕೊಳ್ಳಲಿಲ್ಲ.

ಕೇಂದ್ರ ಸರಕಾರವೂ ಆ ಕಡೆಗೆ ಯಾವ ಗಮನವನ್ನು ನೀಡಲಿಲ್ಲ. ಬಹುಶಃ ಯಾರಾದರೂ ಸಿನಿಮಾ ನಟರೊ, ರಾಜಕಾರಣಿಗಳೊ ಇಲ್ಲ ಕ್ರಿಕೆಟ್ ಆಟಗಾರರೊ ಅವರ ಮಕ್ಕಳೊ ಸಿಕ್ಕಿಕೊಂಡಿದ್ದರೆ ಸುದ್ಧಿ ಮಾಧ್ಯಮಗಳು ನಿರಂತರವಾಗಿ ಅಲ್ಲಿಯೆ ಶಿಬಿರ ಹಾಕಿಕೊಂಡು ವಿಷಯವನ್ನು ಬಿತ್ತಿರಿಸುತ್ತಿದ್ದವು. ಬಡವರ ಪ್ರಾಣವೆಂದರೆ ನಮ್ಮ ದೇಶದಲ್ಲಿ ಯಾವ ಬೆಲೆಯೂ ಇಲ್ಲ.

❑●❑●❑

ಕಿರು ಪರಿಚಯ

ಡಾ. ಎಂ. ವೆಂಕಟಸ್ವಾಮಿ

ಭೂವಿಜ್ಞಾನಿ ಮತ್ತು ಲೇಖಕರಾಗಿ ಹೆಸರು ಮಾಡಿರುವ ಡಾ.ಎಂ.ವೆಂಕಟಸ್ವಾಮಿ ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲ್ಲೂಕಿನ ಯರ್ರಗೊಂಡ ಬ್ಯಾಟರಾಯನಹಳ್ಳಿಯಲ್ಲಿ 06.11.1955 ರಲ್ಲಿ ಜನಿಸಿದರು. ಕೆ.ಜಿ.ಎಫ್ ಪ್ರ.ದ.ಕಾಲೇಜಿನಲ್ಲಿ ಬಿ.ಎಸ್ಸಿ., ಮತ್ತು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ (ಭೂವಿಜ್ಞಾನ) ಎಂ.ಎಸ್ಸಿ., ಮುಗಿಸಿ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಸಂಸ್ಥೆಗೆ (ಜಿ.ಎಸ್.ಐ) ಸೇರಿ ಭಾರತದಾದ್ಯಂತ ಓಡಾಡಿ ಅಪಾರ ಅನುಭವ ಪಡೆದಿದ್ದಾರೆ. 'ಕೋಲಾರ ಚಿನ್ನದ ಗಣಿಗಳು' ಮಹಾಪ್ರಬಂಧಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಡಿ.ಲಿಟ್. ಪದವಿ ಬಂದಿದೆ. ಇದೇ ಮಹಾಪ್ರಬಂಧ ಕನ್ನಡದಲ್ಲಿ 'ಕೋಲಾರ ಚಿನ್ನದ ಗಣಿಗಳು' ಮತ್ತು ಇಂಗ್ಲಿಷ್‌ನಲ್ಲಿ `Kolar Gold Mine' ಪ್ರಕಟಗೊಂಡಿವೆ.

ಇವರು 1984ರಲ್ಲಿ ಲಖನೌದಲ್ಲಿ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣೆ ಇಲಾಖೆಯಲ್ಲಿ ಭೂವಿಜ್ಞಾನಿಯಾಗಿ ಸೇರಿ 2015ರಲ್ಲಿ ನಾಗ್ಪುರದಲ್ಲಿ ಡೆಪ್ಯೂಟಿ ಡೈರೆಕ್ಟರ್ ಜನರಲ್ ಆಗಿ ನಿವೃತ್ತಿ ಪಡೆದಿದ್ದಾರೆ. ಅನೇಕ ದೇಶಗಳನ್ನ ಸುತ್ತಾಡಿ ಅಪಾರ ಅನುಭವ ಪಡೆದಿದ್ದಾರೆ. ತೆಲುಗು, ತಮಿಳು, ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳನ್ನು ಬಲ್ಲವರಾದ ಇವರು ಕಳೆದ 30 ವರ್ಷಗಳಿಂದಲೂ ಕನ್ನಡ ಪತ್ರಿಕೆಗಳಲ್ಲಿ ಕತೆ, ಕವನ, ಕಾದಂಬರಿ, ವೈಚಾರಿಕ, ವಿಜ್ಞಾನ ಮತ್ತು ವಿಮರ್ಶೆ ಲೇಖನಗಳನ್ನು ಬರೆಯುತ್ತಾ ಬಂದಿದ್ದಾರೆ. ಕೆಲವು ಟಿ.ವಿ ಧಾರಾವಾಹಿಗಳಿಗೆ ಚಿತ್ರಕತೆ ಸಂಭಾಷಣೆ ಬರೆದಿದ್ದಾರೆ. ಅನೇಕ ರೇಡಿಯೊ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಈಶಾನ್ಯ ಭಾರತದ ಸಾಹಿತ್ಯವನ್ನು ಕನ್ನಡಕ್ಕೆ ಮೊದಲು ತಂದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. 3 ಕವನ ಸಂಕಲನಗಳು, 3 ಪ್ರವಾಸ ಕಥೆಗಳು, 2 ವೈಚಾರಿಕ ಕೃತಿಗಳು, 8 ಕಾದಂಬರಿಗಳು (ಇವುಗಳಲ್ಲಿ 5 ಕಾದಂಬರಿಗಳು ಧಾರಾವಾಹಿಗಳಾಗಿ ಪ್ರಕಟವಾಗಿವೆ) 8 ವಿಜ್ಞಾನ ಕೃತಿಗಳು ಮತ್ತು 2 ಇಂಗ್ಲಿಷ್ ಕೃತಿಗಳು ಪ್ರಕಟವಾಗಿವೆ. ಇವರ ಕೃತಿಗಳು ನವಕರ್ನಾಟಕ ಪ್ರಕಾಶನ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು, ಹಂಪಿ ಕನ್ನಡ ವಿಶ್ವವಿದ್ಯಾಲಯ ಗೀತಾಂಜಲಿ ಪಬ್ಲಿಕೇಶನ್ ಮತ್ತು ಇತರ ಪ್ರಕಾಶನಗಳಲ್ಲಿ ಪ್ರಕಟಗೊಂಡಿವೆ. ಒಟ್ಟು 30 ಕೃತಿಗಳು ಪ್ರಕಟಗೊಂಡಿವೆ. ಇತ್ತೀಚೆಗೆ ಸುಧಾ ವಾರ ಪತ್ರಿಕೆಯಲ್ಲಿ 'ತಲೆಮಾರುಗಳ ಅಂತರ' ಎಂಬ ಧಾರಾವಾಹಿ ಪ್ರಕಟವಾಯಿತು.

ಪ್ರಸ್ತುತ ಕೆಳಗಿನ ಸಂಸ್ಥೆಗಳಲ್ಲಿ ಸದಸ್ಯರಾಗಿ ತೊಡಗಿಕೊಂಡಿದ್ದಾರೆ:

1. ಜೆ.ಎಸ್.ಎಸ್ ಕಾಲೇಜಿನಲ್ಲಿ (JSSTICE, JSS College, Bhanasankari), ಐಎಎಸ್/ಐಪಿಎಸ್/ಕೆಎಎಸ್ ಪರೀಕ್ಷೆಗಳಿಗೆ ತಯಾರಾಗುವ ವಿದ್ಯಾರ್ಥಿಗಳಿಗೆ ಕೋಚಿಂಗ್ ಮಾಡುತ್ತಿದ್ದಾರೆ.
2. ಜಿಯಾಲಜಿಕಲ್ ಸೊಸೈಟಿ ಆಫ್ ಇಂಡಿಯಾ, ಬೆಂಗಳೂರು, ಸದಸ್ಯರಾಗಿದ್ದಾರೆ.
3. ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಗಮ ಹೊರತರುವ 'ಪರಿಸರ ವಾಹಿನಿ' (ಕನ್ನಡ–ಇಂಗ್ಲಿಷ್) ಮಾಸ ಪತ್ರಿಕೆಯ ಸಂಪಾದಕ ಮಂಡಳಿ ಸದಸ್ಯರಾಗಿದ್ದಾರೆ.
4. ಡಾ.ಅ.ನ.ಎಲ್ಲಪ್ಪ ರೆಡ್ಡಿ ಅಧ್ಯಕ್ಷರಾಗಿರುವ 'ಬೆಂಗಳೂರು ಎನ್ವೈರನ್‌ಮೆಂಟಲ್ ಟ್ರಸ್ಟ್' ಸದಸ್ಯರಾಗಿದ್ದಾರೆ.
5. ಭೂವಿಜ್ಞಾನ ಮತ್ತು ಗಣಿ ಸಂಸ್ಥೆಗಳಿಗೆ ಸಲಹೆಗಾರರಾಗಿ ಕೆಲಸ ಮಾಡುತ್ತಾರೆ..
6. ಆಲ್ ಇಂಡಿಯಾ ಇಂಜಿನಿಯರ್ಸ್ ಅಸೋಸಿಯೇಸನ್ಸ್ ಸದಸ್ಯರಾಗಿದ್ದಾರೆ.
7. ಫೆಬ್ರವರಿ 2018ರಲ್ಲಿ ಬೂದುಕೋಟೆಯಲ್ಲಿ ನಡೆದ ಬಂಗಾರಪೇಟೆ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.
8. ಕಳೆದ ಮೂರು ದಶಕಗಳಿಂದಲೂ ತಾಲ್ಲೂಕು, ಜಿಲ್ಲೆ ಮತ್ತು ಅಖಿಲ ಭಾರತ ಕನ್ನಡ ಸಾಹಿತ್ಯ ಸಾಹಿತ್ಯ ಸಮ್ಮೇಳನ, ಗೋಷ್ಠಿಗಳು ಮತ್ತು ವಿಜ್ಞಾನ ಕಮ್ಮಟಗಳಲ್ಲಿ ಪಾಲ್ಗೊಂಡಿದ್ದಾರೆ.
9. 2014ರಲ್ಲಿ ತಮ್ಮ ಸಾಹಿತ್ಯ ಸೇವೆಗೆ ಕೋಲಾರ ಜಿಲ್ಲೆ ಸಾಹಿತ್ಯ ಪರಿಷತ್ತು ಪ್ರಶಸ್ತಿ ಪಡೆದಿದ್ದಾರೆ.
10. 2019ರಲ್ಲಿ ರಾಜ್ಯಮಟ್ಟದ ಪ್ರಥಮ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ಗೌರವಿಸಲಾಗಿದೆ.
11. ಪ್ರಜಾವಾಣಿ ಮತ್ತು ವಿಜಯಕರ್ನಾಟಕದಲ್ಲಿ ಪರಿಸರ ಮತ್ತು ವಿಜ್ಞಾನಕ್ಕೆ ಸಂಬಂಧಪಟ್ಟ ಅನೇಕ ಲೇಖನಗಳು ಪ್ರಕಟವಾಗಿವೆ.

– ಡಾ. ಎಂ. ವೆಂಕಟಸ್ವಾಮಿ

ಚಲನಾವಾಣಿ: 9480317732/9449041334

Mail: alemarimvs@gmail.com



ಮನುಷ್ಯ ಛಲದ ಹೊಸ ರೂಪಕ

ಒಂದು ಘಟನೆಗೆ ಎಷ್ಟು ಆಯಾಮಗಳಿರುತ್ತವೆ? ಥೈಲ್ಯಾಂಡ್ ಗುಹೆಯಿಂದ ಜ್ಯೂನಿಯರ್ ಫುಟ್ಬಾಲ್ ತಂಡದ 13 ಆಟಗಾರರನು ರಕ್ಷಿಸಿ ಮತ್ತೆ ಈ ಜಗತ್ತಿಗೆ ತಂದ ದೇಶವಿದೇಶಗಳ ಸಾಹಸಗಾರರ ಸಾಹಸ, ತ್ಯಾಗ, ಪರಿಣತಿ ಮತ್ತು ಪರಿಶ್ರಮ ಅನನ್ಯವಾದದ್ದು. ಇದೇ ಅಪರೂಪ ಮತ್ತು ರೋಚಕವಾದ ಘಟನೆಯನ್ನ ಕುರಿತ ಕೃತಿಯನ್ನ ಡಾ. ಎಂ.ವೆಂಕಟಸ್ವಾಮಿಯವರು ಬರೆದಿದ್ದಾರೆ. ಈ ಘಟನೆಯ ಬಗ್ಗ ನಾವು ನೀವೆಲ್ಲ ಅಕ್ಷರ ಮತ್ತು ದೃಶ್ಯ ಮಾದ್ಯಮಗಳು ಮೂಲಕ ತಿಳಿಯಬಹುದಾದ ಎಲ್ಲ ಮಾಹಿತಿಗಳಿಗಿಂತಲೂ ಒಂದು ಭಿನ್ನವಾದ ಒಳನೋಟ ಮತ್ತು ಸಾಂಸ್ಕೃತಿಕ ಜವಾಬ್ದಾರಿಯುಳ್ಳ ಬರವಣಿಗೆಯನ ನಮಗೆ ನೀಡಿದ್ದಾರೆ.

ಜೊತೆಗೆ ಈ – ಇಂತಹ ಘಟನೆಯನ್ನ ನೋಡಬಹುದಾದ ಒಂದು ವಿನೂತನ ದೃಷ್ಟಿಕೋನ ಕೂಡ ನಮಗೆ ಇಲ್ಲಿ ದೊರಕುತ್ತದೆ. ಇತಿಹಾಸ, ವಿಜ್ಞಾನ ಕಥನ, ಮನುಷ್ಯ ಸ್ವಭಾವದ ವಿಸ್ತಾರವಾದ ಸಾದ್ಯತೆಗಳು, ಇವುಗಳೆಲ್ಲದರ ಬಗ್ಗೆ ಸಮಾನವಾದ ಆಸಕ್ತಿ ಕುತೂಹ ಇರುವವರು ಮಾತ್ರ ಬರೆಯಬಹುದಾದ ಕೃತಿ ಇದಾಗಿದೆ. ಹಾಗಾಗಿ ಇದು ಒಂದು ಘಟನೆಯ ವರದಿ ಅಥವಾ ನಿರೂಪಣೆ ಮಾತ್ರವಲ್ಲ. ಒಂದು ಘಟನೆಯ ಹಿಂದಿನ ವಿಸ್ತಾರವಾದ ರೋಚಕ ಕಥನಯನ್ನು ಹೆಣೆಯಲ್ಪಟ್ಟಿದೆ. ವಿಜ್ಞಾನ, ತಾಂತ್ರಿಕ, ಪರಿಭಾಷೆಯ ಬಳಕೆ ಓದುಗ ಇನ್ನಷ್ಟು ವೈಜ್ಞಾನಿಕತೆಯನ್ನ ಬೆಳೆಸುತ್ತದೆ.

ಮಿತ್ರರಾದ ಡಾ. ಎಂ.ವೆಂಕಟಸ್ವಾಮಿಯವರ ವ್ಯಕ್ತಿತ್ವದಲ್ಲಿ ಹಲವು ಸ್ತರಗಳಿವೆ. ಭೂವಿಜ್ಞಾನಿ, ಆಡಳಿತಗಾರ, ಒಳ್ಳೆಯ ಲೇಖಕ, ಸಮಕಾಲೀನ ಬದುಕಿನಲ್ಲಿ ಸಂವೇದನಾಶೀಲವಾದ ಆಸಕ್ತಿಯುಳ್ಳ ನಾಗರೀಕ. ಈ ಎಲ್ಲ ನೆಲೆಗಳು ಈ ಕೃತಿಯಲ್ಲಿ ಹದವಾಗಿ ಬೆರೆತಿವೆ. 'ಕೋಲಾರ ಚಿನ್ನದ ಗಣಿಗಳು' ಬಗ್ಗೆ ಪ್ರಕಟಿಸಿದ ವಿಶಿಷ್ಟ ಅಧ್ಯಯನ ಕೃತಿ ಕನ್ನಡದಲ್ಲಿ ಸಾಂಸ್ಕೃತಿಕ ಅಧ್ಯಯನದ ಒಂದು ಮಾದರಿಯಾಗಿ ಈ ಕೃತಿ ಕೂಡ ಸಮಕಾಲೀನ ವಿದ್ಯಮಾನ, ಸುದ್ದಿ ಮಾದ್ಯಮಗಳ ಗ್ರಹಿಕೆಗಿಂತ ಭಿನ್ನವಾಗಿಯೂ ಸಂಕೀರ್ಣವಾಗಿಯೂ ಮಾನವೀಯವಾಗಿಯೂ ಏಕಕಾಲದಲ್ಲಿ ಹೀಗೆ ಗ್ರಹಿಸಬಹುದಾದ ಒಂದು ಅನುಕರಣೀಯ ಕುತೂಹಲಕಾರಿ ಕಥನವಾಗಿದೆ.

–ಕೆ.ಸತ್ಯನಾರಾಯಣ

ನಂ. 40, 1ನೇ ಮುಖ್ಯರಸ್ತೆ,
2ನೇ ಹಂತ, 3ನೇ ಬ್ಲಾಕ್, ನಾಗರಭಾವಿ,
ಬೆಂಗಳೂರು – 560 072

9 788194 178576

Design: Godavari